ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಕ್ರಂ ದಾಖಲೆ ಮುರಿದ ಬುಮ್ರಾ

ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಐದು ವಿಕೆಟ್ ಪಡೆದ ಭಾರತದ ಸ್ಟಾರ್ ಬೌಲರ್ ಜಸ್‌ಪ್ರಿತ್ ಬುಮ್ರಾ, ಪಾಕಿಸ್ತಾನದ ಮಾಜಿ ಬೌಲರ್ ವಸೀಂ ಅಕ್ರಮ್ ಅವರ ದಾಖಲೆಯನ್ನು ಮುರಿದು ವಿಶ್ವ ಬೌಲರ್‌ಗಳ ಸಾಲಿಗೆ ಸೇರಿದ್ದಾರೆ. ಬುಮ್ರಾ ಸೆನಾ ದೇಶಗಳಲ್ಲಿ ಅಂದರೆ ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿ 149 ವಿಕೆಟ್ ಪಡೆದು ಅಕ್ರಮ್ ಅವರ 146 ವಿಕೆಟ್‌ಗಳ ದಾಖಲೆ ಮುರಿದಿದ್ದಾರೆ.

ಮೂರನೇ ಮಹಾಯುದ್ಧಕ್ಕೆ ಮುನ್ನುಡಿ | ಖಮೇನಿಗೆ ರಷ್ಯಾ ಬೆಂಬಲ | ಕಚ್ಚಾತೈಲ ಬೆಲೆ ಏರಿಕೆ

ಇರಾನ್ ಮೇಲೆ ಅಮೆರಿಕ ಬಾಂಬ್

ವಾಷಿಂಗ್ಟನ್: ಇರಾನ್‌ನ ಮೂರು ಅಣ್ವಸ್ತ್ರ ನೆಲೆಗಳ ಮೇಲೆ ಬಾಂಬ್ ದಾಳಿ ನಡೆಸುವ ಮೂಲಕ ಇಸ್ರೇಲ್-ಇರಾನ್ ಸಂಘರ್ಷದಲ್ಲಿ ವಿಶ್ವದ ದೊಡ್ಡಣ್ಣ ಅಮೆರಿಕವು ಅಧಿಕೃತವಾಗಿ ಮಧ್ಯಪ್ರವೇಶ ಮಾಡಿದ್ದು, ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಸಂಘರ್ಷ ಸ್ಥಿತಿ ಮತ್ತಷ್ಟು ಉಲ್ಬಣ ಗೊಂಡಿದೆ.

ಇರಾನ್‌ನ ಮೂರು ಅಣು ಕೇಂದ್ರಗಳ ಮೇಲೆ ಅತ್ಯಂತ ಶಕ್ತಿಶಾಲಿ ಬಾಂಬ್ ದಾಳಿ ನಡೆಸಿ ನಾಶಪಡಿಸಲಾಗಿದೆ. ಇರಾನ್ ಅಣ್ವಸ್ತ್ರ ನೆಲೆಗಳ ಮೇಲೆ ದಾಳಿ ನಡೆಸಲು ಅತ್ಯಂತ ಶಕ್ತಿಶಾಲಿ ಬಿ-2 ರಹಸ್ಯ ಬಾಂಬರ್ ಯುದ್ಧ ವಿಮಾನಗಳನ್ನು ಬಳಕೆ ಮಾಡಲಾಗಿದೆ. ಇರಾನ್‌ನ ಫೋರ್ಡೋ, ನತಾನ್ಜ್ ಮತ್ತು ಇಸ್ಪಹಾನ್ ಅಣು ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಫೋರ್ಡೋ ಮೇಲೆ ಆರು ಬಿ-2 ಬಾಂಬರ್ ಯುದ್ಧ ವಿಮಾನಗಳು 12 ಬಂಕರ್ ನಿಷ್ಕ್ರಿಯಗೊಳಿಸುವ ಬಾಂಬ್‌ಗಳನ್ನು ಬೀಳಿಸಿವೆ. ಅದೇ ರೀತಿ ನತಾನ್ಜ್ ಮತ್ತು ಇಸ್ಪಹಾನ್ ಗುರಿಯಾಗಿಸಿ ನೌಕಾಪಡೆಯ ಜಲಾಂತರ್ಗಾಮಿ ನೌಕೆಗಳು 30 ಕ್ರೂಸ್ ಕ್ಷಿಪಣಿಗಳನ್ನು ಹಾರಿಸಿವೆ. ನತಾನ್ಜ್ ಮತ್ತು ಇಸ್ಪಹಾನ್ ಮೇಲೆ ಬಿ-2 ಎರಡು ಬಂಕರ್ ನಿಷ್ಕ್ರಿಯ ಬಾಂಬ್‌ಗಳನ್ನು ಬೀಳಿಸಿತು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಭಾನುವಾರ ಬೆಳಗ್ಗೆ ಈ ಕಾರ್ಯಾಚರಣೆಯನ್ನು ಘೋಷಿಸಿದ ಅಮೆರಿಕ ಅಧ್ಯಕ್ಷ ಟ್ರಂಪ್, ಇದನ್ನು ಅತ್ಯಂತ ಯಶಸ್ವಿ ಮಿಲಿಟರಿ ಕಾರ್ಯಾಚರಣೆ ಮತ್ತು ಅಮೆರಿಕ, ಇಸ್ರೇಲ್ ಮತ್ತು ಜಗತ್ತಿಗೆ ಐತಿಹಾಸಿಕ ಕ್ಷಣ ಎಂದು ಪ್ರಕಟಿಸಿದ್ದಾರೆ. ತನ್ನ ಬೆಂಬಲಕ್ಕೆ ನಿಂತ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರವನ್ನು ಇಸ್ರೇಲ್ ಹಾಡಿ ಹೊಗಳಿದ್ದು, ಇದು ಯುದ್ಧದಲ್ಲಿ ಐತಿಹಾಸಿಕ ತಿರುವು. ಟ್ರಂಪ್ ಪಾಶ್ಚಾತ್ಯ ಶಕ್ತಿಯ ಪರಿಪೂರ್ಣ ನಾಯಕತ್ವವನ್ನು ತೋರಿಸಿದ್ದಾರೆ ಎಂದು ಬಣ್ಣಿಸಿದ್ದಾರೆ.

ಅಣು ವಿಕಿರಣ ಸೋರಿಕೆ ಭೀತಿ

ಬಂಕರ್ ಬಸ್ಟರ್ ಬಾಂಬ್ ದಾಳಿಯಿಂದ ಇರಾನ್‌ನ ಅಣು ಸಾಂದ್ರತಾ ತಾಣಗಳಲ್ಲಿ ಯುರೇನಿಯಂ ಸೋರಿಕೆಯ ಅಪಾಯ ಉಂಟಾಗಿದೆ. ಫೋರ್ಡೋದ ಭೂಗತ ಯುರೇನಿಯಂ ಸಂಗ್ರಹಾಗಾರದ ಮೇಲೆ ಜಿಬಿಯು-57 ಬಾಂಬ್ ದಾಳಿ ನಡೆದಿರುವ ಪರಿಣಾಮ ವ್ಯಾಪಕ ಅಣು ವಿಕಿರಣಕ್ಕೆ ಕಾರಣವಾಗುವ ಸಾಧ್ಯತೆ ಇದೆ. ಶಸ್ತ್ರಾಸ್ತ್ರ ನಿಯಂತ್ರಣ ಸಂಘಟನೆ ಇದನ್ನು ಬೇಜವಾಬ್ದಾರಿ ಕೃತ್ಯ ಎಂದು ಹೇಳಿದೆ.

ಇರಾನ್‌ನ ಎಲ್ಲೆಲ್ಲಿ ದಾಳಿ?

ಫೋರ್ಡೋ
80-90 ಮೀಟರ್ ಆಳದಲ್ಲಿ ಇರುವ ಯುರೇನಿಯಂ ಗಣಿಗಾರಿಕೆ ತಾಣವಾಗಿದೆ. ಯುರೇನಿಯಂ ಹೆಚ್ಚಾಗಿ ಪರಮಾಣು ಬಾಂಬ್‌ಗಳಲ್ಲಿ ಬಳಕೆ ಆಗುತ್ತದೆ.

ನತಾಂಜ್
ಸಾವಿರಾರು ಸೆಂಟ್ರಿಫ್ಯೂಜ್ ಉಪಕರಣಗಳನ್ನು ಹೊಂದಿರುವ ಅತಿದೊಡ್ಡ ತಾಣ. ಇದು ಪರಮಾಣು ಶಕ್ತಿಯ ಉತ್ಪಾದನೆಯಲ್ಲಿ ಬಳಕೆ ಆಗುತ್ತದೆ.

ಇಸ್ಫಹಾನ್
ಪರಮಾಣು ಬಾಂಬ್ ಉತ್ಪಾದನೆಯ ಸಂಶೋಧನೆ ಹಾಗೂ ಪರಿವರ್ತನೆ ಕೇಂದ್ರ.

ಯಾವ ದೇಶಗಳು ಏನು ಹೇಳಿದವು?

- ಇರಾನ್ ಮೇಲೆ ದಾಳಿ ನಡೆಸುವುದರೊಂದಿಗೆ ಶಾಂತಿಪ್ರಿಯ ಎಂದು ಹೇಳಿಕೊಳ್ಳುವ ಟ್ರಂಪ್ ಹೊಸ ಯುದ್ಧ ಆರಂಭಿಸಿದ್ದಾರೆ. — **ರಷ್ಯಾ**
- ಇರಾನ್ ಪರಮಾಣು ಶಸ್ತ್ರಾಸ್ತ್ರ ಹೊಂದುವುದು ಸ್ವೀಕಾರಾರ್ಹವಲ್ಲ. ಪರಮಾಣು ಯೋಜನೆಗಳು ಅಂತಾರಾಷ್ಟ್ರೀಯ ಭದ್ರತೆಗೆ ಗಂಭೀರ ಬೆದರಿಕೆಯಾಗಿವೆ. — **ಬ್ರಿಟನ್**
- ಅಮೆರಿಕದ ನಡೆ ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆ. ಈ ಪ್ರದೇಶದಲ್ಲಿ ಹಿಂಸಾಚಾರ, ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗುವ ಅಪಾಯವಿದೆ. — **ಪಾಕಿಸ್ತಾನ**

ಬಿ-2 ಜಗತ್ತಿನ ಅತ್ಯಂತ ದುಬಾರಿ ಯುದ್ಧ ವಿಮಾನ

ಬಿ-2 ಜಗತ್ತಿನ ಅತ್ಯಂತ ದುಬಾರಿ ಯುದ್ಧ ವಿಮಾನವಾಗಿದೆ. ಈ ರಹಸ್ಯ ಬಾಂಬರ್‌ಗಳನ್ನು ನಾರ್ತ್‌ರೊಪ್ (Northrop) ನಿರ್ಮಿಸಿದೆ. ಬರೋಬ್ಬರಿ 13,500 ಕಿಲೋ ಗ್ರಾಂ ಬಾಂಬ್ ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ. ಅಮೆರಿಕ ಮಿಲಿಟರಿ ಬಳಿಯಿರುವ ಬಂಕರ್ ನಾಶಪಡಿಸುವ ಅತ್ಯಂತ ಶಕ್ತಿಶಾಲಿ ಯುದ್ಧ ವಿಮಾನಗಳಲ್ಲಿ ಒಂದಾಗಿದೆ.

ಮುಖ್ಯಾಂಶಗಳು

- ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ತೈಲ ಸರಬರಾಜಿಗೆ ಪ್ರಮುಖ ಮಾರ್ಗವಾಗಿರುವ ಹರ್ಮುಜ್ ಜಲಸಂಧಿಯನ್ನು ಮುಚ್ಚಲು ಇರಾನ್ ಸಂಸತ್ತು ಅನುಮೋದನೆ ನೀಡಿದ್ದು, ಇಂಧನ ದರ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ.
- ತೈಲ ಮಾರುಕಟ್ಟೆಯಲ್ಲಿ ಉಂಟಾಗಿರುವ ಏರಿಳಿತದಿಂದಾಗಿ ಭಾರತವು ಜೂನ್‌ನಲ್ಲಿ ರಷ್ಯಾ ಹಾಗೂ ಅಮೆರಿಕದಿಂದ ತೈಲ ಖರೀದಿಯನ್ನು ಹೆಚ್ಚಿಸಿದೆ. ಇದರ ಪ್ರಮಾಣವು, ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವುದಕ್ಕಿಂತಲೂ ಹೆಚ್ಚಿನದ್ದಾಗಿದೆ.
- ಸಂಘರ್ಷ ಪೀಡಿತ ಇರಾನ್‌ನಿಂದ 311 ಭಾರತೀಯರನ್ನು ಹೊತ್ತ ಮತ್ತೊಂದು ವಿಮಾನ ದೆಹಲಿಗೆ ಬಂದಿಳಿದಿದ್ದು, ಈ ಮೂಲಕ ಇರಾನ್‌ನಿಂದ ಭಾರತಕ್ಕೆ ಸ್ಥಳಾಂತರಗೊಂಡ ಭಾರತೀಯರ ಸಂಖ್ಯೆ 1,428 ಆಗಿದೆ.
- ಇಸ್ರೇಲ್-ಇರಾನ್ ಸಂಘರ್ಷವು ತಮ್ಮ ಪ್ರದೇಶಗಳಿಗೂ ವ್ಯಾಪಿಸುವ ಸಾಧ್ಯತೆ ಇದೆ ಎಂದು ಎಚ್ಚೆತ್ತುಕೊಂಡಿರುವ ಬಹರೇನ್ ಹಾಗೂ ಕುವೈತ್, ಸಂಭವನೀಯ ಪರಿಸ್ಥಿತಿಯನ್ನು ಎದುರಿಸಲು ಸಿದ್ಧತೆ ಮಾಡಿಕೊಂಡಿವೆ.
- ಇಸ್ರೇಲ್‌ಗಾಗಿ ಬೇಹುಗಾರಿಕೆ ನಡೆಸುತ್ತಿದ್ದ ಮಜೀದ್ ಮೊಸೆಯ್ಬಿ ಎಂಬ ವ್ಯಕ್ತಿಗೆ ಗಲ್ಲುಶಿಕ್ಷೆ
- ಅಮೆರಿಕ ನಡೆಸಿರುವ ಬಾಂಬ್ ದಾಳಿಗೆ ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ತೀವ್ರ ಕಳವಳ

ಟ್ರಂಪ್ ಎಚ್ಚರಿಕೆ

ದಾಳಿ ಬಳಿಕ ರಾಷ್ಟ್ರವನುದ್ದೇಶಿಸಿ ಮಾತನಾಡಿದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಅಣು ಕೇಂದ್ರಗಳನ್ನು ಸಂಪೂರ್ಣ ನಾಶಪಡಿಸಲಾಗಿದೆ. ಒಂದು ವೇಳೆ ಇರಾನ್ ಪ್ರತಿರೋಧ ಒಡ್ಡಿದರೆ ಮತ್ತಷ್ಟು ದಾಳಿ ನಡೆಸುತ್ತೇವೆ. ಕಳೆದ ಎಂಟು ದಿನಗಳಲ್ಲಿ ಕಂಡಿರುವುದಕ್ಕಿಂತ ಹೆಚ್ಚಿನ ವಿನಾಶ ಉಂಟಾಗಲಿದೆ ಎಂದು ಎಚ್ಚರಿಸಿದರು.

ಇರಾನ್ ಅಧ್ಯಕ್ಷರಿಗೆ ಪ್ರಧಾನಿ ಮೋದಿ ಕರೆ

ಪ್ರಧಾನಿ ಮೋದಿಯವರು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಜತೆ ದೂರ ವಾಣಿ ಮೂಲಕ ಸಂವಾದ ನಡೆಸಿದ್ದು, ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಇಸ್ರೇಲ್ ಜತೆಗಿನ ಸಂಘರ್ಷವನ್ನು ತಕ್ಷಣವೇ ಶಮನ ಗೊಳಿಸಿ, ಸಾಧ್ಯವಾದಷ್ಟು ಬೇಗ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಸ್ಥಾಪಿಸುವಂತೆ ಕರೆ ನೀಡಿದ್ದಾರೆ.

ಪ್ರತೀಕಾರದ ಪ್ರತಿಜ್ಞೆ

ತನ್ನ 3 ಪ್ರಮುಖ ಪರಮಾಣು ತಾಣಗಳ ಮೇಲೆ ಅಮೆರಿಕ ನಡೆಸಿದ ಬಾಂಬ್ ದಾಳಿಗೆ ಪ್ರತೀಕಾರ ತೀರಿಸಿ ಕೊಳ್ಳುವುದಾಗಿ ಇರಾನ್ ಭಾನುವಾರ ಪ್ರತಿಜ್ಞೆ ಮಾಡಿದೆ. ಅಮೆರಿಕದ ದಾಳಿಗಳು ಅತಿರೇಕದಿಂದ ಕೂಡಿದವು. ಅವು ಶಾಶ್ವತ ಪರಿಣಾಮಗಳನ್ನು ಬೀರುತ್ತವೆ. ಅಮೆರಿಕವು ವಿಶ್ವಸಂಸ್ಥೆಯ ನಿಯಮ, ಅಂತಾರಾಷ್ಟ್ರೀಯ ಕಾನೂನು ಮತ್ತು ಪರಮಾಣು ಪ್ರಸರಣ ನಿಷೇಧ ಒಪ್ಪಂದದ ಗಂಭೀರ ಉಲ್ಲಂಘನೆ ಮಾಡಿದೆ. ಈ ಅತ್ಯಂತ ಅಪಾಯಕಾರಿ, ಕಾನೂನುಬಾಹಿರ ಮತ್ತು ಕ್ರಿಮಿನಲ್ ನಡವಳಿಕೆಯ ಬಗ್ಗೆ ವಿಶ್ವಸಂಸ್ಥೆಯ ಪ್ರತಿಯೊಬ್ಬ ಸದಸ್ಯ ರಾಷ್ಟ್ರ ಧ್ವನಿ ಎತ್ತಬೇಕು ಎಂದು ಹೇಳಿದೆ.

ಜಗ್ಗದ ಇರಾನ್

ತನ್ನ ಅಣ್ವಸ್ತ್ರ ಕೇಂದ್ರಗಳ ಮೇಲೆ ಅಮೆರಿಕ ದಾಳಿ ಮಾಡಿ, ಖಡಕ್ ಎಚ್ಚರಿಕೆ ನೀಡಿದ ಬಳಿಕವೂ ಜಗ್ಗದ ಇರಾನ್,



ಇಸ್ರೇಲ್ ಮೇಲಿನ ತನ್ನ ದಾಳಿಯನ್ನು ಮತ್ತೆ ಮುಂದು ವರಿಸಿದೆ. ಅಮೆರಿಕ ದಾಳಿ ಬಳಿಕ ಇರಾನ್‌ನ ಮೊದಲ ಪ್ರತೀಕಾರ ಇದಾಗಿದ್ದು, ಇಸ್ರೇಲ್‌ನ 10ಕ್ಕೂ ಹೆಚ್ಚು ಸ್ಥಳಗಳ ಮೇಲೆ 30ಕ್ಕೂ ಅಧಿಕ ಖಂಡಾಂತರ ಕ್ಷಿಪಣಿಗಳಿಂದ ದಾಳಿ ನಡೆಸಿದೆ. ಇಸ್ರೇಲ್‌ನ ಹೈಫಾ ನಗರ, ರಾಜಧಾನಿ ಟೆಲ್ ಅವೀವ್, ಜೆರುಸಲೆಂ ಸೇರಿದಂತೆ 10ಕ್ಕೂ ಹೆಚ್ಚು ನಗರಗಳ ಮೇಲೆ ಮಿಸ್ಸೈಲ್ ಮಳೆ ಸುರಿಸಿದೆ. ಇರಾನ್‌ನ ಮಿಸ್ಸೈಲ್‌ಗಳು ನಗರಕ್ಕೆ ಅಪ್ಪಳಿಸುತ್ತಿದ್ದಂತೆ ಇಸ್ರೇಲ್‌ನ ಕೆಲವು ಭಾಗಗಳಲ್ಲಿ ಸೈರನ್ ಮೊಳಗಿದ್ದು, ನಾಗರಿಕರನ್ನ ಸುರಕ್ಷಿತ ಸ್ಥಳಗಳು ಮತ್ತು ಬಂಕರ್‌ಗಳಿಗೆ ಸ್ಥಳಾಂತರಿಸಲಾಗಿದೆ. ಮುಂದಿನ ಸೂಚನೆ ಬರುವವರೆಗೂ ಬಂಕರ್‌ಗಳಿಂದ ಹೊರಗೆ ಬರದಂತೆ ಸೂಚಿಸಲಾಗಿದೆ. ನಾಗರಿಕರನ್ನು ಗುರಿಯಾಗಿಸಿ ಇರಾನ್ ನಡೆಸಿದ ಈ ದಾಳಿಯಲ್ಲಿ 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ವರದಿಗಳು ತಿಳಿಸಿವೆ.

ಸೊಂಪಾದ ಪುಟಗಳು

ವಿಜಯೇಂದ್ರ ಅವರಿಗೆ ಲಾಸ್ಟ್ ಚಾನ್ಸು? 6
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ

ಏರುಗತಿಯಲ್ಲೇ ಸಾಗುತ್ತಿರುವ ಏಶಿಯನ್ ಪೇಂಟ್ಸ್ 7
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್

ದಾರಿದೀಪೋಕ್ತಿ

ನಿಮ್ಮ ಬದುಕಿನ ಪುಟಗಳಲ್ಲಿ ಸಾವಿರಾರು ಪುಟಗಳಿರಬಹುದು, ಹತ್ತಾರು ಅಧ್ಯಾಯಗಳಿರಬಹುದು. ಕೆಲವು ಪುಟ ಅಥವಾ ಒಂದು ಅಧ್ಯಾಯ ಸರಿಯಾಗಿಲ್ಲ ಎಂದ ಮಾತ್ರಕ್ಕೆ ಇಡೀ ಪುಸ್ತಕವೇ ಸರಿ ಇಲ್ಲ ಎಂಬ ನಿರ್ಧಾರಕ್ಕೆ ಬರಬಾರದು. ಎಲ್ಲರ ಬದುಕಿನ ಪುಟಗಳೂ ಹಾಗೇ ಇರುತ್ತವೆ.

ವಕ್ರತುಂಡೋಕ್ತಿ

ಹಣ, ಸ್ಥಾನಮಾನ, ಅನುಕೂಲ ಇಲ್ಲದಿರುವುದರಿಂದ ಕೆಲವನ್ನು ನೀವು ಪಡೆಯದೇ ಇರಬಹುದು. ಆದರೆ ಇದಕ್ಕೆ ಮಕ್ಕಳು ಅನ್ವಯಿಸುವುದಿಲ್ಲ.

3 ದಿನ ದೆಹಲಿಯಲ್ಲಿಯೇ ವಾಸ್ತವ್ಯ | ರಾಷ್ಟ್ರಪತಿ ಭೇಟಿ, ಬಾಕಿ ಬಿಲ್ ಬಗ್ಗೆ ಚರ್ಚೆ

ದೆಹಲಿಗೆ ಇಂದು ಸಿಎಂ

ಬೆಂಗಳೂರು: ರಾಜ್ಯಪಾಲರಿಂದ ರಾಷ್ಟ್ರಪತಿಗಳ ಅಂಗಳಕ್ಕೆ

ಹೋಗಿರುವ ಹಲವು ವಿಧೇಯಕಗಳಿಗೆ 'ಸ್ಪಷ್ಟೀಕರಣ' ನೀಡುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಸದಸ್ಯರೊಂದಿಗೆ ಸೋಮವಾರ ಸಂಜೆ ದೆಹಲಿ ಪ್ರವಾಸ ಕೈಗೊಳ್ಳಲಿದ್ದು, ಮುಂದಿನ 3 ದಿನ ಅಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ.

ಕೆಟಿಟಿಪಿ ತಿದ್ದುಪಡಿ ಕಾಯಿದೆ ಸೇರಿದಂತೆ ರಾಷ್ಟ್ರಪತಿಗಳ ಬಳಿ ಕರ್ನಾಟಕದ ಒಟ್ಟು 24 ಕಾಯಿದೆಗಳಿವೆ. ರಾಜ್ಯಪಾಲರಿಂದ ರವಾನೆಯಾಗಿರುವ ಈ ಕಾಯಿದೆಗಳ ಪೈಕಿ ಐದು ಪ್ರಮುಖ ಕಾಯಿದೆಗಳಿಗೆ ಅನುಮತಿ ನೀಡಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಿದ್ದ ರಾಮಯ್ಯ ಅವರು ಮನವಿ ಮಾಡಲಿದ್ದಾರೆ. → 4

ಯಾವೆಲ್ಲ ಬಿಲ್‌ಗಳಿಗೆ ಸ್ಪಷ್ಟನೆ

- ಅಲ್ಪಸಂಖ್ಯಾತರಿಗೆ ಗುತ್ತಿಗೆ ಹಾಗೂ ಖರೀದಿಯಲ್ಲಿ ಮೀಸಲು ಕಲ್ಪಿಸುವ ಕೆಟಿಪಿಪಿ ತಿದ್ದುಪಡಿ ಕಾಯಿದೆ
- ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಕಾಯಿದೆ
- ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಕರ್ನಾಟಕ ತಿದ್ದುಪಡಿ) -2015
- ಕರ್ನಾಟಕ ನೋಂದಣಿ ತಿದ್ದುಪಡಿ ಕಾಯಿದೆ-2025
- ನೋಟರಿ ಕರ್ನಾಟಕ ತಿದ್ದುಪಡಿ ಕಾಯಿದೆ-2025

ಕಾಲ್ತುಳಿತ ಪ್ರಕರಣ: ವಿಚಾರಣೆ ಆರಂಭ

ಬೆಂಗಳೂರು: ಚಿನ್ನಸ್ವಾಮಿ ಮೈದಾನದ ಬಳಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮಾಜಿ ಕಾರ್ಯದರ್ಶಿ ಶಂಕರ್ ಹಾಗೂ ಖಜಾಂಚಿಯಾಗಿದ್ದ ಇ.ಎಸ್.ಜೈರಾಮ್ ಅವರನ್ನು ತನಿಖಾಧಿಕಾರಿ ಜಿ.ಜಗದೀಶ್ ಅವರು ಶನಿವಾರ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ದುರಂತದಲ್ಲಿ 11 ಮಂದಿ ಸಾವು ಹಾಗೂ 50ಕ್ಕಿಂತ ಹೆಚ್ಚು ಮಂದಿ ಗಾಯಗೊಂಡ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಗಳಿಗೆ ಶಂಕರ್ ಹಾಗೂ ಜೈರಾಮ್ ರಾಜೀನಾಮೆ ನೀಡಿದ್ದರು. ಆರ್‌ಸಿಬಿ ವಿಜಯೋತ್ಸವ ಆಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎನ್ನಲಾದ ಕೆಎಸ್‌ಸಿಎ ಪದಾಧಿಕಾರಿಗಳು ವಿಚಾರಣೆಗೆ ಬರುವಂತೆ ನೋಟಿಸ್ ಜಾರಿಯಾಗಿತ್ತು. ಅದರ ಮೇರೆಗೆ ಶನಿವಾರ ಹಾಜರಾಗಿ ಸುಮಾರು 3 ಗಂಟೆಗಳ ಕಾಲ ವಿಚಾರಣೆ ಎದುರಿಸಿದ್ದಾರೆ.

ಈ ನಡುವೆ ಘಟನೆ ಸಂಬಂಧ ಅಮಾನತಾಗಿರುವ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ ಸೇರಿದಂತೆ ನಾಲ್ವರು ಅಧಿಕಾರಿಗಳು ಸೋಮವಾರ ವಿಚಾರಣೆಗೆ ಹಾಜರಾಗಲಿದ್ದಾರೆ ಎನ್ನಲಾಗಿದೆ. ಈಗಾಗಲೇ ಕಬ್ಬನ್ ಪಾರ್ಕ್ ಠಾಣೆ ಉಪವಿಭಾಗದ ಎಸಿಪಿಯಾಗಿದ್ದ ಬಾಲಕೃಷ್ಣ ವಿಚಾರಣೆಗೆ ಹಾಜರಾಗಿದ್ದಾರೆ. → 4

ದಕ್ಷಿಣ ಒಳನಾಡಿನಲ್ಲಿ ನೈಋತ್ಯ ಮುಂಗಾರು ದುರ್ಬಲ | ಹಲವೆಡೆ ವಾಡಿಕೆಗಿಂತ ಕಡಿಮೆ ಮಳೆ

17 ಜಿಲ್ಲೆಗಳಲ್ಲಿ ಮಳೆ ಕೊರತೆ

ಬೆಂಗಳೂರು: ಕಳೆದ ಎರಡು ವಾರಗಳಿಂದ ಕರಾವಳಿ

ಹಾಗೂ ಮಲೆನಾಡಿನ ಜಿಲ್ಲೆಗಳಲ್ಲಿ ಅಬ್ಬರಿಸಿದ್ದ ನೈಋತ್ಯ ಮುಂಗಾರು ಮಳೆಯು ದಕ್ಷಿಣ ಒಳನಾಡಿನಲ್ಲಿ ದುರ್ಬಲವಾಗಿದ್ದು, 17 ಜಿಲ್ಲೆಗಳಲ್ಲಿ ಮಳೆ ಕೊರತೆ ಕಂಡುಬಂದಿದೆ.

ಬೆಂಗಳೂರು ಸೇರಿದಂತೆ ಒಳನಾಡಿನ ಹಲವು ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ದಾಖಲಾಗಿದ್ದು, ಮುಂಗಾರು ಹಂಗಾಮಿನ ಬಿತ್ತನೆಗೆ ಸಿದ್ಧತೆಯು ವ್ಯರ್ಥವಾಗಿದೆ. ಕೊಡಗು ಸೇರಿದಂತೆ ಮಲೆನಾಡು ಭಾಗಗಳಲ್ಲಿ ಉತ್ತಮ ಮಳೆಯಾಗಿದ್ದು, ನದಿಗಳಲ್ಲಿ ನೀರಿನ ಮಟ್ಟದಲ್ಲಿ ಏರಿಕೆಯಾಗಿದೆ. ಇದರಿಂದ ಜಲಾಶಯಗಳ ಒಳಹರಿವು ಗಣನೀಯವಾಗಿ ಏರಿಕೆಯಾಗಿತ್ತು. ಆದರೆ ಕಳೆದ ಎರಡು ದಿನಗಳಿಂದ ಕರಾವಳಿ ಮತ್ತು ಮಲೆ ನಾಡು ಭಾಗದಲ್ಲಿಯೂ ಮಳೆ ಪ್ರಮಾಣ ಇಳಿಕೆ ಯಾಗಿದ್ದು, ಜಲಾಶಯಗಳ ಒಳಹರಿವಿನ ಪ್ರಮಾಣವು ಕುಸಿಯುವ ಸಾಧ್ಯತೆಯಿದೆ. ಆದರೆ ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಲ್ಲೂ ಶೇ.80ಕ್ಕಿಂತ ಹೆಚ್ಚು ನೀರು ಸಂಗ್ರಹವಾಗಿದ್ದು, ಮತ್ತೊಂದು ಸುತ್ತಿನ ಮಳೆ ಆರಂಭವಾದರೆ ಗರಿಷ್ಠ ಪ್ರಮಾಣದಲ್ಲಿ ಭರ್ತಿಯಾಗಲಿವೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಚಾಮರಾಜನಗರ, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ದಾವಣಗೆರೆ ಜಿಲ್ಲೆಯಲ್ಲಿ ಮಾತ್ರ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ.

ಜೂನ್ ಒಂದರಿಂದ 21ರವರೆಗೆ ದಕ್ಷಿಣ ಒಳನಾಡಿನಲ್ಲಿ ವಾಡಿಕೆ ಮಳೆ ಪ್ರಮಾಣ 52.2 ಮಿ.ಮೀ. ಇದ್ದು, ಕೇವಲ 36 ಮಿ.ಮೀ.ನಷ್ಟು ಮಳೆಯಾಗಿದೆ. ಶೇ.31ರಷ್ಟು ಮಳೆ ಕೊರತೆ ಉಂಟಾಗಿದೆ. ಉತ್ತರ ಒಳನಾಡಿನ ಬಳ್ಳಾರಿ, ಕೊಪ್ಪಳ, ಕಲಬುರಗಿ, ಯಾದಗಿರಿ, ಬೀದರ್, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಉಳಿದಂತೆ ವಾಡಿಕೆ ಹಾಗೂ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಉತ್ತರ ಒಳನಾಡಿನಲ್ಲಿ ವಾಡಿಕೆ ಮಳೆ ಪ್ರಮಾಣ71 ಮಿ.ಮೀ. ಆಗಿದ್ದು, 72.5 ಮಿ.ಮೀ.ನಷ್ಟು ಮಳೆಯಾಗಿದ್ದು ವಾಡಿಕೆಗಿಂತ ಶೇ.2ರಷ್ಟು ಹೆಚ್ಚು ಮಳೆ ಬಿದ್ದಿದೆ. → 4

ಸಾಧಾರಣ ಮಳೆ

ಬೆಂಗಳೂರು ಸೇರಿದಂತೆ ಕರಾವಳಿ ಹಾಗೂ ಮಲೆನಾಡ ಭಾಗದಲ್ಲಿ ಮುಂದಿನ ಒಂದು ವಾರ ಸಾಧಾರಣ ಮಳೆಯ ಮುನ್ಸೂಚನೆ ನೀಡಲಾಗಿದೆ. ಜೂನ್ 25ರವರೆಗೆ ಭಾರಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಸಮಾಚಾರ ಸಣ್ಣದಲ್ಲ

ಪ್ರಥಮ ಜಾನಪದ ಸಮ್ಮೇಳನ 25ರಂದು

ಬೆಂಗಳೂರು: ಪ್ರಥಮ ಜಾನಪದ ಸಮ್ಮೇಳನ ಉದ್ಘಾಟನಾ ಸಮಾರಂಭ ಬುಧವಾರ ಬೆಳಗ್ಗೆ 11 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ. ಕನ್ನಡ ಜಾನಪದ ಪರಿಷತ್ತಿನ ಆಶ್ರಯದಲ್ಲಿ ಆಯೋಜಿಸಿರುವ ಸಮ್ಮೇಳನದ ಅಧ್ಯಕ್ಷರಾಗಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಆಯ್ಕೆಯಾಗಿದ್ದಾರೆ. ಸಮ್ಮೇಳನದಲ್ಲಿ ಜಾನಪದ ಕಾರ್ಯಕ್ರಮಗಳು ಸೇರಿದಂತೆ ಜಾನಪದ ಕಲೆಗೆ ಸಂಬಂಧಿಸಿದಂತೆ ವಿಚಾರಗೋಷ್ಠಿ ನಡೆಯಲಿವೆ. ಜಾನಪದ ಕಲಾಸಕ್ತರು ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹಲವೆಡೆ ಇಂದು ವಿದ್ಯುತ್ ವ್ಯತ್ಯಯ



ಬೆಂಗಳೂರು: ನಗರದ ಎಲಿಟ ಪ್ರೋಮೆನೇಡ್ ಮತ್ತು ಅರೆಹಳ್ಳಿ ಉಪಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಹಿನ್ನೆಲೆ ಸೋಮವಾರ ಬೆ.10ರಿಂದ ಮಧ್ಯಾಹ್ನ 4.00 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಎಲಿಟ ಪ್ರೋಮೆನೇಡ್ ಅಪಾರ್ಟ್‌ಮೆಂಟ್ , ಕೆ.ಆರ್. ಲೇಔಟ್, ಶಾರದನಗರ, ಚುಂಚಗಟ್ಟ, ಅರೇಹಳ್ಳಿ, ಇಟ್ಟಮಡು, ಏಜಿಎಸ್ ಲೇಔಟ್, ಚಿಕ್ಕಲಸಂದ್ರ, ಟಿ.ಜಿ. ಲೇಔಟ್, ಭುವನೇಶ್ವರಿನಗರ ಇಸ್ರೋ ಲೇಔಟ್, ಇಸ್ರೋ ಲೇಔಟ್ ಇಂಡಸ್ಟ್ರಿಯಲ್ ಏರಿಯಾ, ಕುಮಾರಸ್ವಾಮಿ ಬಡಾವಣೆ, ವಿಠ್ಠಲ ನಗರ, ವಿಕ್ರಮ್ ನಗರ, ಯೆಲಚೇನಹಳ್ಳಿ, ಸುತ್ತಮುತ್ತಲ ಪ್ರದೇಶ, ಚಿಕ್ಕಲಸಂದ್ರ ವಿಲೇಜ್, ಕದಿರೇನಹಳ್ಳಿ, ಅಬ್ಬಯ್ಯ ನಾಯ್ಡು ಸ್ಟುಡಿಯೋ ಸುತ್ತಮುತ್ತಲ ಪ್ರದೇಶ, ನಾಯ್ಡು ಲೇಔಟ್, ಎಜಿಎಸ್ ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವೀಲಿಂಗ್ ಪುಂಡನ ವಿರುದ್ಧ ಕಾನೂನು ಕ್ರಮ

ಬೆಂಗಳೂರು: ವೀಲಿಂಗ್ ಪುಂಡರ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ನಗರ ಸಂಚಾರಿ ಪೊಲೀಸರು ದ್ವಿಚಕ್ರ ವಾಹನವನ್ನು ಮಾರ್ಪಾಡು ಮಾಡಿಕೊಂಡು ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದ ಸವಾರನ ವಿರುದ್ಧ ಮಾಗಡಿ ರಸ್ತೆ ಸಂಚಾರಿ ಠಾಣಾ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಟೆಲಿಕಾಂ ಲೇಔಟ್‌ನಲ್ಲಿ ಸವಾರನೊಬ್ಬ ಹೆಲ್ಮೆಟ್ ಧರಿಸದೆ ಸ್ಕೂಟರ್ ವೀಲಿಂಗ್ ಮಾಡಿಕೊಂಡು ರಸ್ತೆ ತುಂಬಾ ಅಡ್ಡದಿಡ್ಡಿಯಾಗಿ ಚಾಲನೆ ಮಾಡುತ್ತಿದ್ದು, ಇದನ್ನು ಗಮನಿಸಿ ಗಸ್ತಿನಲ್ಲಿದ್ದ ಹೆಡ್‌ಕಾನ್ಸ್‌ಟೇಬಲ್ ಉಮಾ ನಾಯ್ಕ್ ಅವರು ಸವಾರನನ್ನು ಹಿಂಬಾಲಿಸಿ ವಾಹನವನ್ನು ತಡೆದು ತಪಾಸಣೆ ನಡೆಸಿದರು. ಈ ವೇಳೆ ಸವಾರ ಪಾದರಾಯನಪುರದ ನಿವಾಸಿ ಮಹಮ್ಮದ್ ಅಸ್ಲಾಂ (19) ಎಂದು ತಿಳಿದುಬಂದಿದೆ. ತೀವ್ರ ವಿಚಾರಣೆ ಒಳಪಡಿಸಿದಾಗ ಈತ ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಾಗಡಿ ಮುಖ್ಯ ರಸ್ತೆ ಸೇರಿದಂತೆ ಮತ್ತಿತರ ಕಡೆ ವೀಲಿಂಗ್ ಮಾಡುತ್ತಿರುವುದಾಗಿ ತಿಳಿಸಿದ್ದಾನೆ. ವಾಹನವನ್ನು ಮಾರ್ಪಾಡು ಮಾಡಿಕೊಂಡು ಅಪಾಯಕಾರಿ ರೀತಿಯಲ್ಲಿ ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಾ ವೀಲಿಮಗ್ ಮಾಡುವುದು ಕಂಡು ಬಂದ ಹಿನ್ನೆಲೆಯಲ್ಲಿ ಆತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಎರಡು ದಿನಗಳ ಕಾಲ ನಡೆಯಲಿರುವ ಕುಂದಾಪ್ರ ಕನ್ನಡ ಹಬ್ಬಕ್ಕೆ ಐದು ಸಾವಿರ ಆಸನ ವ್ಯವಸ್ಥೆ

ಜುಲೈ 26ಕ್ಕೆ ಕುಂದಾಪ್ರ ಕನ್ನಡ ಹಬ್ಬ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

'ವಿಶ್ವ ಕುಂದಾಪ್ರ ಕನ್ನಡ ದಿನಾಚರಣೆ' ಪ್ರಯುಕ್ತ ಕುಂದಾಪ್ರ ಕನ್ನಡ ಪ್ರತಿಷ್ಠಾನ ಹಮ್ಮಿಕೊಂಡಿರುವ ಕುಂದಾಪ್ರ ಕನ್ನಡ ಹಬ್ಬ-2025 ಜುಲೈ 26, 27ರಂದು ಬೆಂಗಳೂರಿನ ಹೊಸಕೆರೆಹಳ್ಳಿ ನೈಸ್ ರೋಡ್ ಜಂಕ್ಷನ್‌ನ ನಂದಿ ಲಿಂಕ್ ಗ್ರೌಂಡ್‌ನಲ್ಲಿ ನಡೆಯಲಿದೆ ಎಂದು ಕುಂದಾಪ್ರ ಕನ್ನಡ ಪ್ರತಿಷ್ಠಾನದ ಅಧ್ಯಕ್ಷ ಡಾ. ದೀಪಕ್ ಶೆಟ್ಟಿ ಹೇಳಿದರು.

ಈ ಬಗ್ಗೆ ಸುದೀಕ್ಷಾ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಿದ್ದ 'ವಾಲ್ಗ' ಸಮಾರಂಭದಲ್ಲಿ ಮಾತನಾಡಿ, ಕುಂದಾಪ್ರ ಕನ್ನಡ ಹಬ್ಬವನ್ನು ಹಲವು ವಿಶೇಷತೆಗಳೊಂದಿಗೆ ಆಚರಿಸಲಿದ್ದು, ಪ್ರತಿ ಸಲದಂತೆ ಭಾರಿ ಸಂಖ್ಯೆಯಲ್ಲಿ ಜನರು ಭಾಗಿಯಾಗುವ ನಿರೀಕ್ಷೆ ಇದೆ. ಈ ಬಾರಿ 5 ಸಾವಿರ ಜನಕ್ಕೆ ಆಸನ ವ್ಯವಸ್ಥೆ ಮಾಡಲಾಗಿದೆ. ಎರಡು ದಿನಗಳ ಈ ಸಂಭ್ರಮದಲ್ಲಿ ದಿನವಿಡೀ ಕಾರ್ಯಕ್ರಮಗಳಿದ್ದು, ಮತ್ತೊಂದು ಅದ್ದೂರಿಗೆ ಈ ಸಮಾರಂಭ ಸಾಕ್ಷಿಯಾಗಲಿದೆ. ಎರಡೂ ದಿನ ಕುಂದಾಪುರ ಮೂಲದ ಒಬ್ಬೊಬ್ಬರು ಅತಿಗಣ್ಯ ಸಾಧಕರನ್ನು ವಿಶೇಷವಾಗಿ ಸನ್ಮಾನಿಸಲಾಗುವುದು. ಆ ಕುರಿತ ವಿವರ, ಮುಖ್ಯ ಅತಿಥಿಗಳ ಮಾಹಿತಿ ಸದ್ಯದಲ್ಲೇ ನೀಡಲಾಗುವುದು ಎಂದರು.

ವೇದಿಕೆಯಲ್ಲಿನ ವಿವಿಧ ಕಾರ್ಯಕ್ರಮಗಳಲ್ಲದೆ ಹೊರಾಂಗಣದಲ್ಲಿ ಹುಲಿವೇಷ, ಕೊರಗರ ಡೋಲು ವಾದನ, ಬಿಳಿ ಪಟಾಕಿ, ನವರಾತ್ರಿ ವೇಷ, ಹಗ್ಗಜಗ್ಗಾಟ ಮತ್ತು ವಿವಿಧ ಕ್ರೀಡೆಗಳಲ್ಲದೆ, ಕುಂದಾಪುರದ ಬಹುತೇಕ ಎಲ್ಲ ವಸ್ತುಗಳು ಸಿಗುವ ಕುಂದಾಪ್ರ ಸಂತೆ ಕೂಡ ಇರಲಿದೆ ಎಂದು ಅವರು ತಿಳಿಸಿದರು. ಕುಂದಾಪ್ರ ಕನ್ನಡ ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಉಪಾಧ್ಯಕ್ಷ ನರಸಿಂಹ ಬೀಜಾಡಿ, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ, ಕಾರ್ಯದರ್ಶಿ ರಾಘವೇಂದ್ರ ಕಾಂಚನ್, ಜಂಟಿ ಕಾರ್ಯದರ್ಶಿ ಅಜಿತ್ ಶೆಟ್ಟಿ ಉಳ್ತೂರು, ಉದ್ಯಮಿ ಶಿವರಾಮ ಹೆಗ್ಡೆ, ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ, ಕುಂದಾಪ್ರ ಕನ್ನಡ ಹಬ್ಬದ ರೂವಾರಿಗಳಾದ ಉದಯಕುಮಾರ್ ಶೆಟ್ಟಿ ಪಡುಕರೆ, ವಸಂತ ಗಿಳಿಯಾರ್, ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಕುಮಾರ್ ಶೆಟ್ಟಿ, ಶಿವಾನಂದ ಶೆಟ್ಟಿ ಮತ್ತಿತರರು ಇದ್ದರು.

ಕುಂದಾಪ್ರ ಕನ್ನಡ ಹಬ್ಬದ ಕರಪತ್ರವನ್ನು ವಾಲ್ಗ ಸಮಾರಂಭದಲ್ಲಿ ಗಣ್ಯರು ಬಿಡುಗಡೆ ಮಾಡಿದರು.

ಸಮಾಲೋಚನಾ ಸಭೆ

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗಿರುವ ಕುಂದಾಪುರ ಕನ್ನಡ ಅಧ್ಯಯನ ಪೀಠದ ಕುರಿತು ಇದೇ ವೇಳೆ ಮಾಜಿ ಸಂಸದ ಕೆ.ಜಯಪ್ರಕಾಶ್ ಹೆಗ್ಡೆ ಅವರ ಸಮ್ಮುಖದಲ್ಲಿ ಸಮಾಲೋಚನಾ ಸಭೆ ನಡೆಯಿತು. ಹಿಂದಿನ ಕುಂದಾಪ್ರ ಕನ್ನಡ ಹಬ್ಬದ ಸಂದರ್ಭ ಈ ಪೀಠಕ್ಕೆ ಸರಕಾರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 1.5 ಕೋಟಿ ಅನುದಾನ ನೀಡಿದ್ದರು. ಅಧ್ಯಯನ ಪೀಠದ ಮುಂದಿನ ಕಾರ್ಯಕ್ರಮಗಳ ಸಲುವಾಗಿ ಕುಂದಾಪುರದಲ್ಲಿ ಜನತೆಯ ಅಭಿಪ್ರಾಯ ಸಂಗ್ರಹಿಸಲಾಗಿದೆ. ಅದೇ ರೀತಿ ಬೆಂಗಳೂರಿನಲ್ಲೂ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದು ಜಯಪ್ರಕಾಶ್ ಹೆಗ್ಡೆ ತಿಳಿಸಿದರು. ಪೀಠದ ಸದಸ್ಯ ಕೆ.ಸಿ.ರಾಜೇಶ್ ಮುಂತಾದವರು ಉಪಸ್ಥಿತರಿದ್ದರು.

ವೈವಿಧ್ಯಮಯ ಕಾರ್ಯಕ್ರಮಗಳು

- ಸಾವ್ರ ಹಣ್ಣಿನ್ ವಸಂತ
- ಹೌದರಾಯನ ವಾಲ್ಗ
- ಕುಂದಾಪ್ರದಡುಗೆ: ಉಪ್ಪಿನ್ನೊಡಿ ಥಿಟ ಮದಿಮನಿ ಊಟ
- ಮೂಕಜ್ಜಿಯ ಕನಸುಗಳು: ಬೂಕ್ ತಕಣಿ ಬೂಕ್
- ಸ್ವರ ಕುಂದಾಪ್ರ: ನಮ್ ಊರ್ಮನಿ ಮಕ್ಳ್ ಹಾಡುಹಸೆ
- ಪಟ್ಟಾಂಗ: ಮಾತಿನ ಚಾವಡಿ
- ಬಾರ್ಕೂರಿನ್ ಹಡ್ಗ್: ನೃತ್ಯ ನಾಟಕ (ಪ್ರಥಮ ಪ್ರದರ್ಶನ)
- ಉದ್ಘಾಟನಾ ಪರ್ವ, ಸಮಾಪನ ಸಮಾರಂಭ: ಊರ ಗೌರವ (ಕುಂದಾಪುರ ಮೂಲದ ಇಬ್ಬರು ಅತಿಗಣ್ಯ ಸಾಧಕರಿಗೆ ಸನ್ಮಾನ)
- ಈ ವರ್ಷದ ಬೃಹತ್ ಆಕರ್ಷಣೆ, 'ಅಟ್ಟಣ್ಗೆ ಆಟ': ಎರಡು ರಂಗಸ್ಥಳದ ಯಕ್ಷಗಾನ
- ಸಾಹಿತಿ ವೈದೇಹಿ ಉದ್ಘಾಟನೆಗೆ ಮುಖ್ಯ ಅತಿಥಿ
- ಪಿಳ್ಳಂಗೋವಿಯ ಚೆಲುವ ಕೃಷ್ಣನಾ: ಡಾ.ವಿದ್ಯಾಭೂಷಣರ ಗಾಯನ, ಅಮೆರಿಕದಲ್ಲಿ ಭಾರಿ ಯಶಸ್ವಿ ಕಂಡ ಕಾರ್ಯಕ್ರಮದ ಮಾದರಿ.
- ಬಾಲಗೋಪಾಲ: ಮಕ್ಕಳ ಮಹಾಸಂಗಮದ ಯಕ್ಷನೃತ್ಯ
- ಹಂದಾಡಿ ಕ್ವಿಜ್: ಕುಂದಾಪುರ ಕುರಿತು ಮನು ಹಂದಾಡಿ ಅವರ ರಸಪ್ರಶ್ನೆ
- ಮಿಡ್ಕಣಿ: ಚೆಂದಾಮುಡಿ ಕುಂದಾಪ್ರದ ಸುರ-ಸುಂದರಿಯರ ಸೆಲೆಬ್ರಿಟಿ ಫ್ಯಾಷನ್ ಶೋ.
- ಕಾಳಿಂಗ-ಕಾಳಿಂಗ: ಭಾಗವತ ಕಾಳಿಂಗ ನಾವಡ, ಗಾಯಕ ಪಿ.ಕಾಳಿಂಗ ರಾಯರ ಪದ-ಪದ್ಯಗಳ ಅನುರಣನ.
- ರಾಸಲೀಲೆ: ಆಳ್ವಾಸ್ ವಿದ್ಯಾರ್ಥಿನಿಯರ ವಿಶೇಷ ಕಾರ್ಯಕ್ರಮ.
- ಇಲ್ಲಾಣಿ ಕುಂದಾಪ್ರ: ಖುಷಿಯಲೆಗಳ ಕಡಲೂರು. ಇಡೀ ಕುಂದಾಪುರದ ಚಿತ್ರಣ ಇರುವ ಸಾಕ್ಷ್ಯಚಿತ್ರ.
- ದ್ಯಸಿ: ತಾಂಗ್ರೆ ತಾಂಗ್ಲಿ, ವಿಶೇಷ ರೀತಿಯ ಲಕ್ಕಿಡಿಪ್.
- ಸಂಗೀತ ಸಂಜೆ

ಹಿಂದೂ ಪರ ಹೋರಾಟಗಾರರಿಂದ ಲಾರಿಗೆ ಅಡ್ಡ
ಹಿಂದೂ-ಮುಸ್ಲಿಂ ಯುವಕರ ನಡುವೆ ವಾಕ್ಸಮರ

ಗೋವುಗಳ ಅಕ್ರಮ ಸಾಗಾಟ ಪಂತರಪಾಳ್ಯದಲ್ಲಿ ಗೊಂದಲ



ಬೆಂಗಳೂರು: ಅಕ್ರಮವಾಗಿ ಗೋವುಗಳನ್ನು ಸಾಗಿಸಲಾಗುತ್ತಿದೆ ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ಹಿಂದೂ ಪರ ಸಂಘಟನೆ ಕಾರ್ಯಕರ್ತರು ಹಾಗೂ ಮುಸ್ಲಿಮರ ನಡುವೆ ಮಾತಿನ ಚಕಮಕಿಯಲ್ಲಿ ಆರಂಭಗೊಂಡು ಪರಿಸ್ಥಿತಿ ವಿಕೋಪಕ್ಕೆ ತಿರುಗಿದ ಘಟನೆ ನಡೆದಿದೆ.

ಬೆಂಗಳೂರಿನ ಪಂತರಪಾಳ್ಯ ಮೆಟ್ರೊ ನಿಲ್ದಾಣದ ಬಳಿ ಹಿಂದೂ ರಾಷ್ಟ್ರ ರಕ್ಷಣಾ ಪಡೆಯ ಕಾರ್ಯಕರ್ತರು ಎರಡು ಮಿನಿ ಲಾರಿಗಳನ್ನು ಅಡ್ಡ ಹಾಕಿದ್ದಾರೆ. ಲಾರಿಯಲ್ಲಿ 10ಕ್ಕೂ ಹೆಚ್ಚು ಗೋವುಗಳನ್ನು ಸಾಗಿಸಲಾಗುತ್ತಿತ್ತು. ಈ ಸಾಗಣೆಗೆ ಅಗತ್ಯ ದಾಖಲೆಗಳು ಇಲ್ಲದಿರುವುದರಿಂದ, ಗೋಹತ್ಯೆಗೆ ಸಾಗಾಟ ಮಾಡಲಾಗುತ್ತಿದೆ ಎನ್ನುವ ಅನುಮಾನದಲ್ಲಿ ಗಲಾಟೆ ಆರಂಭಿಸಿದರು. ಈ ವೇಳೆ ಮುಸ್ಲಿಂ ಯುವಕರು ಸ್ಥಳಕ್ಕೆ ಆಗಮಿಸಿ, ಹಿಂದೂ ರಾಷ್ಟ್ರ ರಕ್ಷಣಾ ಪಡೆಯ ಕಾರ್ಯಕರ್ತರೊಂದಿಗೆ ಮಾತಿನ ಚಕಮಕಿಗೆ ಇಳಿದರು.

ಈ ಬಗ್ಗೆ ಮಾತನಾಡಿರುವ ಹಿಂದೂ ಪರ ಹೋರಾಟಗಾರರು, ಗೋವುಗಳನ್ನು ಸಾಗಿಸುವಾಗ ಕಡ್ಡಾಯವಾಗಿ ಪಾಲಿಸಬೇಕಾದ ನಿಯಮಗಳನ್ನು ಪಾಲಿಸಿಲ್ಲ. ಗೋವಿನ ಮಾಲೀಕತ್ವ ಮತ್ತು ಪಶುವೈದ್ಯಕೀಯ ದಾಖಲೆ, ಯಾವ ಉದ್ದೇಶಕ್ಕಾಗಿ ಗೋವುಗಳನ್ನು ಸಾಗಟ ಮಾಡಲಾಗುತ್ತಿದೆ ಎನ್ನುವ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ಇದರೊಂದಿಗೆ ಒಂದು ವಾಹನದಲ್ಲಿ ಎರಡಕ್ಕಿಂತ ಹೆಚ್ಚು ಗೋವುಗಳನ್ನು ಸಾಗಾಟ ಮಾಡುವಂತಿಲ್ಲ ಎಂಬ ನಿಯಮ ಏದೆ. ಆದರೆ ಈ ನಿಯಮವನ್ನು ಮೀರಿ ಒಂದೇ ವಾಹನದಲ್ಲಿ 10 ಗೋವುಗಳಂತೆ ಎರಡು ವಾಹನಗಳಲ್ಲಿ 20 ಗೋವುಗಳನ್ನು ಸಾಗಾಟ ಮಾಡಲಾಗುತ್ತಿತ್ತು ಎಂದು ಆರೋಪಿಸಿದ್ದಾರೆ.

ಆದ್ದರಿಂದ ಗೋ ಮಾಂಸಕ್ಕಾಗಿ ಅಕ್ರಮ ಸಾಗಾಟ ಮಾಡುತ್ತಿರುವ ಆರೋಪದಲ್ಲಿ ಹಿಂದೂ ರಾಷ್ಟ್ರ ರಕ್ಷಣಾ ಪಡೆಯ ಕಾರ್ಯಕರ್ತರು ತಡೆದು ಹಿಡಿದು, ಪ್ರಶ್ನೆ ಮಾಡುತ್ತಿದ್ದಂತೆ ಸ್ಥಳದಲ್ಲಿ ಮುಸ್ಲಿಂ ಯುವಕರ ಗುಂಪು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರಿಂದ ಕಾರ್ಯರ್ತರು ಮತ್ತು ಗುಂಪಿನ ನಡುವೆ ಮಾತಿನ ಚಕಮಕಿ ನಡೆದಿದೆ. ನಂತರ ಸ್ಥಳಕ್ಕೆ ಬಂದ ಬ್ಯಾಟರಾಯನಪುರ ಠಾಣೆ ಪೊಲೀಸರು ವಾಹನವನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ, ಸಾಕುವ ಸಲುವಾಗಿ ಚಿಂತಾಮಣಿ ಸಂತೆಯಿಂದ ಸಾಗಿಸಲಾಗುತ್ತಿದೆ ಎಂದು ವಾಹನ ಚಾಲಕ ತಿಳಿಸಿದ್ದಾನೆ ಎಂದು ಹೇಳಿದ್ದಾರೆ.

ಗುಂಪು ಚದುರಿಸಿದ ಪೊಲೀಸರು

ಎರಡು ಕಡೆಯ ಮಾತಿನ ಚಕಮಕಿ ಜೋರಾಗುತ್ತಿದ್ದಂತೆ ಮಧ್ಯಪ್ರವೇಶಿಸಿದ ಪೊಲೀಸರು ಎರಡು ಕಡೆಯವರನ್ನು ಚದುರಿಸಿದ್ದಾರೆ. ಬಳಿಕ ಲಾರಿಯಲ್ಲಿರುವ ಹಸುಗಳನ್ನು ರೈತರು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಲಾರಿ ಮಾಲೀಕರು ಹಾಗೂ ರೈತರು ಮಾಹಿತಿ ನೀಡಿದ್ದರಿಂದ ಪೊಲೀಸರು ಲಾರಿಯನ್ನು ಕಳುಹಿಸಿದ್ದಾರೆ.

ಬೈಕ್, ಟ್ಯಾಕ್ಸಿ ಬೆಂಬಲಿಸಿ ಮೋಹನ್ ದಾಸ್ ಪೈ ಟ್ವೀಟ್

ಉದ್ಯಮಿ ಪೈ ವಿರುದ್ಧ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದಿಂದ ದೂರು

ಬೆಂಗಳೂರು: ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ನಿಷೇಧ ಸಂಬಂಧ ಹೈಕೋರ್ಟ್ ಆದೇಶದ ಬಳಿಕ ಆರ್‌ಟಿಒ ಬೈಕ್ ಟ್ಯಾಕ್ಸಿ ವಿರುದ್ಧ ಸಮರ ಸಾರಿದೆ. ಆದರೆ ಬೈಕ್ ಟ್ಯಾಕ್ಸಿ ನಿಷೇಧ ವಿಚಾರವಾಗಿ ಪರ ವಿರೋಧ ಚರ್ಚೆಗಳು ಜೋರಾಗಿದ್ದು, ಈ ಮಧ್ಯೆ ಬೈಕ್ ಟ್ಯಾಕ್ಸಿ ಬೆಂಬಲಿಸಿ ಟ್ವೀಟ್ ಮಾಡಿದ್ದ ಉದ್ಯಮಿ ಮೋಹನ್ ದಾಸ್ ಪೈ ವಿರುದ್ಧ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟ ದೂರು ದಾಖಲು ಮಾಡಿದೆ.

ರಾಜ್ಯ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ನಟರಾಜ್ ಶರ್ಮಾ ಭಾನುವಾರ ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ. ಬಳಿಕ ಮಾತನಾಡಿದ ಒಕ್ಕೂಟದ ಅಧ್ಯಕ್ಷ ನಟರಾಜ್ ಶರ್ಮಾ, ಕಳೆದ ಏಪ್ರಿಲ್‌ನಲ್ಲಿ ಹೈಕೋರ್ಟ್ ಬೈಕ್ ಟ್ಯಾಕ್ಸಿ ರದ್ದು ಮಾಡಿ ಆದೇಶ ಮಾಡಿದೆ. ಆದರೂ ಉಲ್ಲಂಘನೆ ಮಾಡಿ ಪರೋಕ್ಷವಾಗಿ ಬೈಕ್ ಟ್ಯಾಕ್ಸಿ ನಡೆಸಲಾಗುತ್ತಿದೆ. ಈ ಮಧ್ಯೆ ಮೋಹನ್ ದಾಸ್ ಪೈ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವವರು ಬೈಕ್ ಟ್ಯಾಕ್ಸಿ ಬೆಂಬಲಿಸಿ ಟ್ವೀಟ್ ಮಾಡಿದ್ದಾರೆ. ಇವರಿಗೆ ಕಾನೂನಿನ ಕನಿಷ್ಠ ಜ್ಞಾನ ಇಲ್ಲವೇ? ನ್ಯಾಯಾಲಯದ ಆದೇಶ ಇದ್ದರೂ ಬೈಕ್ ಟ್ಯಾಕ್ಸಿ ಪರ ಟ್ವೀಟ್ ಮಾಡಿ ಪ್ರಚೋದಿಸುವ ಕೆಲಸ ಮಾಡುತ್ತಿದ್ದಾರೆ. ಬೈಕ್ ಟ್ಯಾಕ್ಸಿಯಿಂದ ಏನೆಲ್ಲಾ ಸಮಸ್ಯೆಗಳಾಗುತ್ತವೆ ಎಂದು ಹೇಳಲು ನಾವು ಸಿದ್ಧ. ಅವರು ಬಹಿರಂಗ ಚರ್ಚೆಗೆ ಬರಲಿ ಎಂದು ಆಗ್ರಹಿಸಿದ್ದಾರೆ.

ಇನ್ನೂ ಕೆಲವು ಬೈಕ್ ಟ್ಯಾಕ್ಸಿ ಚಾಲಕರು, ಫ್ರೀಡಂ ಪಾರ್ಕ್ ಬಿಟ್ಟು ಬೇರೆಲ್ಲೂ ಪ್ರತಿಭಟನೆಗೆ ಅವಕಾಶ ಇಲ್ಲ ಎಂಬುದು ಗೊತ್ತಿದ್ದರೂ, ವಿಧಾನಸೌಧದ ಮುಂದೆ ಪ್ರತಿಭಟನೆ ಮಾಡಿದ್ದಾರೆ. ಇದು ಕಾನೂನಿನ ಉಲ್ಲಂಘನೆ. ಟ್ವೀಟ್ ಮಾಡಿದ ಮೋಹನ್ ದಾಸ್ ಪೈ ಹಾಗೂ ಪ್ರತಿಭಟನೆ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ದೂರು ನೀಡಿದ್ದೇನೆ. ಈಗಾಗಲೇ ಪೊಲೀಸರು ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು.

ಸುಳ್ಳು ಸುದ್ದಿ ಹಬ್ಬಿಸುವವರ ವಿರುದ್ಧ ಕ್ರಮಕ್ಕೆ ಆಗ್ರಹ

ಬೈಕ್ ಟ್ಯಾಕ್ಸಿ ನಿಂತಮೇಲೆ ಆಟೋದವರು ಹೆಚ್ಚು ಹಣ ಪಡೆಯುತ್ತಿದ್ದಾರೆ ಎಂದು ಸುದ್ದಿ ಹಬ್ಬಿಸಲಾಗುತ್ತಿದೆ. ಈ ರೀತಿ ಇದ್ದರೆ ರಿಯಾಲಿಟಿ ಚೆಕ್ ಆಗಲಿ, ಅವರ ವಿರುದ್ಧ ಕ್ರಮ ಆಗಲಿ. ದರ ನಿಗದಿ ಡ್ರೈವರ್‌ಗಳ ಕೈಯಲ್ಲಿ ಇಲ್ಲ. ಎಲ್ಲವೂ ಆಪ್ ಕಾರ್ಪೋರೇಟ್ ಕಂಪನಿಗಳ ಕೈಯಲ್ಲಿದೆ. ಸರಕಾರದ ದರವನ್ನು ಆರ್‌ಟಿಒ ಜಾರಿ ಮಾಡಲಿ. ಅದರ ಉದ್ದೇಶ ನಿಜಕ್ಕೂ ಇದ್ದರೆ ಸಾರಿಗೆ ಇಲಾಖೆ ಕಾರ್ಪೋರೇಟ್ ಕಂಪನಿಗಳ ವಿರುದ್ಧ ದೂರು ನೀಡಲಿ. ಕಾನೂನು ವಿರುದ್ಧ ಹೇಳಿಕೆ ಕೊಡುವವರ ವಿರುದ್ಧ ಕ್ರಮ ಆಗಬೇಕು ಎಂದು ಸಾರಿಗೆ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ನಟರಾಜ್ ಶರ್ಮಾ ಆಗ್ರಹಿಸಿದ್ದಾರೆ.

ವಿದೇಶಿ ದೇಣಿಗೆ ನಿಬಂಧನೆಗಳ ಉಲ್ಲಂಘನೆ ಆರೋಪ

ಗ್ರೀನ್‌ಪೀಸ್ ವಿರುದ್ಧದ ಇಡಿ ದೂರು ವಜಾ

ಬೆಂಗಳೂರು: ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ (ಫೇಮಾ) ನಿಬಂಧನೆಗಳನ್ನು ಉಲ್ಲಂಘಿಸಿದ್ದ ಆರೋಪದ ಮೇಲೆ ಗ್ರೀನ್‌ಪೀಸ್ ಎನ್ವೈರನ್ಮೆಂಟ್ ಟ್ರಸ್ಟ್ ಮತ್ತು ಅದರ ಸಂಬಂಧಿತ ಸಂಸ್ಥೆ ಗ್ರೀನ್‌ಪೀಸ್ ಇಂಡಿಯಾ ಸೊಸೈಟಿ ವಿರುದ್ಧ ಜಾರಿ ನಿರ್ದೇಶನಾಲಯ ದಾಖಲಿಸಿದ್ದ ದೂರನ್ನು ಹೈಕೋರ್ಟ್ ವಜಾಗೊಳಿಸಿದೆ.

ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕರು ದಾಖಲಿಸಿರುವ ದೂರು ರದ್ದತಿ ಕೋರಿ ಗ್ರೀನ್‌ಪೀಸ್ ಎನ್ವೆರನ್ಮೆಂಟ್ ಟ್ರಸ್ಟ್ ಮತ್ತು ಗ್ರೀನ್‌ಪೀಸ್ ಇಂಡಿಯಾ ಸೊಸೈಟಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ. ಪ್ರಕರಣದ ಸಂಬಂದ ಇ.ಡಿ ಜಾರಿ ಮಾಡಿದ್ದ ಷೋಕಾಸ್ ನೋಟಿಸ್ ಅನ್ನೂ ನ್ಯಾಯಾಲಯ ವಜಾಗೊಳಿಸಿದೆ.

ಫೇಮಾ ಕಾಯಿದೆಯ ಸೆಕ್ಷನ್ 6(3)(ಚಿ) ಕೈಬಿಟ್ಟ ಬಳಿಕ ಪ್ರಕ್ರಿಯೆ ಆರಂಭಿಸಲಾಗಿದೆ ಎನ್ನುವುದರಲ್ಲಿ ಯಾವುದೇ ವಿವಾದವಿಲ್ಲ. ಇದೇ ಆರೋಪ ಸಂಬಂಧಿತ ಪ್ರಕರಣದಲ್ಲಿ ಸಮನ್ವಯ ಪೀಠವು ಮಾಡಿರುವ ಆದೇಶ ಪರಿಗಣಿಸಿ ಈ ಅರ್ಜಿ ಪುರಸ್ಕರಿಸಬೇಕಿದೆ ಎಂದು ನ್ಯಾಯಾಲಯ ಹೇಳಿದೆ.

ಇಡಿ ಆರೋಪ ನಿರಾಕರಿಸಿದ ಗ್ರೀನ್‌ಪೀಸ್

ಡೈರೆಕ್ಟ್ ಡೈಲಾಗ್ ಇನಿಶಿಯೇಟಿವ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಜತೆಗೂಡಿ ಹಣ ಸಂಗ್ರಹಿಸಿ, ಅದನ್ನು ಗ್ರೀನ್‌ಪೀಸ್ ಇಂಡಿಯಾದ ನಿರ್ವಹಣೆಗೆ ಬಳಕೆ ಮಾಡಲಾಗುತ್ತಿತ್ತು. ವಿದೇಶಿ ದೇಣಿಗೆ ನಿಯಂತ್ರಣ ಕಾಯಿದೆ (ಎಫ್‌ಸಿಆರ್‌ಎ) ಅಡಿ ಗ್ರೀನ್‌ಪೀಸ್ ಪರವಾನಗಿ ರದ್ದುಪಡಿಸಿದ ಬಳಿಕ ಹೀಗೆ ಮಾಡಲಾಗಿದೆ ಎಂದು ಇ.ಡಿ ಆರೋಪಿಸಿತ್ತು. ಇದನ್ನು ನಿರಾಕರಿಸಿದ್ದ ಗ್ರೀನ್‌ಪೀಸ್, ದೇಣಿಗೆ ನೀಡುವವರ ಜತೆ ಸಂಪರ್ಕದಲ್ಲಿರಲು ಡಿಡಿಐಪಿಎಲ್ ಜತೆ ಪಾಲುದಾರಿಕೆ ಹೊಂದಿದ್ದು, ದೇಣಿಗೆ ಹಣ ನೇರವಾಗಿ ಗ್ರೀನ್‌ಪೀಸ್ ಪಡೆದಿದೆ ಎಂದಿತ್ತು. ಗ್ರೀನ್‌ಪೀಸ್‌ಪರವಾಗಿ ವಕೀಲೆ ಮೋನಿಕಾ ಪಾಟೀಲ್, ಕೇಂದ್ರ ಸರಕಾರವನ್ನು ವಕೀಲ ಎಂ.ಉನ್ನಿಕೃಷ್ಣನ್ ಪ್ರತಿನಿಧಿಸಿದ್ದರು. ಸಂಸ್ಥೆಯು ಅಭಿವೃದ್ಧಿ ವಿರೋಧಿ ಚಟುವಟಿಕೆಯಲ್ಲಿ ತೊಡಗಿದೆ ಎಂದು ಕೇಂದ್ರ ಗೃಹ ಇಲಾಖೆ ಆರೋಪಿಸಿತ್ತು. ಇದರ ಆಧಾರದಲ್ಲಿ ಎಫ್‌ಸಿಆರ್‌ಎ ಪರವಾನಗಿ ರದ್ದುಪಡಿಸಲಾಗಿತ್ತು. ಇದರ ಬೆನ್ನಿಗೇ ಗ್ರೀನ್‌ಪೀಸ್ ಕಚೇರಿಯ ಮೇಲೆ ಜಾರಿ ನಿರ್ದೇಶನಾಲಯ ದಾಳಿ ಮಾಡಿತ್ತು.

ಸ್ಥಳೀಯ ಪ್ರದರ್ಶನ ಕಲೆಗಳ ಪ್ರತಿಭೆ ಕಾರ್ಯಕ್ರಮ

ಬೆಂಗಳೂರು: ಗೋಪಾಲನ್ ಮಾಲ್ಸ್ ವತಿಯಿಂದ ನಡೆದ ನೆರೆಹೊರೆ ಪ್ರತಿಭೆ ಪ್ರದರ್ಶನದ ಉದ್ಘಾಟನಾ ಆವೃತ್ತಿಯ ರಾಜರಾಜೇಶ್ವರಿ ನಗರದ ಗೋಪಾಲನ್ ಮಾಲ್‌ನಲ್ಲಿ ನಡೆದ ಗ್ರ್ಯಾಂಡ್ ಫಿನಾಲೆಯೊಂದಿಗೆ ಮುಕ್ತಾಯಗೊಂಡಿತು. ನೃತ್ಯ, ಸಂಗೀತ, ರಂಗಭೂಮಿ ಮತ್ತು ಜಾನಪದ ಕಲೆ ಒಳಗೊಂಡ ಬೆಂಗಳೂರಿನ ವಸತಿ ಸಮುದಾಯಗಳ ಸ್ಥಳೀಯ ಪ್ರದರ್ಶನ ಕಲೆಗಳ ಪ್ರತಿಭೆಯನ್ನು ಗುರುತಿಸಲು ಕಾರ್ಯಕ್ರಮವು ಆಚರಿಸಿತು.

ಈ ಉಪಕ್ರಮವು ಮಕ್ಕಳಿಂದ ಹಿರಿಯ ನಾಗರಿಕರವರೆಗೆ 400ಕ್ಕೂ ಹೆಚ್ಚು ಭಾಗವಹಿಸುವವರನ್ನು ಆಕರ್ಷಿಸಿತು- ಶಾಸ್ತ್ರೀಯ, ಸಮಕಾಲೀನ ನೃತ್ಯ, ಗಾಯನ, ವಾದ್ಯ ಸಂಗೀತ, ಜಾನಪದ ಕಾರ್ಯಗಳು ಮತ್ತು ಸಮರ ಕಲೆಗಳಂತಹ ವಿಭಾಗಗಳಲ್ಲಿ ಪ್ರದರ್ಶನ ನೀಡಿತು. 12 ಸಮುದಾಯಗಳಲ್ಲಿ ನಡೆದ ಪ್ರಾಥಮಿಕ ಸುತ್ತಿನಲ್ಲಿ 1 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. 10 ಸಾವಿರಕ್ಕು ಹೆಚ್ಚು ನಿವಾಸಿಗಳು ಭಾಗವಹಿಸಿದ್ದರು.

ಗೋಪಾಲನ್ ಎಂಟರ್‌ಪ್ರೈಸಸ್‌ನ ನಿರ್ದೇಶಕ ಸಿ. ಪ್ರಭಾಕರ್ ಅವರು ಮಾತನಾಡಿ, ಈ ಕಾರ್ಯಕ್ರಮ ನಮ್ಮ ಸಮುದಾಯಗಳಲ್ಲಿನ ಅಸಾಧಾರಣ ಪ್ರತಿಭೆಯನ್ನು ಎತ್ತಿ ತೋರಿಸಿದೆ. ಇದು ಪ್ರತಿಭಾ ಪ್ರದರ್ಶನಕ್ಕಿಂತ ಹೆಚ್ಚಿನದು. ಇದು ನಮ್ಮ ಸಾಂಸ್ಕೃತಿಕ ಏಕತೆಯ ಆಚರಣೆಯಾಗಿದೆ. ಇದನ್ನು ಸ್ಫೂರ್ತಿ ಮತ್ತು ಸಂಪರ್ಕ ಸಾಧಿಸುವ ವಾರ್ಷಿಕ ಸಂಪ್ರದಾಯವನ್ನಾಗಿ ಮಾಡುವ ಗುರಿಯನ್ನು ನಾವು ಹೊಂದಿದ್ದೇವೆ ಎಂದು ಹೇಳಿದರು.

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.387/2025

ಅರ್ಜಿದಾರರು: 1. ಟಿ.ಎಸ್. ಶಿವಕುಮಾರ ಬಿನ್. ಲೇಟ್, ಶಿವಲಿಂಗಶೆಟ್ಟಿ 2. ಉಮೇಶ್ ಟಿ.ಎಸ್. ಬಿನ್. ಲೇಟ್, ಶಿವಲಿಂಗಶೆಟ್ಟಿ 3. ಮಲ್ಲಿಕಾರ್ಜುನ ಬಿನ್ ಮಲ್ಲಶೆಟ್ಟಿ 4. ಶ್ರೀಮತಿ. ನೀಲಮ್ಮ ಕೋಂ. ಮಲ್ಲಶೆಟ್ಟಿ ಎಲ್ಲರ ವಿಳಾಸ ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪು ತಾಲ್ಲೂಕು. ರಾಮನಗರ ಜಿಲ್ಲೆ-562117

ವಿರುದ್ಧ

ಎದುರುದಾರರು: 1, ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ. 2, ಗ್ರಾಮ ಲೇಕ್ಕಾಧಿಕಾರಿ, ಶಿವನಹಳ್ಳಿ ವೃತ್ತ, ಕಸಬಾ ಹೋ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 3 ಮತ್ತು 4ನೇ ಅರ್ಜಿದಾರರ ತಾಯಿ, 1 & 2ನೇ ಅರ್ಜಿದಾರರ ಅಜ್ಜಿ " ಗೌರಮ್ಮ ಕೋಂ. ಲೇಟ್ ಮಲ್ಲಶೆಟ್ಟಿ" ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ, ದಿನಾಂಕ: 31/01/2018 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ:21/07/2025ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

20/06/2025ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್, ವಕೀಲರು.
ಕನಕಪುರ ಟೌನ್
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ 386/2025

ಅರ್ಜಿದಾರರು: 1. ಶ್ರೀಮತಿ. ಲಕ್ಷ್ಮಿದೇವಮ್ಮ ಬಿನ್. ಲೇಟ್ ಸಂಜೀವಶೆಟ್ಟಿ 2. ನಾರಾಯಣಶೆಟ್ಟಿ ಬಿನ್. ಲೇಟ್ ಸಂಜೀವಶೆಟ್ಟಿ 3. ಶ್ರೀಮತಿ. ಸಾವಿತ್ರಮ್ಮ ಬಿನ್. ಲೇಟ್ ಸಂಜೀವಶೆಟ್ಟಿ 4. ರಾಮಸ್ವಾಮಿ ಬಿನ್. ಲೇಟ್ ಸಂಜೀವಶೆಟ್ಟಿ 5. ಟಿ.ಎಸ್. ಶಿವಕುಮಾರ ಬಿನ್. ಲೇಟ್, ಶಿವಲಿಂಗಶೆಟ್ಟಿ 6. ಉಮೇಶ್ ಟಿ.ಎಸ್. ಬಿನ್. ಲೇಟ್, ಶಿವಲಿಂಗಶೆಟ್ಟಿ 7. ಮಲ್ಲಿಕಾರ್ಜುನ ಬಿನ್ ಮಲ್ಲಶೆಟ್ಟಿ 8. ಶ್ರೀಮತಿ. ನೀಲಮ್ಮ ಕೋಂ. ಮಲ್ಲಶೆಟ್ಟಿ ಎಲ್ಲರ ವಿಳಾಸ ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪು ತಾಲ್ಲೂಕು. ರಾಮನಗರ ಜಿಲ್ಲೆ-562117

ವಿರುದ್ಧ

ಎದುರುದಾರರು: 1, ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ. 2, ಗ್ರಾಮ ಲೇಕ್ಕಾಧಿಕಾರಿ, ಶಿವನಹಳ್ಳಿ ವೃತ್ತ, ಕಸಬಾ ಹೋ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 3. ಶ್ರೀಮತಿ.ಲಕ್ಷ್ಮಮ್ಮ ಕೋಂ. ಬೆಟ್ಟಶೆಟ್ಟಿ ವಯಸ್ಸು 72 ವರ್ಷ ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪು ತಾಲ್ಲೂಕು ರಾಮನಗರ ಜಿಲ್ಲೆ-562117

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 8ನೇ ಅರ್ಜಿದಾರರ ತಂದೆ, 1 ರಿಂದ 4 ಮತ್ತು 7ನೇ ಅರ್ಜಿದಾರರು ಹಾಗೂ 3ನೇ ಎದುರುದಾರರ ತಾತ ಹಾಗೂ 5 & 6ನೇ ಅರ್ಜಿದಾರರ ಮುತಾತ " ಮಾಳಿಗಶೆಟ್ಟಿ ಬಿನ್. ಲೇಟ್ ಲಿಂಗಶೆಟ್ಟಿ" ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ, ದಿನಾಂಕ: 15/08/1955 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ:21/07/2025ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

20/06/2025ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್, ವಕೀಲರು.
ಕನಕಪುರ ಟೌನ್
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ 388/2025

ಅರ್ಜಿದಾರರು: 1. ಶ್ರೀಮತಿ. ಲಕ್ಷ್ಮಿದೇವಮ್ಮ ಬಿನ್. ಲೇಟ್ ಸಂಜೀವಶೆಟ್ಟಿ 2. ನಾರಾಯಣಶೆಟ್ಟಿ ಬಿನ್. ಲೇಟ್ ಸಂಜೀವಶೆಟ್ಟಿ 3. ಶ್ರೀಮತಿ. ಸಾವಿತ್ರಮ್ಮ ಬಿನ್. ಲೇಟ್ ಸಂಜೀವಶೆಟ್ಟಿ 4. ರಾಮಸ್ವಾಮಿ ಬಿನ್. ಲೇಟ್ ಸಂಜೀವಶೆಟ್ಟಿ 5. ಟಿ.ಎಸ್. ಶಿವಕುಮಾರ ಬಿನ್. ಲೇಟ್, ಶಿವಲಿಂಗಶೆಟ್ಟಿ 6. ಉಮೇಶ್ ಟಿ.ಎಸ್. ಬಿನ್. ಲೇಟ್, ಶಿವಲಿಂಗಶೆಟ್ಟಿ 7. ಮಲ್ಲಿಕಾರ್ಜುನ ಬಿನ್ ಮಲ್ಲಶೆಟ್ಟಿ 8. ಶ್ರೀಮತಿ. ನೀಲಮ್ಮ ಕೋಂ. ಮಲ್ಲಶೆಟ್ಟಿ ಎಲ್ಲರ ವಿಳಾಸ ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪು ತಾಲ್ಲೂಕು. ರಾಮನಗರ ಜಿಲ್ಲೆ-562117

ವಿರುದ್ಧ

ಎದುರುದಾರರು: 1, ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ. 2, ಗ್ರಾಮ ಲೇಕ್ಕಾಧಿಕಾರಿ, ಶಿವನಹಳ್ಳಿ ವೃತ್ತ, ಕಸಬಾ ಹೋ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 3. ಶ್ರೀಮತಿ.ಲಕ್ಷ್ಮಮ್ಮ ಕೋಂ. ಬೆಟ್ಟಶೆಟ್ಟಿ ವಯಸ್ಸು 72 ವರ್ಷ ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪು ತಾಲ್ಲೂಕು ರಾಮನಗರ ಜಿಲ್ಲೆ-562117

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 8ನೇ ಅರ್ಜಿದಾರರ ತಾಯಿ, 1 ರಿಂದ 4 ಮತ್ತು 7ನೇ ಅರ್ಜಿದಾರರು ಹಾಗೂ 3ನೇ ಎದುರುದಾರರ ಅಜ್ಜಿ ಹಾಗೂ 5 & 6ನೇ ಅರ್ಜಿದಾರರ ಮುತ್ತಜ್ಜಿ " ಮಾಳಮ್ಮ ಕೋಂ. ಲೇಟ್ ಮಾಳಿಗಶೆಟ್ಟಿ" ಕೂತಗೊಂಡನಹಳ್ಳಿ ಗ್ರಾಮ, ವಿ.ಆರ್.ದೊಡ್ಡಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ, ದಿನಾಂಕ: 10/05/1960 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ:21/07/2025ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

20/06/2025ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಜೈರಾಮೇಗೌಡ.ಎಸ್, ವಕೀಲರು.
ಕನಕಪುರ ಟೌನ್
ಸ್ಥಳ: ಕನಕಪುರ

ವಿರಾಮ
ಪ್ರತಿ ಭಾನುವಾರ

IN THE COURT OF THE I ADDL. SENIOR CIVIL JUDGE AT KOLAR. O.S.485/2023
PLAINTIFF: Smt. GOWRAMMA.
-VS-
DEFENDANT: Smt.Chandramma and others.
SUMMONS TO DEFENDANTS 5 TO 7, 10 AND 13 UNDER ORDER 5 RULE 20 OF CPC
To, Defendants 5 TO 7, 10 AND 13 5) Smt.Sujatha D/o Late Rama krishnappa, aged about 38 years, 6) Smt.Nirmala D/o Late Rama krishnappa, Aged about 38 years, 7) Smt. Komala D/o Late Ramakrish nappa, Aged about 33 years, All are residents of Beglibenajenahalli Village, Kasaba Hobli, Kolar Taluk. 10) Sri.Mallikarjuna S/o M.Nagaraja, Aged 38 years R/at Micro Wave Station, Kolar City. 13) Sri.R. Murali dhar S/o Late Ramaswamy, Aged about 45 years, R/at Beglibenajena halli Village, Kasaba (H), Kolar (T).
Whereas the plaintiff herein above have instituted the above suit against you for the relief of partition and separate possession and for other reliefs, in respect of the suit schedule properties. You are hereby summoned to appear in this court in person or by advocate on 28-7-2025 at 11-00 A.M. before this court to answer the same, failing which the suit will dispose off exparte.
Given under my hand and seal of the court this 10-6-2025.
By order of court, Sd/- Sheristedar, I Addl. Senior civil judge at Kolar.
S.R.Nagesh, Advocate, Kolar.

ಕಾಲ್ತುಳಿತ: ಅಮಾನತಾಗಿದ್ದ ಅಧಿಕಾರಿಗಳು ಇಂದು ಹಾಜರು ಸಾಧ್ಯತೆ?

ಕೆಎಸ್‌ಸಿಎ ಪದಾಧಿಕಾರಿಗಳ ಹೇಳಿಕೆ ದಾಖಲು

ಬೆಂಗಳೂರು: ಚಿನ್ನಸ್ವಾಮಿ ಮೈದಾನದ ಬಳಿ ಕಾಲ್ತುಳಿತ ದುರಂತ ಪ್ರಕರಣ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮಾಜಿ ಕಾರ್ಯದರ್ಶಿ ಶಂಕರ್ ಹಾಗೂ ಖಜಾಂಚಿಯಾಗಿದ್ದ ಇ.ಎಸ್.ಜೈರಾಮ್ ಅವರನ್ನು ತನಿಖಾಧಿಕಾರಿ ಜಿ.ಜಗದೀಶ್ ಅವರು ಶನಿವಾರ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ದುರಂತದಲ್ಲಿ 11 ಮಂದಿ ಸಾವು ಹಾಗೂ 50ಕ್ಕಿಂತ ಹೆಚ್ಚು ಮಂದಿ ಗಾಯಗೊಂಡ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಗಳಿಗೆ ಶಂಕರ್ ಹಾಗೂ ಜೈರಾಮ್ ರಾಜೀನಾಮೆ ನೀಡಿದ್ದರು. ಆರ್‌ಸಿಬಿ ವಿಜಯೋತ್ಸವ ಆಯೋಜನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎನ್ನಲಾದ ಕೆಎಸ್‌ಸಿಎ ಪದಾಧಿಕಾರಿಗಳು ವಿಚಾರಣೆಗೆ ಬರುವಂತೆ ನೋಟಿಸ್ ಜಾರಿಯಾಗಿತ್ತು. ಅದರ ಮೇರೆಗೆ ಶನಿವಾರ ಹಾಜರಾಗಿ ಸುಮಾರು 3 ಗಂಟೆಗಳ ಕಾಲ ವಿಚಾರಣೆ ಎದುರಿಸಿದ್ದಾರೆ.

ಅಹಮದಾಬಾದ್‌ನಲ್ಲಿ ನಡೆದ ಐಪಿಎಲ್ ಫೈನಲ್ ಪಂದ್ಯದ ಆರಂಭಕ್ಕೆ ಮುನ್ನವೇ ವಿಜಯೋತ್ಸವ ಆಚರಣೆಗಾಗಿ ಪೂರ್ವಾನುಮತಿ ಪಡೆಯಲು ಸೂಚಿಸಿದ್ದು ಯಾರು? ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗರಿಷ್ಠ 35 ಸಾವಿರ ಆಸನಗಳಿದ್ದರೂ ಲಕ್ಷಾಂತರ ಮಂದಿ ಅಭಿಮಾನಿಗಳು ಬರುವ ಬಗ್ಗೆ ನಿರೀಕ್ಷೆ ಹೊಂದಿರಲಿಲ್ಲವೇ? ಒಂದು ವೇಳೆ ಮಾಹಿತಿ ತಿಳಿದಿದ್ದರೂ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಗಮನಕ್ಕೆ ತಿಳಿಸಲಾಗಿತ್ತೆ? ಕಬ್ಬನ್ ಪಾರ್ಕ್ ಪೊಲೀಸರು ಕಾರ್ಯಕ್ರಮ ಆಯೋಜನೆಗೆ ಅನುಮತಿ ನೀಡದಿದ್ದರೂ ಸಂಭ್ರಮಾಚರಣೆಗೆ ಹೇಳಿದವರು ಯಾರು? ಎಂಬುದು ಸೇರಿದಂತೆ ಹತ್ತಾರು ಪ್ರಶ್ನೆಗಳನ್ನು ತನಿಖಾಧಿಕಾರಿಗಳು ಕೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮತ್ತೊಂದೆಡೆ, ದುರಂತದಲ್ಲಿ ಬಂಧನಕ್ಕೆ ಒಳಗಾಗಿದ್ದ ಆರ್‌ಸಿಬಿ ತಂಡದ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಹೊರತುಪಡಿಸಿ ಡಿಎನ್‌ಎ ಇವೆಂಟ್ ಮ್ಯಾನೇಜ್‌ಮೆಂಟ್ ಸಿಬ್ಬಂದಿಗಳಾದ ಸುನೀಲ್ ಮ್ಯಾಥ್ಯು, ಕಿರಣ್ ಕುಮಾರ್ ಹಾಗೂ ಶಮಂತ್ ಅವರನ್ನೂ ಸಹ ವಿಚಾರಣೆ ನಡೆಸಲಾಗಿದೆ. ಶನಿವಾರ ಹಾಜರಾಗಿ ಸ್ಟೇಡಿಯಂ ಭದ್ರತೆಗಿದ್ದ ಸಿಬ್ಬಂದಿಗಳ ವಿವರ, ವಿಜಯೋತ್ಸವಕ್ಕಾಗಿ ಕೈಗೊಂಡಿದ್ದ ಮುಂಜಾಗ್ರತಾ ಕ್ರಮಗಳ ಕುರಿತಂತೆ ದಾಖಲಾತಿಗಳನ್ನು ಪಡೆಯಲಾಗಿದೆ ಎಂದು ತಿಳಿದುಬಂದಿದೆ.

ನಾಲ್ವರು ಅಧಿಕಾರಿಗಳು ವಿಚಾರಣೆಗೆ ಹಾಜರು?

ಘಟನೆ ಸಂಬಂಧ ಅಮಾನತಾಗಿರುವ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ ಸೇರಿದಂತೆ ನಾಲ್ವರು ಅಧಿಕಾರಿಗಳು ಸೋಮವಾರ ವಿಚಾರಣೆಗೆ ಹಾಜರಾಗಲಿದ್ದಾರೆ ಎನ್ನಲಾಗಿದೆ. ಈಗಾಗಲೇ ಕಬ್ಬನ್ ಪಾರ್ಕ್ ಠಾಣೆ ಉಪವಿಭಾಗದ ಎಸಿಪಿಯಾಗಿದ್ದ ಬಾಲಕೃಷ್ಣ ವಿಚಾರಣೆಗೆ ಹಾಜರಾಗಿದ್ದಾರೆ. ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗ ಡಿಸಿಪಿಯಾಗಿದ್ದ ಶೇಖರ್ ಟೆಕ್ಕಣ್ಣನವರ ಹಾಗೂ ಕಬ್ಬನ್ ಪಾರ್ಕ್ ಠಾಣೆ ಇನ್ಸ್‌ಪೆಕ್ಟರ್ ಗಿರೀಶ್ ಸೇರಿ ನಾಲ್ವರು ಅಧಿಕಾರಿಗಳು ಸೋಮವಾರ (ಜೂನ್ 23) ತನಿಖಾಧಿಕಾರಿಗಳ ಮುಂದೆ ವಿಚಾರಣೆ ಹಾಜರಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕಾಲೇಜು ಶುಲ್ಕಕ್ಕೆ ತಂದ ಹಣ ದೋಚಿದ ಖದೀಮರು

ಬೆಂಗಳೂರು: ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೆ, ಕಾಲೇಜು ಫೀಸ್ ಕಟ್ಟಲು ಎತ್ತಿಟ್ಟಿದ್ದ ಹಣವನ್ನು ಕಳ್ಳರು ದೋಚಿ ಪರಾರಿಯಾಗಿರುವ ಘಟನೆ ಪ್ಯಾಲೇಸ್ ಆವರಣದಲ್ಲಿರುವ ಮನೆಯಲ್ಲಿ ನಡೆದಿದೆ.

ಶ್ರೀನಿವಾಸ್ ಎಂಬುವವರ ಮನೆಯಲ್ಲಿ ಶನಿವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಯಾರು ಇಲ್ಲದ ಸಮಯ ನೋಡಿಕೊಂಡು ಬಾಗಿಲು ಮುರಿದು, ಒಳಗಡೆ ಹೋಗಿ ಕಳ್ಳರು ತಮ್ಮ ಕೈಚಳಕ ತೋರಿಸಿದ್ದಾರೆ. ಮನೆಯಲ್ಲಿದ್ದ 2 ಬೀರು ಒಡೆದು, ಅದರಲ್ಲಿದ್ದ ಚಿನ್ನಾಭರಣ, ನಗದು ಕದ್ದು ಖದೀಮರು ಎಸ್ಕೇಪ್ ಆಗಿದ್ದಾರೆ. ಮಕ್ಕಳ ಕಾಲೇಜು ಶುಲ್ಕ ಕಟ್ಟಲು ಸಾಲ ಮಾಡಿ, ಮನೆಯಲ್ಲಿ ಹಣ ತಂದಿಟ್ಟಿದ್ದರು. ಇದೇ ಹಣವನ್ನು ಖದೀಮರು ಕಳ್ಳತನ ಮಾಡಿಕೊಂಡು ಹೋಗಿರುವುದರಿಂದ ಮನೆ ಮಾಲೀಕ ಶ್ರೀನಿವಾಸ್ ದಿಕ್ಕು ತೋಚದೇ ಕಂಗಾಲಾಗಿದ್ದಾರೆ.

ಈ ಸಂಬಂಧ ಶ್ರೀನಿವಾಸ್ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇಲ್ಲೇ ಪಕ್ಕದ ಕೆರೆಯಲ್ಲಿ ಮೀನು ಹಿಡಿಯಲು ಬರುವವರೇ ಕಳ್ಳತನ ಮಾಡಿರಬಹುದು ಎಂದು ಅವರು ಅನುಮಾನ ವ್ಯಕ್ತಪಡಿಸಿದ್ದಾರೆ. ಕಳ್ಳತನ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ನವೀಕೃತ ಪಿಎಚ್‌ಸಿ ಲೋಕಾರ್ಪಣೆ

ಬೆಂಗಳೂರು: ನಗರದ ಬಿಟಿಎಂ ಲೇಔಟ್ ವ್ಯಾಪ್ತಿಯ ಜನತೆಗೆ ನವೀಕೃತ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಲೋಕಾರ್ಪಣೆಗೊಳಿಸಿದರು. ಸುಮಾರು 90 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ನವೀಕೃತ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಸಗಿ ಆಸ್ಪತ್ರೆಯಲ್ಲಿರುವ ಸುಸಜ್ಜಿತವಾಗಿ ಚಿಕಿತ್ಸೆಗೆ ಅವಕಾಶ ನೀಡಲಾಗಿದೆ. ಇನ್ನು ಪ್ರತಿ ಸೋಮವಾರ ಸ್ತ್ರೀ ರೋಗ ತಜ್ಞರು, ಮಂಗಳವಾರ ಮಕ್ಕಳ ತಜ್ಞರ ಭೇಟಿಗೆ ಅವಕಾಶ ನೀಡಲಾಗಿದೆ. ಪ್ರತಿ ದಿನ ಸ್ಮಾರ್ಟ್ ಕ್ಲಿನಿಕ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ರೋಗಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಆನ್‌ಲೈನ್‌ನಲ್ಲಿ ಚರ್ಮ ರೋಗ ತಜ್ಞರು, ಇ ಆ್ಯಂಡ್ ಟಿ ತಜ್ಞರು,ಮೂಳೆ ತಜ್ಞರು, ಕಣ್ಣಿನ ತಜ್ಞರು ಉಚಿತವಾಗಿ ತಪಾಸಣೆ ನಡೆಸಲಿ ದ್ದಾರೆ. ಈ ಕಾರ್ಯಕ್ರಮದಲ್ಲಿ ಜಿ ಎನ್ ಆರ್ ಬಾಬು, ಡಾ.ಅನುಪಮ, ಆರೋಗ್ಯಧಿಕಾರಿ, ಆಸ್ಪತ್ರೆಯ ಸಿಬ್ಬಂದಿ, ವಿವಿಧ ಇಲಾಖೆಯ ಅಧಿಕಾರಿ ಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಪರಿಶಿಷ್ಟ ಜಾತಿ ಸಮೀಕ್ಷೆ ಖಾತರಿಗೆ ಮನೆಗೆ ಸ್ಟಿಕ್ಕರ್

ಬೆಂಗಳೂರು: ನಗರದಲ್ಲಿ ಬಿಬಿಎಂಪಿ ಅಧಿಕಾರಿಗಳು ನಿರ್ದಿಷ್ಟ ಯೋಜನೆಯ ಅನುಷ್ಠಾನವನ್ನು ಖಾತರಿ ಪಡಿಸಿಕೊಳ್ಳುವ ಉದ್ದೇಶದಿಂದ ಮನೆ ಮನೆಗೂ ಸ್ಟಿಕ್ಕರ್ ಅಂಟಿಸಲು ಮುಂದಾಗಿದ್ದಾರೆ. ಪರಿಶಿಷ್ಟ ಜಾತಿ ಸಮೀಕ್ಷೆ ಖಾತರಿ ಪಡಿಸಿಕೊಳ್ಳುವ ಸಲುವಾಗಿ ಇಂದಿನಿಂದ (ಜೂ.23) ಪ್ರತಿ ಮನೆಗೆ ಸ್ಟಿಕ್ಕರ್ ಅಳವಡಿಸಲು ಬಿಬಿಎಂಪಿ ಅಧಿಕಾರಿಗಳು ಮುಂದಾಗಿದ್ದು, ಇದರೊಂದಿಗೆ ಪರಿಶಿಷ್ಟ ಜಾತಿ ಸಮೀಕ್ಷಾ ಅವಧಿಯನ್ನು 30ನೇ ಜೂನ್ 2025 ರವರೆಗೆ ವಿಸ್ತರಣೆ ಮಾಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷಾ ಕಾರ್ಯ ನಡೆಸುತ್ತಿರುವ ಕುರಿತು ಖಾತರಿ ಪಡಿಸಿಕೊಳ್ಳುವ ಸಲುವಾಗಿ (23ನೇ ಜೂನ್ 2025 ರಿಂದ) ಪ್ರತಿ ಮನೆಗೆ ಸ್ಟಿಕ್ಕರ್ ಅಂಟಿಸಲು ಬಿಬಿಎಂಪಿಯ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಮತ್ತು ಸರಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ 101 ಜಾತಿಗಳಿಗೆ ಸೇರಿದವರ ಪ್ರಾತಿನಿಧ್ಯತೆ ಕುರಿತು ವೈಜ್ಞಾನಿಕ ದತ್ತಾಂಶವನ್ನು ಸಂಗ್ರಹಿಸಲು, 05-05-2025 ರಿಂದ ಮನೆ-ಮನೆ ಭೇಟಿ ನೀಡುವ ಮೂಲಕ ರಾಜ್ಯಾದ್ಯಂತ ಸಮೀಕ್ಷೆಯನ್ನು ಪ್ರಾರಂಭಿಸಲಾಗಿರುತ್ತದೆ. ಕರ್ನಾಟಕ ಸರಕಾರವು ಪ್ರತಿಯೊಬ್ಬರಿಗೂ, ವಿಶೇಷವಾಗಿ ಪರಿಶಿಷ್ಟ ಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಈ ನಿಟ್ಟಿನಲ್ಲಿ, ಪರಿಶಿಷ್ಟ ಜಾತಿ ಸಮೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗಕ್ಕೆ ವಹಿಸಲಾಗಿದೆ.

ಅಪಘಾತಕ್ಕೆ ವಿಮಾ ಕಂಪನಿ ಪರಿಹಾರ ನೀಡಲಿ

ಬೆಂಗಳೂರು: ತುರ್ತು ಸಂದರ್ಭಗಳಲ್ಲಿ ಪರ್ಯಾಯವಾಗಿ ಓಡಿಸಲಾಗಿದ್ದ ಬಸ್‌ನಿಂದ ಅಪಘಾತ ಉಂಟಾದರೇ ವಿಮಾ ಕಂಪನಿಯೇ ಪರಿಹಾರ ನೀಡಬೇಕೆಂದು ಹೈಕೋರ್ಟ್ ತೀರ್ಪು ನೀಡಿದೆ.

ತುರ್ತು ಸಂದರ್ಭಗಳಲ್ಲಿ ಪರ್ಯಾಯ ಬಸ್ ಓಡಿಸುವುದು ಷರತ್ತುಗಳ ಉಲ್ಲಂಘನೆಯಾಗುವುದಿಲ್ಲ. ತುರ್ತು ಸಂದರ್ಭಗಳಲ್ಲಿ ಪರ್ಯಾಯವಾಗಿ ಓಡಿಸುವ ಬಸ್ ಅನ್ನು ಮೂಲಭೂತ ಉಲ್ಲಂಘನೆಯಂತೆ ಪರಿಗಣಿಸಲಾಗುವುದಿಲ್ಲ ಎಂದು ಹೇಳಿದೆ. ಅಪಘಾತ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಇಬ್ಬರು ಗಾಯಾಳುಗಳು ಮತ್ತು ಬಸ್ ಮಾಲೀಕರು ಸಲ್ಲಿಸಿದ ಮೇಲ್ಮನವಿಗಳನ್ನು ನ್ಯಾಯಾಲಯ ಅಂಗೀಕರಿಸಿ ತೀರ್ಪು ನೀಡಿದೆ.2014ರ ಜನವರಿ 21 ರಂದು ಬೆ.11.45 ರ ಸುಮಾರಿಗೆ, ಗಣೇಶ್ ಮತ್ತು ಬಸವರಾಜ್ ಎಂಬುವರು ಮುದೂರಿನಿಂದ ಹಾವೇರಿಗೆ ಬೈಕ್‌ನಲ್ಲಿ ಹೋಗುತ್ತಿದ್ದರು. ಸಂಗೂರು ಗ್ರಾಮದ ಸಕ್ಕರೆ ಕಾರ್ಖಾನೆಯ ಬಳಿ, ಅತಿ ವೇಗದ ಬಂದ ಖಾಸಗಿ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಇಬ್ಬರೂ ಸವಾರರು ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ನಂತರ ಇಬ್ಬರೂ ಪರಿಹಾರ ಕೋರಿ ಅರ್ಜಿ ಸಲ್ಲಿಸಿದರು. ಅರ್ಜಿ ವಿಚಾರಣೆ ನಡೆಸಿದ ಹಾವೇರಿ ಮೋಟಾರು ಅಪಘಾತ ಹಕ್ಕು ನ್ಯಾಯಮಂಡಳಿ, ಬಸ್ ಅನುಮತಿ ಪಡೆದ ಮಾರ್ಗ ಹೊರತುಪಡಿಸಿ ಬೇರೆ ಮಾರ್ಗದಲ್ಲಿ ಪ್ರಯಾಣಿಸಿದೆ. ಇದು ಪರವಾನಗಿ ಷರತ್ತುಗಳ ಉಲ್ಲಂಘನೆಯಾಗಿದೆ ಎಂದು ಹೇಳಿತ್ತು. ಕೋರ್ಟ್ ಗಣೇಶ್ ಅವರಿಗೆ 3,71,030 ರು. ಮತ್ತು ಬಸವರಾಜ್ ಅವರಿಗೆ 1,27,250 ರು. ಪರಿಹಾರ ನೀಡುವಂತೆ ಆದೇಶಿಸಿತ್ತು. ಅಪಘಾತಕ್ಕೀಡಾದ ಬಸ್ ಶಿವಮೊಗ್ಗ ಮತ್ತು ಹಂಗಳ ನಡುವಿನ ಮಾರ್ಗಕ್ಕೆ ಪರವಾನಗಿ ಹೊಂದಿತ್ತು. ಆ ದಿನ, ಅದು ಹಂಗಳ ಆಚೆ ಹಾವೇರಿಯವರೆಗೆ ಪ್ರಯಾಣಿಸಿತ್ತು ಮತ್ತು ಹಾವೇರಿಯಿಂದ ಹಿಂತಿರುಗುವಾಗ ಅಪಘಾತ ಸಂಭವಿಸಿದೆ. ಪರ್ಮಿಟ್ ಹೊಂದಿದ್ದ ಬಸ್ ಕೆಟ್ಟುಹೋಗಿದ್ದರಿಂದ ಅಪಘಾತಕ್ಕೀಡಾದ ಬಸ್ ಆ ಮಾರ್ಗದಲ್ಲಿ ಕಾರ್ಯನಿರ್ವಹಿಸುತ್ತಿತ್ತು.

{ ಪ್ರಲ್ಹಾದ ಜೋಶಿ } ಕೇಂದ್ರ ಸಚಿವ

ಶಿಕ್ಷಣದಲ್ಲಿ ಇಂದು ಭಾರತ ಮುನ್ನಡೆ ಸಾಧಿಸಿದ್ದು, 23 ಐಐಟಿಗಳನ್ನು ಹೊಂದಿದೆ. ದೇಶದ ಎಲ್ಲಾ ಐಐಟಿಗಳಂತೆ ಧಾರವಾಡ ಐಐಟಿಯನ್ನು ಸಹ ಸಮಗ್ರ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ಇಂದಿನ ವಿದ್ಯಾರ್ಥಿ-ಯುವ ಸಮುದಾಯಕ್ಕೆ 21ನೇ ಶತಮಾನದ ಅಗತ್ಯಗಳಿಗೆ ಪೂರಕವಾದಂತಹ ಶಿಕ್ಷಣ ಒದಗಿಸುವ ಗುರಿ ಹೊಂದಿದೆ.

ಎಚ್‌ಡಿಡಿಗೆ ಶ್ರೀ ಗಂಗ ಸಾಮ್ರಾಟ ಶ್ರೀ ಪುರುಷ ಪ್ರಶಸ್ತಿ ಪ್ರದಾನ | ಮಣ್ಣಿನ ಮಗ ದೇವೇಗೌಡ ಪುಸ್ತಕ ಬಿಡುಗಡೆ

ಮೋದಿಯಿಂದಲೇ ನೀರಾವರಿ ಸಮಸ್ಯೆಗೆ ಪರಿಹಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದ ಹಲವು ನೀರಾವರಿ ಸಮಸ್ಯೆಗಳಿಗೆ ಪರಿಹಾರ ನೀಡಲು ಪ್ರಧಾನಿ ನರೇಂದ್ರ ಮೋದಿ ಅವರಿಂದ ಮಾತ್ರ ಸಾಧ್ಯ. ಅವರನ್ನು ಹೊಗಳಬೇಕೆಂದು ಈ ಮಾತು ಹೇಳುತ್ತಿಲ್ಲ. ಆದರೆ ವಾಸ್ತವಾಂಶ ಮಾತನಾಡುತ್ತಿದ್ದೇನೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಅಭಿಪ್ರಾಯಪಟ್ಟರು.

ದೇವೇಗೌಡ ಅಭಿನಂದನಾ ಸಮಿತಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾಜಿ ಪ್ರಧಾನಿ ದೇವೇಗೌಡರಿಗೆ 'ಶ್ರೀ ಗಂಗ ಸಾಮ್ರಾಟ ಶ್ರೀಪುರುಷ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಾಗೂ 'ಮಣ್ಣಿನ ಮಗ ದೇವೇಗೌಡ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ನದಿ ನೀರು ಹಂಚಿಕೆಯಲ್ಲಿ ಕರ್ನಾಟಕ ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರಿಂದ ಮಾತ್ರ ಬಗೆಹರಿಸಲು ಸಾಧ್ಯ. ಮಹದಾಯಿ ಯೋಜನೆ, ಕೃಷ್ಣ ನದಿ ನೀರು ಹಂಚಿಕೆಯಲ್ಲಿ ಎದುರಾಗಿರುವ ತೊಡಕು ಸೇರಿದಂತೆ ರಾಜ್ಯದ ನೀರಾವರಿ ಸಮಸ್ಯೆಗಳನ್ನು ಪ್ರಧಾನಿ ಮೋದಿ ಅವರು ಮಾತ್ರ ಬಗೆಹರಿಸಬಲ್ಲರು. ಹಾಗಾಗಿ ಅವರಿಗೆ ವಾಸ್ತವಾಂಶದ ಮನವರಿಕೆ ಮಾಡಿಕೊಡಲು ಪತ್ರ ಬರೆದಿದ್ದೇನೆ. ಅವರಿಂದಲೇ ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ ಎಂದರು.

ಕೃಷ್ಣ ನದಿ ನೀರು ಹಂಚಿಕೆಯಲ್ಲಿ ಹೆಚ್ಚುವರಿ ಪಾಲನ್ನು ಕೇಳಿರುವ ತಮಿಳುನಾಡಿನ ನಿಲುವಿಗೆ ಅಸಮಾಧಾನ ವ್ಯಕ್ತಪಡಿಸಿದ ದೇವೇಗೌಡರು, ತಮಿಳುನಾಡು ಹೆಚ್ಚು ನೀರಿನ ಸಂಪನ್ಮೂಲ ಹೊಂದಿರುವ ರಾಜ್ಯ ಎಂದು ನಾನಲ್ಲ, ನ್ಯಾಯಮಂಡಳಿಯವರೇ ದಾಖಲೆಗಳಲ್ಲಿ ನಮೂದಿಸಿದ್ದಾರೆ. ನಾನು ಯಾರ ಬಗ್ಗೆಯೂ ಟೀಕೆ ಮಾಡಲ್ಲ. ಆಡಳಿತ ನಡೆಸುವವರ ಬಗ್ಗೆಯೂ ಟೀಕೆ ಮಾಡಲ್ಲ. ವಾಸ್ತವಾಂಶವನ್ನು ಹೇಳುತ್ತಿದ್ದೇನೆ ಅಷ್ಟೇ ಎಂದು ಹೇಳಿದರು.

ನಮ್ಮವರಿಗೆ ಮೊದಲು ನೀರು ಕೊಡಿ: ರಾಜ್ಯದ ಜನತೆ ಕುಡಿಯುವ ನೀರಿನ ಕೊರತೆ ಎದುರಿಸುತ್ತಿರುವಾಗ ನಾವು ಗೋದಾವರಿಗೆ ನೀರು ಕೊಡುತ್ತೇವೆ, ಬೇರೆ ರಾಜ್ಯಕ್ಕೆ ನೀರು ಕೊಡುತ್ತೇವೆ ಅನ್ನುತ್ತಿದ್ದಾರೆ. ಚಿತ್ರದುರ್ಗ, ಚಿಕ್ಕಮಗಳೂರಿನ ಕೆಲಭಾಗ, ಬೆಂಗಳೂರು, ತುಮಕೂರು, ಮಧುಗಿರಿ, ಕೋಲಾರ, ಚಿಕ್ಕಬಳ್ಳಾಪುರಕ್ಕೆ ಹೋಗೋಣ ಬನ್ನಿ, ಅಲ್ಲಿನ ನೀರಿನ ಪರಿಸ್ಥಿತಿ ಏನಿದೆ ಎಂಬುದು ಅರ್ಥವಾಗುತ್ತದೆ. ನಾನು ಹೋದ ಮೇಲೆ ಈ ನೀರಿನ ಬವಣೆಯಿಂದ ಮತ್ತೆ ತಲೆತಲಾಂತರ ಅನುಭವಿಸುವ ನೋವನ್ನು ಈ ಆತ್ಮ ನೋಡುತ್ತದೆ. ನರಕದಲ್ಲಿ ಇರುತ್ತೇನೋ ಸ್ವರ್ಗದಲ್ಲಿ ಇರುತ್ತೇನೋ ಗೊತ್ತಿಲ್ಲ. ಆದರೆ, ನನ್ನ ಆತ್ಮ ನೊಂದುಕೊಳ್ಳುತ್ತದೆ ಎಂದು ಕಣ್ಣೀರು ಹಾಕಿದರು.

ಈ ಕಾರಣಕ್ಕಾಗಿಯೇ ನನ್ನ ಜನರ ಸಮಸ್ಯೆಯನ್ನು ಶಕ್ತಿಮೀರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸುತ್ತಿದ್ದೇನೆ. ನನ್ನ ರಾಜ್ಯಸಭಾ ಅವಧಿ ಇನ್ನು ಒಂದೂವರೆ ವರ್ಷ ಇದೆ. ಅಲ್ಲಿಯವರೆಗೂ ನಿರಂತರವಾಗಿ ಹೋರಾಡುತ್ತೇನೆ. ನನ್ನ ಕಾಲಿಗೆ ನೋವಿರಬಹುದು, ಹೆಚ್ಚು ನಡೆಯಲು ಸಾಧ್ಯವಾಗದಿರಬಹುದು. ಆದರೆ, ನನ್ನ ಬುದ್ಧಿಗೆ ನೋವಿಲ್ಲ. ಅದು ಸದಾ ನನ್ನ ನಾಡಿನ ಜನರ ಹಿತಕ್ಕಾಗಿ ಚಿಂತಿಸುತ್ತಿರುತ್ತದೆ. ನನ್ನನ್ನು ಎಲ್ಲಾ ಸಮುದಾಯದವರು ಬೆಳೆಸಿದ್ದಾರೆ. ಅವರೆಲ್ಲರ ಋಣ ನನ್ನ ಮೇಲಿದೆ ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಜಗದ್ಗುರು ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶ್ರೀಗಳು, ಸ್ಪಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿಗಳು ಸೇರಿದಂತೆ ಹಲವು ಮಠಾಧೀಶರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ, ಸಂಸದ ಡಾ. ಮಂಜುನಾಥ್, ನಿವೃತ್ತ ನ್ಯಾಯಮೂರ್ತಿ ವೆಂಕಟಾಚಲಯ್ಯ, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿಸಿಂಗ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇವೇಗೌಡರಿಗೆ 'ಶ್ರೀ ಗಂಗ ಸಾಮ್ರಾಟ ಶ್ರೀಪುರುಷ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಾನು ಈಗಿನ ಪ್ರಧಾನಿಗಳನ್ನು ಹೊಗೋಳೋಕೆ ಬರಲ್ಲ. ನಾನು ಪ್ರಧಾನಿಯಾಗಿದ್ದಾಗ ಬಿಜೆಪಿಯ ವಾಜಪೇಯಿ ಅವರು ನನಗೆ ಸಹಕಾರ ಕೊಡುತ್ತೇನೆ ಎಂದರು. ಆದರೆ ನಾನು ನಾನು ಬೇಡ ಅಂದೆ. ನನಗೆ ಕಾಲಿಗೆ ನೋವು ಇರಬಹುದು. ಬುದ್ಧಿಗೆ ನನಗೆ ನೋವಿಲ್ಲ. ಸಂಸತ್‌ನಲ್ಲಿ ಹೋರಾಟ ಮಾಡುವ ಶಕ್ತಿ ನನಗೆ ಇದೆ. ಪ್ರಧಾನಿಗಳಿಗೆ ಮನವರಿಕೆ ಮಾಡುತ್ತೇನೆ. 17 ಜನರನ್ನು ಕೊಟ್ಟಿದ್ದೇವೆ, ಕೈ ಬಿಡಬೇಡಿ ಅಂತ ಹೇಳುತ್ತೇನೆ.

- ಎಚ್.ಡಿ. ದೇವೇಗೌಡ ಮಾಜಿ ಪ್ರಧಾನಿ

ಪತ್ನಿ ನೆನೆದು ಭಾವುಕ

ಕಾರ್ಯಕ್ರಮದಲ್ಲಿ ಮಾತನಾಡುವಾಗ ತಮ್ಮ ರಾಜಕೀಯ ಜೀವನವನ್ನು ಮೆಲುಕು ಹಾಕುತ್ತ ಹಲವು ಬಾರಿ ಭಾವುಕರಾದರು. ಇದು ಜೀವನದ ಕೊನೆ ಹಂತ. ನಿಮ್ಮ ಆಶೀರ್ವಾದ ಈ ಹಂತದಲ್ಲಿ ಈ ಆತ್ಮಕ್ಕೆ ಸಮಾಧಾನ ತಂದಿದೆ. ನಾನು ಅನೇಕ ಬಾರಿ ಚುನಾವಣೆಯಲ್ಲಿ ಸೋತಿದ್ದೇನೆ. ರಾಜಕೀಯದಲ್ಲಿ ಸೋಲು, ಗೆಲುವು ಯಾರು ತಲೆ ಕೆಡಿಸಿಕೊಳ್ಳಬಾರದು. ನನ್ನ ಶ್ರೀಮತಿ ಚನ್ನಮ್ಮ ಎಲ್ಲಾ ಹಂತದಲ್ಲಿ ನನ್ನ ಜತೆ ನಿಂತಿದ್ದಾರೆ. ಅನೇಕ ಕಷ್ಟದಲ್ಲಿ ನನ್ನ ಗೌರವ ಉಳಿಸಿದ್ದಾರೆ. ನನ್ನ ಬೆಳವಣಿಗೆಗೆ ಅವರ ಕೊಡುಗೆ ಸಾಕಷ್ಟಿದೆ. ಅವಳು ಬಹಳ ಕಷ್ಟ ಅನುಭವಿಸಿದ್ದಾಳೆಂದು ಗದ್ಗದಿತರಾದರು.

ಹಿರಿಯ ಗುರುಗಳೊಂದಿಗೆ ವ್ಯತ್ಯಾಸವಿತ್ತು: ಎಚ್‌ಡಿಡಿ

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿಯ ಹಿಂದಿನ ಗುರುಗಳಾದ ಬಾಲಗಂಗಾಧರನಾಥ ಸ್ವಾಮೀಜಿಗಳೊಂದಿಗಿದ್ದ ಭಿನ್ನಾಭಿಪ್ರಾಯದ ಬಗ್ಗೆ ದೇವೇಗೌಡರು ಮಾತನಾಡಿದರು. ಆದಿಚುಂಚನಗಿರಿ ಹಿಂದಿನ ಗುರುಗಳ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸವಾಯಿತು. ಆದರೆ ಸತ್ಯ ಹೇಳಬೇಕು ಎಂದರೆ ನಾವು ಏನಾದರೂ ಗೌರವ ಸಂಪಾದನೆ ಮಾಡಿದ್ದೇವೆ ಅಂದರೆ ಅದು ಬಾಲಗಂಗಾಧರ ನಾಥ ಸ್ವಾಮೀಜಿಗಳಿಂದ. ಈ ಹಿಂದೆ ರಾಮಕೃಷ್ಣ ಆಶ್ರಮದಲ್ಲಿ ನನ್ನ ದೊಡ್ಡ ಮಗನನ್ನು ಹಾಸ್ಟೆಲ್‌ಗೆ ಸೇರಿಸಿದ್ದೆ. ಆಗ ಅಲ್ಲಿನ ಶ್ರೀಗಳು ಬಾಲಕೃಷ್ಣ ಹೆಸರಿನಲ್ಲಿ ಗೌಡ ಅನ್ನುವ ಹೆಸರು ತೆಗೆಸು ಎಂದು ಹೇಳಿದರು. ಗೌಡ ಎನ್ನುವ ಹೆಸರು ಇದ್ದರೆ ಡಿಗ್ರಿ ಮಾತ್ರ ಸಿಗುತ್ತೆ. ರ‍್ಯಾಂಕ್ ಸಿಗಲ್ಲ ಅಂದರು. ಬಾಲಗಂಗಾಧರನಾಥ ಸ್ವಾಮೀಜಿ ನಮ್ಮ ಸಮಾಜ ಗುರುತಿಸಲು ದುಡಿದರು. ಈಗ ನಮ್ಮ ಮುಂದೆ ಅವರು ಇಲ್ಲ. ನಿರ್ಮಲಾನಂದ ಶ್ರೀಗಳನ್ನು ಸ್ಥಾನದಲ್ಲಿ ಕೂರಿಸಿದ್ದಾರೆ ಎಂದು ನೆನಪಿಸಿಕೊಂಡರು.

ಬೆಂಗಳೂರಿನ ಕಟ್ಟಿಗೇನಹಳ್ಳಿಯ ಆಕಾಶ್ ಗ್ಲೋಬಲ್ ಟೆಕ್ನೋ ಶಾಲೆಯಲ್ಲಿ ಶನಿವಾರ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಈ ವೇಳೆ ಶಾಲೆಯ ಅಧ್ಯಕ್ಷ ಸೋಮಶೇಖರ್ ಕೆ, ವ್ಯವಸ್ಥಾಪಕ ನಿರ್ದೇಶಕರಾದ ಸುಬ್ರಮಣ್ಯಂ, ಕಾರ್ಯದರ್ಶಿ ಉಮಾ ಆರ್, ವಿಭಾಗದ ಮುಖ್ಯಸ್ಥರಾದ ಅಂಬಿಕಾ ಕೆ.ವಿ, ದೈಹಿಕ ಶಿಕ್ಷಕ ಲಾಲೂ ನಾಯ್ಕ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬ್ರಾಹ್ಮಣ ಮಹಾಸಭಾ ಜಂಟಿ ಕಾರ್ಯದರ್ಶಿಗಳ ನೇಮಕ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ದುರ್ಗೇಶ್ ವಾಸುದೇವ್ ಪೈ ಮತ್ತು ಉತ್ತರಹಳ್ಳಿಯ ಮುರಳಿಧರ್ ಆಯ್ಕೆಯಾಗಿದ್ದಾರೆ. ಮಹಾಸಭಾದ ಅಧ್ಯಕ್ಷ ರಘುನಾಥ್ ಅವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಜಿಲ್ಲಾವಾರು ಒಟ್ಟು 119 ಜನರನ್ನು ಆಯ್ಕೆ ಮಾಡಲಾಗಿದ್ದು. ಈ ಪಟ್ಟಿಯಲ್ಲಿ ಬಿಜೆಪಿ ಕರ್ನಾಟಕ ಫಲಾನುಭವಿ ಪ್ರಕೋಷ್ಟದ ರಾಜ್ಯ ಸಹ ಸಂಚಾಲಕ ದುರ್ಗೇಶ್ ಮತ್ತು ಮುರಳೀಧರ್ ಸಹ ಆಯ್ಕೆಯಾಗಿದ್ದಾರೆ. ಆಯ್ಕೆ ಆಗಿರುವ 119 ಜನರು ಮಹಾಸಭಾದ ಮುಂದಿನ ಆದೇಶದವರೆಗೂ ಜಂಟಿ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಡಿಎ ಫ್ಲ್ಯಾಟ್ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ

ಬೆಂಗಳೂರು: ಬಿಡಿಎ ಕಣಿಮಿಣಿಕೆಯ ವಸತಿ ಸಮುಚ್ಚಯದಲ್ಲಿ ಶನಿವಾರ ಆಯೋಜಿಸಿದ್ದ ಫ್ಲ್ಯಾಟ್ ಮೇಳಕ್ಕೆ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, 125 ಮಂದಿಗೆ ಸ್ಥಳದಲ್ಲೇ ಹಂಚಿಕೆ ಪತ್ರವನ್ನು ಹಸ್ತಾಂತರಿಸಲಾಯಿತು. ಮೇಳದಲ್ಲಿ ಸುಮಾರು 500ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದರು. 200 ಫ್ಲ್ಯಾಟ್‌ಗಳನ್ನು ಖರೀದಿಸಿ, ಇದರಲ್ಲಿ ಸುಮಾರು 150 ಸಾರ್ವಜನಿಕರು ಫ್ಲ್ಯಾಟ್ ಆರಂಭಿಕ ಠೇವಣಿಯನ್ನು ಸ್ಥಳದಲ್ಲಿಯೇ ಪಾವತಿಸಿದರು. ಇಂತಹವರ ಪೈಕಿ 125 ಮಂದಿಗೆ ಹಂಚಿಕೆ ಪತ್ರ ನೀಡಲಾಯಿತು. ಉಳಿದವರು ಕೆಲ ದಿನಗಳಲ್ಲಿ ಠೇವಣಿ ಮೊತ್ತ ಪಾವತಿಸಲು ಸಮಯಾವಕಾಶ ಪಡೆದಿದ್ದಾರೆ. ಕಳೆದ ಜನವರಿಯಿಂದ ಪ್ರತೀ ತಿಂಗಳೂ ನಡೆಯುತ್ತಿರುವ ಮೇಳದಲ್ಲಿ ನೂರಾರು ಮಂದಿ ಪಾಲ್ಗೊಂಡು ವಸತಿ ಘಟಕಗಳನ್ನು ಪಡೆಯುತ್ತಿದ್ದಾರೆ. ಉತ್ತಮ ಸೌಕರ್ಯ ಕಲ್ಪಿಸಿರುವುದರಿಂದ ನಮ್ಮ ಸಂಸ್ಥೆಯ ಫ್ಲ್ಯಾಟ್‌ಗಳು ಮಾರಾಟವಾಗುತ್ತಿವೆ ಎಂದು ಬಿಡಿಎ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

ಮೇಳದಲ್ಲಿ ಜನರಿಗೆ ವಸತಿ ಘಟಕ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಎಸ್‌ಬಿಐ, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಸೇರಿ ಹಲವು ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳು ಮಾರ್ಗದರ್ಶನ ಮಾಡಿದರು. ಮೇಳದಲ್ಲಿ ಬಿಡಿಎ ಆರ್ಥಿಕ ಸದಸ್ಯ ಡಾ. ಎ.ಲೋಕೇಶ, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಎಡಬ್ಲೂ ಇಂಬವಳ್ಳಿ, ಬಸವರೆಡ್ಡಿ ಇದ್ದರು.

ಅಖಂಡ ಮಹಾ ಜಪ ಯಜ್ಞ

ಹರಿನಾಮ ಜಪ

ಬೆಂಗಳೂರು: ಅಖಂಡ ಮಹಾ ಜಪ ಯಜ್ಞವು ಭಾನುವಾರ ಇಸ್ಕಾನ್ ವೈಕುಂಠ ಗಿರಿಯಲ್ಲಿ ಶ್ರದ್ಧಾಭಕ್ತಿಗಳಿಂದ ಯಶಸ್ವಿಯಾಗಿ ನೆರವೇರಿತು. ಗಿರಿಯ ಪ್ರಶಾಂತ ಪರಿಸರದಲ್ಲಿ ನಡೆದ ಮಹಾಯಜ್ಞದಲ್ಲಿ, 1008 ಭಕ್ತರು, ತಲಾ 108 ಮಾಲೆಗಳಷ್ಟು ಹರೇ ಕೃಷ್ಣ ಮಹಾ ಮಂತ್ರ ಜಪಿಸಿದರು. ವಿಶ್ವ ಯುದ್ಧದ ಪರಿಸ್ಥಿತಿಯಲ್ಲಿರುವ ಜಗತ್ತಿಗೆ ಶಾಂತಿ, ಸಾಮರಸ್ಯ ಮತ್ತು ಭಕ್ತಿಯ ಸಂದೇಶ ನೀಡಲು ಭಕ್ತವೃಂದದ ನಡೆದ ಸಾಮೂಹಿಕ ಪ್ರಾರ್ಥನೆ 18 ಕೋಟಿಗೂ ಹೆಚ್ಚು ಪವಿತ್ರ ನಾಮಗಳ ಜಪಕ್ಕೆ ಕಾರಣವಾಯಿತು. ಯಜ್ಞದ ನೇತೃತ್ವ ವಹಿಸಿದ್ದ ಇಸ್ಕಾನ್ ಬೆಂಗಳೂರು ಸಂಸ್ಥೆ ಅಧ್ಯಕ್ಷ ಮಧು ಪಂಡಿತ ದಾಸರು, ಇದು ಕೇವಲ ಧಾರ್ಮಿಕ ಕಾರ್ಯಕ್ರಮವಲ್ಲ, ಆತ್ಮೋದ್ಧಾರಕ ಕಾರ್ಯಕ್ರಮ ಎಂದು ಹೇಳಿದರು. ಭಕ್ತರು ನಿರಂತರವಾಗಿ 12 ಗಂಟೆಗಳ ಕಾಲ ಹರೇ ಕೃಷ್ಣ ಮಂತ್ರಜಪದಲ್ಲಿ ನಿರತರಾಗಿದ್ದರು.

ಹಸಿರೀಕರಣಕ್ಕೆ ಹೆಚ್ಚು ಆದ್ಯತೆ

ಬೆಂಗಳೂರು: ಬಿಬಿಎಂಪಿ ವತಿಯಿಂದ ನಗರದಲ್ಲಿ 1,287 ಉದ್ಯಾನವನಗಳನ್ನು ನಿರ್ವಹಣೆ ಮಾಡಲಾಗುತ್ತಿದ್ದು, ಎಲ್ಲಾ ಉದ್ಯಾನವನಗಳಲ್ಲಿ ಹಸಿರೀಕರಣಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ ಎಂದು ತೋಟಗಾರಿಕಾ ಉಪ ನಿರ್ದೇಶಕ ಚಂದ್ರಶೇಖರ್ ಹೇಳಿದರು.

ನಗರದ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಎಂ.ಎನ್ ಕೃಷ್ಣರಾವ್ ಉದ್ಯಾನವನದಲ್ಲಿ ಬೆಂಗಳೂರು ಹಬ್ಬ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪರಿಸರವನ್ನು ಆನಂದಿಸಬೇಕು ಎಂಬ ಉದ್ದೇಶದಿಂದ ಪಾಲಿಕೆಯು ಎಲ್ಲಾ ಉದ್ಯಾನವನಗಳ ಸಮಯವನ್ನು ಬೆ.5 ರಿಂದ ರಾತ್ರಿ 10 ಗಂಟೆಯವರೆಗೆ ವಿಸ್ತರಿಸಿದೆ. ನಿಮ್ಮ ಹತ್ತಿರದಲ್ಲಿರುವ ಉದ್ಯಾನವನಗಳನ್ನು ಸ್ವಚ್ಛವಾಗಿರುವಂತೆ ನೋಡಿಕೊಳ್ಳಿ, ಇತರರಿಗೂ ಸ್ವಚ್ಛತೆ ಕಾಪಾಡಲು ಅರಿವು ಮೂಡಿಸಲು ನಾಗರಿಕರಲ್ಲಿ ಅರಿವು ಮೂಡಿಸಿದರು.

ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಉದ್ಯಾನವನಗಳಿಗೆ ಫೆನ್ಸಿಂಗ್ ಹಾಕಲಾಗಿದೆ. ಸಾರ್ವಜನಿಕರಿಗೆ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ, ವಾಯುವಿಹಾರಕ್ಕಾಗಿ ಉತ್ತಮ ವಾಯುವಿಹಾರ ಮಾರ್ಗ ನಿರ್ಮಾಣ ಮಾಡಲಾಗಿದೆ. ಅದಲ್ಲದೆ ವ್ಯಾಯಾಮ ಮಾಡಲು ಜಿಮ್ ಉಪ ಕರಣಗಳ ಅಳವಡಿಕೆ, ಮಕ್ಕಳಿಗಾಗಿ ಆಟಿಕೆಗಳ ಅಳವಡಿಕೆ ಸೇರಿದಂತೆ ಇನ್ನಿತರೆ ಸೌಲಭ್ಯಗಳ ವ್ಯವಸ್ಥೆ ಮಾಡಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ಯಾನವನಗಳ ಉನ್ನತೀಕರಣ ಕಾರ್ಯ ಮಾಡಲಾಗುತ್ತಿದೆ. ಅಲ್ಲದೇ ಉದ್ಯಾನವನಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಇಂಗು ಗುಂಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು. ತೋಟಗಾರಿಕಾ ವಿಭಾಗದ ವಲಯ ಮಟ್ಟದ ಅಧಿಕಾರಿ, ಸ್ಥಳಿಯ ನಿವಾಸಿಗಳು, ವಿದ್ಯಾರ್ಥಿಗಳು, ಅಧಿಕಾರಿಗಳಿದ್ದರು.

ತ್ವರಿತವಾಗಿ ಹೊಸ ಚರಂಡಿ ನಿರ್ಮಿಸಿ: ಸ್ನೇಹಲ್

ಬೆಂಗಳೂರು: ಎಚ್‌ಎಎಲ್ 2ನೇ ಹಂತದ 12ನೇ ಮುಖ್ಯ ರಸ್ತೆ ಹಾಗೂ ಅಡ್ಡರಸ್ತೆಯಲ್ಲಿ ತ್ವರಿತವಾಗಿ ಹೊಸ ಚರಂಡಿಯನ್ನು ನಿರ್ಮಿಸಬೇಕು ಎಂದು ಜಲಮಂಡಳಿಯ ಅಧಿಕಾರಿಗಳಿಗೆ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಸೂಚನೆ ನೀಡಿದರು.

ಪೂರ್ವ ವಲಯ ಆಯುಕ್ತರ ಕಚೇರಿಯಲ್ಲಿ ನಡೆದ ಸಾರ್ವಜನಿಕರ ಕುಂದುಕೊರತೆಯ ಅಹವಾಲಿನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದ ವೇಳೆ, ಸಾರ್ವಜನಿಕರೊಬ್ಬರು ಮಾತನಾಡಿ, ಎಚ್.ಎ.ಎಲ್ 2ನೇ ಹಂತದ 12ನೇ ಮುಖ್ಯ ರಸ್ತೆ ಹಾಗೂ ಅಡ್ಡ ರಸ್ತೆಯಲ್ಲಿ ಚರಂಡಿಯನ್ನು ಸುಮಾರು 50 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಸುಸ್ಥಿತಿಯಲ್ಲಿಲ್ಲದೆ ನೀರು ರಸ್ತೆಯ ಮೇಲೆ ಬರುತ್ತಿದ್ದು ಹಾಗೂ ಚರಂಡಿಯು ಕಟ್ಟಿಕೊಂಡಿದ್ದು ಸ್ಥಳೀಯರಿಗೆ ತೊಂದರೆಯಾಗುತ್ತಿರುವುದರ ಕುರಿತು ಅಹವಾಲು ಸಲ್ಲಿಸಿದರು. ಅಹವಾಲಿಗೆ ಪ್ರತಿಕ್ರಿಯಿಸಿದ ವಲಯ ಆಯುಕ್ತರು ಎಚ್.ಎ.ಎಲ್ 2ನೇ ಹಂತದ 12ನೇ ಮುಖ್ಯ ರಸ್ತೆ ಹಾಗೂ ಅಡ್ಡರಸ್ತೆಯಲ್ಲಿ ಹೊಸ ಚರಂಡಿ ನಿರ್ಮಿಸಲು ಜಲಮಂಡಳಿಯ ಅಧಿಕಾರಿಗಳಿಗೆ ಸೂಚಿಸಿ, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ 1ಲಕ್ಷ ರು.ಡ ವಿಧಿಸುವುದಾಗಿ ತಿಳಿಸಿದರು.

ಈ ವೇಳೆ ಜಂಟಿ ಆಯುಕ್ತೆ ಸರೋಜ, ಉಪ ಆಯುಕ್ತ ರಾಜು, ಮುಖ್ಯ ಅಭಿಯಂತರರಾದ ಸುಗುಣ, ಆರೋಗ್ಯಾಧಿಕಾರಿ ಭಾಗ್ಯ, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಡಿಜಿಎಂ, ಎಜಿಎಂ, ಬೆಸ್ಕಾಂ, ಜಲಮಂಡಳಿ ಅಧಿಕಾರಿಗಳು ಇದ್ದರು.

ಅನಧಿಕೃತ ಬೋರ್‌ವೆಲ್, ರ‍್ಯಾಂಪ್ ತೆರವಿಗೆ ಸೂಚನೆ

ಸಭೆಯಲ್ಲಿ ಎಚ್.ಆರ್.ಬಿ.ಆರ್ 1ನೇ ಬ್ಲಾಕ್ ನ ರಸ್ತೆ ಮಧ್ಯದಲ್ಲಿ ಬೋರ್‌ವೆಲ್ ಕೊರೆದಿರುವ ಹಾಗೂ ಸಾಯಿರಾಮ್ ಅಪಾರ್ಟ್ ಮೆಂಟ್‌ನವರು ಅನಧಿಕೃತ ರ‍್ಯಾಂಪ್ ನಿರ್ಮಿಸಿದ್ದು ಮಳೆ ನೀರಿನ ಸರಾಗ ಹರಿವಿಗೆ ತೊಂದರೆಯಾಗುತ್ತಿರುವ ಕುರಿತಾದ ಅಹವಾಲಿಗೆ ಪ್ರತಿಕ್ರಿಯಿಸಿದ ವಲಯ ಆಯುಕ್ತರು ಬೋರ್‌ವೆಲ್ ನ್ನು ತ್ವರಿತವಾಗಿ ಮುಚ್ಚಿ ರ‍್ಯಾಂಪ್ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಲಮಂಡಳಿಯ ಅಧಿಕಾರಿಗಳ ಜತೆ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಸಭೆ ನಡೆಸಿದರು.

ಅಹವಾಲುಗಳು

- ಬೀದಿ ದೀಪಗಳ ಅಳವಡಿಕೆಯ ಅವಶ್ಯಕತೆಯ ಕುರಿತು ಮನವಿ
- ರಸ್ತೆ ಬದಿ ಕಸ ಸುರಿಯುವುದನ್ನು ತಡೆಯಲು ಮಾರ್ಷಲ್‌ಗಳ ನಜಿ ಯೋಜನೆಗೆ ಮನವಿ
- ಕೆ.ಎಸ್.ಎಫ್ ಸಿ ಲೇಔಟ್ ಬಲ್ಲಿ ಹೆಚ್ಚಿನ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲು ಮನವಿ.
- ಪಾದಾಚಾರಿಯಲ್ಲಿನ ಅಡಚಣೆಗಳನ್ನು ತೆರವುಗೊಳಿಸುವಂತೆ ಮನವಿ
- ಚರಂಡಿಗಳ ಬ್ಲಾಕ್ ಆಗಿದ್ದು ಸಂಚಾರಕ್ಕೆ ತೊಂದರೆಯಾಗುತ್ತಿದ್ದು ಸೂಕ್ತ ಕ್ರಮಕ್ಕೆ ವಿನಂತಿಸಿದರು.
- ಪಾದಾಚಾರಿಯನ್ನು ಬೀದಿಬದಿ ವ್ಯಾಪಾರಿಗಳು ಒತ್ತುವರಿ ಮಾಡಿ ಕೊಂಡಿದ್ದು, ಅಂಗಡಿಗಳ ತೆರವಿಗೆ ವಿನಂತಿಸಿದರು.

ಶ್ವಾಸತಾಣಗಳ ಸಂರಕ್ಷಣೆ ಅಗತ್ಯ

ಬೆಂಗಳೂರು: ರಾಜ್ಯದ ರಾಜಧಾನಿ ಕಾಂಕ್ರೀಟ್ ಕಾಡಾಗುತ್ತಿದ್ದು, ಅತ್ಯಾವಶ್ಯಕವಾದ ಶ್ವಾಸತಾಣಗಳ ಸಂರಕ್ಷಣೆ ಇಂದಿನ ಅಗತ್ಯವಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದ್ದಾರೆ.

ಕಸ್ತೂರಿನಗರದ ಬಿ ಚನ್ನಸಂದ್ರ ಕೆರೆಯ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಉತ್ತರ ಬೆಂಗಳೂರು ಕೆಆರ್.ಪುರ ಹೋಬಳಿ ಬಾಣಸವಾಡಿ ಗ್ರಾಮದ 19 ಎಕರೆ 17 ಗುಂಟೆ ಜಮೀನಿನ ಪೈಕಿ 13 ಎಕರೆ 27 ಗುಂಟೆ ಅರಣ್ಯ ಇಲಾಖೆಗೆ ಸೇರಿದೆ. ಆದರೆ ಈ ಪೈಕಿ 7 ಎಕರೆ ಅನ್ಯ ಉದ್ದೇಶಕ್ಕೆ ಬಳಕೆ ಆಗಿದ್ದು, ಇದರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಹಾಲಿ ಇರುವ 6 ಎಕರೆ 26 ಗುಂಟೆ ಜಮೀನಿನಲ್ಲಿ ತುಂಬಿದ್ದ ಹೂಳು ತೆಗೆದು ಕಾಂಪೌಂಡ್ ಹಾಕಿ, ಸಸಿಗಳನ್ನು ನೆಟ್ಟು ಸಂರಕ್ಷಿಸಲಾಗಿದೆ. ಅರಣ್ಯ ಇಲಾಖೆಗೆ ಸಂಬಂಧಿಸಿದ ಕೆರೆಗಳನ್ನು ಅರಣ್ಯ ಎಂದು ಕಂದಾಯ ಇಲಾಖೆ ದಾಖಲೆಗಳಲ್ಲಿ ಪರಿವರ್ತಿಸಲು ಕ್ರಮ ವಹಿಸಬೇಕು. ಕಸ್ತೂರಿ ನಗರ ಬಿ ಚನ್ನಸಂದ್ರ ಕೆರೆ ಅಭಿವೃದ್ಧಿಯ ಸ್ಥಳೀಯರ ಪಾತ್ರ ಮಹತ್ವದ್ದಾಗಿದ್ದು, ಇದೇ ರೀತಿ ಸರಕಾರಿ ಆಸ್ತಿ ಉಳಿಸಲು ಆಯಾ ಪ್ರದೇಶದ ಸಾರ್ವಜನಿಕರು ಸರಕಾರದೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಕಸ್ತೂರಿ ನಗರ ಕ್ಷೇಮಾಭಿವೃದ್ಧಿ ಸಂಘ ತಮಗೆ ಕಳೆದ ಫೆಬ್ರವರಿಯಲ್ಲಿ ಈ ಕುರಿತಂತೆ ದೂರು ನೀಡಿದ ಕೂಡಲೇ, ಒತ್ತುವರಿ ಆಗಿರುವ ಅರಣ್ಯ ಭೂಮಿ ತೆರವು ಮಾಡಿಸಲು ತಾವು ಫೆ.6ರಂದು ಲಿಖಿತ ಸೂಚನೆ ನೀಡಲಾಗಿದೆ.

ಲೇಖಕಿಯರ ಸಂಘಕ್ಕೆ ಜಾಗ, ಅನುದಾನ ನೀಡಲಿ: ಘಂಟಿ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ನಗರದಲ್ಲಿ ಸೂಕ್ತ ಜಾಗ ಹಾಗೂ ಸಾಹಿತ್ಯಿಕ ಚಟುವಟಿಕೆಗಳಿಗೆ ವಾರ್ಷಿಕ ಅನುದಾನ ಒದಗಿಸಬೇಕು ಎಂದು ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ ಆಗ್ರಹಿಸಿದ್ದಾರೆ.

ಕರ್ನಾಟಕ ಲೇಖಕಿಯರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಶಿವಗಂಗಾ ರುಮ್ಮ ಹಾಗೂ ರೈತ ಮುಖಂಡೆ ನಂದಿನಿ ಜಯರಾಮ್ ಅವರಿಗೆ ಮಾತೋಶ್ರೀ ಶಂಕರಮ್ಮ ಪ. ಬಳಿಗಾರ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಲೇಖಕಿಯರ ಸಂಘ ಸ್ಥಾಪನೆಯಾಗಿ 47 ವರ್ಷ ಕಳೆದರೂ ಸಂಘವು ಬಾಡಿಗೆ ಕಟ್ಟಡದಲ್ಲಿಯೇ ಇದೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ದೊಡ್ಡ ಜಾಗ ನೀಡಿ, ಪ್ರತಿ ವರ್ಷ ಅನುದಾನ ನೀಡಲಾಗುತ್ತಿದೆ. ಲೇಖಕಿಯರ ಸಂಘಕ್ಕೆ ಸಣ್ಣ ಜಾಗ ನೀಡುವುದಕ್ಕೆ ಅಧಿಕಾರಕ್ಕೆ ಬಂದ ಯಾವುದೇ ಸರಕಾರದಿಂದ ಸಾಧ್ಯವಾಗಿಲ್ಲ. ಸರಕಾರಕ್ಕೆ ಜಾಗ ನೀಡುವ ಮನಸ್ಸು ಇಲ್ಲವೋ ಅಥವಾ ಸಂಘಕ್ಕೆ ಜಾಗ ಪಡೆಯುವ ಶಕ್ತಿ ಇಲ್ಲವೋ ಅರ್ಥವಾಗುತ್ತಿಲ್ಲ. ಸಂಘಕ್ಕೆ ಒದಗಿಸಲು ಜಾಗ ಇರದಿದ್ದರೆ, ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಡದಲ್ಲಿ ಅರ್ಧದಷ್ಟು ಸ್ಥಳಾವಕಾಶ ಒದಗಿಸಬೇಕು ಎಂದು ಒತ್ತಾಯಿಸಿದರು.

ಹೆಣ್ಣುಮಕ್ಕಳಿಗೆ ಮತ್ತು ಕನ್ನಡಕ್ಕೆ ವಿಶಿಷ್ಟವಾದ ಶಕ್ತಿ ಇದೆ. ಈ ಶಕ್ತಿಯನ್ನು ಹೊರಗೆ ಹಾಕಿದರೆ ಸರಕಾರವೂ ಎಚ್ಚರಗೊಳ್ಳಲಿದೆ. ಲೇಖಕಿಯರ ಬೇಡಿಕೆಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕು. ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಯನ್ನು ಅಡೆತಡೆ ಇಲ್ಲದೇ ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದರು. ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ಗಂಗಮ್ಮ ಬಳಿಗಾರ್, ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ ಇದ್ದರು.

ಕರ್ನಾಟಕ ಲೇಖಕಿಯರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಂದಿನಿ ಜಯರಾಮ್ ಹಾಗೂ ಶಿವಗಂಗಾ ರುಮ್ಮ ಅವರಿಗೆ ಶಂಕರಮ್ಮ ಪ. ಬಳಿಗಾರ್ ಪ್ರಶಸ್ತಿಯನ್ನು ಹಂಪಿ ವಿವಿಯ ವಿಶಾಂತ ಕುಲಪತಿ ಮಲ್ಲಿಕಾ ಘಂಟಿ ಅವರು ಪ್ರದಾನ ಮಾಡಿದರು. ಈ ವೇಳೆ ಪ್ರೊ.ಎಂ.ಪಿ. ಬಳಿಗಾರ್, ಎಚ್.ಎಲ್. ಪುಷ್ಪ, ಮಂಜುಳಾ ಶಿವಾನಂದ, ಭಾರತಿ ಹೆಗಡೆ, ಗಂಗಮ್ಮ ಬಳಿಗಾರ್, ಸುಮಾ ಸತೀಶ್ ಇದ್ದರು.

ಸಮಾಚಾರ ಸಣ್ಣದಲ್ಲ

ಹಿರಿಯ ಪತ್ರಕರ್ತೆ ಕುಸುಮಾ ಇನ್ನಿಲ್ಲ

ಬೆಂಗಳೂರು: ಹಿರಿಯ ಪತ್ರಕರ್ತೆ ಕುಸುಮಾ ಶಾನಭಾಗ ಅವರು ಬೆಂಗಳೂರಿನಲ್ಲಿ ಭಾನುವಾರ ಕೊನೆಯುಸಿರು ಎಳೆದಿದ್ದಾರೆ. ಮೂಲತಃ ಕೊಡಗಿನವರಾದ 78 ವರ್ಷದ ಕುಸುಮಾ ಅವರು ಪ್ರಜಾವಾಣಿಯಲ್ಲಿ ಕಾರ್ಯ ನಿರ್ವಹಿಸಿದ್ದರು. ಸ್ವಯಂ ನಿವೃತ್ತಿ ಪಡೆದ ಲೈಂಗಿಕ ಕಾರ್ಯಕರ್ತೆಯರ ಕುರಿತು ಸುಮಾರು ಹತ್ತು ವರ್ಷಗಳಿಗೂ ಅಧಿಕ ಕಾಲ ಅಧ್ಯಯನ ನಡೆಸಿದ್ದರು. ನೆನಪುಗಳ ಬೆನ್ನೇರಿ ಎಂಬ ಕಥಾಸಂಕಲನ, ಮಣ್ಣಿಂದ ಎದ್ದವರು ಎಂಬ ಕಾದಂಬರಿ ಬರೆದಿದ್ದಾರೆ. 'ಕಾಯದ ಕಾರ್ಪಣ್ಯ' ಎಂಬುದು ಲೈಂಗಿಕ ಕಾರ್ಯಕರ್ತೆಯರ ಕುರಿತು ಕುಸುಮಾ ಅವರು ಬರೆದ ಕಥನವಾಗಿದೆ. ಇವರ ಹಲವು ಬರಹಗಳು ಕೆಂಡಸಂಪಿಗೆಯಲ್ಲಿ ಪ್ರಕಟವಾಗಿದೆ. ಕುಸುಮಾ ಅವರು ತಮ್ಮ ದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದೇಹ ದಾನ ಮಾಡಿದ್ದರು. ಆದರೆ ಕುಸುಮಾ ಅವರಿಗೆ ಕ್ಯಾನ್ಸರ್ ಇದ್ದ ಕಾರಣ ದೇಹ ಪಡೆಯಲು ಆಸ್ಪತ್ರೆ ಪಡೆಯಲು ನಿರಾಕರಿಸಿದೆ. ಹಿರಿಯ ಕಾದಂಬರಿಕಾರ ಭಾರತೀಸುತ ಅವರ ಪುತ್ರಿಯಾಗಿದ್ದರು.

ರಾಯಚೂರಿಗೆ ಇಂದು ಸಿಎಂ ಭೇಟಿ

ರಾಯಚೂರು: ನಾನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಇಂದು ಸಿಎಂ ಸಿದ್ದರಾಮಯ್ಯ ರಾಯಚೂರು ಜಿಲ್ಲೆಗೆ ಭೇಟಿ ನೀಡುತ್ತಿದ್ದಾರೆ. ಯರಗೇರಾದಲ್ಲಿರುವ ರಾಯಚೂರು ವಿಶ್ವವಿದ್ಯಾಲಯಕ್ಕೆ ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ಎಂದು ಮರು ನಾಮಕರಣ ಮಾಡಲಾಗಿದ್ದು, ಈ ನಾಮ ಫಲಕವನ್ನು ಸಿಎಂ ಅವರು ಅನಾವರಣ ಮಾಡಲಿದ್ದಾರೆ. 936 ಕೋಟಿ ರುಪಾಯಿ ವೆಚ್ಚದ ನಾನಾ ಕಾಮಗಾರಿಗಳಿಗೆ ಯರಗೇರಾದ ಶ್ರೀ ರಂಗನಾಥಸ್ವಾಮಿ ದೇಗುಲದ ಆವರಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಚಾಲನೆ ನೀಡಲಿದ್ದಾರೆ. ಸಿದ್ದರಾಮಯ್ಯ ಆಗಮನಕ್ಕಾಗಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಕಲ ಸಿದ್ಧತೆ ಕೈಗೊಂಡಿದೆ. ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗಿಯಾಗಲಿದ್ದಾರೆ.

ಎಂಬಿಎ ಎಂಸಿಎ ಪ್ರವೇಶ ಪರೀಕ್ಷೆ ಸುಗಮ

ಬೆಂಗಳೂರು: ಎಂಬಿಎ ಮತ್ತು ಎಂಸಿಎ ಕೋರ್ಸ್ ಗಳ ಪ್ರವೇಶಕ್ಕೆ ಪಿಜಿಸಿಇಟಿ ಭಾನುವಾರ ಸುಗಮವಾಗಿ ನಡೆದಿದ್ದು, ಕ್ರಮವಾಗಿ ಶೇ.95.73 ಮತ್ತು ಶೇ.93.85ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಬೆಂಗಳೂರು ಸೇರಿದಂತೆ ರಾಜ್ಯದ 12 ಜಿಲ್ಲೆಗಳ ಒಟ್ಟು 68 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಯಾವುದೇ ತೊಂದರೆ ಇಲ್ಲದೆ ಪರೀಕ್ಷೆ ನಡೆಯಿತು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು.

ಕಾಲ್ತುಳಿತ ಪ್ರಕರಣ: ವಿಚಾರಣೆಗೆ ಆರಂಭ

← ಮೊದಲಪುಟದಿಂದ

ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗ ಡಿಸಿಪಿಯಾಗಿದ್ದ ಶೇಖರ್ ಟೆಕ್ಕಣ್ಣನವರ ಹಾಗೂ ಕಬ್ಬನ್ ಪಾರ್ಕ್ ಠಾಣೆ ಇನ್ಸ್‌ಪೆಕ್ಟರ್ ಗಿರೀಶ್ ಸೇರಿ ನಾಲ್ವರು ಅಧಿಕಾರಿಗಳು ಸೋಮವಾರ (ಜೂನ್ 23) ತನಿಖಾಧಿಕಾರಿಗಳ ಮುಂದೆ ವಿಚಾರಣೆ ಹಾಜರಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ವಿರಾಮ
ಪ್ರತಿ ಭಾನುವಾರ

ಸರಕಾರದ ಯೋಜನೆಗೆ ಪೇಮೆಂಟ್ ಮಾಡುವ ಅನಿವಾರ್ಯತೆ | ಸರಕಾರದಲ್ಲಿ ಮಿತಿಮೀರಿದ ಭ್ರಷ್ಟಾಚಾರ

ಡಿಕೆ ಸಿಎಂ ಕನಸು ನನಸಾಗಲ್ಲ: ಎಚ್‌ಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿರುವ ಡಿ.ಕೆ. ಶಿವಕುಮಾರ್ ಅವರಿಗೆ ಆ ಕನಸೆಂದು ನನಸಾಗುವುದಿಲ್ಲ. ಡಿಕೆಶಿಗೆ ಕಾಂಗ್ರೆಸ್‌ನಲ್ಲಿ ಸ್ಥಾನವನ್ನು ಯಾರು ಬಿಟ್ಟುಕೊಡಲಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.

ಬೆಂಗಳೂರು ಹಾಗೂ ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಬೇಕೆಂಬ ಕನಸು ಕಾಣುತ್ತಿದ್ದಾರೆ. ಆದರೆ ಅವರಿಗೆ ಈ ಸ್ಥಾನವನ್ನು ಬಿಟ್ಟುಕೊಡಲು ಯಾರು ಸಿದ್ಧರಿದ್ದಾರೆ? ಇನ್ನು 2028ಕ್ಕೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದು ಡಿಕೆಶಿ ಸಿಎಂ ಆಗುತ್ತಾರೆ ಎನ್ನುವ ಮಾತಿದೆ. ಆದರೆ ಇದ್ಯಾವುದು ನಮ್ಮ ಕೈನಲ್ಲಿಲ್ಲ. ಎಲ್ಲವೂ ಭಗವಂತನ ಕೈಯಲ್ಲಿರೋದು ಎಂದು ಮಾರ್ಮಿಕವಾಗಿ ಹೇಳಿದರು.

ಇನ್ನು ಶಾಸಕ ಬಿ.ಆರ್. ಪಾಟೀಲ್ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಸರಕಾರದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಕಮಿಷನ್ ವ್ಯವಹಾರದ ಬಗ್ಗೆ 224 ಶಾಸಕರಿಗೂ ಗೊತ್ತಿರುವ ವಿಷಯವಾಗಿದೆ. ಶಾಸಕರ ಹಣೆಬರಹವೋ ಏನೋ, ತಮ್ಮ ಕ್ಷೇತ್ರಗಳಿಗೆ ಸರಕಾರದ ಯಾವುದೇ ಕಾರ್ಯಕ್ರಮ ತೆಗೆದುಕೊಂಡು ಹೋಗಬೇಕಾದರೆ ಪೇಮೆಂಟ್ ಆಗಲೇಬೇಕು. ಈ ಸರಕಾರದಲ್ಲಿ ಇದೇ ನಡೆಯುತ್ತಿದೆ ಎಂದು ಟೀಕಿಸಿದರು.

ಈ ಸರಕಾರದಲ್ಲಿರುವವರಿಗೆ ಮಾನ ಮರ್ಯಾದೆ ಎನ್ನುವುದು ಇದೆಯಾ? ಇಂಥ ಭ್ರಷ್ಟನನ್ನು ಪಕ್ಕದಲ್ಲಿ ಕೂರಿಸಿಕೊಳ್ಳುತ್ತಾರೆ. ಅಂತಹ ವ್ಯಕ್ತಿಯನ್ನು ಇನ್ನೂ ಸಂಪುಟದಲ್ಲಿ ಇಟ್ಟುಕೊಂಡಿದ್ದಾರೆ. ಭ್ರಷ್ಟಾಚಾರ, ಕಮಿಷನ್ ವ್ಯವಹಾರ ಅವ್ಯಾಹತವಾಗಿ ಸಾಗಿದೆ. ಅದಕ್ಕೆ ಕೊನೆ ಎಂಬುದೇ ಇಲ್ಲ. ಪ್ರತಿಯೊಬ್ಬ ಶಾಸಕರು ಇದರಿಂದ ಸಮಸ್ಯೆ ಎದುರಿಸುತ್ತಿದ್ದಾರೆ. ವಸತಿ ಇಲಾಖೆಯ ಕರ್ಮಕಾಂಡದ ಬಗ್ಗೆ ಬೀದಿ ಬೀದಿಯಲ್ಲಿ ಚರ್ಚೆ ಆಗುತ್ತಿದೆ ಎಂದು ಟೀಕಿಸಿದರು.

ರಾಜ್ಯ ಸರಕಾರ ಮಂಡ್ಯದಲ್ಲಿ ಆರಂಭಿಸಿರುವ ಕೃಷಿ ವಿವಿಯನ್ನು ಎಷ್ಟು ವರ್ಷ ಇಟ್ಟುಕೊಳ್ಳುತ್ತಾರೆ? ಎಷ್ಟು ವರ್ಷ ನಡೆಸುತ್ತಾರೆ. ಬೀದರ್‌ನಲ್ಲಿ ಪಶು ವೈದ್ಯಕೀಯ ವಿವಿಯನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಹಣ ಎಷ್ಟು ಕೊಟ್ಟಿದ್ದಾರೆ. ಎಷ್ಟು ವಿವಿಯನ್ನು ಇವರು ಮುಚ್ಚಿದ್ದಾರೆ. ಬರೀ ಪ್ರಚಾರಕ್ಕೆ ಕೆಲಸ ಮಾಡಬಾರದು.
-ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಇಷ್ಟು ದಿನ ಏನು ಮಾಡುತ್ತಿದ್ದರು?

ಇನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ ಅವರು, ಈ ಸರಕಾರದಲ್ಲಿ ಎರಡು ವರ್ಷದಿಂದ ಸಚಿವರಾಗಿದ್ದಾರೆ. ಈಗ ಪತ್ರ ಬರೆದಿದ್ದಾರೆ. ಅವರು ಇಷ್ಟು ದಿನ ಏನು ಮಾಡುತ್ತಿದ್ದರು? 2015-16ರಲ್ಲಿ ತನಿಖೆ ನಡೆಸುವಂತೆ ಇದೇ ಎಚ್.ಕೆ. ಪಾಟೀಲ್ ಅವರೇ ಶಿಫಾರಸು ಮಾಡಿದ್ದರು. ಆ ವರದಿನಿಟ್ಟುಕೊಂಡು ಅವರು ದಿನವೂ ಪೂಜೆ ಮಾಡುತ್ತಿದ್ದಾರಾ? ಎಂದು ಎಚ್.ಡಿ.ಕುಮಾರಸ್ವಾಮಿ ಅವರು ಪ್ರಶ್ನಿಸಿದರು.

ಲೋಕಾ ಬಲೆಗೆ ಬಿದ್ದ ಅಧಿಕಾರಿ ಅಮಾನತು

ಮಂಗಳೂರು: ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದು, ಜೈಲು ಸೇರಿ ಜಾಮೀನು ಪಡೆದಿದ್ದ ಅಧಿಕಾರಿ ಮತ್ತೆ ಅದೇ ಹುದ್ದೆಯಲ್ಲಿ ಕೆಲಸ ನಿರ್ವಹಿಸಿದ ಘಟನೆ ಮಂಗಳೂರಿನಲ್ಲಿ ನಡೆದಿದ್ದು, ಈ ಕುರಿತಂತೆ ವರದಿ ಪ್ರಸಾರವಾಗುತ್ತಿದ್ದಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿ ಕೃಷ್ಣವೇಣಿ ಅವರನ್ನು ಸರಕಾರ ಅಮಾನತುಗೊಳಿಸಿದೆ.

ಮನೆಕಟ್ಟಲು ಜಾಗದಲ್ಲಿದ್ದ ಕಲ್ಲನ್ನು ತೆಗೆಯಲು ಉಳ್ಳಾಲದ ವ್ಯಕ್ತಿಯೊಬ್ಬರು ಗಣಿ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು, ಆದರೆ ಅಧಿಕಾರಿ ಕೃಷ್ಣವೇಣಿ ತನ್ನ ಚಾಲಕನ ಮೂಲಕ 50 ಸಾವಿರ ಲಂಚ ಪಡೆದಿದ್ದರು. ಈ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಕೃಷ್ಣವೇಣಿ, ಕಚೇರಿ ಪ್ರಥಮ ದರ್ಜೆ ಸಹಾಯಕ ಪ್ರದೀಪ್ ಕುಮಾರ್.ಆರ್ ಹಾಗೂ ಚಾಲಕ ಮಧು ಸಿ. ಎಂಬುವರನ್ನು ಅರೆಸ್ಟ್ ಮಾಡಿದ್ದರು. ಲಂಚ ಪಡೆದ ಆರೋಪದ ಮೇಲೆ 18 ದಿನ ಬಂಧನದಲ್ಲಿದ್ದ ಕೃಷ್ಣವೇಣಿ ಅವರನ್ನು ಅಮಾನತುಗೊಳಿಸದೇ ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದ್ದು, ಈ ಬಗ್ಗೆ ಸಾರ್ವಜನಿಕರಿಂದ ಟೀಕೆ ವ್ಯಕ್ತವಾಗಿದೆ. ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಸಚಿವ ದಿನೇಶ್ ಗುಂಡೂರಾವ್ ಅವರು ಮುಖ್ಯ ಕಾರ್ಯದರ್ಶಿಗೆ ಶನಿವಾರ ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ ಅಮಾನತು ಆದೇಶ ಹೊರಬಿದ್ದಿದೆ.

ಕಾಂಗ್ರೆಸ್‌ನವರಿಗೆ ಕಾನೂನಿನ ಮೇಲೆ ಗೌರವ ಇಲ್ಲ: ಜೋಶಿ

ಹುಬ್ಬಳ್ಳಿ: ಕಾಂಗ್ರೆಸ್‌ನವರಿಗೆ ಕಾನೂನಿನ ಮೇಲೆ ಗೌರವ ಇಲ್ಲ. ಅಧಿಕಾರಿಗಳನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದಾರೆ. ಕೆಲವು ಅಧಿಕಾರಿಗಳು ಸಹ ಅದೇ ರೀತಿ ವರ್ತಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯವನ್ನು ಮತಾಂಧ ಕೇಂದ್ರವನ್ನಾಗಿ ಮಾಡಲಾಗುತ್ತದೆ. ಇದು ಒಂದು ವರ್ಗ, ಮತಾಂಧರ ಪರವಾಗಿ ಇರುವ ಸರಕಾರ ಎಂದು ಆರೋಪಿಸಿದರು. ವಿದೇಶಿ ವ್ಯಾಸಂಗಕ್ಕಾಗಿ ಮುಸ್ಲಿಂ ವಿದ್ಯಾರ್ಥಿಗಳಿಗೆ 30 ಲಕ್ಷ ಬಡ್ಡಿ ರಹಿತ ಸಾಲ, ವಕ್ಫ್ ಆಸ್ತಿ ರಕ್ಷಣೆಗೆ 150 ಕೋಟಿ, ಮುಸ್ಲಿಮರ ಅಭಿವೃದ್ಧಿಗೆ 4 ಸಾವಿರ ಕೋಟಿ, ಅಲ್ಪಸಂಖ್ಯಾರ ಕಾಲೋನಿ ಅಭಿವೃದ್ಧಿಗೆ 1 ಸಾವಿರ ಕೋಟಿಯನ್ನು ಸರಕಾರ ನೀಡುತ್ತಿದೆ. ಇವೆಲ್ಲವೂ ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ಉದಾಹರಣೆ ಎಂದು ಹೇಳಿದರು.

2019ರ ಅಧಿಸೂಚನೆಯಂತೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕ, ಚಾಲಕ ಕಂ ನಿರ್ವಾಹಕ ಸೇರಿ 2814 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು. ಆದರೆ ಒಂದು ಸಾವಿರ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಿರುವುದು ತಪ್ಪು. ಈ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಕರೆ ಮಾಡಿ ಸಮಸ್ಯೆ ಸರಿಪಡಿಸುವಂತೆ ಮನವಿ ಮಾಡಲಾಗಿದೆ.

ಒಳಮೀಸಲಾತಿ ಜಾರಿಯಾದರೆ ನೇಮಕಾತಿ ಮತ್ತಷ್ಟು ವಿಳಂಬವಾಗುತ್ತದೆ ಎಂಬುದು ಅಭ್ಯರ್ಥಿಗಳ ಆತಂಕ. ಹೀಗಾಗಿ ನಿರ್ವಾಹಕ ಪರವಾನಗಿ ಇಲ್ಲದ ಅಭ್ಯರ್ಥಿಗಳಿಗೆ ಪರವಾನಗಿ ಮಾಡಿಸಿಕೊಳ್ಳಲು ಕಾಲಾವಕಾಶ ನೀಡಿ, ನೇಮಕಾತಿ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಅನ್ಯಾಯವಾಗಬಾರದು.
-ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಆಟೋ ಚಾಲಕನ ಸಹಕಾರದಿಂದ ಪರೀಕ್ಷೆ ಬರೆದ ವಿದ್ಯಾರ್ಥಿನಿಯರು

ಪಿಜಿಸಿಇಟಿ ಪರೀಕ್ಷೆಯಲ್ಲಿ ಜೀನ್ಸ್‌ಪ್ಯಾಂಟ್ ನಿಷೇಧ

ತುಮಕೂರು: ಭಾನುವಾರ ರಾಜ್ಯದ್ಯಂತ ನಡೆದ ಪಿಜಿಸಿಇಟಿ ಪರೀಕ್ಷೆ ವೇಳೆ ಜೀನ್ಸ್‌ಪ್ಯಾಂಟ್ ಧರಿಸಿ ಬರುವುದನ್ನು ನಿಷೇಧ ಮಾಡಲಾಗಿತ್ತು. ಜೀನ್ಸ್ ಪ್ಯಾಂಟ್ ಧರಿಸದೇ ಬಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅಧಿಕಾರಿಗಳು ಅವಕಾಶ ನೀಡಿದರು. ತುಮಕೂರಿನ ಸರಕಾರಿ ಪಿಯು ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಪಿಜಿಸಿಇಟಿ ಪರೀಕ್ಷೆ ಬರೆಯಲು ಜೀನ್ಸ್ ಪ್ಯಾಂಟ್ ತೊಟ್ಟು ಬಂದಿದ್ದ ಇಬ್ಬರು ವಿದ್ಯಾರ್ಥಿನಿಯರಿಗೆ ಅಧಿಕಾರಿಗಳು ಪರೀಕ್ಷೆ ಬರೆಯಲು ಅವಕಾಶ ನೀಡಲಿಲ್ಲ. ಪರೀಕ್ಷೆ ಆರಂಭಕ್ಕೆ ಇನ್ನೂ 15 ನಿಮಿಷ ಇದ್ದ ಕಾರಣ ಸ್ಥಳೀಯ ಆಟೋ ಚಾಲಕ ಯಡಿಯೂರಪ್ಪ ಎಂಬುವವರು ಇಬ್ಬರು ವಿದ್ಯಾರ್ಥಿನಿಯರನ್ನು ತಮ್ಮ ಆಟೋದಲ್ಲಿ ಬಟ್ಟೆ ಅಂಗಡಿಗೆ ಕರೆದುಕೊಂಡು ಹೋಗಿ ಪರೀಕ್ಷಾ ಸಮವಸ್ತ್ರ ನಿಯಮ ಅನುಸಾರದ ಬಟ್ಟೆಯನ್ನು ಕೊಡಿಸಿದರು. ಆಟೋ ಚಾಲಕನ ಸಹಕಾರದಿಂದ ಸಕಾಲಕ್ಕೆ ಪರೀಕ್ಷಾ ಕೇಂದ್ರಕ್ಕೆ ತೆರಳಿ ಇಬ್ಬರು ವಿದ್ಯಾರ್ಥಿನಿಯರು ಪರೀಕ್ಷೆ ಬರೆದರು.

ಪರೀಕ್ಷಾ ಕೇಂದ್ರದಿಂದ ಹಾಸ್ಟೆಲ್‌ಗೆ ಸುಮಾರು 6 ಕಿ.ಮೀ ದೂರವಿತ್ತು. ಪರೀಕ್ಷಾ ಕೊಠಡಿಗೆ ತೆರಳಲು ಇನ್ನು 15 ನಿಮಿಷ ಮಾತ್ರ ಬಾಕಿ ಇತ್ತು. 15 ನಿಮಿಷದಲ್ಲಿ ಹಾಸ್ಟೆಲ್‌ಗೆ ಹೋಗಿ ಬಟ್ಟೆ ಬದಲಾಯಿಸಿ ಬರೋದು ಸಾಧ್ಯವಿರಲಿಲ್ಲ. ವಿಷಯ ತಿಳಿದ ಗಣೇಶ ನಗರದ ನಿವಾಸಿ ಸಾಮಾಜಿಕ ಕಾರ್ಯಕರ್ತ

ಆಟೋ ಯಡಿಯೂರಪ್ಪ ವಿದ್ಯಾರ್ಥಿನಿಯರನ್ನು ಆಟೋದಲ್ಲಿ ಬಟ್ಟೆ ಅಂಗಡಿಗೆ ಕರೆದುಕೊಂಡು ಹೋಗಿ ಬಟ್ಟೆ ಕೊಡಿಸಿ ನಂತರ ಪರೀಕ್ಷಾ ಕೇಂದ್ರಕ್ಕೆ ಕರೆತಂದು ಬಿಟ್ಟಿದ್ದಾರೆ. ಆಟೋ ಚಾಲಕನ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಬಿಸಿಎ ಓದುತ್ತಿದ್ದು ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಕ್ಕೆ ಬಂದಿದ್ದೆವು. ಆದರೆ ಜೀನ್ಸ್ ಪ್ಯಾಂಟ್ ಧರಿಸಿ ಬಂದಿದ್ದರಿಂದ ಪರೀಕ್ಷಾ ಕೇಂದ್ರಕ್ಕೆ ನಮ್ಮನ್ನು ಬಿಡಲಿಲ್ಲ. ಇದರಿಂದ ಆತಂಕ ಉಂಟಾಗಿತ್ತು. ಕೊನೆಗೆ ನಮ್ಮ ಸ್ನೇಹಿತೆಯ ತಂದೆ ಬಂದು ನಮಗೆ ಸಹಾಯ ಮಾಡಿದರು. ನಿಯಮಗಳು ಒಂದೇ ತರಹ ಇರಬೇಕು. ಮುಂಚಿತವಾಗಿಯೇ ಹೇಳಿದ್ದರೆ ನಾವು ಜೀನ್ಸ್ ಧರಿಸುತ್ತಿರಲಿಲ್ಲ.
-ಶ್ರೀಲಕ್ಷ್ಮಿ, ವಿದ್ಯಾರ್ಥಿನಿ

ಹಾಲ್ ಟಿಕೆಟ್ ನಲ್ಲಿ ಜೀನ್ಸ್ ಪ್ಯಾಂಟ್ ನಿಷೇಧ ಎಂದು ಹೇಳಿರುವುದಿಲ್ಲ. ಆದರೂ ಸಹ ಇಂತಹ ನಿಯಮಗಳು ಏಕೆ ಈ ವಿಷಯ ಮೊದಲೇ ತಿಳಿಸಿದರೆ ವಿದ್ಯಾರ್ಥಿಗಳಿಗೆ ಒಳ್ಳೆಯದು ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಸರಕಾರ ಗಮನ ಹರಿಸಲಿ ಎಂದು ನನ್ನ ಮನವಿ
-ಶಿವಕುಮಾರ್, ಆಟೋ ಚಾಲಕ, ತುಮಕೂರು.

ಮಾವಿನ ಹಣ್ಣಿಗೆ ಬೆಂಬಲ ಬೆಲೆ ಘೋಷಣೆಗೆ ಪ್ರಧಾನಿ ಮೋದಿಗೆ ಪತ್ರ ಬರೆದು ಆಗ್ರಹ

ಮಾವು ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಲು ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ ಪತ್ರ



ಬೆಂಗಳೂರು: ಕರ್ನಾಟಕದಲ್ಲಿ ಮಾವು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸುವಂತೆ ಒತ್ತಾಯಿಸಿ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದಿರುವ ಪತ್ರದಲ್ಲಿ, ಬೆಲೆ ಕೊರತೆ ಪಾವತಿ ಯೋಜನೆ ಮತ್ತು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಲ್ಲಿ ರಾಜ್ಯದ ಮಾವು ಸಂಗ್ರಹಿಸಲು ಕೇಂದ್ರ ಸರಕಾರವು ನಾಫೆಡ್‌ಗೆ ಸೂಚಿಸಬೇಕು. ರೈತರಿಂದ ನೇರ ಖರೀದಿ ಅಥವಾ ರೈತ ಉತ್ಪಾದನಾ ಸಂಸ್ಥೆಗಳಿಂದ ನೇರವಾಗಿ ಖರೀದಿಸುವುದರಿಂದ ನ್ಯಾಯಯುತ ಬೆಲೆಗಳನ್ನು ಖಚಿತಪಡಿಸಿಕೊಳ್ಳುವ ಮೂಲಕ ರೈತರಿಗೆ ಬೆಂಬಲ ನೀಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಈಚೆಗೆ ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಾವಿಗೆ ಬೆಂಬಲ ಬೆಲೆ ವಿಚಾರ ಪ್ರಸ್ತಾಪವಾಯಿತಾದರೂ ಅಂತಿಮ ನಿರ್ಧಾರವಾಗಿಲ್ಲ. ಮಾವಿನ ಧಾರಣೆ ಕುಸಿದು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದು, ಬೆಂಬಲ ಬೆಲೆಗಾಗಿ ಕಳೆದ 18 ದಿನಗಳಿಂದ ಬೆಳಗಾರರು, ಮುಖಂಡರು, ರೈತ ಮುಖಂಡರು ಆಗ್ರಹಿಸುತ್ತಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಕೂಡಲೇ ಕೇಂದ್ರ ಸರಕಾರ ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಿದ್ದಾರೆ.

ಎಂಟು ರಿಂದ ಹತ್ತು ಲಕ್ಷ ಟನ್ ಮಾವು ಉತ್ಪಾದನೆ

ರಾಜ್ಯದ ಪ್ರಮುಖ ತೋಟಗಾರಿಕಾ ಬೆಳೆಗಳಲ್ಲೊಂದಾದ ಮಾವು 2025-26ನೇ ಋತುವಿನಲ್ಲಿ 1.39 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು ಈ ಬಾರಿ ಅಂದಾಜು 8 ರಿಂದ 10 ಲಕ್ಷ ಟನ್ ಮಾವು ಉತ್ಪಾದನೆಯಾಗಿದೆ. ಪ್ರಸಕ್ತ ಮೇ ತಿಂಗಳಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ಮಾವಿನ ಹಣ್ಣಿನ ಮಾದರಿ ಬೆಲೆಗಳು ಕ್ವಿಂಟಾಲ್‌ಗೆ 1,200 ರಿಂದ 2,500 ರು. ರವರೆಗೆ ಇತ್ತು. ಶ್ರೀನಿವಾಸಪುರ ಮಾರುಕಟ್ಟೆಯಲ್ಲಿ ತೋತಾಪುರಿ ವರೈಟಿಯ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗಳು ಪ್ರತಿ ಕ್ವಿಂಟಾಲ್‌ಗೆ 450-550 ರು.ಗೆ ಕುಸಿದಿದೆ. ಕರ್ನಾಟಕ ಕೃಷಿ ಬೆಲೆ ಆಯೋಗವು ಮಾವಿನ ಎ1 + ಎಫ್‌ಎಲ್ ಕೃಷಿ ವೆಚ್ಚವನ್ನು ಕ್ವಿಂಟಲ್‌ಗೆ 3,460 ರು. ಮತ್ತು ಸಿ-3 ವೆಚ್ಚಕ್ಕೆ 5,466 ರು. ಎಂದು ಶಿಫಾರಸು ಮಾಡಿದೆ.

ಬೆಲೆ ವ್ಯತ್ಯಾಸ ಪಾವತಿಗೆ ಸರಕಾರಗಳ ಒಪ್ಪಿಗೆ

ಇನ್ನು ಶನಿವಾರ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರು, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರೊಂದಿಗೆ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಚರ್ಚೆ ನಡೆಸಿದರು. ಸಭೆಯಲ್ಲಿ ರಾಜ್ಯದಲ್ಲಿ ಮಾವಿನ ಬೆಲೆ ಕುಸಿತದ ಹಿನ್ನಲೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ನೆರವಾಗುವಂತೆ ರಾಜ್ಯ ಸರಕಾರದ ಮನವಿಗೆ ಕೇಂದ್ರವೂ ಸಕಾರಾತ್ಮಕ ಸಮ್ಮತಿ ನೀಡಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳೆರೆಡೂ ಪ್ರತಿ ಕೆ.ಜಿ. ಮಾವು ಬೆಳೆಗೆ ಎರೆಡೆರೆಡು ರು. ಗಳಂತೆ ಒಟ್ಟು 4 ರು. ವ್ಯತ್ಯಾಸ ಪಾವತಿಸಿ ಮಾರುಕಟ್ಟೆ ಚೈತನ್ಯಕ್ಕೆ ಕ್ರಮಕೈಗೊಳ್ಳಲು ಸಿದ್ದತೆ ನಡೆಸಿವೆ.

ಪ್ರತ್ಯೇಕ ಪ್ರಕರಣ: ನೀರಲ್ಲಿ 6 ಮಂದಿ ಮೃತ್ಯು

ರಾಜ್ಯಾದ್ಯಂತ ಮುಂಗಾರು ಚುರುಕಾಗಿದ್ದು, ಹಳ್ಳ-ಕೊಳ್ಳ ನದಿಗಳು ಸೇರಿ ಜಲಮೂಲಗಳು ಭರ್ತಿ ಆಗಿವೆ. ಪ್ರತ್ಯೇಕ ಪ್ರಕರಣಗಳಲ್ಲಿ ರಾಜ್ಯದಲ್ಲಿ ಕಳೆದ 24 ಗಂಟೆಗಳಲ್ಲಿ ನೀರಲ್ಲಿ ಮುಳುಗಿ 6 ಮಂದಿ ಮೃತಪಟ್ಟಿದ್ದಾರೆ.

ಹಳ್ಳದಲ್ಲಿ ಬಿದ್ದು ಮಾವ-ಅಳಿಯ ಸಾವು

ಬಾಗಲಕೋಟೆ: ಹಳ್ಳದಲ್ಲಿ ಮೀನು ಹಿಡಿಯಲು ಹೋದ ಬಿದ್ದು ಮಾವ- ಅಳಿಯ ನೀರು ಪಾಲಾದ ಘಟನೆ ಬಾಗಲಕೋಟೆ ಜಿಲ್ಲೆಯ ಇಳಕಲ್ಲ ತಾಲೂಕಿನ ಚಿಕನಾಳ ಗ್ರಾಮದಲ್ಲಿ ಜರುಗಿದೆ. ಕೊಪ್ಪಳ ಜಿಲ್ಲೆ ಮೂಲದ ಬಳುಟಗಿಯ ಮಂಜುನಾಥ ಬಾಲಪ್ಪ ಬಂಡಿ (13) ಅಳಿಯ ಹಾಗೂ ಚಿಕ್ಕನಾಳ ಗ್ರಾಮದ ಷಣ್ಮುಖಪ್ಪ ತಪ್ಪನ್ನವರ್ (30) ಮಾವ ಮೃತ ದುರ್ದೈವಿಗಳು. ಮಂಜುನಾಥ ಮೀನು ಹಿಡಿಯಲು ಹೋಗಿ ಹಳ್ಳದಲ್ಲಿ ಜಾರಿ ಬಿದ್ದಿದ್ದಾನೆ. ಆತನನ್ನು ರಕ್ಷಿಸಲು ಹೋಗಿ ಷಣ್ಮುಖಪ್ಪ ತೆರಳಿದ್ದು, ಇಬ್ಬರು ನೀರು ಪಾಲಾಗಿದ್ದಾರೆ. ಈ ಕುರಿತು ಅಮೀನಗಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಯಿ-ಮಗಳ ಶವ ಪತ್ತೆ: ಕೊಲೆ ಆರೋಪ

ಚಿಕ್ಕಬಳ್ಳಾಪುರ: ಕೃಷಿ ಹೊಂಡದಲ್ಲಿ ತಾಯಿ ಮಗಳ ಮೃತದೇಹಗಳು ಅನುಮಾನಾಸ್ಪದವಾಗಿ ಪತ್ತೆಯಾಗಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಇಂಡರಸನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ 30 ವರ್ಷದ ಮಾಲಾ ಹಾಗೂ 8 ವರ್ಷದ ಅನುಶ್ರೀ ಮೃತರು. ಮೃತ ಮಾಲಾ ಜಮೀನು ಭಾಗ ಮಾಡಿಕೊಳ್ಳುವಂತೆ ಗಂಡನಿಗೆ ಒತ್ತಡ ಹಾಕಿದ್ದಳಂತೆ ಹಾಗಾಗಿ ಕುಟುಂಬಸ್ಥರಲ್ಲಿ ಜಮೀನು ವಿಚಾರದಲ್ಲಿ ಮನಸ್ತಾಪಗಳು ಮೂಡಿದ್ದವು. ಇದೇ ವಿಚಾರದಲ್ಲಿ ಗಂಡ ನಾಗರಾಜ್ ಅತ್ತೆ ಮೈದುನ ಮುನಿರಾಜು, ಅತ್ತೆ ಅಂಜಿನಮ್ಮ ಸೇರಿ ನಾದಿನಿ ವಿರುದ್ಧ ಕೊಲೆ ಆರೋಪ ಕೇಳಿಬಂದಿದೆ. ಮೃತ ಮಾಲಾ ತಂದೆ-ತಾಯಿ ಸಂಬಂಧಿಕರು ಗಂಡನ ಮನೆಯವರ ಜೊತೆ ಗಲಾಟೆ ನಡೆಸಿ ಮನೆಯ ಮುಂದೆಯೇ ಮೃತ ದೇಹ ಅಂತ್ಯಕ್ರಿಯೆ ಮಾಡಿ ಮಣ್ಣು ಮಾಡಲು ಮುಂದಾಗಿದ್ದಾರೆ. ಈ ವೇಳೆ ಗಲಾಟೆ ನಡೆದು ಸ್ಥಳಕ್ಕೆ ವಿಶ್ವನಾಥಪುರ ಪೊಲೀಸರು ಆಗಮಿಸಿ ಕ್ರಮ ಕೈಗೊಂಡಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ಯುವಕರು ಸಾವು

ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಯುವಕರು ಮೃತಪಟ್ಟಿರುವ ಘಟನೆ ಶಿವಮೊಗ್ಗ ತಾಲೂಕಿನ ಯಡವಾಲ ಗ್ರಾಮದಲ್ಲಿ ನಡೆದಿದೆ. ಗೌತಮ್ ನಾಯ್ಕ(22) ಮತ್ತು ಚಿರಂಜೀವಿ (22) ಮೃತರು. ಗೌತಮ್ ನಾಯ್ಕ ಯಡವಾಲ ಗ್ರಾಮದ ಕುಮಾರನಾಯ್ಕ್ ಎಂಬುವರ ಪುತ್ರನಾಗಿದ್ದು, ಚಿರಂಜೀವಿ ಶಿವಮೊಗ್ಗದ ಕುಂಬಾರಗುಂಡಿಯ ನಿವಾಸಿ. ಚಿರಂಜೀವಿ ಸೇರಿದಂತೆ ಇತರೆ 9 ಮಂದಿ ಶನಿವಾರ ರಾತ್ರಿ ಗೌತಮ್ ಜಮೀನಿಗೆ ಹೋಗಿ ಪಾರ್ಟಿ ಮಾಡಿದ್ದಾರೆ. ಪಾರ್ಟಿ ಮುಗಿದ ಮೇಲೆ ಗೌತಮ್ ನಾಯ್ಕ ಅವರ ತೋಟದ ಪಕ್ಕದಲ್ಲಿರುವ ಕೃಷಿ ಹೊಂಡದಲ್ಲಿ ಈಜಲು ಹೋದಾಗ ಈ ದುರ್ಘಟನೆ ನಡೆದಿದೆ. ಕುಂಸಿ ಪೊಲೀಸರು ಮೃತರ ಸ್ನೇಹಿತರನ್ನು ವಿಚಾರಣೆ ಮಾಡಿದ್ದಾರೆ.

ದೆಹಲಿಗೆ ಇಂದು ಸಿಎಂ

← ಮೊದಲಪುಟದಿಂದ

ಮಂಗಳವಾರ ಬೆಳಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿರುವ ಸಿಎಂ ಸಿದ್ದರಾಮಯ್ಯ, ರಾಷ್ಟ್ರಪತಿಗಳ ಬಳಿಯಿರುವ ಐದು ಪ್ರಮುಖ ಕಾಯಿದೆಗಳಿಗೆ ಸಂಬಂಧಿಸಿದಂತೆ 'ಸ್ಪಷ್ಟೀಕರಣ' ನೀಡಿ, ಕಾಯಿದೆಗಳಿಗೆ ಸಹಿ ಹಾಕುವಂತೆ ಮನವಿ ಮಾಡಲಿದ್ದಾರೆ.

ರಾಷ್ಟ್ರಪತಿಗಳ ಭೇಟಿಯ ಬಳಿಕ ಮಂಗಳವಾರ ಸಂಜೆ ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಲಿರುವ ಸಿದ್ದರಾಮಯ್ಯ ಅವರು 16ನೇ ಹಣಕಾಸು ಆಯೋಗದ ಅನುದಾನ ಹಂಚಿಕೆ ವಿಷಯದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗದಂತೆ ಮನವಿ ಮಾಡಲು ಹಾಗೂ ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನವನ್ನು ಬಿಡುಗಡೆಗೊಳಿಸುವಂತೆ ಮನವಿ ಮಾಡಲಿದ್ದಾರೆ.

ಇನ್ನು ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಯ ನಿರೀಕ್ಷೆಯಲ್ಲಿರುವ ಸಿದ್ದರಾಮಯ್ಯ ಅವರು, ಪ್ರಧಾನಿಗಳ ಸಮಯ ಸಿಕ್ಕರೆ ಬುಧವಾರ ಭೇಟಿಯಾಗಲಿದ್ದಾರೆ. ಈ ವೇಳೆ ಅನುದಾನ ತಾರತಮ್ಯ ಸೇರಿದಂತೆ ರಾಜ್ಯದ ವಿವಿಧ ಬೇಡಿಕೆಗಳ ಬಗ್ಗೆ ಜತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಸ್ಲಿಮರಿಗೆ ಗುತ್ತಿಗೆ ಮೀಸಲು; ಮನವಿ: ಗುತ್ತಿಗೆಯಲ್ಲಿ ಮುಸ್ಲಿಮರಿಗೆ 4% ಮೀಸಲಾತಿ ನೀಡುವ ಸಂಬಂಧದ ವಿಧೇಯಕವನ್ನು ರಾಜ್ಯಪಾಲರು ಎರಡು ಬಾರಿ ವಾಪಸ್ ಕಳುಹಿಸಿದ್ದರು. ಈ ಬಗ್ಗೆ ಸಿದ್ದರಾಮಯ್ಯ ಅವರು ರಾಜ್ಯಪಾಲರನ್ನು ಖುದ್ದು ಭೇಟಿ ಮಾಡಿ ಸ್ಪಷ್ಟನೆ ನೀಡಿದರೂ ತಿರಸ್ಕರಿಸಿ ಮೂರನೇ ಬಾರಿಗೆ ರಾಷ್ಟ್ರಪತಿಗಳಿಗೆ ಕಳುಹಿಸಲು ಮೇ ಕೊನೆಯ ವಾರ ನೋಟ್ ಕಳುಹಿಸಿದ್ದರು. ಆದ್ದರಿಂದ ಇದೀಗ ಮುರ್ಮು ಅವರಿಗೆ ಕಾಯಿದೆಯ ಬಗ್ಗೆ ವಿವರಣೆ ನೀಡಿ, ಸಹಿ ಹಾಕುವಂತೆ ಮನವಿ ಮಾಡಲಿದ್ದಾರೆ.

ದಶಕದ ಕಾಯಿದೆ ಮುನ್ನೆಲೆಗೆ: ಇನ್ನು ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 2009ರ ಆರ್‌ಟಿಇ ಕಾಯಿದೆಗೆ 2015ರಲ್ಲಿ ತಿದ್ದುಪಡಿ ತಂದಿದ್ದ ರಾಜ್ಯ ಸರಕಾರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ರಾಜ್ಯದ ಶಾಲೆಗಳಲ್ಲಿ ಒಂದರಿಂದ ಐದನೇ ತರಗತಿವರೆಗೆ ಸಾಧ್ಯವಾದಷ್ಟು ಮಾತ್ರ ಭಾಷೆಯ ಮಾಧ್ಯಮದಲ್ಲೇ ಬೋಧಿಸಬೇಕು ಎಂದಿತ್ತು. ಇದೀಗ ಈ ನಿಯಮದಲ್ಲಿ 'ಸಾಧ್ಯವಾದಷ್ಟು' ಎಂಬ ಪದವನ್ನು ತೆಗೆದಿತ್ತು. ಜತೆಗೆ ಇದಕ್ಕೆ ಪೂರಕವಾಗಿ ಕನ್ನಡ ಕಲಿಕೆ ಕಡ್ಡಾಯ ಕಾಯಿದೆ-2015 ಜಾರಿಗೆ ತಂದು 1 ರಿಂದ 10ನೇ ತರಗತಿವರೆಗೆ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸುವುದನ್ನು ಕಡ್ಡಾಯಗೊಳಿಸಿತ್ತು. ಆರ್‌ಟಿಇ ಕಾಯಿದೆ ಕೇಂದ್ರದ ವ್ಯಾಪ್ತಿಗೆ ಬರುವ ಹಿನ್ನೆಲೆಯಲ್ಲಿ ತಿದ್ದುಪಡಿಯನ್ನು ರಾಜ್ಯಪಾಲರು ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿದ್ದರು. ಹತ್ತು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಈ ವಿಧೇಯಕಕ್ಕೆ ಅನುಮೋದನೆ ಕೋರಿ ಸಿದ್ದರಾಮಯ್ಯ ಅವರು ಮತ್ತೆ ಮುನ್ನಲೆಗೆ ಬಂದಿದೆ.

ರಾಗಾ ವಾಪಸಾದರೆ ಬುಧವಾರ ಭೇಟಿ?

ಮೂರು ದಿನಗಳ ದೆಹಲಿ ಭೇಟಿಯ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸುವ, ವಿಧಾನಪರಿಷತ್ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಚರ್ಚಿಸಲಿದ್ದಾರೆ ಎನ್ನಲಾಗಿದೆ. ಆದರೆ ಸದ್ಯ ರಾಹುಲ್ ಗಾಂಧಿ ಅವರು ವಿದೇಶ ಪ್ರವಾಸದಲ್ಲಿದ್ದು, ಮಂಗಳವಾರ ರಾತ್ರಿ ವಾಪಸಾಗುವ ಸಾಧ್ಯತೆಯಿದೆ. ಒಂದು ವೇಳೆ ಅವರು ವಾಪಸಾದರೆ ಬುಧವಾರ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಒಂದು ವೇಳೆ ರಾಹುಲ್ ಸಿಗದಿದ್ದರೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ. ವೇಣುಗೋಪಾಲ್ ಅವರೊಂದಿಗೆ ಚರ್ಚಿಸಿ ವಾಪಸಾಗಲಿದ್ದಾರೆ ಎಂದು ಹೇಳಲಾಗಿದೆ.

17 ಜಿಲ್ಲೆಗಳಲ್ಲಿ ಮಳೆ ಕೊರತೆ

← ಮೊದಲಪುಟದಿಂದ

ಮಲೆನಾಡು ಭಾಗದಲ್ಲಿ ವಾಡಿಕೆಗಿಂತ ಶೇ.8ರಷ್ಟು ಹಾಗೂ ಕರಾವಳಿ ಭಾಗದಲ್ಲಿ ಶೇ.10ರಷ್ಟು ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಜೂನ್ 1 ರಿಂದ 21 ರವರೆಗೆ ರಾಜ್ಯದ ವಾಡಿಕೆ ಮಳೆ ಪ್ರಮಾಣ 130.2 ಮಿ.ಮೀ. ಆಗಿದ್ದು, 133.2 ಮಿ.ಮೀ.ನಷ್ಟು ಮಳೆಯಾಗಿದೆ. ಒಟ್ಟಾರೆ ವಾಡಿಕೆಗಿಂತ ಶೇ.2ರಷ್ಟು ಹೆಚ್ಚು ಮಳೆಯಾಗಿದೆ. ಜನವರಿ ಒಂದರಿಂದ ಜೂ.21ವರೆಗೆ ರಾಜ್ಯದಲ್ಲಿ ಶೇ.68ರಷ್ಟು ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಅದೇ ರೀತಿ ಮಾರ್ಚ್ ಒಂದರಿಂದ ಮೇ ಅಂತ್ಯದವರೆಗಿನ ಅವಧಿಯಲ್ಲಿ ಪೂರ್ವ ಮುಂಗಾರು ಮಳೆ ವಾಡಿಕೆಗಿಂತ ಶೇ.149ರಷ್ಟು ಹೆಚ್ಚಾಗಿತ್ತು. ಅವಧಿಗೆ ಮುನ್ನ ಮುಂಗಾರು ಆರಂಭವಾಗಿ ಪ್ರಾರಂಭದಲ್ಲೇ ಅಬ್ಬರಿಸಿದರೂ ಕಳೆದ ಎರಡು ವಾರಗಳಿಂದ ಒಳನಾಡಿನಲ್ಲಿ ದುರ್ಬಲಗೊಂಡಿದೆ.

ಸಾಧಾರಣ ಮಳೆಯ ಮುನ್ಸೂಚನೆ

ಬೆಂಗಳೂರು ಸೇರಿದಂತೆ ಕರಾವಳಿ ಹಾಗೂ ಮಲೆನಾಡ ಭಾಗದಲ್ಲಿ ಮುಂದಿನ ಒಂದು ವಾರ ಸಾಧಾರಣ ಮಳೆಯ ಮುನ್ಸೂಚನೆ ನೀಡಲಾಗಿದೆ. ಜೂನ್ 25ರವರೆಗೆ ಭಾರಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಜೂನ್ 23ರಂದು ಕರಾವಳಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ನಿರೀಕ್ಷೆ ಇದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ, ಕೊಪ್ಪಳ, ಬೀದರ್, ಕಲಬುರ್ಗಿ, ವಿಜಯಪುರ, ರಾಯಚೂರು, ಯಾದಗಿರಿ ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ರಾಮನಗರ, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ, ದಾವಣಗೆರೆ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ.

ಜು.10ರೊಳಗೆ ಒಳಮೀಸಲು ಅನುಷ್ಠಾನ ಆಗಲಿ

ಚಿತ್ರದುರ್ಗ: ಒಳಮೀಸಲಾತಿ ಜಾರಿಗಾಗಿ ನಡೆಯುತ್ತಿರುವ ಪರಿಶಿಷ್ಟ ಜಾತಿಗಳ ಸಮೀಕ್ಷಾ ಅವಧಿಯನ್ನು ಮತ್ತೆ ವಿಸ್ತರಣೆ ಮಾಡಬಾರದು. ಆದಷ್ಟು ಬೇಗ ಸರಕಾರ ವರದಿ ಸ್ವೀಕರಿಸಬೇಕು. ವಿಶೇಷ ಅಧಿವೇಶನ ಕರೆದು ಜುಲೈ 10ರೊಳಗೆ ಒಳ ಮೀಸಲಾತಿ ಅನುಷ್ಠಾನ ಮಾಡಬೇಕು ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಒತ್ತಾಯಿಸಿದರು.

ಮೇ 5ರಂದು ಸಮೀಕ್ಷಾ ಕಾರ್ಯ ಆರಂಭವಾಗಿದ್ದು, ಜೂನ್ 22ರವರೆಗೂ ವಿವಿಧ ಹಂತಗಳಲ್ಲಿ ನಡೆಯಲಿದೆ. ಈಗಾಗಲೇ ರಾಜ್ಯದಾದ್ಯಂತ ಶೇ 90ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಗಣತಿ ನಡೆದಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಶೇ 50ರಷ್ಟು ಮಾತ್ರ ಪೂರ್ಣಗೊಂಡಿರುವ ಕಾರಣ ಮತ್ತೆ ಅವಧಿ ವಿಸ್ತರಿಸುವ ಮಾತುಗಳು ಕೇಳಿ ಬರುತ್ತಿವೆ. ಈಗಿರುವ ಅವಧಿಯಲ್ಲಿ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಬೇಕು. ಮತ್ತೆ ಅವಧಿ ವಿಸ್ತರಣೆ ಮಾಡಿದರೆ ಒಳಮೀಸಲಾತಿ ಅನುಷ್ಠಾನ ತಡವಾಗಲಿದೆ ಎಂದು ಹೇಳಿದರು.

ಶರ್ಮಿಷ್ಠೆ ನಾಟಕದಲ್ಲಿ ನಟಿ ಉಮಾಶ್ರೀ ಅಭಿನಯ

ಮೈಸೂರು: ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್. ಸಿ. ಮಹದೇವಪ್ಪ ಅವರು ಬೇಲೂರು ರಘುನಂದನ್ ವಿರಚಿತ, ಚಿದಂಬರ ರಾವ್ ಜಂಬೆ ನಿರ್ದೇಶಿಸಿರುವ ಹಿರಿಯ ನಟಿ ಉಮಾಶ್ರೀ ಅವರ ಅಭಿನಯದ ಶರ್ಮಿಷ್ಠೆ ನಾಟಕವನ್ನು ಭಾನುವಾರ ಮಂಡ್ಯ ರಮೇಶ್ ಅವರ ಮೈಸೂರಿನ ನಟನ ರಂಗಶಾಲೆಯಲ್ಲಿ ವೀಕ್ಷಿಸಿದರು.

ಈ ವೇಳೆ ಮಾತನಾಡಿದ ಅವರು, ಬಹುಮುಖ ಪ್ರತಿಭೆ ಉಮಾಶ್ರೀ ಅವರು ಭಾವಪೂರ್ಣವಾದ ಅಭಿನಯ ನಮ್ಮೆನ್ನೆಲ್ಲ ಒಂದು ಗಂಟೆ ಕಾಲ ಭಾವಪರವಶಗೊಳಿಸಿದೆ. ಇಬ್ಬರು ಪರಮಾಪ್ತ ಸ್ನೇಹಿತರ ವಿಭಿನ್ನವಾದ ನಡೆ, ನುಡಿಗಳು ಹಾಗೂ ಸಂಘರ್ಷದ ಸನ್ನಿವೇಶಗಳ ಮನೋಜ್ಞವಾದ ನಟನೆ ನಿಜಕ್ಕೂ ಪ್ರಶಂಸನೀಯ ಎಂದರು.

ಕಷ್ಟದ ದಿನಗಳಿಂದ ಬೆಳೆದು ಬಂದಿರುವ ಉಮಾಶ್ರೀ ಅವರು ಜೀವನದ ಅನೇಕ ಮಜಲುಗಳನ್ನು ಹತ್ತಿರದಿಂದ ಕಂಡಿದ್ದಾರೆ. ನಾಟಕದಲ್ಲೂ ಕೂಡ ಎಲ್ಲಿಯೂ ಏರಿಳಿತಗಳಿಲ್ಲದೆ ಅತ್ಯುತ್ತಮವಾಗಿ ಏಕಪಾತ್ರದಲ್ಲಿ ಅಭಿನಯಿಸಿ ಪಾತ್ರಕ್ಕೆ ಜೀವತುಂಬಿದ್ದಾರೆ. ಅವರ ಅಪ್ರತಿಮಾ ಕಲಾಪ್ರತಿಭೆಯನ್ನು ಈ ನಾಟಕದ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾಚಾರ ಸಣ್ಣದಲ್ಲ

ನರ್ಸ್ ಯಡವಟ್ಟಿನಿಂದ ಮಗು-ತಾಯಿ ಸಾವು?

ಕಲಬುರಗಿ: ನಿವೃತ್ತ ನರ್ಸ್ ಯಡವಟ್ಟಿನಿಂದ ಬಾಣಂತಿ ಹಾಗೂ ನವಜಾತ ಶಿಶು ಸಾವನ್ನಪ್ಪಿರು ಆರೋಪ ಆರೋಪ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ವಾಡಿ ಸರಕಾರಿ ಆಸ್ಪತ್ರೆಯಲ್ಲಿ ಕೇಳಿಬಂದಿದೆ. ಇಂಗಳಗಿ ಗ್ರಾಮದ ನಿವಾಸಿ ಶ್ರೀದೇವಿ ಪ್ರಭಾನೂರ್ (28) ಹಾಗೂ ನವಜಾತ ಶಿಶು ಮೃತಪಟ್ಟಿದೆ. ಹೆರಿಗೆಗಾಗಿ ವಾಡಿ ಸರಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಈ ವೇಳೆ ಮೃತ ಶ್ರೀದೇವಿಗೆ ನಿವೃತ ಆರೋಗ್ಯ ಸಹಾಯಕಿ ಗಂಗುಬಾಯಿ ಚಿಕಿತ್ಸೆ ನೀಡಿದ್ದರು. ಈ ವೇಳೆ ಚಿಕಿತ್ಸೆ ಫಲಿಸದೇ ಬಾಣಂತಿ ಕೊನೆಯುಸಿರೆಳೆದಿದ್ದಾಳೆ. ನಿವೃತ್ತ ನರ್ಸ್ ಯಡವಟ್ಟಿನಿಂದಲೇ ತಾಯಿ ಹಾಗೂ ಮಗು ಮೃತಪಟ್ಟಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಮೃತ ಶ್ರೀದೇವಿಗೆ ಮೂವರು ಹೆಣ್ಣು ಮಕ್ಕಳಿದ್ದಾರೆ. ಈ ಬಾರಿ ಮಹಿಳೆ ಗಂಡು ಮಗುವಿಗೆ ಜನ್ಮ ನೀಡಿದ್ದಳು. ವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ನರ್ಸ್ ವಿರುದ್ಧ ಕ್ರಮಜರುಗಿಸುವಂತೆ ವಾಡಿ ಪೊಲೀಸರಿಗೆ ಮೃತ ಮಹಿಳೆ ಪತಿ ದೂರು ನೀಡಿದ್ದಾರೆ.

ಭ್ರಷ್ಟಾಚಾರಕ್ಕೆ ರಾಜ್ಯ ಸರಕಾರ ಉತ್ತೇಜನ

ಬೆಂಗಳೂರು: ರಾಜ್ಯ ಸರಕಾರವೇ ಭ್ರಷ್ಟಾಚಾರಕ್ಕೆ ಉತ್ತೇಜನ ನೀಡುತ್ತಿದೆ. ಈ ಎಲ್ಲವೂ ಬಿ.ಆರ್ ಪಾಟೀಲ್ ಹೇಳಿಕೆಯಿಂದ ಗೊತ್ತಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ಟೀಕಿಸಿದರು. ನೆಲಮಂಗಲದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಹಿರಿಯ ಶಾಸಕ ಬಿ.ಆರ್. ಪಾಟೀಲ್ ಗಂಭೀರವಾದ ರಾಜ್ಯದ ಪರಿಸ್ಥಿತಿಯ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಯಾವ ಇಲಾಖೆ ಬಡವರಿಗೆ ಮನೆಗಳನ್ನು ಕೊಡಬೇಕಿತ್ತೋ, ಅಲ್ಲಿಯೂ ಸಹ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಇಂದು ರಾಜ್ಯದ ಜನತೆ ಮುಂದೆ ಬಿಚ್ಚಿಟ್ಟಿದ್ದಾರೆ ಎಂದು ಹೇಳಿದ್ದಾರೆ. ಹಿರಿಯ ನಾಯಕರಾದ ಬಿ. ಆರ್ ಪಾಟೀಲ್ ಅವರನ್ನು ಆಡಳಿತ ಪಕ್ಷದ ನಾಯಕರು ಬೆದರಿಸುವ ಕೆಲಸ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಂದಾಗಿನಿಂದ ಬಡವರಿಗೆ, ರೈತರಿಗೆ ಶಾಪವಾಗಿ ಪರಿಣಮಿಸಿದೆ. ಕಾಂಗ್ರೆಸ್ ಸರಕಾರ, ಸಿದ್ದರಾಮಯ್ಯ ಸರಕಾರದಿಂದ ಬಡವರಿಗೆ ಯಾವುದೇ ಅನುಕೂಲ ಇಲ್ಲ. ಈ ಹಿಂದೆ ಯಡಿಯೂರಪ್ಪನವರ ಸರಕಾರ ಇದ್ದಾಗ ಅನೇಕ ಬಡವರ ಪರ ಯೋಜನೆ ನೀಡಿದ್ದರು. ಆದರೆ ಈಗ ಎಲ್ಲ ಯೋಜನೆ ಮರೆತಿದ್ದಾರೆ. ಭ್ರಷ್ಟಾಚಾರ ಬಿಟ್ಟರೆ ಸರಕಾರದಲ್ಲಿ ಯಾವುದೇ ಯೋಜನೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಕಣ್ಣಿಗೆ ಖಾರದ ಪುಡಿ ಎರಚಿ ಯುವಕನ ಕೊಲೆ

ವಿಜಯಪುರ: ಆಲಮೇಲ ಪಟ್ಟಣದ ಹೊರವಲಯದಲ್ಲಿ ಅಪರಿಚಿತ ದುಷ್ಕರ್ಮಿಗಳು ಯುವಕನಿಗೆ ಕಣ್ಣಿಗೆ ಖಾರದ ಪುಡಿ ಎರಚಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಭಾನುವಾರ (ಜೂ.22) ನಡೆದಿದೆ. ಪಟ್ಟಣದ ಹಳೆ ನಾಗರಹಳ್ಳಿ ರಸ್ತೆಯ ಹೊಲದಲ್ಲಿ ಈ ಘಟನೆ ಜರುಗಿದ್ದು, ಫಾರುಕ ಲಾಳಸಂಗಿ (24) ಎಂಬಾತ ಹತ್ಯೆಗೀಡಾದ ಯುವಕ. ಈ ಕೊಲೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಆಲಮೇಲ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ರಾಜ್ಯದ ಮಹಿಳೆಯರಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ಜತೆಗೆ, ಅವರ ಜೀವನಮಟ್ಟವನ್ನು ಉತ್ತಮಗೊಳಿಸುವ ಗುರಿಯೊಂದಿಗೆ ರಾಜ್ಯ ಕಾಂಗ್ರೆಸ್ ಸರಕಾರ ಜಾರಿಗೆ ತಂದ ಗೃಹಲಕ್ಷ್ಮಿ ಯೋಜನೆ ಕೋಟ್ಯಂತರ ಮಹಿಳೆಯರಿಗೆ ಆರ್ಥಿಕ ಚೈತನ್ಯ ತುಂಬಿದೆ. ಪ್ರತಿ ತಿಂಗಳು ಸರಾಸರಿ 15,000 ಹೊಸ ಫಲಾನುಭವಿಗಳು ಈ ಯೋಜನೆಗೆ ಸೇರ್ಪಡೆಯಾಗುತ್ತಿದ್ದು, ಯೋಜನೆಯ ವ್ಯಾಪ್ತಿಯು ಇನ್ನಷ್ಟು ವಿಸ್ತರಿಸುತ್ತಿದೆ ಮತ್ತು ಹೆಚ್ಚಿನ ಮಹಿಳೆಯರಿಗೆ ಆರ್ಥಿಕ ಸಹಾಯ ದೊರೆಯುತ್ತಿದೆ.

ಸನಾತನ ವಾಯ್ಸ್

ಯಾರಪ್ಪನ ಮನೇದು? ಏನು ನೀವು ದುಡಿದು ತಂದಿದ್ದಾ!..ಇಲ್ಲ ತಾನೇ, ಪ್ರಜೆಗಳ ತೆರಿಗೆ ಹಣ ಕೊಡ್ತಿರೋದು, ಕರ್ನಾಟಕನ ಈಗಾಗಲೇ ಗುಡಿಸಿ ಗುಂಡಾಂತರ ಮಾಡಿದ್ದಿರಾ. ಇನ್ನೇನು ಹೊಲಸು ಮಾಡ್ತೀರೋ.. ಅವ್ವ ತಾಯಿ ದುರ್ಗೆ ಎಲ್ಲಿದ್ದೀ.

ರೂರಲ್ ಎಜುಕೇಶನ್ ಸಂಸ್ಥೆ ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಮ್ಮೆ | ಮರಳವಾಡಿಯಲ್ಲಿ ಕೃಷಿ ವಿವಿ ಕಟ್ಟಡಕ್ಕೆ ಅಡಿಗಲ್ಲು

ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಕೃಷಿ ಕಾಲೇಜು ಸ್ಥಾಪನೆ: ಡಿಕೆಶಿ

ರಾಮನಗರ: ರೂರಲ್ ಎಜುಕೇಶನ್ ಸೊಸೈಟಿ ಉಳಿಸಿ, ಬೆಳೆಸುವುದು ನನ್ನ ಕೆಲಸ. ಜನಸಾಮಾನ್ಯರ ಮಕ್ಕಳಿಗಾಗಿ ಈ ಸಂಸ್ಥೆಯಿಂದ ಕೃಷಿ ಕಾಲೇಜು ನಿರ್ಮಾಣವಾಗಿದೆ. ಈ ಸಂಸ್ಥೆ ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಮ್ಮೆ ಎಂದು ಡಿಸಿಎಂ ಡಿ. ಕೆ.ಶಿವಕುಮಾರ್ ಹೇಳಿದರು.

ಹಾರೋಹಳ್ಳಿ ತಾಲೂಕಿನ ಮರಳವಾಡಿಯಲ್ಲಿ ಸ್ಥಾಪನೆಯಾಗಿರುವ ನೂತನ ಕರಿಯಪ್ಪ ಕೃಷಿ ಮಹಾವಿದ್ಯಾಲಯದ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ನನಗೂ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀಕಂಠು ಅವರಿಗೆ ಸಂಸ್ಥೆಯ ಜಾಗ ಎಲ್ಲಿ ಒತ್ತುವರಿಯಾಗುತ್ತದೆಯೋ ಎನ್ನುವ ಆತಂಕವಿತ್ತು. ಈಗ ಸದರಿ ಜಾಗದಲ್ಲಿ ಕೃಷಿ ಕಾಲೇಜು ಸ್ಥಾಪನೆಯಾಗುತ್ತಿರುವುದು ಸಮಾಧಾನ ತಂದಿದೆ ಎಂದರು.

ರೂರಲ್ ಎಜುಕೇಶನ್ ಸೊಸೈಟಿ ಅವರು ನನ್ನನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾ ಇರಲಿಲ್ಲ. ಈ ಹಿಂದೆ ಡಿ.ಲಿಂಗೇಗೌಡರು, ಚನ್ನಬಸವೇಗೌಡರ ಕಾಲದಿಂದಲೂ ಈ ಬಗ್ಗೆ ನಾನು ಹೇಳುತ್ತಾ ಬಂದಿದ್ದೇನೆ. ಚನ್ನಬಸವೇಗೌಡರ ಕಾಲದಲ್ಲಿಯೇ ನರ್ಸಿಂಗ್ ಕಾಲೇಜು ಮಂಜೂರು ಆಗಿದ್ದರು ನನ್ನನ್ನು ಭೇಟಿ ಮಾಡಲು ಅವಮಾನ ಎಂದುಕೊಂಡು ಬಂದಿರಲಿಲ್ಲ ಎಂದು ಹೇಳಿದರು.

ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಹೆಸರು ಬದಲಾವಣೆ ಕಾರಣಕ್ಕೆ ಏನೆಲ್ಲಾ ಬದಲಾವಣೆಯಾಗುತ್ತಿದೆ ಎಂಬುದು ಜನರಿಗೆ ಅರ್ಥವಾಗುತ್ತಿದೆ. ಕೆಲವೊಬ್ಬರು ಇದನ್ನು ಟೀಕೆ ಮಾಡುತ್ತಿದ್ದಾರೆ. ಅವರುಗಳಿಗೆ ನಾನು ಉತ್ತರ ನೀಡಲು ಹೋಗುವುದಿಲ್ಲ. ನಾವು ನಮಗೆ ಇರುವ ಹೆಸರನ್ನು ಉಳಿಸಿಕೊಂಡಿದ್ದೇವೆ. ಯಾರ ಹೆಸರನ್ನು ಕಿತ್ತುಕೊಂಡಿಲ್ಲ ಎಂದರು.

ರಾಮನಗರ ಕ್ಷೇತ್ರಕ್ಕೆ 1 ಸಾವಿರ ಕೋಟಿಯಷ್ಟು ಅನುದಾನ ನೀಡಲಾಗಿದೆ. ಇದರ ಬಗ್ಗೆ ಅವರು ಪಟ್ಟಿ ಬಿಡುಗಡೆ ಮಾಡುತ್ತಾರೆ. ಚನ್ನಪಟ್ಟಣ ಉಪಚುನಾವಣೆ ವೇಳೆ 300 ಕೋಟಿಗೂ ಹೆಚ್ಚು ಹಣ ಕ್ಷೇತ್ರಕ್ಕೆ ನೀಡಲಾಗಿದೆ. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಲಾಗಿದೆ. ಹಾರೋಹಳ್ಳಿ, ಕೋಡಹಳ್ಳಿ, ಸಾತನೂರು, ಕನಕಪುರ ಮುಖ್ಯರಸ್ತೆಗಳನ್ನು ಈ ಹಿಂದೆ ಅಗಲ ಮಾಡಲಾಯಿತು. ಆದ ಕಾರಣಕ್ಕೆ ಆಸ್ತಿ ಮೌಲ್ಯ ಹೆಚ್ಚಾಗಿದೆ. ರಸ್ತೆ ಅಗಲೀಕರಣ ಮಾಡಿದಷ್ಟು ಆಸ್ತಿ ಮೌಲ್ಯ ಹೆಚ್ಚಾಗಲಿದೆ. ಪಿ.ಜಿ.ಆರ್.ಸಿಂಧ್ಯಾ ಅವರು ಮತಗಳು ಹೋಗುತ್ತವೆ ಎಂದು ರಸ್ತೆ ಅಗಲೀಕರಣ ಮಾಡಿರಲಿಲ್ಲ. 500 ಮತಗಳನ್ನು ನೋಡಲು ಹೋದರೆ 5 ಸಾವಿರ ಮತಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಈ ವೇಳೆ ಬಮುಲ್ ಅಧ್ಯಕ್ಷ, ಮಾಜಿ ಸಂಸದ ಡಿ ಕೆ ಸುರೇಶ್, ಶಾಸಕರಾದ ಇಕ್ಬಾಲ್ ಹುಸೇನ್, ಪುಟ್ಟಣ್ಣ, ಸುಧಾಮದಾಸ್, ದಿ ರೂರಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎಚ್ ಕೆ ಶ್ರೀಕಂಠ, ಮಾಜಿ ಶಾಸಕ ರಾಜು ಮತ್ತಿತರರು ಭಾಗವಹಿಸಿದ್ದರು.

ಹಾರೋಹಳ್ಳಿ ತಾಲೂಕಿನ ಮರಳವಾಡಿಯಲ್ಲಿ ನೂತನ ಕರಿಯಪ್ಪ ಕೃಷಿ ಮಹಾವಿದ್ಯಾಲಯದ ಕಟ್ಟಡಕ್ಕೆ ಡಿಸಿಎಂ ಡಿ ಕೆ ಶಿವಕುಮಾರ್ ಶಂಕುಸ್ಥಾಪನೆ ನೆರವೇರಿಸಿದರು.

ಅಕ್ರಮ ನಡೆದಿಲ್ಲ, ಪಾಟೀಲ್ ಜತೆ ಮಾತನಾಡುವೆ

ದುಡ್ಡು ಪಡೆದು ಮನೆ ನೀಡಿದ್ದೀರಿ ಎನ್ನುವ ಶಾಸಕ ಬಿ. ಆರ್.ಪಾಟೀಲ್ ಅವರ ಆರೋಪದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ ಡಿಕೆಶಿ ಅವರು, ಇದೆಲ್ಲವೂ ಸುಳ್ಳು, ಯಾರೋ ಒಬ್ಬ ಹೇಳಿದರೆ ಇದೆಲ್ಲವೂ ಆಗುತ್ತದೆಯೇ? ನಾನು ಅಥವಾ ನೀವು ಬಂದು ಗ್ರಾಮ ಸಭೆಯಲ್ಲಿ ಮನೆ ಕೇಳಿದ ತಕ್ಷಣ ಕೊಡಲು ಆಗುತ್ತದೆಯೇ? ಮನೆ ನೀಡಲು ತೀರ್ಮಾನ ಮಾಡುವವರು ಗ್ರಾಮ ಪಂಚಾಯತಿ, ಮುನಿಸಿಪಾಲಿಟಿ. ನಾವು ತೀರ್ಮಾನ ಮಾಡಲು ಆಗುತ್ತದೆಯೇ? ಬಿ.ಆರ್.ಪಾಟೀಲ್ ಅವರಿಗೆ ಪೂರ್ಣ ಮಾಹಿತಿ ತಿಳಿದಿದೆಯೋ ಇಲ್ಲವೊ ಗೊತ್ತಿಲ್ಲ. ಯಾವುದೇ ರೀತಿಯ ಅಕ್ರಮ ನಡೆದಿಲ್ಲ. ನಾನು ಅವರ ಬಳಿ ಮಾತನಾಡುತ್ತೇನೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದರು.

ತುಂಡು ಗುತ್ತಿಗೆ ಕಾಮಗಾರಿ ನೀಡಬೇಡಿ

ಅತ್ಯುತ್ತಮ ದರ್ಜೆಯಲ್ಲಿ ಕರಿಯಪ್ಪ ಕೃಷಿ ಕಾಲೇಜು ನಿರ್ಮಾಣ ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. ತುಂಡು ಗುತ್ತಿಗೆ ನೀಡಿ ಕಾಮಗಾರಿ ಮಾಡಲು ಹೋಗಬೇಡಿ, ಈಗಲೇ 500 ವಿದ್ಯಾರ್ಥಿ ಸಾಮರ್ಥ್ಯದ ಹಾಸ್ಟಲ್, ಆಡಳಿತ ಭವನ ನಿರ್ಮಾಣವೂ ಆಗಲಿ ಎಂದು ಸಲಹೆ ನೀಡುತ್ತೇನೆ. ಸಾಲ ಸೌಲಭ್ಯ ದೊರೆಯಲಿಲ್ಲ ಎಂದರೆ ನಾನು ಸಾಲ ಕೊಡಿಸುತ್ತೇನೆ. ಈಗಾಗಲೇ ನಾನು ಕಟ್ಟಡ ವಾಸ್ತುಶಿಲ್ಪಿಗಳ ಬಳಿ ಕಟ್ಟಡ ವಿನ್ಯಾಸ ಹೇಗಿರಬೇಕು ಎಂದು ಚರ್ಚೆ ನಡೆಸಿ ಬದಲಾವಣೆ ಸೂಚಿಸಿದ್ದೇನೆ ಎಂದು ಡಿಸಿಎಂ ಡಿಕೆಶಿ ಶಿವಕುಮಾರ್ ಅವರು ಹೇಳಿದರು.

6ನೇ ಬಾರಿ ಚಿತ್ರಕಲಾ ಪರಿಷತ್‌ಗೆ ಶಂಕರ್ ಅವಿರೋಧ ಆಯ್ಕೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷರಾಗಿ ಬಿ.ಎಲ್.ಶಂಕರ್ ಅವಿರೋಧವಾಗಿ ಆರನೇ ಬಾರಿಗೆ ಆಯ್ಕೆಯಾ ಗಿದ್ದಾರೆ. ಬಿ.ಎಲ್. ಶಂಕರ್ ಅವರೊಂದಿಗೆ 14 ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಮೂರು ವರ್ಷಗಳ ಅವಧಿಯ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಹುದ್ದೆಗಳ ಚುನಾವಣೆ ಮುಂದಿನ ಭಾನುವಾರ ನಿಗದಿಯಾಗಿತ್ತು. ಆದರೆ ಆದರೆ, ಪ್ರತಿಸ್ಪರ್ಧಿಗಳು ಸ್ಪರ್ಧೆಯಿಂದ ಹಿಂದೆ ಸರಿದ ಕಾರಣ ಆಯ್ಕೆಯಾಗಬೇಕಾದ ಸ್ಥಾನಗಳಿಗೆ ಸಮಾನವಾಗಿ ಅಭ್ಯರ್ಥಿಗಳು ಉಳಿದಿರುವುದರಿಂದ 15 ಮಂದಿ ಚಿತ್ರಕಲಾ ಪರಿಷತ್‌ಗೆ ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳೆಂದು ಘೋಷಿಸಲಾಗಿದೆ. ಚಿತ್ರಕಲಾ ಪರಿಷತ್ ಅಧ್ಯಕ್ಷರಾಗಿ ಮತ್ತೆ ಡಾ.ಬಿ.ಎಲ್.ಶಂಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪ್ರಭಾಕರ್ ಟಿ. ಹಾಗೂ ಪ್ರೊ.ಅಪ್ಪಾಜಯ್ಯ ಕೆ.ಎಸ್ ಉಪಾಧ್ಯಕ್ಷರುಗಳಾಗಿ, ಡಾ.ಎನ್. ಲಕ್ಷ್ಮೀಪತಿ ಬಾಬು ಖಜಾಂಚಿಯಾಗಿ ಹಾಗೂ ಎಸ್.ಎನ್.ಶಶಿಧರ್ ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆಗೊಂಡಿದ್ದಾರೆ. ಕಾರ್ಯದರ್ಶಿಗಳಾಗಿ ತಾರಕೇಶ್ವರಿ ಟಿ.ವಿ., ಸುಬ್ರಮಣ್ಯ ಕುಕ್ಕೆ, ಬಿ.ಎಲ್.ಶ್ರೀನಿವಾಸ ಹಾಗೂ ಟಿ.ಚಂದ್ರಶೇಖರ್ ಜಂಟಿ ಆಯ್ಕೆಯಾಗಿದ್ದಾರೆ. ಬಿ.ವೈ.ವಿನೋದ, ರಮಾ ಶರ್ಮಾ, ಅಮ್ರಿತ ವಿಮಲನಾಥನ್.ಎಸ್., ಡಾ.ಲಕ್ಷ್ಮಿಪತಿ ಜಿ., ಬಾಳಾಸಾಬ ಸದಲಗೆ ಮತ್ತು ಸಿ.ಪಿ.ಉಷಾರಾಣಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿದ್ದಾರೆ.

ಎಲ್ಲಿದೆ ಮೇಕ್ ಇಂಡಿಯಾ | ಪ್ರಧಾನಿಗೆ ಸಂತೋಷ್ ಲಾಡ್ ಪ್ರಶ್ನೆ

200 ಮಿಲಿಯನ್ ಡಾಲರ್ ರಫ್ತು ವ್ಯಾಪಾರ ಕುಸಿತ

ಹುಬ್ಬಳ್ಳಿ: ಪ್ರಧಾನಿ ನರೇಂದ್ರ ಮೋದಿ ಅವರು ಮೇಕ್ ಇನ್ ಇಂಡಿಯಾ ಬಗ್ಗೆ ಸಾಕಷ್ಟು ಮಾತನಾಡುತ್ತಾರೆ. ಆದರೆ, ಛತ್ರಿಯನ್ನು ಸಹ ನಾವು ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. 200 ಮಿಲಿಯನ್ ಡಾಲರ್ ರಫ್ತು ವ್ಯಾಪಾರ ಕುಸಿದಿದೆ. ಮೇಕ್ ಇನ್ ಇಂಡಿಯಾ ಎಲ್ಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಪ್ರಶ್ನಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರಿಗೆ ಸುಳ್ಳು ಭರವಸೆ ನೀಡಿ, ದಿಕ್ಕು ತಪ್ಪಿಸುವುದೇ ಕೇಂದ್ರದ ಕೆಲಸವಾಗಿದೆ. ವಿದೇಶದಲ್ಲಿರುವ ಕಪ್ಪು ಹಣ ತರುತ್ತೇವೆ, ಲಕ್ಷಾಂತರ ಮಂದಿಗೆ ಉದ್ಯೋಗ ನೀಡುತ್ತೇವೆ ಎಂದಿದ್ದರು. ಈಗ ಅವು ಏನಾಯ್ತು? ಯಾವ ಮಾನದಂಡದ ಆಧಾರದ ಮೇಲೆ ಅವರು ದೇಶದಲ್ಲಿ ಭ್ರಷ್ಟಾಚಾರ ಇಲ್ಲ ಎನ್ನುತ್ತಿದ್ದಾರೆ? ಭಾರತವನ್ನು ವಿಶ್ವಗುರು ಎಂದು ಬಿಂಬಿಸಲಾಗುತ್ತಿದೆ. ಆದರೆ, ಅಕ್ಕಪಕ್ಕದ ಯಾವ ದೇಶದ ಜತೆ ನಾವು ಚೆನ್ನಾಗಿದೆ ಎಂದು ಪ್ರಶ್ನಿಸಿದರು.

ಅದಾನಿ ಬಂದರಿನಲ್ಲಿ 21 ಸಾವಿರ ಕೋಟಿ ಮೌಲ್ಯದ ಡ್ರಗ್ಸ್ ಸಿಕ್ಕಿದೆ. ಅದರ ಹಣವನ್ನು ಪೆಹಲ್ಗಾಮ್ ದಾಳಿಗೆ ಬಳಕೆಯಾಗಿದೆ ಎಂದು ಅವರದ್ದೇ ಎನ್‌ಐಎ ಸುಪ್ರೀಮ್ ಕೋರ್ಟ್‌ಗೆ ವರದಿ ನೀಡಿದೆ. ಈ ಕುರಿತು ಕೇಂದ್ರ ಸರಕಾರ ದೇಶದ ಜನತೆಗೆ ಏನೆಂದು ಮಾಹಿತಿ ನೀಡಬೇಕು ಎಂದು ಆಗ್ರಹಿಸಿದರು. ಬೆಟ್ಟಿಂಗ್ ಆ್ಯಪ್‌ನಲ್ಲಿ ದಂಧೆ ನಡೆಸುವವ ರಿಂದ ಹಾಗೂ ಗೋ ಮಾಂಸ ರಫ್ತು ಮಾಡುವವರಿಂದ ಬಿಜೆಪಿ ಚಂದಾ ಎತ್ತಿ ಪಕ್ಷದ ಕಚೇರಿ ನಿರ್ಮಾಣ ಮಾಡುತ್ತಿದೆ ಎಂದು ಸಚಿವ ಲಾಡ್ ಆರೋಪಿಸಿದರು.

ಹಾವೇರಿ ಜಿಲ್ಲಾಸ್ಪತ್ರೆ ಸಮೀಪದಲ್ಲಿ ಪತ್ತೆ | ಸ್ಥಳಕ್ಕೆ ಆರೋಗ್ಯ ಅಧಿಕಾರಿಗಳು ಭೇಟಿ

ಅವಧಿ ಮೀರಿದ ರಾಶಿ ರಾಶಿ ಮಾತ್ರೆ ಪತ್ತೆ

ಹಾವೇರಿ: ಜಿಲ್ಲಾಸ್ಪತ್ರೆಯ ಕೂಗಳತೆ ದೂರದಲ್ಲಿ ಅವಧಿ ಮೀರಿದ ರಾಶಿ ರಾಶಿ ಮಾತ್ರೆಗಳು ಪತ್ತೆಯಾಗಿವೆ. ಹಾವೇರಿಯಿಂದ ಕನಕಾಪುರ ಗ್ರಾಮಕ್ಕೆ ಹೋಗುವ ರಸ್ತೆ ಬದಿ ಲಕ್ಷಾಂತರ ರೂಪಾಯಿ ಮೌಲ್ಯದ ಮಾತ್ರೆಗಳು ಬಿದ್ದಿವೆ. ಪಾಲಿಕ್ ಆ್ಯಸಿಡ್ ಕಂಟೆಂಟ್ ಇರುವ ಮಾತ್ರೆಗಳನ್ನು ಇಲ್ಲಿ ಬಿಸಾಡಲಾಗಿದೆ. ಈ ಮಾತ್ರೆಗಳನ್ನು ನೋಡಿ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಮಾತ್ರೆಗಳನ್ನು ಜಾನುವಾರುಗಳು ಅಥವಾ ಇತರೆ ಪ್ರಾಣಿಗಳು ತಿಂದರೆ ಅವುಗಳ ಗತಿ ಏನು? ಸರಕಾರಿ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ಔಷಧಿ ನೀಡದೆ, ಹೊರಗೆ ತೆಗೆದುಕೊಳ್ಳುವಂತೆ ಬರೆದು ಕೊಡುತ್ತಾರೆ. ಇಲ್ಲಿ ನೋಡಿದರೆ ಲಕ್ಷಾಂತರ ರೂಪಾಯಿ ಮೌಲ್ಯದ ಮಾತ್ರೆಗಳನ್ನು ಬಿಸಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಸ್ಥಳೀಯರು, ಇದಕ್ಕೆ ಸಂಬಂಧಪಟ್ಟವರನ್ನು ಅಮಾನತು ಮಾಡುವಂತೆ ಒತ್ತಾಯಿಸಿದರು.

ವಿಷಯ ತಿಳಿಯುತ್ತಿದ್ದಂತೆ ಹಾವೇರಿ ಜಿಲ್ಲಾ ಔಷಧಿ ನಿಯಂತ್ರಣಾಧಿಕಾರಿ ಸಂಗಣ್ಣ ಸಿಳ್ಳಿ, ಹಾವೇರಿ ತಾಲೂಕು ವೈದ್ಯಾಧಿಕಾರಿ ಪ್ರಭಾಕರ ಕುಂದಾಪುರ ಸ್ಥಳಕ್ಕೆ ಬಂದು ಮಾತ್ರೆಗಳನ್ನು ಪರಿಶೀಲಿಸಿದರು. ಈ ಮಾತ್ರೆಗಳು 2010ರಲ್ಲಿಯೇ ಅವಧಿ ಮೀರಿವೆ. ಇವುಗಳು ಎಲ್ಲಿಯವು?, ಯಾಕೆ ಉಪಯೋಗಿಸದೆ ಬಿಸಾಡಿದ್ದಾರೆ ಎಂಬುದನ್ನು ಪರಿಶೀಲಿಸಿ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವುದಾಗಿ ಟಿಎಚ್‌ಒ ಪ್ರಭಾ ಕರ ಕುಂದಾಪುರ ಭರವಸೆ ನೀಡಿದರು.

> **ಬಯೋಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್‌ನಂತಹ ಏಜೆನ್ಸಿಗಳು ಇರುತ್ತವೆ. ಅವರಿಗೆ ಅವಧಿ ಮೀರಿದ ಔಷಧಿಗಳನ್ನು ಹಸ್ತಾಂತರಿಸಬೇಕು. ಯಾರ್ಯಾರು ಪರವಾನಗಿ ಹೊಂದಿದ್ದಾರೋ ಅವರ ಜವಾಬ್ದಾರಿ ಇದು. ಈ ಘಟನೆಗೆ ಸಂಬಂಧಿಸಿದವರನ್ನು ಕರೆಸಿ ಮಾಹಿತಿ ಪಡೆದ ಮೇಲೆ ವರದಿ ನೀಡಲು ಸಾಧ್ಯವಿದೆ.**
>
> -ಸಂಗಣ್ಣ ಸಿಳ್ಳಿ, ಜಿಲ್ಲಾ ಔಷಧಿ ನಿಯಂತ್ರಣಾಧಿಕಾರಿ

ಹೃದಯಾಘಾತಕ್ಕೆ ಸಮಾಜ ಸೇವಕ ಸಾವು

ಹಾಸನ: ಕೋವಿಡ್ ವೇಳೆ 10ಕ್ಕೂ ಹೆಚ್ಚು ಮಂದಿಯ ಶವಸಂಸ್ಕಾರ ಮಾಡಿದ್ದ ಸಮಾಜ ಸೇವಕ ನಿಶಾದ್ ಅಹಮ್ಮದ್ (35) ಹೃದ ಯಾಘಾತದಿಂದ ಮೃತಪಟ್ಟಿದ್ದಾರೆ. ನಿಶಾದ್, ಬೇಲೂರು ಪಟ್ಟಣದಲ್ಲಿ ಟೀ ಕ್ಯಾಂಟೀನ್ ನಡೆಸುತ್ತಿದ್ದರು. ಶನಿವಾರ ರಾತ್ರಿ ಅವರಿಗೆ ವಾಂತಿಯಾಗಿದೆ. ಕೂಡಲೇ ಹಾಸನದ ಆಸ್ಪತ್ರೆಗೆ ಹೋಗಿ ಬಂದಿದ್ದರು. ಬಳಿಕ ಮನೆಯಲ್ಲಿ ಮಾತ್ರೆ ನುಂಗಿ ಮಲಗಿದ್ದ ವೇಳೆ ಹೃದಯಾಘಾತವಾಗಿ ಮೃತಪಟ್ಟಿದ್ದಾರೆ. ನಿಶಾದ್ ಹಲವು ಅನಾಥ ಶವಗಳಿಗೆ ಮುಕ್ತಿ ನೀಡಿದ್ದಾರೆ. ಜತೆಗೆ ಅಪಘಾತ ಸಂದರ್ಭದಲ್ಲಿ ತುರ್ತಾಗಿ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದರು. ಅವರ ಸಾವಿಗೆ ಸಾರ್ವಜನಿಕರು ಕಂಬನಿ ಮಿಡಿದಿದ್ದಾರೆ.

35 ವರ್ಷದ ಚೇತನ್ ಸಾವು

35 ವರ್ಷದ ಚೇತನ್ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಹಾಸನ ನಗರದ ಸತ್ಯಮಂಗಲ ಬಡಾವಣೆಯಲ್ಲಿ ನಡೆದಿದೆ. ಮೂಲತಃ ಕಿಕ್ಕೇರಿ ಮೂಲದವರಾದ ಚೇತನ್ ನಗರದ ಹಳೇ ಬಸ್ ನಿಲ್ದಾಣದ ಸಮೀಪ ಮೊಬೈಲ್ ಅಂಗಡಿ ಇಟ್ಟುಕೊಂಡಿದ್ದರು. ಸತ್ಯಮಂಗಲ ಬಡಾವಣೆಯಲ್ಲಿ ಕುಟುಂಬದ ಜತೆ ವಾಸವಿದ್ದರು. ರಾತ್ರಿ ಅಂಗಡಿ ಬಾಗಿಲು ಹಾಕಿ ಕೊಂಡು ಮನೆಗೆ ಚೇತನ್ ಮನೆಗೆ ಬಂದಿದ್ದರು. ಈ ವೇಳೆ ಅವರ ಪತ್ನಿ ಊಟಕ್ಕೆ ಕರೆದಿದ್ದು, ಊಟಕ್ಕೆ ಕುಳಿತು ಕೊಳ್ಳುವಾಗ ದಿಢೀರ್ ಎದೆನೋವು ಕಾಣಿಸಿಕೊಂಡಿದೆ. ಎದೆ ನೋಯುತ್ತಿದೆ ಎಂದು ಪತ್ನಿಗೆ ಹೇಳಿ, ಮೇಲೆ ಎದ್ದೇಳುವಾಗಲೇ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಅಷ್ಟರಲ್ಲಿ ಚೇತನ್ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಯುವಕರಿಗೆ ಹೆಚ್ಚು ಹೃದಯಾಘಾತ

ಕಳೆದ ಕೆಲ ದಿನಗಳಿಂದ ಹಾಸನ ಜಿಲ್ಲೆಯಲ್ಲಿ ಹೆಚ್ಚಾಗಿ ಹೃದಯಾಘಾತಕ್ಕೆ ಯುವಕರೇ ಮೃತಪ ಡುತ್ತಿದ್ದು, ಜಿಲ್ಲೆಯ ಜನರಲ್ಲಿ ಆತಂಕ ಮೂಡಿಸಿದೆ. ಭಾನುವಾರವೂ ಇಬ್ಬರು ಹೃದಯಾಘಾತ ದಿಂದ ಸಾವನ್ನದ್ದಾರೆ. ಬದಲಾದ ಜೀವನ ಶೈಲಿ, ಜಂಕ್‌ಫುಡ್‌ನಿಂದ ಕೊಬ್ಬು ಹೆಚ್ಚಾಗುತ್ತಿದ್ದು, ಹೃದಯಾಘಾತಕ್ಕೆ ಕಾರಣ ಆಗುತ್ತಿದೆ ಎನ್ನುವುದು ವೈದ್ಯರ ಅಭಿಪ್ರಾಯ ಆಗಿದೆ. ಕೋವೀಡ್ ನಂತರ ಯುವಕರಲ್ಲಿ ಹೆಚ್ಚಾಗಿ ಹೃದಯಾಘಾತ ಕಾಣಿಸಿಕೊಳ್ಳುತ್ತಿರುವುದು ಆತಂಕ ಹುಟ್ಟಿಸಿದೆ.

ಎಚ್.ಕೆ.ಪಾಟೀಲ್ ಸಿಎಂಗೆ ಪತ್ರ ಬರೆದಿರುವುದರಲ್ಲಿ ತಪ್ಪಿಲ್ಲ



ಹಾವೇರಿ: ಸಚಿವ ಎಚ್.ಕೆ.ಪಾಟೀಲ್ ಸಿಎಂಗೆ ತನಿಖೆ ಮಾಡಿ ಅಂತ ಪತ್ರ ಬರೆಯುವುದರಲ್ಲಿ ತಪ್ಪೇನಿದೆ ಎಂದು ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್ ಪ್ರಶ್ನಿಸಿದ್ದಾರೆ.

ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಹೂಲಿಹಳ್ಳಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಶತ 7 ರಷ್ಟಾದರೂ ಆಗಿದೆಯಲ್ಲ. ಹೆಚ್. ಕೆ. ಪಾಟೀಲ್ ಇನ್ನಷ್ಟು ವೇಗ ಪಡೆಯಲಿ ಎಂದಿದ್ದಾರೆ. ತೃಪ್ತಿ ತಂದಿಲ್ಲ. ಆದರೆ ಅವರು ನೆನಪು ಮಾಡಿದ ನಂತರ ಮತ್ತಷ್ಟು ವೇಗ ಪಡೆಯುತ್ತೆ ಎಂದು ತಿಳಿಸಿದರು.

ಇದೇ ವೇಳೆ ಬಿ. ಆರ್. ಪಾಟೀಲ್ ಆಡಿಯೊ ವೈರಲ್ ಬಗ್ಗೆ ಈಗಾಗಲೇ ಪ್ರತಿಕ್ರಿಯೆ ನೀಡಿದ್ದೇನೆ. ಹೆಚ್ಚಿನ ಕ್ರಮ ಏನಾಗಬೇಕು ಅದನ್ನು ಸಿಎಂ ಸಿದ್ದರಾಮಯ್ಯ ತೆಗೆದುಕೊಳ್ಳುತ್ತಾರೆ. ರಾಣೆಬೆನ್ನೂರು ತಾಲೂಕಲ್ಲಿ ಕಳಪೆ ಬಿತ್ತನೆ ಬೀಜ ಮಾರಾಟವಿದೆ. ಈಗಾಗಲೇ ನಾಲ್ಕು ಅಂಗಡಿಗಳ ಮೇಲೆ ಕ್ರಮ ಕೈಗೊಂಡಿದ್ದೇವೆ. ಅವುಗಳ ಮೇಲೆ ಕ್ರಿಮಿನಲ್ ಕೇಸ್ ಬುಕ್ ಮಾಡಿದ್ದೇವೆ ಎಂದು ಸಚಿವರು ಹೇಳಿದರು.

ರಾಣೆಬೆನ್ನೂರು ಬೀಜೋತ್ಪಾದನೆಯ ಕೇಂದ್ರವಾಗಿದ್ದು, ಇದೀಗ ಕಳಪೆ ಬಿತ್ತನೆ ಬೀಜ ಕೇಂದ್ರವಾಗುತ್ತಿದೆ ಎಂಬ ಆರೋಪವನ್ನ ಸಚಿವ ಶಿವಾನಂದ ಪಾಟೀಲ್ ತಳ್ಳಿಹಾಕಿದರು. ಈ ಕುರಿತಂತೆ ಜಿಲ್ಲಾಧಿಕಾರಿಗಳಿಗೆ, ಕೃಷಿ ಅಧಿಕಾರಿಗೆ ಕಟ್ಟಾಜ್ಞೆ ಮಾಡಿದ್ದೇನೆ. ಹಾವೇರಿ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಿಸಿದ ಸೋಯಾಬಿನ್ ಕಳಪೆಯಾಗಿವೆ. ಈ ಕುರಿತಂತೆ ತನಿಖೆ ಮಾಡಿ ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದರು.

ರೈಲು ಕೆಟ್ಟು ನಿಂತು ಪ್ರಯಾಣಿಕರು ಪರದಾಟ

ಶಿವಮೊಗ್ಗ: ಮೈಸೂರು-ಶಿವಮೊಗ್ಗ ರೈಲು ಮಾರ್ಗಮಧ್ಯೆ ಕೆಟ್ಟು ಅರ್ಧಗಂಟೆಗೂ ಹೆಚ್ಚುಕಾಲ ಭದ್ರಾವತಿ ಬಳಿ ಭಾನುವಾರ ರಾತ್ರಿ ನಿಂತಿದೆ.

ಇಂಜಿನ್ ಫೇಲುರ್ ಆಗಿದ ಕಾರಣ ರೈಲು ನಿಂತಿತ್ತು ಎನ್ನಲಾಗಿದೆ. ಮಧ್ಯಾಹ್ನ ಎರಡು ಗಂಟೆಗೆ ಹೊರಟಿದ್ದ ರೈಲು, ಎರಡು ಬಾರಿ ಮಾರ್ಗ ಮಧ್ಯೆ ಕೆಟ್ಟು ನಿಂತಿತ್ತು. ಆ ನಂತರ ಭದ್ರಾವತಿ ರೈಲು ನಿಲ್ದಾಣದಿಂದ ಹೊರಟು ಮತ್ತೊಮ್ಮೆ ಕೆಟ್ಟು ನಿಂತಿದೆ. ಸಿಂಗಲ್ ಟ್ರಾಕ್ ಆಗಿರುವುದರಿಂದ ಮುಂಬರುವ ಹಲವು ರೈಲುಗಳಿಗೂ ತೊಂದರೆ ಉಂಟಾಗಿದೆ. ಸ್ಥಳಕ್ಕೆ ರೈಲ್ವೆ ಎಂಜಿಯರ್‌ಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಯಾಣಿಕರು ಪರದಾಟ ನಡೆಸಿದರು.

ಕೆಆರ್‌ಎಸ್ ಭರ್ತಿಗೆ ಇನ್ನೂ 5 ಅಡಿ ಬಾಕಿ

ಮಂಡ್ಯ: ಪ್ರತಿ ಮಳೆಗಾಲದಲ್ಲಿ ಜುಲೈ-ಆಗಸ್ಟ್‌ನಲ್ಲಿ ಭರ್ತಿಯಾಗುತ್ತಿದ್ದ ಕೆಆರ್‌ಎಸ್ ಅಣೆಕಟ್ಟು ಈ ಬಾರಿ ಜೂನ್‌ನಲ್ಲೇ ತುಂಬಿತ್ತಿರುವುದು ದಾಖಲೆ. ಸದ್ಯ ಡ್ಯಾಂನಲ್ಲಿ 119.40 ಅಡಿ ನೀರಿದ್ದು, ಸಂಪೂರ್ಣ ಭರ್ತಿಗೆ ಕೇವಲ 5 ಅಡಿ ಮಾತ್ರ ಬಾಕಿಯಿದೆ.

ಡ್ಯಾಮ್ ಇತಿಹಾಸದಲ್ಲೇ ಮೊದಲ ಬಾರಿಗೆ ಜೂನ್‌ನಲ್ಲಿ ಇಷ್ಟು ಪ್ರಮಾಣದ ನೀರು ಸಂಗ್ರಹವಾಗಿದೆ. ಜಲಾಶಯದ ನಿರ್ಮಾಣವಾದಾಗಿನಿಂದ ಇದೇ ಮೊದಲ ಬಾರಿಗೆ ಜೂನ್‌ನಲ್ಲಿ ಇಷ್ಟೊಂದು ನೀರು ಸಂಗ್ರಹ ಆಗಿರುವುದು. ಜುಲೈ ಅಂತ್ಯ ಅಥವಾ ಆಗಸ್ಟ್‌ನಲ್ಲಿ ಡ್ಯಾಂ ಭರ್ತಿಯಾಗುತ್ತಿತ್ತು. ಆದರೆ ಈ ಬಾರಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾದ ಹಿನ್ನೆಲೆ ಕೆಆರ್‌ಎಸ್ ಡ್ಯಾಂ 119.40 ಅಡಿ ಭರ್ತಿಯಾಗಿದೆ.

124.80 ಅಡಿ ಡ್ಯಾಮ್ ಗರಿಷ್ಠ ಮಟ್ಟ ಇದ್ದು, ಸಂಪೂರ್ಣ ಭರ್ತಿಗೆ 5 ಅಡಿ ಮಾತ್ರ ಬಾಕಿಯಿದೆ. ಸದ್ಯ 13,359 ಕ್ಯುಸೆಕ್ ಒಳಹರಿವಿದ್ದು, 42.291 ಟಿಎಂಸಿ ನೀರು ಸಂಗ್ರಹವಾಗಿದೆ.

ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರ | ಸರಕಾರದ ವಿರುದ್ಧ ಅಶೋಕ್ ಕಿಡಿ

ಹೈ ಕಪ್ಪಕಾಣಿಕೆಗಾಗಿ ರಾಜ್ಯ ಲೂಟಿ

ಮೈಸೂರು: ಹೈಕಮಾಂಡ್‌ಗೆ ಕಪ್ಪ ಕಾಣಿಕೆ ಸಲ್ಲಿಸಲು ರಾಜ್ಯ ಸರಕಾರ ಲೂಟಿ ಮಾಡುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ.

ವಸತಿ ಹಂಚಿಕೆಯಲ್ಲಿ ಭ್ರಷ್ಟಾಚಾರದ ಕುರಿತು ಕಾಂಗ್ರೆಸ್ ಶಾಸಕನ ಆಡಿಯೋ ವೈರಲ್ ವಿಚಾರವಾಗಿ ಮೈಸೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೈಕಮಾಂಡ್‌ಗೆ ಕಪ್ಪ ಕಾಣಿಕೆ ಸಲ್ಲಿಸಲು ರಾಜ್ಯ ಸರಕಾರ ಲೂಟಿ ಮಾಡುತ್ತಿದೆ. ಇದು 60 % ಸರಕಾರ. ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರ ತಾಂಡವ ಆಡುತ್ತಿದೆ ಎಂದು ದೂರಿದರು.

ಬಡವರ ಮನೆ ಹಂಚಿಕೆಯಲ್ಲೂ ಹಣ ವಸೂಲಿ ಮಾಡುತ್ತಿದ್ದಾರೆ. ಶೇ.36 ಹಣವನ್ನು ವಸತಿ ಇಲಾಖೆಯಲ್ಲೂ ಕೇಳುತ್ತಿದ್ದಾರೆ. ಅಬಕಾರಿ ಇಲಾಖೆಯಲ್ಲೂ ಲೂಟಿ ಮಾಡಿದ್ದಾರೆ. ವಾಲ್ಮೀಕಿ ನಿಗಮ ಹಗರಣ, ಮುಡಾ ಹಗರಣದಲ್ಲೂ ಲೂಟಿ ಆಯಿತು. ಮುಖ್ಯಮಂತ್ರಿ, ಎಲ್ಲಾ ಸಚಿವರು ಲೂಟಿ ಮಾಡುವ ಕೆಲಸಕ್ಕೆ ಇಳಿದಿದ್ದಾರೆ. ಹೈಕಮಾಂಡ್‌ಗೆ ಕಪ್ಪ ಕಾಣಿಕೆ ನೀಡಲು ನಾ ಮುಂದು, ತಾ ಮುಂದು ಎಂದು ನಿಂತಿದ್ದಾರೆ ಎಂದು ಕಿಡಿಕಾರಿದರು.

> **ಹೈಕಮಾಂಡ್‌ಗೆ ಯಾರು ಜಾಸ್ತಿ ಕಪ್ಪಕಾಣಿಕೆ ನೀಡುತ್ತಾರೋ ಅವರಿಗೆ ಬೆಲೆ ಜಾಸ್ತಿ ಇದೆ. ಬಿಹಾರ್ ಸೇರಿದಂತೆ ಬೇರೆ ರಾಜ್ಯಗಳ ಚುನಾವಣೆಗಾಗಿ ಕರ್ನಾಟಕದಿಂದ ಹಣ ಲೂಟಿ ಮಾಡಲಾಗುತ್ತಿದೆ. ಕಾಂಗ್ರೆಸ್ ಹೈಕಮಾಂಡ್‌ಗೆ ಕಪ್ಪ ಕಾಣಿಕೆ ತೆಗೆದುಕೊಳ್ಳಲು ಇರುವುದೊಂದೇ ರಾಜ್ಯ ಕರ್ನಾಟಕ**
>
> -ಆರ್,ಅಶೋಕ್, ಪ್ರತಿಪಕ್ಷದ ನಾಯಕ

ಆನೆಗೊಂದಿಯಲ್ಲಿ ಪೊಲೀಸ್ ಠಾಣೆ ತೆರೆಯಲು ಚಿಂತನೆ: ಗೃಹ ಸಚಿವ ಪರಮೇಶ್ವರ್

ಶೀಘ್ರದಲ್ಲೇ 8 ಸಾವಿರ ಪೊಲೀಸ್ ನೇಮಕ

ಕೊಪ್ಪಳ: ಪಿಎಸ್‌ಐ ನೇಮಕಾತಿ ಹಗರಣದ ಬಳಿಕ 5 ವರ್ಷಗಳ ಕಾಲ ಯಾವುದೇ ಪೊಲೀಸ್ ನೇಮಕಾತಿ ಆಗಿಲ್ಲ. ಒಂದು ಸಾವಿರ ಪಿಎಸ್‌ಐ ಹುದ್ದೆಗಳು ಖಾಲಿ ಇವೆ. ನಮ್ಮ ಸರಕಾರದಿಂದ ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸುವುದಾಗಿ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ 500 ಪಿಎಸ್‌ಐ ಹುದ್ದೆಗಳಿಗೆ ನೇಮಕಾತಿ ನಡೆದಿದ್ದು, ಅವರೆಲ್ಲ ತರಬೇತಿ ಪಡೆಯುತ್ತಿದ್ದಾರೆ. ರಾಜ್ಯದಲ್ಲಿ 8 ಸಾವಿರ ಕಾನ್‌ಸ್ಟೇಬಲ್ ಹುದ್ದೆಗಳು ಖಾಲಿ ಇವೆ. ಆದ್ಯತೆಯ ಮೇರೆಗೆ ಭರ್ತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಹೆಚ್ಚುವರಿ ಟ್ರಾಫಿಕ್ ಪೊಲೀಸ್ ಸ್ಟೇಷನ್ ಸೇರಿದಂತೆ ಇನ್ನಿತರ ಕಾಯರ್ಚಟುವಟಿಕೆಗಳಿಗೆ ಮುಂದಿನ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗುವುದು ಎಂದರು.

ಡ್ರಗ್ಸ್ ಮುಕ್ತ ಮಾಡಲು ಕ್ರಮ: ಇದೇ ವೇಳೆ ಸುದ್ದಿಗಾರೊಂದಿಗೆ ಮಾತನಾಡಿದ ಅವರು, ಕರ್ನಾಟಕ ಡ್ರಗ್ಸ್ ಮುಕ್ತ ರಾಜ್ಯ ಮಾಡಲು ಹೊರಟಿದ್ದೇವೆ. ಆನೆಗೊಂದಿ ಭಾಗದಲ್ಲಿ ಡ್ರಗ್ಸ್ ತಡೆಯುವುದಕ್ಕೆ ಕ್ರಮ ಕೈಗೊಳ್ಳಲಾಗುವುದು. ಅವಶ್ಯಕತೆಯಿದ್ದರೆ ಅಲ್ಲಿಯೇ ಸ್ಟೇಷನ್ ಮಾಡುತ್ತೇವೆ. ರಾಯರೆಡ್ಡಿಯವರು ಗಂಗಾವತಿ ಕರ್ನಾಟಕ ಹಬ್ ಆಗಿದೆ ಎಂದಿದ್ದಾರೆ. ಅವರ ಸಲಹೆ ಹಾಗೂ ದೂರನ್ನು ತಡೆಯಲು ಕ್ರಮ ಕೈಗೊಳ್ಳಲಾಗುವುದು. ಪೊಲೀಸರಿಗೆ ಮುಕ್ತವಾಗಿ ಕೆಲಸ ಮಾಡಲು ಹೇಳಿದ್ದೇವೆ ಎಂದು ಹೇಳಿದರು.

ಮುನಿರಾಬಾದ್ ಬಳಿಯ ತುಂಗಭದ್ರಾ ಡ್ಯಾಮ್‌ಗೆ ಭೇಟಿ ನೀಡಿದ ಸಚಿವ ಪರಮೇಶ್ವರ್ ಕ್ರಸ್ಟ್ ಗೇಟ್ 19 ವೀಕ್ಷಣೆ ಮಾಡಿದರು.

ಕ್ರಸ್ಟ್‌ಗೇಟ್ 19 ವೀಕ್ಷಿಸಿದ ಪರಮೇಶ್ವರ್

ಮುನಿರಾಬಾದ್ ಬಳಿಯಿರುವ ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿದ ಗೃಹ ಸಚಿವ ಡಾ ಜಿ.ಪರಮೇಶ್ವರ್, ಕಳೆದ ವರ್ಷ ಡ್ಯಾಮ್‌ನಿಂದ ಕಳಚಿದ್ದ ಕ್ರಸ್ಟ ಗೇಟ್ 19ನ್ನು ಪರಿಶೀಲನೆ ನಡೆಸಿದರು. ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಜಾಗಕ್ಕೆ ತೆರಳಿ ಪರಿಶೀಲಿಸಿದರು. ಅಳವಡಿಸಲಾಗಿರುವ ಸ್ಟಾಪ್ ಲಾಗ್ ಗೇಟ್‌ನ್ನು ವೀಕ್ಷಣೆ ಮಾಡಿದರು. ಬಳಿಕ ಈ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ರೈತರಿಗೆ ಬೆಳೆ ಬೆಳೆಯಲು ಯಾವುದೇ ಸಮಸ್ಯೆ ಆಗದಂತೆ ಆದಷ್ಟು ಬೇಗ ಶಾಶ್ವತ ಪರಿಹಾರ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಇದೇ ವೇಳೆ ಗೃಹ ಸಚಿವರಿಗೆ ಕೊಪ್ಪಳ ಸಂಸದ ರಾಜಶೇಖರ ಹಿಟ್ನಾಳ್ ಸಾಥ್ ನೀಡಿದರು.

ಬಿ.ಆರ್.ಪಾಟೀಲ್ ದೂರು ಕೊಟ್ಟರೆ ಕ್ರಮ: ಇದೇ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಪರಮೇಶ್ವರ್ ಅವರು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ನನಗೆ ಗೊತ್ತಿಲ್ಲ. ಇನ್ನೂ ಬಿ.ಆರ್ .ಪಾಟೀಲ್ ಲಂಚದ ಆರೋಪ ಆಡಿಯೋ ವಿಚಾರವಾಗಿ ಅವರು ಹೇಳಿರುವುದು ಗಂಭೀರ ಆರೋಪ ಅಲ್ಲ. ಅವರು ಸಂಬಂಧಿಸಿದ ಸಚಿವರೊಂದಿಗೆ ಮಾತನಾಡಲಿ. ಪೊಲೀಸರಿಗೆ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ಮೂರನೇ ಮಹಾಯುದ್ಧದ ಭೀತಿ

ಇಬ್ಬರ ಪೈಕಿ ಯಾರೊಬ್ಬರೂ ಮಣಿಯುತ್ತಿಲ್ಲ, ಅಹಮಿಕೆಯನ್ನು ತಣಿಸಿಕೊಳ್ಳುತ್ತಿಲ್ಲ. ಹೀಗಾಗಿ ಅವರಿಬ್ಬರ ನಡುವಿನ ದ್ವೇಷದ ಬೆಂಕಿ ಅವರನ್ನು ಮಾತ್ರವೇ ಸುಡದೆ, ಮಿಕ್ಕವರಿಗೂ ಹಬ್ಬಿಕೊಳ್ಳುವ ಭಯವನ್ನು ಹುಟ್ಟುಹಾಕಿದೆ. ಇದು ಇಸ್ರೇಲ್ ಮತ್ತು ಇರಾನ್ ನಡುವಿನ ಹಣಾಹಣಿ ತಾರಕಕ್ಕೇರಿರುವ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಪರಿಸ್ಥಿತಿ. ಇದಕ್ಕೆ ಕಾರಣವಾಗಿರುವುದು, ರಣಾಂಗಣಕ್ಕೆ ಅಮೆರಿಕವು ಪ್ರವೇಶಿಸಿರುವ ಬೆಳವಣಿಗೆ. ಇರಾನ್ ದೇಶದ ಮೂರು ಅಣುಸ್ಥಾವರಗಳ ಮೇಲೆ ಅಮೆರಿಕ ವೈಮಾನಿಕ ದಾಳಿಯನ್ನು ನಡೆಸಿದ್ದು ಇದು ಪರಮಾಣು ಯುದ್ಧಕ್ಕೆ ನಾಂದಿ ಹಾಡಬಹುದೇ ಎಂಬ ಭೀತಿಯು ಜಾಗತಿಕ ಸಮುದಾಯದಲ್ಲಿ ಹೆಚ್ಚಲು ಕಾರಣವಾಗಿದೆ. ಇಷ್ಟು ದಿನ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ, ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಹಣಾಹಣಿಯನ್ನು ನೋಡಿ ಕಂಗೆಟ್ಟವರಿಗೆ, ಈ ಬೆಳವಣಿಗೆ ಮತ್ತೊಂದು ಆಘಾತವಾಗಿದೆ ಎನ್ನಲಡ್ಡಿಯಿಲ್ಲ. ಅಣ್ವಸ್ತ್ರ ಕೇಂದ್ರಗಳ ಮೇಲೆಯೇ ಎರಗುವ ಮೂಲಕ ಅಮೆರಿಕವು ಎಚ್ಚರಿಕೆ ನೀಡಿದ್ದರ ಹೊರತಾಗಿಯೂ ಇರಾನ್ ಜಗ್ಗದೆ, ಇಸ್ರೇಲ್ ಮೇಲಿನ ತನ್ನ ದಾಳಿಯನ್ನು ಮತ್ತಷ್ಟು ಮುಂದುವರಿಸಿದೆ. ಇಸ್ರೇಲ್‌ನ ರಾಜಧಾನಿ ಟೆಲ್ ಅವಿವ್, ಹೈಫಾ, ಜೆರುಸಲೇಂ ಸೇರಿದಂತೆ 10ಕ್ಕೂ ಹೆಚ್ಚು ನಗರಗಳ ಮೇಲೆ 30ಕ್ಕೂ ಹೆಚ್ಚಿನ ಖಂಡಾಂತರ ಕ್ಷಿಪಣಿಗಳ ದಾಳಿಯನ್ನು ಇರಾನ್ ನಡೆಸಿದ್ದು, ನಾಗರಿಕರನ್ನು ಸುರಕ್ಷಿತ ಸ್ಥಳಗಳು ಮತ್ತು ಬಂಕರ್‌ಗಳಿಗೆ ಸ್ಥಳಾಂತರಿಸಲಾಗಿದೆ ಎಂಬುದು ಲಭ್ಯಮಾಹಿತಿ. ಕಳೆದ 3-4 ವರ್ಷಗಳಿಂದ ವಿಶ್ವದ ವಿವಿಧ ಭಾಗಗಳಲ್ಲಿ ಇಂಥ ಸಂಘರ್ಷದ ವಾತಾವರಣ ಭುಗಿಲೆದ್ದಿದ್ದರೂ, 'ವಿಶ್ವಸಂಸ್ಥೆ'ಯು ಸೂಕ್ತ ಕ್ರಮಕ್ಕೆ ಅಥವಾ ಪರಸ್ಪರ ಸಮಾಲೋಚನೆಗಳಿಗೆ ಭೂಮಿಕೆಯನ್ನು ಕಲ್ಪಿಸುವ ಗೋಜಿಗೇ ಹೋಗದಿರುವುದರ ಬಗ್ಗೆಯೂ ಸಾಕಷ್ಟು ಟೀಕೆ-ಟಿಪ್ಪಣಿಗಳು ಕೇಳಿಬರುತ್ತಿವೆ. ಒಟ್ಟಿನಲ್ಲಿ, ಯಾರೂ ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿಲ್ಲ. ಎಲ್ಲೆಲ್ಲೂ ಅಹಮಿಕೆಯ ಹೇಷಾರವವೇ. ಇವರ ಗದ್ದಲದಲ್ಲಿ ಶಾಂತಿಪ್ರಿಯರ ಕೂಗು ಅರಣ್ಯರೋದನ ಆಗಿದೆ, ಅಷ್ಟೇ!

ಸೊಂಪಾದಕೀಯ

ಈ ದೇಶ ಗಂಡಸರಿಗಲ್ಲ

ನಮ್ಮ ಸಮಾಜದಲ್ಲಿ ಆಗಾಗ ಕೇಳಿಬರುವ, ಅದರಲ್ಲೂ ಮಹಿಳೆಯರ ವಿಷಯ ಬಂದಾಗೆಲ್ಲ ತೇಲಿಬರುವ ಪದಪುಂಜ ಅಂದ್ರೆ, 'ಇದು ಪುರುಷ ಪ್ರಧಾನ ಸಮಾಜ' ಅನ್ನೋದು. ಆದರೆ ಸಮಾಜದಲ್ಲಿನ ಕೆಲವು ಕಟ್ಟಳೆ, ಕಾನೂನು, ಸವಲತ್ತುಗಳನ್ನು ನೋಡಿದರೆ ಗಂಡಸರಿಗೆ ಅದ್ಯಾವ ಸೀಮೆ ಪ್ರಾಮುಖ್ಯ ಸಿಗುತ್ತಿದೆ ಅನ್ನೋ ಪ್ರಶ್ನೆ ಮೂಡೋದು ಸಹಜ. ವಿಚ್ಛೇದನ ಪ್ರಕರಣಗಳಲ್ಲಂತೂ ಪುರುಷನೇ ನಿಜವಾದ ಶೋಷಿತ. ಸಂಸಾರ ಹದಗೆಟ್ಟಾಗ ಗಂಡ ಹೆಂಡತಿ ಬೇರೆ ಆಗ್ತಾರೆ. ಅದು ಒಂಥರ ಮಾನಸಿಕ ನೋವು. ಆದರೆ ಅದಕ್ಕೆ ಸಮಾಧಾನಕರ ಬಹುಮಾನ ಎಂಬಂತೆ ಮಹಿಳೆಯರಿಗೆ ಜೀವನಾಂಶ ಸಿಗುತ್ತದೆ. ಆದರೆ ಪುರುಷ ಆ ಜೀವನಾಂಶ ಕೊಡಬೇಕಾಗಿರೋದ್ರಿಂದ ಅವನಿಗೆ ಮಾನಸಿಕ ಸಂಕಷ್ಟದ ಜತೆಗೆ ಆರ್ಥಿಕ ಸಂಕಷ್ಟ ಕೂಡಾ ಎದುರಾಗುತ್ತದೆ. ಇನ್ನು ಹೆಂಡತಿಯ ಮಾತು ಕೇಳದಿದ್ದರೆ ಸಾಕು, ಗಂಡನ ಮೇಲೆ ವರದಕ್ಷಿಣೆ ಕೇಸು ಗ್ಯಾರಂಟಿ. ಅಲ್ಲೂ ಗಂಡು ಶೋಷಿತನೇ. ಇದೆಲ್ಲಾ ಸಾಲದು ಎಂಬಂತೆ ಸರಕಾರಗಳಿಂದ ಬರುವ ಸವಲತ್ತುಗಳಲ್ಲೂ ಮಹಿಳೆಯರಿಗೇ ಆದ್ಯತೆ. ನಮ್ಮ ಕಾಂಗ್ರೆಸ್ ಸರಕಾರವಂತೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಗೃಹಲಕ್ಷ್ಮಿ ಯೋಜನೆ ಅಡಿಯಲ್ಲಿ ಹಣ ಎನ್ನುತ್ತಾ ಗಂಡಸರನ್ನು ಮರೆತೇಬಿಟ್ಟಿದೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಪಿಂಚಣಿ ಹಣದಲ್ಲೂ ಪುರುಷರನ್ನು ಕಡೆಗಣಿಸಲಾಗುತ್ತಿದೆ. ಗಂಡನಿಗೆ ಪಿಂಚಣಿ ಬರುತ್ತಿದ್ದು ಆತ ನಿಧನ ಹೊಂದಿದರೆ ಆ ಹಣ ಹೆಂಡತಿಗೆ ಸೇರುತ್ತದೆ. ಹಾಗೆಯೇ, ಹೆಂಡತಿಗೆ ಪಿಂಚಣಿ ಹಣ ಬರುತ್ತಿದ್ದರೆ ಅದು ಗಂಡನಿಗೆ ಇಷ್ಟು ದಿನ ಸೇರುತ್ತಿತ್ತು. ಆದರೆ ಈಗ ಮಹಿಳೆಯರ ಪಿಂಚಣಿ ಹಣವನ್ನು ಗಂಡನಿಗೆ ಕೊಡೋದರ ಬದಲು ಅದನ್ನು ಮಕ್ಕಳಿಗೆ ಕೊಡಬೇಕು ಅಂತ ಹೊಸ ಕಾನೂನು ಬರ್ತಾ ಇದೆಯಂತೆ. ಹಾಗಾಗಿ ಪಾಪ ಇಲ್ಲೂ ಪಾಪಿ ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾನೆ. ಇದನ್ನೆಲ್ಲಾ ನೋಡಿದ ಮೇಲೆ 'ಈ ದೇಶ ಗಂಡಸರಿಗಲ್ಲ ಬಿಡಿ' ಅನ್ನೋ 'ಎದ್ದೇಳು ಮಂಜುನಾಥ' ಶೈಲಿಯಲ್ಲಿ ಗಂಡಸರು ನಿಟ್ಟುಸಿರುಬಿಡುತ್ತಿದ್ದಾರೆ. ಒಟ್ಟಿನಲ್ಲಿ ದುಡಿದು, ಕಡಿದು ಗುಡ್ಡೆ ಹಾಕಿ ಸಂಸಾರವನ್ನು ಸಾಕೋ ಜವಾಬ್ದಾರಿ ಮಾತ್ರ ಪುರುಷನ ಪಾಲಿಗೆ. ಆದರೆ ಸವಲತ್ತು ಮತ್ತು ಸೌಕರ್ಯಗಳ ವಿಷಯದಲ್ಲಿ ಮಾತ್ರ ಗಂಡಸು ಅಕ್ಷರಶಃ ಪರದೇಸಿ ಅನ್ನಿಸಿದರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ವಿಮಾನ ಮತ್ತು ಬರ್ಡ್ ಹಿಟ್

ವಿಮಾನಗಳಿಗೆ ಹಕ್ಕಿಗಳು ಅಪ್ಪಳಿಸುತ್ತವೆಯಾ? ಒಂದು ವೇಳೆ ಹಕ್ಕಿಗಳು ಅಪ್ಪಳಿಸಿದರೆ ವಿಮಾನಗಳು ಉರುಳುತ್ತವಾ? ಹಕ್ಕಿಗಳು ವಿಮಾನಗಳ ವೈರಿಗಳಾ? ಎಂದು ಕೇಳುವವರಿದ್ದಾರೆ. ನಿಜ, ಹಕ್ಕಿಗಳು ಅಪ್ಪಳಿಸಿದರೆ ವಿಮಾನಗಳು ಅಪಘಾತಕ್ಕೀಡಾಗುತ್ತವೆ. ಹಕ್ಕಿಗಳು ವಿಮಾನಗಳ ವೈರಿಗಳೇ. ಒಮ್ಮೆ ವಿಮಾನ ಟೇಕಾಫ್ ಆಗಿ, ಸುಮಾರು ಐನೂರು ಮೀಟರ್ ಮೇಲಕ್ಕೆ ಹೋಗುವವರೆಗೆ, ಹಕ್ಕಿಗಳು ಅಪ್ಪಳಿಸುವ ಅಪಾಯವಿರುತ್ತದೆ. ವಿಮಾನ ಮೋಡದೊಳಗೆ ಹೋದ ಬಳಿಕ ಹಕ್ಕಿಗಳ ಅಪಾಯ ಇಲ್ಲ. ಬರ್ಡ್ ಹಿಟ್ (Bird Hit) ಅಥವಾ ಬರ್ಡ್ ಸ್ಟ್ರೈಕ್ (Bird Strike) ಎನ್ನುವುದು ವಿಮಾನ ಉದ್ಯಮದಲ್ಲಿ ಬಹಳ ಗಂಭೀರ ಸಮಸ್ಯೆ. ಬರ್ಡ್ ಹಿಟ್ ಎನ್ನುವುದು ವಿಮಾನಗಳ ಸುರಕ್ಷತೆ, ನಿರ್ವಹಣಾ ವೆಚ್ಚ ಮತ್ತು ಮಾನವ ಜೀವಗಳಿಗೆ ಅಪಾಯ ಉಂಟುಮಾಡುವ ಗಂಭೀರ ವಿಷಯ. ಅಷ್ಟಕ್ಕೂ ಬರ್ಡ್ ಹಿಟ್ ಅಂದರೆ ಏನು? ಬರ್ಡ್ ಹಿಟ್ ಅಂದರೆ ಒಂದು ಅಥವಾ ಹೆಚ್ಚು ಪಕ್ಷಿಗಳು ಹಾರುತ್ತಿರುವ ವಿಮಾನಕ್ಕೆ ಡಿಕ್ಕಿ ಹೊಡೆಯುವುದು. ಈ ಘಟನೆ ಸಾಮಾನ್ಯವಾಗಿ ವಿಮಾನ ಟೇಕಾಫ್ ಅಥವಾ ಲ್ಯಾಂಡ್ ಆಗುವ ಸಂದರ್ಭಗಳಲ್ಲಿ ಆಗುತ್ತದೆ. ಏಕೆಂದರೆ ಈ ಸಮಯದಲ್ಲಿ ವಿಮಾನಗಳು ಕೆಳಮಟ್ಟದಲ್ಲಿ ಅಥವಾ ಹಕ್ಕಿಗಳು ಹಾರುವ ಎತ್ತರದಲ್ಲಿ ಹಾರುತ್ತಿರುತ್ತವೆ. ವಿಮಾನ ಹಾರಾಟದಷ್ಟೇ ಬರ್ಡ್ ಹಿಟ್ ಇತಿಹಾಸವೂ ಹಳೆಯದು. 1905ರಲ್ಲೇ ಮೊದಲ ಘಟನೆ ವರದಿಯಾಗಿತ್ತು. ವಿಮಾನವನ್ನು ಕಂಡುಹಿಡಿದ ವಿಲ್ಬರ್ ರೈಟ್ ತನ್ನ ವಿಮಾನ ಹಾರಿಸುತ್ತಿದ್ದಾಗ ಪಕ್ಷಿಯೊಂದು ಡಿಕ್ಕಿ ಹೊಡೆಯಿತು. ಇಂದಿಗೂ, ತಂತ್ರಜ್ಞಾನ ಇಷ್ಟು ಬೆಳವಣಿಗೆಯಾದರೂ ಬರ್ಡ್ ಹಿಟ್ ಸಮಸ್ಯೆ ಕಡಿಮೆಯಾಗಿಲ್ಲ ಮತ್ತು ಅದಕ್ಕೆ ಪರಿಹಾರವೂ ಸಿಕ್ಕಿಲ್ಲ. ಬರ್ಡ್ ಹಿಟ್ ಯಾವಾಗ ಸಂಭವಿಸುತ್ತದೆ? ಬಹುತೇಕ ಬರ್ಡ್ ಹಿಟ್ ಘಟನೆಗಳು ಸಂಭವಿಸುವುದು ವಿಮಾನ ಟೇಕಾಫ್ ಆಗುವಾಗ. ಈ ಸಮಯದಲ್ಲಿ ವಿಮಾನ ಒಂದೇ ಸಮನೆ ತೀವ್ರವೇಗ ಪಡೆಯುತ್ತಿರುತ್ತದೆ ಮತ್ತು ಹತ್ತಿರದ ಪರಿಸರದಲ್ಲಿ ಪಕ್ಷಿಗಳು ಹಾರುತ್ತಿರುವ ಸಂಭವ ಹೆಚ್ಚಿರುತ್ತದೆ. ಹಾಗೆಯೇ ಲ್ಯಾಂಡ್ ಆಗುವ ಸಂದರ್ಭದಲ್ಲಿಯೂ ಅಪಘಾತವಾಗುವ ಸಾಧ್ಯತೆ ಹೆಚ್ಚು. ಸಾಮಾನ್ಯವಾಗಿ ಕಡಿಮೆ ಎತ್ತರ (Low Altitude) ಅಂದರೆ 3,000 ಅಡಿಗಳ ಒಳಗೆ ಬಹುತೇಕ ಬರ್ಡ್ ಹಿಟ್ ಸಂಭವಿಸುತ್ತದೆ. ಬರ್ಡ್ ಹಿಟ್ ಆದರೆ ಏನಾಗುತ್ತದೆ? ಪಕ್ಷಿಗಳು ರಭಸದಿಂದ ವಿಮಾನಕ್ಕೆ ಅಪ್ಪಳಿಸಿದಾಗ ಎಂಜಿನ್‌ನ ಬ್ಲೇಡ್‌ಗಳು ಛಿದ್ರವಾಗುತ್ತವೆ. ಇದರಿಂದ ಎಂಜಿನ್ ನಿಷ್ಕ್ರಿಯವಾಗಬಹುದು ಅಥವಾ ಬೆಂಕಿ ಹೊತ್ತಿಕೊಳ್ಳಬಹುದು. ವಿಮಾನದ ರಚನಾತ್ಮಕ ಭಾಗಗಳು (High Airspeed and Rigid Design) ಅಂದರೆ ಮುಂಭಾಗ, ವಿಂಡ್ ಶೀಲ್ಡ್, ಪೈಲಟ್ ಕ್ಯಾಬಿನ್, ಪೆನಲ್ ತೀವ್ರ ಜಖಂಗೊಳ್ಳಬಹುದು. ಕೆಲವು ವೇಳೆ ವಿಮಾನ ಅಪಘಾತಕ್ಕೀಡಾಗಬಹುದು. ಪೈಲಟ್, ಸಿಬ್ಬಂದಿ ಮತ್ತು ಪ್ರಯಾಣಿಕರ ಜೀವಕ್ಕೂ ಮಾರಕವಾಗಿ ಪರಿಣಮಿಸಬಹುದು. ಬರ್ಡ್ ಹಿಟ್‌ನ ಆರ್ಥಿಕ ಪರಿಣಾಮಗಳು ಗಂಭೀರವಾದುದು. ಇದರಿಂದ ಎಂಜಿನ್ ಬದಲಾಯಿಸಬೇಕಾಗಬಹುದು. ಇದರ ದುರಸ್ತಿ ವೆಚ್ಚ ವಿಪರೀತ. ಇದರಿಂದ ವಿಮಾನ ಸಂಚಾರದಲ್ಲಿ ವ್ಯತ್ಯಯವಾಗಬಹುದು. ವಿಮಾನ ಹಾರಾಟ ಸ್ಥಗಿತವಾಗಬಹುದು. ವಿಮಾನವು ವಿಮಾ ಸಂಸ್ಥೆಗಳಿಗೆ ವಿಪರೀತ ಹೊರೆಯಾಗಬಹುದು. ಇದು ವಿಮಾನ ನಿಲ್ದಾಣಗಳ ನಿರ್ವಹಣೆ ಮತ್ತು ಸುರಕ್ಷತಾ ಕ್ರಮಗಳ ವೆಚ್ಚಕ್ಕೂ ಕಾರಣವಾಗಬಹುದು. ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ (ICAO) ಪ್ರಕಾರ, ಪ್ರತಿ ವರ್ಷ ವಿಮಾನ ಉದ್ಯಮಕ್ಕೆ ಬರ್ಡ್ ಹಿಟ್ ಪ್ರಕರಣಗಳಿಂದ ಹತ್ತಾರು ಕೋಟಿ ಡಾಲರ್ ನಷ್ಟವಾಗುತ್ತದೆ. ಇದಕ್ಕಾಗಿ ವಿಮಾನ ನಿಲ್ದಾಣ ಪ್ರಾಧಿಕಾರವು ನಿಲ್ದಾಣದ ಸುತ್ತಮುತ್ತಲ ಪ್ರದೇಶಗಳಲ್ಲಿ ಹಕ್ಕಿಗಳ ಹಾರಾಟದ ಮೇಲೆ ಕಣ್ಣಿಡುತ್ತದೆ. ಹಕ್ಕಿಗಳು ಕಂಡಾಕ್ಷಣ ಗುಂಡು ಹೊಡೆದು ಸಾಯಿಸುತ್ತಾರೆ ಅಥವಾ ಬೆದರಿಸುತ್ತಾರೆ. ಸುತ್ತಮುತ್ತ ಕಸದ ರಾಶಿಗಳು ಶೇಖರವಾಗದಂತೆ ನಿಗಾವಹಿಸುತ್ತಾರೆ. ಪಕ್ಷಿಗಳನ್ನು ಆಕರ್ಷಿಸುವ ಜಲಾಶಯಗಳ ಮೇಲೆ ಕಣ್ಣಿಡುತ್ತಾರೆ. ಹಕ್ಕಿಗಳ ಆಹಾರ ಮೂಲವನ್ನು ನಾಶಪಡಿಸುತ್ತಾರೆ. ಲೇಸರ್ ತಂತ್ರಜ್ಞಾನ, ಡ್ರೋನ್, ಸೌಂಡ್ ಅಥವಾ ವಾಯ್ಸ್ ಸಿಗ್ನಲ್‌ಗಳನ್ನು ಬಳಸಿ ಪಕ್ಷಿಗಳನ್ನು ಓಡಿಸುತ್ತಾರೆ. ಏವಿಯನ್ ರಡಾರ್ ಉಪಕರಣದಿಂದ ಪಕ್ಷಿಗಳ ಚಲನೆಯನ್ನು ಪತ್ತೆಹಚ್ಚುತ್ತಾರೆ, ಪೈಲಟ್‌ಗಳಿಗೆ ಮುನ್ನೆಚ್ಚರಿಕೆ ನೀಡುತ್ತಾರೆ. ಇತ್ತೀಚೆಗೆ ವಿಮಾನ ತಾಂತ್ರಿಕ ವಿನ್ಯಾಸದಲ್ಲಿಯೇ ಮಾರ್ಪಾಟು ಮಾಡಿ, ವಿಂಡ್ ಶೀಲ್ಡ್ ಅನ್ನು ಬಲಿಷ್ಠಗೊಳಿಸಿರುತ್ತಾರೆ. ಆದರೆ ವಿಮಾನದ ವೇಗ ತೀವ್ರವಾಗಿದ್ದರೆ, ವಿಂಡ್ ಶೀಲ್ಡ್ ಎಷ್ಟೇ ಬಲಿಷ್ಠವಾಗಿದ್ದರೂ ಹಕ್ಕಿಗಳು ಡಿಕ್ಕಿ ಹೊಡೆದಾಗ ದುರಂತ ಸಂಭವಿಸುತ್ತದೆ.

ವಿಜಯೇಂದ್ರ ಅವರಿಗೆ ಲಾಸ್ಟ್ ಚಾನ್ಸು?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕಳೆದ ವಾರ ಕರ್ನಾಟಕಕ್ಕೆ ಬಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಮಾಡಿದ ಯಡಿಯೂರಪ್ಪ ದುಗುಡದಲ್ಲಿದ್ದರಂತೆ. ತಮ್ಮ ಪುತ್ರ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಭವಿಷ್ಯದ ಬಗೆಗಿನ ಚಿಂತೆಯೇ ಈ ದುಗುಡಕ್ಕೆ ಕಾರಣ.

ಅಂದ ಹಾಗೆ, ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಎರಡು ವರ್ಷ ಕಳೆಯುತ್ತಾ ಬಂದರೂ ಪಕ್ಷದ ಹಿರಿಯ ನಾಯಕರ ವಿಶ್ವಾಸ ಗಳಿಸಲು ಅವರಿಗೆ ಸಾಧ್ಯವಾಗಿಲ್ಲ, ಅವರ ಮಹತ್ವಾಕಾಂಕ್ಷೆಯೇ ಇದಕ್ಕೆ ಕಾರಣ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಪಕ್ಷ ತಮ್ಮ ನೇತೃತ್ವದಲ್ಲಿ ಎದುರಿಸಬೇಕು, ಗೆದ್ದು ಅಧಿಕಾರಕ್ಕೆ ಬಂದರೆ ತಾವೇ ಸಿಎಂ ಆಗಬೇಕು ಎಂಬ ಅವರ ಮಹತ್ವಾಕಾಂಕ್ಷೆ ಪಕ್ಷದ ಹಿರಿಯ ನಾಯಕರಿಗೆ ಪಥ್ಯವಾಗುತ್ತಿಲ್ಲ, ಇದಕ್ಕೆ ಕಾರಣವೂ ಇದೆ. ಅದೆಂದರೆ ಇಂಥ ನಾಯಕರ ಪೈಕಿ ಕೆಲವರಿಗೆ ಸ್ವತಃ ತಾವೇ ಮುಖ್ಯಮಂತ್ರಿಯಾಗುವ ಕನಸಿದೆ. ಇನ್ನು ಹಲವರಿಗೆ ಪಕ್ಷದಲ್ಲಿ ಬಲಿಷ್ಠರಾಗಿ ಬೆಳೆಯುವ ಕನಸಿದೆ.

ಆದರೆ ತಮ್ಮ ಮಹತ್ವಾಕಾಂಕ್ಷೆಗೆ ಅಂಟಿಕೊಂಡಿರುವ ವಿಜಯೇಂದ್ರ, ಇದಕ್ಕೆ ಶಕ್ತಿ ತುಂಬುವವರನ್ನು ಮಾತ್ರ ತಮ್ಮ ವರ್ತುಲಕ್ಕೆ ಬಿಟ್ಟುಕೊಳ್ಳುತ್ತಾರೆ. ಯಾರು ತಮ್ಮ ಮಹತ್ವಾಕಾಂಕ್ಷೆಗೆ ಅಡ್ಡಿ ಅನ್ನಿಸುತ್ತಾರೋ, ಇಲ್ಲವೇ ಅನುಪಯುಕ್ತ ಅನ್ನಿಸುತ್ತಾರೋ ಅಂಥವರನ್ನು ಮುಲಾಜಿಲ್ಲದೆ ದೂರವಿಡುತ್ತಾರೆ. ಅವರ ಈ ವರ್ತನೆ ಪಕ್ಷದ ಬಹುತೇಕ ನಾಯಕರಿಗೆ ಒಗಟಾಗಿದೆಯಷ್ಟೇ ಅಲ್ಲ, ವಿಜಯೇಂದ್ರ ಅವರ ತಂದೆ ಯಡಿಯೂರಪ್ಪ ಅವರ ಜತೆ ದುಡಿದ ತಮಗೇ ಈ ಗತಿ ಬಂದಿದೆ ಅನ್ನಿಸಿ ವಿಷಾದವೂ ಆಗುತ್ತಿದೆ. ಪರಿಣಾಮ? ಇತ್ತೀಚಿನ ದಿನಗಳಲ್ಲಿ ವಿಜಯೇಂದ್ರ ಅವರಿಂದ ಘಾಸಿಗೊಳಗಾದವರು ಸೇರಿದಂತೆ ಹಲವು ನಾಯಕರು 'ವಿಜಯೇಂದ್ರ ಹಟಾವೋ' ಯೋಜನೆಯನ್ನು ಜೀವಂತವಾಗಿಟ್ಟಿದ್ದಾರೆ.

ನೋಡುತ್ತಾ ಹೋದರೆ ವಿಜಯೇಂದ್ರ ಅವರ ಬಗ್ಗೆ ಒಬ್ಬೊಬ್ಬ ನಾಯಕರಿಗೆ ಒಂದೊಂದು ಬಗೆಯ ಸಿಟ್ಟಿದೆ. ಅವರ ಒಂದು ಕಾಲದ ಆಪ್ತರಾದ ಬಸವರಾಜ ಬೊಮ್ಮಾಯಿ ಅವರನ್ನೇ ತೆಗೆದುಕೊಳ್ಳಿ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ವಿಜಯೇಂದ್ರ ಸುಪಾರಿ ಕೊಟ್ಟಿದ್ದರು ಎಂಬುದರಿಂದ ಹಿಡಿದು, ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಲಿಂಗಾಯತ ಮತಗಳನ್ನು ಒಡೆದು ತಮ್ಮ ಪುತ್ರ ಭರತ್ ಅವರನ್ನು ಸೋಲಿಸಿದರು ಎಂಬಲ್ಲಿಯ ತನಕ ಬೊಮ್ಮಾಯಿ ಸಿಟ್ಟು ಹರಡಿಕೊಂಡಿದೆ.

ಇನ್ನು, ತಮ್ಮನ್ನು ದುರ್ಬಲಗೊಳಿಸಲು ವಿಜಯೇಂದ್ರ ಯಾವ ರೀತಿ ಪ್ರಯತ್ನಿಸುತ್ತಿದ್ದಾರೆ ಅಂತ ಹೇಳಲು ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರ ಬಳಿ ಹಲವು ಕಂಪ್ಲೇಂಟುಗಳಿವೆ. ಈಗ ಕೇಂದ್ರ ಸಚಿವರಾಗಿರುವ ವಿ.ಸೋಮಣ್ಣ ಅವರ ವಿಷಯಕ್ಕೆ ಬಂದರೂ ಅಷ್ಟೇ. ಕಳೆದ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ದುಡಿದ ಯಡಿಯೂರಪ್ಪ-ವಿಜಯೇಂದ್ರ ಅವರ ಚಿತ್ರ ಸೋಮಣ್ಣ ಅವರ ಕಣ್ಣಂಚಿನಿಂದ ಮರೆಯಾಗುತ್ತಿಲ್ಲ. ಹೀಗೆ ನೋಡುತ್ತಾ ಹೋದರೆ ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ರಮೇಶ್ ಜಾರಕಿಹೊಳಿ, ಜಿ.ಎಂ.ಸಿದ್ದೇಶ್ವರ್ ಸೇರಿದಂತೆ ಹಲವು ನಾಯಕರು ವಿಜಯೇಂದ್ರ ಮತ್ತು ಯಡಿಯೂರಪ್ಪ ಅವರ ವಿರುದ್ಧ ಕುದಿಯುತ್ತಲೇ ಇದ್ದಾರೆ.

ಗಮನಿಸಬೇಕಾದ ಸಂಗತಿ ಎಂದರೆ, 'ವಿಜಯೇಂದ್ರ ಅವ-ರನ್ನು ಕೆಳಗಿಳಿಸದೆ ಪಕ್ಷಕ್ಕೆ ಭವಿಷ್ಯವಿಲ್ಲ, ಎರಡು ವರ್ಷಗಳಿಂದ ಪಕ್ಷ ಸಂಘಟನೆಯ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ' ಅಂತ ಇವರೆಲ್ಲ ಪದೇ ಪದೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಜಗತ್ ಪ್ರಕಾಶ್ ನಡ್ಡಾ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ದೂರು ರವಾನಿಸುತ್ತಲೇ ಇದ್ದಾರೆ. ಹೀಗೆ ಕಂಪ್ಲೇಂಟುಗಳು ರವಾನೆಯಾಗುವುದರ ಜತೆಗೆ ಜೆಡಿಎಸ್ ಜತೆಗಿನ ಮೈತ್ರಿಯ ವಿಷಯದಲ್ಲಿ ವಿಜಯೇಂದ್ರ ಆಸಕ್ತಿ ತೋರುತ್ತಿಲ್ಲ ಮತ್ತು ರಾಜ್ಯ ಸರಕಾರದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡುತ್ತಿಲ್ಲ ಎಂಬ ದೂರೂ ಸೇರಿಕೊಂಡು ಅಮಿತ್ ಶಾ ವಿಚಲಿತರಾಗುವಂತೆ ಮಾಡಿದೆ.

ಹೀಗಾಗಿ ಖಾಸಗಿ ಕಾರ್ಯಕ್ರಮದ ಹೆಸರಿನಲ್ಲಿ ಕಳೆದ ಗುರುವಾರ ಕರ್ನಾಟಕಕ್ಕೆ ಬಂದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅವತ್ತು ರಾತ್ರಿಯಿಂದಲೇ ರಾಜ್ಯ ಬಿಜೆಪಿಗೆ ತಗುಲಿದ ರೋಗದ ವಿವರ ಪಡೆಯತೊಡಗಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ಭೇಟಿಯಾದ ಯಡಿಯೂರಪ್ಪ, ಕರ್ನಾಟಕದಲ್ಲಿ ಪಕ್ಷ ಸಂಘಟನೆಗಾಗಿ ತಮ್ಮ ಪುತ್ರ ವಿಜಯೇಂದ್ರ ಪಡುತ್ತಿರುವ ಕಷ್ಟದ ವಿವರ ನೀಡಿದ್ದಲ್ಲದೆ, "ಇಷ್ಟು ಕಷ್ಟ ಪಡುತ್ತಿರುವ ವಿಜಯೇಂದ್ರ ವಿರುದ್ಧ ಅಪಪ್ರಚಾರ ನಡೆಯುತ್ತಿದೆ" ಎಂದು ದುಗುಡ ತೋಡಿಕೊಂಡಿದ್ದಾರೆ. ಅಷ್ಟೇ ಅಲ್ಲ, "ಇಂಥ ಅಪಪ್ರಚಾರಕ್ಕೆ ಇಳಿದಿರುವ ನಾಯಕರಿಗೆ ಸುಮ್ಮನಿರಲು ಹೇಳಿ. ಇಲ್ಲವೇ ವಿಜಯೇಂದ್ರ ಅಧಿಕಾರದಲ್ಲಿರಬೇಕೋ ಬೇಡವೋ ಎಂಬುದನ್ನಾದರೂ ಸ್ಪಷ್ಟವಾಗಿ ಹೇಳಿಬಿಡಿ" ಎಂದಿದ್ದಾರೆ.

ಯಾವಾಗ ಯಡಿಯೂರಪ್ಪ ಬೇಸರದಿಂದ ಮಾತನಾಡಿದರೋ, ಆಗ ಅವರನ್ನು ಸಮಾಧಾನಿಸಿದ ಅಮಿತ್ ಶಾ, "ಯಡೂರಪ್ಪಾಜೀ,ನಿಮ್ಮ ಮಗ ವಿಜಯೇಂದ್ರ ಪಕ್ಷಾಧ್ಯಕ್ಷರಾಗಿ ಕಂಟಿನ್ಯೂ ಆಗುತ್ತಾರೆ. ಆದರೆ ಅವರು ರಾಜ್ಯ ಸರಕಾರದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡುತ್ತಿಲ್ಲ, ಪಕ್ಷದಲ್ಲಿರುವ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ದೂರುಗಳಿವೆ. ಹೀಗಾಗಿ ಅದನ್ನು ಸರಿಪಡಿಸಿಕೊಳ್ಳಬೇಕು" ಅಂತ ಎಚ್ಚರಿಕೆಯ ಧಾಟಿಯಲ್ಲಿ ಮಾತನಾಡಿದ್ದಾರೆ. ಆಗ ಅಮಿತ್ ಶಾ ಅವರಿಗೆ ಒಂದು ಪ್ರಾಮಿಸ್ಸು ಮಾಡಿರುವ ಯಡಿಯೂರಪ್ಪ, "ಇನ್ನು ಮುಂದೆ ಇಂಥ ಲೋಪಗಳಾಗದಂತೆ ನೋಡಿಕೊಳ್ಳುತ್ತೇವೆ. ಸರಕಾರದ ವಿರುದ್ಧ ಉಗ್ರ ಹೋರಾಟ ರೂಪಿಸುತ್ತೇವೆ" ಎಂದಿದ್ದಾರಲ್ಲದೆ ಪಕ್ಷದ ಕಚೇರಿ ಜಗನ್ನಾಥ ಭವನಕ್ಕೆ ಹೋಗಲು ಶುರು ಮಾಡಿದ್ದಾರೆ.

ಜೆಡಿಎಸ್ ಮೈತ್ರಿ ಏಕೆ ಬೇಕು?

ಹೀಗೆ ಯಡಿಯೂರಪ್ಪನವರನ್ನು ಸಮಾಧಾನಿಸಿ ಕಳಿಸಿದ ಅಮಿತ್ ಶಾ ಮತ್ತೊಂದೆಡೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಪ್ರತಿಪಕ್ಷ ನಾಯಕ ಆರ್.ಅಶೋಕ್, ಅರವಿಂದ ಬೆಲ್ಲದ್ ಮತ್ತಿತರರ ಜತೆ ಮಾತುಕತೆ ನಡೆಸಿದ್ದಾರೆ. ಈ ಮಾತುಕತೆಯ ಸಂದರ್ಭದಲ್ಲಿ ವಿಜಯೇಂದ್ರ ಅವರ ವಿರುದ್ಧ ಕಂಪ್ಲೇಂಟುಗಳ ಮಳೆ ಸುರಿಸಿದ ಈ ನಾಯಕರು, "ಪಕ್ಷದ ಹಿತದೃಷ್ಟಿಯಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಬೇಕು. ಇಲ್ಲದಿದ್ದರೆ ಸಂಘಟನೆ ಕುಸಿದೇಹೋಗುತ್ತದೆ" ಅಂತ ವಿವರಿಸಿದ್ದಾರೆ.

ಮೂಲಗಳ ಪ್ರಕಾರ ಈ ಮಾತುಕತೆಯ ಸಂದರ್ಭದಲ್ಲಿ ಸದರಿ ನಾಯಕರು ಎರಡು ಮುಖ್ಯ ವಿಷಯಗಳನ್ನು ಅಮಿತ್ ಶಾ ಕಿವಿಗೆ ಹಾಕಿದ್ದಾರೆ. ಮೊದಲನೆಯದಾಗಿ ಪಕ್ಷದ ಹಿರಿಯ ನಾಯಕರ ಬಗ್ಗೆ ವಿಜಯೇಂದ್ರ ತೋರುತ್ತಿರುವ ನಿರ್ಲಕ್ಷ್ಯ ಮತ್ತು ಎರಡನೆಯದಾಗಿ ಮಿತ್ರಪಕ್ಷ ಜೆಡಿಎಸ್‌ನಿಂದ ಅಂತರ ಕಾಯ್ದುಕೊಳ್ಳುತ್ತಿರುವ ರೀತಿ- ಈ ಬಗ್ಗೆ ಅವರು ವಿವರಿಸಿದ್ದಾರೆ. "ಇವತ್ತು ವಿಧಾನಸಭೆ ಚುನಾವಣೆಗೆ ಹೋದರೆ ಸ್ವಯಂಬಲದ ಮೇಲೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಅಂತ ವಿಜಯೇಂದ್ರ ಹೇಳುತ್ತಿದ್ದಾರೆ. ಆದರೆ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಅಹಿಂದ ವರ್ಗಗಳ ಮತಗಳನ್ನು ಹೇಗೆ ಕನ್‌ಸಾಲಿಡೇಟ್ ಮಾಡಿದೆಯೆಂದರೆ ಅದನ್ನು ಎದುರಿಸಲು ನಾವು ಒಕ್ಕಲಿಗ, ಲಿಂಗಾಯತ ಮತಗಳನ್ನು ಒಗ್ಗೂಡಿಸಲೇಬೇಕು. ಆದರೆ ವಿಜಯೇಂದ್ರ ಅವರು ಹೇಳಿದಂತೆ ನಾವು ಜೆಡಿಎಸ್‌ನಿಂದ ದೂರ ಉಳಿದರೆ ಒಕ್ಕಲಿಗ ಮತಗಳು ಜೆಡಿಎಸ್ ಮತ್ತು ಕಾಂಗ್ರೆಸ್ ಮಧ್ಯೆ ಹಂಚಿಕೆಯಾಗುತ್ತವೆ. ಹಾಗೇನಾದರೂ ಆದರೆ ಕಾಂಗ್ರೆಸ್ ಪಕ್ಷಕ್ಕೆ ಲಾಭವಾಗಿ, ಬಿಜೆಪಿಗೆ ನಷ್ಟವಾಗುತ್ತದೆ. ಹೀಗಾಗಿ ಕಳೆದ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಕಣ್ಣ ಮುಂದಿಟ್ಟುಕೊಂಡು ನಾವು ಜೆಡಿಎಸ್ ಜತೆಗಿನ ಮೈತ್ರಿಯನ್ನು ಮುಂದುವರಿಸಬೇಕು" ಅಂತ ಈ ನಾಯಕರು ವಿವರಿಸಿದ್ದಾರೆ. ಅವರು ಹೇಳಿದ್ದನ್ನೆಲ್ಲ ಕೇಳಿದ ಅಮಿತ್ ಶಾ 'ಹೌದು' ಎನ್ನುವಂತೆ ತಲೆ ಆಡಿಸಿದ್ದಾರೆ.

ವಿಜಯೇಂದ್ರ ಅವರಿಗೆ ಸಿಕ್ಕ ಸಿಗ್ನಲ್ಲು

ಈ ಮಧ್ಯೆ ವಿಜಯೇಂದ್ರ ಅವರ ಬಳಿಯೂ ಚರ್ಚೆ ನಡೆಸಿದ ಅಮಿತ್ ಶಾ ನೇರವಾಗಿ ಮೂರು ವಿಷಯಗಳನ್ನು ಪ್ರಸ್ತಾಪಿಸಿದರಂತೆ. ಮೊದಲನೆಯದಾಗಿ ಪಕ್ಷದ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ ಎಂಬುದು. ಎರಡನೆಯದಾಗಿ ಜೆಡಿಎಸ್ ಜತೆಗಿನ ಮೈತ್ರಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಿ ಎಂಬುದು. ಮೂರನೆಯದಾಗಿ ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಪರಿಣಾಮಕಾರಿ ಹೋರಾಟಗಳನ್ನು ಸಂಘಟಿಸಿ ಎಂಬುದು.

ಹೀಗೆ ಮೂರು ವಿಷಯಗಳನ್ನು ಎಚ್ಚರಿಕೆಯ ಧ್ವನಿಯಲ್ಲಿ ಹೇಳಿದ ಅಮಿತ್ ಶಾ ಉಳಿದಂತೆ ಬೇರೆ ಯಾವ ವಿಷಯಗಳ ಬಗ್ಗೆಯೂ ಹೆಚ್ಚು ಪ್ರಸ್ತಾಪಿಸಿಲ್ಲ. ಅರ್ಥಾತ್, ವಿಜಯೇಂದ್ರ ನಾಯಕತ್ವಕ್ಕೆ ಕಂಟಕವಾಗುವ ಯಾವುದೇ ಸಿಗ್ನಲ್ಲುಗಳನ್ನು ಅವರು ನೀಡಿಲ್ಲ, ಮೂಲಗಳ ಪ್ರಕಾರ, ವಿರೋಧಿ ಪಡೆಯ ಮಾತು ಕೇಳಿ ವಿಜಯೇಂದ್ರ ಅವರನ್ನು ತಕ್ಷಣ ಕೆಳಗಿಳಿಸಲು ಅವರು ಬಯಸುತ್ತಿಲ್ಲ, ಕಾರಣ? ವಿಜಯೇಂದ್ರ ವಿರುದ್ಧ ಯಾರೇನೇ ದೂರು ನೀಡಿದರೂ ಯಡಿಯೂರಪ್ಪ ಪ್ರಭಾವಳಿ ಹೊಂದಿರುವ ವಿಜಯೇಂದ್ರ ಅವರಂತೆ ಲಿಂಗಾಯತ ಮತಗಳನ್ನು ಕನ್‌ಸಾಲಿಡೇಟ್ ಮಾಡುವ ಶಕ್ತಿ ಉಳಿದ ನಾಯಕರಿಗಿಲ್ಲ ಎಂಬುದು. ಈ ಪೈಕಿ ತುಂಬ ನಾಯಕರು ತಮ್ಮ ತಮ್ಮ ಕ್ಷೇತ್ರಗಳಿಗೆ ಲಿಮಿಟ್ ಆದವರೇ ಹೊರತು ರಣಾಂಗಣಕ್ಕೆ ನುಗ್ಗಿ ಬೇರೆಯವರನ್ನು ಗೆಲ್ಲಿಸಿಕೊಂಡು ಬರುವ ಸಾಮರ್ಥ್ಯ ಹೊಂದಿದವರಲ್ಲ.

ಇನ್ನು ಪಕ್ಷದ ರಾಜ್ಯಾಧ್ಯಕ್ಷರನ್ನು ಚುನಾಯಿಸುವ ಬಿಜೆಪಿ ಜಿಲ್ಲಾಧ್ಯಕ್ಷರ ಪೈಕಿ ಬಹುತೇಕರು ವಿಜಯೇಂದ್ರ ಅವರ ಜತೆಗಿದ್ದಾರೆ ಎಂಬುದು ಅಮಿತ್ ಶಾ ಅವರಿಗಿರುವ ಸದ್ಯದ ರಿಪೋರ್ಟು. ಹೀಗಾಗಿ ತಮ್ಮನ್ನು ಭೇಟಿಯಾದ ವಿಜಯೇಂದ್ರ ಅವರಿಗೆ ಮೂರೇ ಮೂರು ಸಂಗತಿಗಳನ್ನು ಅಮಿತ್ ಶಾ ವಿವರಿಸಿದ್ದಾರೆ. ಯಾವಾಗ ಅವರು ಈ ಸಿಗ್ನಲ್ ನೀಡಿದರೋ, ಇದಾದ ನಂತರ ಹೊರಬಂದ ವಿಜಯೇಂದ್ರ ಭವಿಷ್ಯದಲ್ಲಿ ಜೆಡಿಎಸ್ ಜತೆ ಹೊಂದಿಕೊಂಡು ಹೋಗುವ ಬಗ್ಗೆ ಆಸಕ್ತಿ ತೋರಿಸಿದ್ದಾರೆ. ಹಾಗೆಯೇ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಾಜ್ಯ ಸರಕಾರದ ವಿರುದ್ಧ ಹೋರಾಡಲು ರಣೋತ್ಸಾಹ ತೋರಿಸಿದ್ದಾರೆ. ಅಲ್ಲಿಗೆ ಅಮಿತ್ ಶಾ ಅವರ ಕರ್ನಾಟಕ ಭೇಟಿ ಒಂದು ಮಟ್ಟದಲ್ಲಿ ಫಲ ನೀಡಿದಂತೆ ಕಾಣುತ್ತಿದೆಯಾದರೂ, ಆಳವಾಗಿ ಹೊಕ್ಕು ನೋಡಿದರೆ ವಿಜಯೇಂದ್ರ ಅವರನ್ನು ವಿರೋಧಿಸುತ್ತಿರುವ ಬಹುತೇಕ ನಾಯಕರು ವೈಯಕ್ತಿಕ ನೆಲೆಯಲ್ಲಿ ಘಾಸಿಗೊಂಡವರು. ಹೀಗಾಗಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ವಿಜಯೇಂದ್ರ ಅವರ ಪ್ರಯತ್ನ ಎಷ್ಟು ಪ್ರಾಮಾಣಿಕವಾಗಿರಲಿದೆ ಎಂಬುದರ ಮೇಲೆ ಅವರ ಯಶಸ್ಸು ನಿಂತಿದೆ.

ಲಾಸ್ಟ್ ಸಿಪ್: ಅಂದ ಹಾಗೆ, ಶುಕ್ರವಾರ ಅಮಿತ್ ಶಾ ಅವರೊಂದಿಗೆ ಅಶೋಕ್, ಬೊಮ್ಮಾಯಿ, ಬೆಲ್ಲದ್ ಮತ್ತಿತರ ನಾಯಕರು ಮಾತನಾಡುತ್ತಿದ್ದಾಗ ಅಲ್ಲಿ ವಿಜಯೇಂದ್ರ ಎಂಟ್ರಿಯಾಗಿದ್ದಾರೆ. ಹೀಗೆ ಎಂಟ್ರಿಯಾದವರು ಇತ್ತೀಚಿನ 'ಜನಾಕ್ರೋಶ ಯಾತ್ರೆ' ಮತ್ತಿತರ ಹೋರಾಟಗಳು ತುಂಬ ಯಶಸ್ವಿಯಾಗಿವೆ ಎಂದು ಸಮರ್ಥಿಸಿಕೊಂಡಿದ್ದಾರೆ. ಆದರೆ ಈ ಮಾತು ಕೇಳಿದ ಅಮಿತ್ ಶಾ, "ಅವೆಲ್ಲ ಎಷ್ಟು ಯಶಸ್ವಿಯಾಗಿವೆ ಅಂತ ನನಗೆ ಗೊತ್ತು, ಸಂಘಟನೆಯ ಕತೆ ಏನಾಗಿದೆ ಅಂತ ಗೊತ್ತು" ಅಂತ ಹೇಳಿ ಮುಖ ಗಂಟುಹಾಕಿಕೊಂಡರಂತೆ. ಯಾವಾಗ ಅಮಿತ್ ಶಾ ಮುಖ ಗಂಟುಹಾಕಿಕೊಂಡರೋ, ವಿಜಯೇಂದ್ರ ಮಂಕಾಗಿದ್ದಾರೆ. ಮೂಲಗಳ ಪ್ರಕಾರ, ಇದು ನಿಮಗೆ ಲಾಸ್ಟ್ ಚಾನ್ಸು ಅಂತ ವಿಜಯೇಂದ್ರ ಅವರಿಗೆ ಅಮಿತ್ ಶಾ ಸಿಗ್ನಲ್ಲು ನೀಡಿದ್ದಾರೆ. ಈ ಸಿಗ್ನಲ್ಲು ಅರ್ಥವಾದರೆ ಓಕೆ. ಇಲ್ಲದಿದ್ದರೆ ಆರು ತಿಂಗಳಲ್ಲಿ ವಿಜಯೇಂದ್ರ ಕೆಳಗಿಳಿದು ವಿ.ಸೋಮಣ್ಣ ರಾಜ್ಯ ಬಿಜೆಪಿಯ ಅಧ್ಯಕ್ಷರಾಗಲಿದ್ದಾರೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹಿತಾನುಭವದ ಪತ್ರಿಕೆ

ಶಶಿಧರ ಹಾಲಾಡಿಯವರ 'ಪ್ರವಾಸಿ ಪ್ರಪಂಚದಲ್ಲೊಂದು ಸುತ್ತು' ಅಂಕಣಬರಹವು (ಜೂನ್ 20), 'ಕುಟುಂಬದ ಸ್ವಾಸ್ಥ್ಯಕ್ಕಾಗಿ ಆಗಾಗ ಪ್ರವಾಸ ಮಾಡಬೇಕು' ಎಂಬ ನಮ್ಮ ಹಿರಿಯರ ಅನುಭವದ ಮಾತುಗಳನ್ನು ನೆನಪಿಸಿತು. ಪ್ರವಾಸವೇ ಹಾಗೆ. ಮನಸ್ಸಿಗೆ ಮುದಕೊಡುವ ಸಂಗತಿಗಳು, ಅನುಭವಗಳನ್ನು ಮೆಲುಕುಹಾಕುತ್ತಾ ಸಮಯ ಕಳೆಯುವುದರಲ್ಲಿಯೇ ಏನೋ ಸಂತೋಷ. ಪ್ರವಾಸೋದ್ಯಮದಿಂದಾಗಿ ಸ್ಥಳೀಯರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ದುಡಿಮೆ ಸಿಗುವುದು ನಿಶ್ಚಿತ. ಪ್ರವಾಸದ ಸಮಯದಲ್ಲಿ ಸ್ಥಳೀಯರು ತೋರುವ ಪ್ರೀತಿಯು ಮನಸ್ಸಿನಲ್ಲಿ ಚಿರಕಾಲ ಉಳಿಯುವಂಥದ್ದು. ನನ್ನ ಪ್ರೌಢಶಾಲಾ ದಿನಗಳಲ್ಲಿ 'ಏಷ್ಯನ್ ಟ್ರಾವೆಲ್ಸ್'ನವರು ಹೊರತರುತ್ತಿದ್ದ ಪ್ರವಾಸದ ಬಗೆಗಿನ ಕಿರುಹೊತ್ತಿಗೆ ಈ ಸಂದರ್ಭದಲ್ಲಿ ನೆನಪಾಗುತ್ತಿದೆ. 'ಪ್ರವಾಸಿ ಪ್ರಪಂಚ' ಪತ್ರಿಕೆಯನ್ನು ಪ್ರಕಟಿಸುವಲ್ಲಿನ ವಿಶ್ವೇಶ್ವರ ಭಟ್ಟರ ಪ್ರಯತ್ನ ಪ್ರಶಂಸನೀಯ. ಈ ಪ್ರಯೋಗವು ಕನ್ನಡ ಪತ್ರಿಕೋದ್ಯಮದ ಪಾಲಿಗೊಂದು ಹೆಮ್ಮೆಯ ಸಂಗತಿ. ನಮ್ಮಂಥ ಸಣ್ಣ ಪಟ್ಟಣಗಳ ನಿವಾಸಿಗಳಿಗೆ ಈ ಪತ್ರಿಕೆಯನ್ನು ಏಜೆಂಟರ ಮೂಲಕ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತದೆ ಎಂದು ಭಾವಿಸೋಣವೇ?

- ಪರಮೇಶ್ವರ ಜಿ.ಎಂ., ಸಂಡೂರು

ಮನೋಜ್ಞ ಲೇಖನ

ಹರೀಶ್ ಕೇರ ಅವರ 'ಕಾಂತಾರದ ನಡುವೆ ಏಕಾಂತದ ಸಮಯ' ಶೀರ್ಷಿಕೆಯ ಲೇಖನ (ಜೂನ್ 19) ಮನೋಜ್ಞವಾಗಿತ್ತು. ಭಾವುಕ ಮನಸ್ಸುಗಳ ಚಿತ್ರಣ, ಒಂಟಿತನ, ಏಕಾಂತ, ಮನದಲಿ ಮನೆ ಮಾಡಿಕೊಂಡಿರುವ ಹೊರಗಿನ ವಿಷಯಗಳ ಕಸ... ನಿಜಕ್ಕೂ ಲೇಖನ ಓದಿ ಕೆಲವು ನಿಮಿಷ ಸುಮ್ಮನೆ ಕುಳಿತುಬಿಟ್ಟೆ. ಬಹಳ ಇಷ್ಟವಾಯಿತು. 'ವಿಶ್ವವಾಣಿ'ಯ ಅಂಕಣಗಳೇ ಹಾಗೆ! ಮನಸ್ಸಿಗೆ ತಟ್ಟುತ್ತವೆ, ಮುದ ನೀಡುತ್ತವೆ, ಮುಗ್ಧಗೊಳಿಸುತ್ತವೆ.

- ಬಿ.ಕೆ.ಮೀನಾಕ್ಷಿ, ಮೈಸೂರು

ವ್ಯವಸ್ಥೆಯ ಕರಾಳಮುಖ

ನವೀನ್ ಸಾಗರ್ ಅವರ 'ಅನಂತರಿಗೆ ಸಿಕ್ಕ ಪದ್ಮಭೂಷಣ, ರಾಜ್ಯದಲ್ಲಿ ಅನಾಥವಾಯ್ತು' ಅಂಕಣಬರಹವು (ಜೂನ್ 21) ಇಷ್ಟವಾಯಿತು. ನಿಜ, ಅನಂತ್ ನಾಗ್ ಎಂಬ ಕನ್ನಡದ ಪ್ರತಿಭಾವಂತ ನಟನಿಗೆ 'ಪದ್ಮಭೂಷಣ' ಪುರಸ್ಕಾರ ಬಂದಾಗ ನಾವೆಲ್ಲ ಹೆಮ್ಮೆಯಿಂದ ಸಂಭ್ರಮಿಸಬೇಕಿತ್ತು, ಅದಾಗಲಿಲ್ಲ. ಚಲನಚಿತ್ರ ವಾಣಿಜ್ಯ ಮಂಡಳಿಯವರಾದರೂ ಒಂದು ಕಾರ್ಯಕ್ರಮ ಮಾಡಿ ಆ ಗೌರವಕ್ಕೆ ಮತ್ತಷ್ಟು ಘನತೆ ಯನ್ನು ತರುವ ಕೆಲಸವನ್ನು ಮಾಡಬೇಕಿತ್ತು, ಅದೂ ಆಗಲಿಲ್ಲ. ಒಟ್ಟಿನಲ್ಲಿ ವ್ಯವಸ್ಥೆಯ ಕರಾಳಮುಖದ ಅನಾವರಣವಾ ಯಿತು.

- ರಾಜು ಹಗ್ಗದ, ಇಣಚಗಲ್

ತಟಸ್ಥನೀತಿ ಒಳಿತು

ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಲ್ಲಿ ಭಾರತವು ಇರಾನ್ ಪರ ನಿಲ್ಲಬೇಕು ಎಂಬುದಾಗಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿಯವರು ಕೇಂದ್ರ ಸರಕಾರವನ್ನು ಪತ್ರಿಕಾ ಲೇಖನವೊಂದರ ಮೂಲಕ ಆಗ್ರಹಿಸಿದ್ದಾರೆ ಎಂಬ ಸುದ್ದಿ ಓದಿ ಆಶ್ಚರ್ಯವಾಯಿತು. ದೇಶದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರ ಕಾಲದಿಂದಲೂ ಭಾರತವು ತಟಸ್ಥ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. ಅರಬ್/ಮುಸ್ಲಿಂ ರಾಷ್ಟ್ರಗಳ ಸ್ನೇಹಕ್ಕಾಗಿ ಇಸ್ರೇಲನ್ನು ಕಡೆಗಣಿಸುವ ವಿದೇಶಾಂಗ ನೀತಿಯನ್ನು ಕಾಂಗ್ರೆಸ್ ಮುಂಚಿನಿಂದಲೂ ಅನುಸರಿಸುತ್ತಾ ಬಂದಿದೆ. ನೆಹರು ಅವರು, ಹಿಂದಿನ ಯುಗೋಸ್ಲಾವಿಯಾ ಹಾಗೂ ಈಜಿಪ್ಟ್ ಜತೆ ಸೇರಿ, ಅಲಿಪ್ತ ನೀತಿಯ ಪ್ರತಿಪಾದಕರಾಗಿ ಮುಂಚೂಣಿಯಲ್ಲಿದ್ದರು. ಈಗ ಕಾಂಗ್ರೆಸ್ ಪಕ್ಷವು, ಅಲಿಪ್ತ ನೀತಿಯನ್ನು ಬಿಟ್ಟು ಇರಾನ್ ಪರ ವಕಾಲತ್ತು ವಹಿಸುವಂತೆ ಕೇಂದ್ರವನ್ನು ಪ್ರೇರೇಪಿಸುತ್ತಿದೆ. ಇದೂ ಓಲೈಕೆ ರಾಜಕಾರಣದ ಅಂಗವೇ?

ಭಾರತವು ಕಳೆದ 10 ವರ್ಷಗಳಿಂದ ಅಲಿಪ್ತ ನೀತಿಯನ್ನು ಅನುಸರಿಸಿಕೊಂಡು ಬರುತ್ತಾ, ಎಲ್ಲಾ ದೇಶಗಳ ಜತೆ ಸ್ನೇಹವನ್ನು ಸಂಪಾದಿಸುತ್ತಿದೆ. ಭಾರತಕ್ಕೆ ಇರಾನ್ ಎಷ್ಟು ಮುಖ್ಯವೋ, ಇಸ್ರೇಲ್ ಕೂಡ ಅಷ್ಟೇ ಮುಖ್ಯ. ಆದ್ದರಿಂದ, ಇಬ್ಬರಲ್ಲಿ ಯಾರ ಪರ ವಹಿಸುವುದೂ ಸರಿಯಲ್ಲ, ಬದಲಿಗೆ ಭಾರತದ ಈಗಿನ ವಿದೇಶಾಂಗ ನೀತಿಯಂತೆ ತಟಸ್ಥವಾಗಿರುವುದೇ ಒಳ್ಳೆಯದು ಎಂದು ನನ್ನ ಭಾವನೆ.

- ದಾವಣಗೆರೆ ಮುಕುಂದ, ಬೆಂಗಳೂರು

ಕನ್ನಡ ಅಸ್ಮಿತೆ ವೇದಿಕೆಗೆ ಮಾತ್ರ ಸೀಮಿತವೇ?

ಯಕ್ಷಪ್ರಶ್ನೆ

ರಮಾನಂದ ಶರ್ಮಾ

vveditoped@gmail.com

ಬೆಂಗಳೂರು ಮೆಟ್ರೋ ನಿಲ್ದಾಣಗಳಲ್ಲಿ 'ಕರ್ನಾಟಕ ಮಿಲ್ಕ್ ಫೆಡರೇಷನ್'ನ 'ನಂದಿನಿ'ಯನ್ನು ನಿರ್ಲಕ್ಷಿಸಿ ಗುಜರಾತ್ ಮೂಲದ 'ಅಮುಲ್'ಗೆ ಮಳಿಗೆ ಸ್ಥಾಪನೆಗೆ ಅನುಮತಿಸಲು ಮುಂದಾದ ಬೆಳವಣಿಗೆಯು ನಿರೀಕ್ಷಿಸಿದಂತೆ ವಿವಾದಕ್ಕೆ ಮತ್ತು ಕನ್ನಡಿಗರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ತಮಿಳುನಾಡು ಮತ್ತು ಮಹಾರಾಷ್ಟ್ರದಂತೆ ಕರ್ನಾಟಕದಲ್ಲೂ ಭಾಷಾ ಅಸ್ಮಿತೆ 'ಟಾಪ್‌ಗೇರ್'ನಲ್ಲಿರುವುದು ಹಾಗೂ ಇತ್ತೀಚಿನ ದಿನಗಳಲ್ಲಿ ಅದು ನಿರಂತರವಾಗಿ ಸುದ್ದಿಯಾಗುತ್ತಿರುವುದು, ಸರಕಾರಕ್ಕೆ ಮತ್ತು ಸರಕಾರಿ ಅಧೀನದ ಸಂಸ್ಥೆಗಳ ಗಮನಕ್ಕೆ ಬರುತ್ತಿಲ್ಲವೋ ಅಥವಾ ಇದು ಜಾಣಕುರುಡು/ಜಾಣಕಿವುಡಿನ ದ್ಯೋತಕವೋ, ಅಧಿಕಾರದಲ್ಲಿರುವ ಕನ್ನಡೇತರ ಹಿರಿಯ ಅಧಿಕಾರಿಗಳು ಮಾಡುವ ಎಡವಟ್ಟೋ? ಎಂದು ಕನ್ನಡಿಗರು ಆಶ್ಚರ್ಯ ಪಡುತ್ತಿದ್ದಾರೆ.

ಇಂಥ ಘಟನೆಗಳು ಆಗೊಮ್ಮೆ ಈಗೊಮ್ಮೆ ನಡೆದರೆ ಸರಿ; ಆದರೆ ಇಂಥ ಘಟನೆಗಳಿಂದಾದ ವಿವಾದಗಳು, ಸಂಘರ್ಷಗಳು ಸುದ್ದಿ ಮಾಡುತ್ತಿರುವಾಗ, ಆಕ್ರೋಶ ಇನ್ನೂ ಹೊಮ್ಮುತ್ತಿರುವಾಗ, ಮೆಟ್ರೋ ನಿಲ್ದಾಣಗಳಲ್ಲಿ ನಮ್ಮ 'ನಂದಿನಿ'ಯನ್ನು ಉಪೇಕ್ಷಿಸಿ ಗುಜರಾತ್ ಮೂಲದ 'ಅಮುಲ್' ಉತ್ಪನ್ನಗಳಿಗೆ ಆಸ್ಪದ ನೀಡಲು ಮುಂದಾಗಿರುವುದನ್ನು ಕಂಡು, 'ಸರಕಾರದ ಕನ್ನಡ ಅಸ್ಮಿತೆ ವೇದಿಕೆಗಳಿಗೆ ಮಾತ್ರ ಸೀಮಿತವಾಗಿದೆಯಾ?' ಎಂದು ಕನ್ನಡಿಗರು ಪ್ರಶ್ನಿಸುವಂತಾಗಿದೆ.

ಬೆಂಗಳೂರಿನ ಮೆಟ್ರೋ ನಿಲ್ದಾಣಗಳಲ್ಲಿ ಹಿಂದಿ ಭಾಷೆಯ ನಾಮಫಲಕದ ವಿರುದ್ಧದ ಪ್ರತಿಭಟನೆಯಿಂದ ಆರಂಭವಾದ ಕನ್ನಡ ಭಾಷಾ ಅಸ್ಮಿತೆಯ ಅಭಿಯಾನ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ಒಂದು ಕಾಲಕ್ಕೆ ಸಮಾಜದ ಕೆಲವೇ ವರ್ಗಕ್ಕೆ ಸೀಮಿತವಾಗಿದ್ದ ಇಂಥ ಪ್ರತಿಭಟನೆ/ವಿರೋಧಗಳು ಅಚ್ಚರಿಯೆನ್ನುವ ರೀತಿಯಲ್ಲಿ ಸಮಾಜದ ಮಿಕ್ಕ ಸ್ತರದವರನ್ನೂ ಸೆಳೆದಿವೆ. 'ಇದು ತಥಾಕಥಿತ ಹೋರಾಟಗಾರರ ಟೈಮ್‌ಪಾಸ್ ಕಸರತ್ತು' ಎಂದು ಒಂದು ಕಾಲಕ್ಕೆ ಟೀಕಿಸಿದವರೂ ಈ ಅಭಿಯಾನಕ್ಕೆ ಕೈಜೋಡಿಸುತ್ತಿದ್ದಾರೆ, local is vocal ಎಂಬ ಚಿಂತನೆಗೆ ಸ್ಪಂದಿಸುತ್ತಿದ್ದಾರೆ. ಹೋರಾಟದ ಹಿಂದಿನ ಉದ್ದೇಶವನ್ನು ತಿಳಿಯುತ್ತಿದ್ದಾರೆ. ಕನ್ನಡಪರ ಹೋರಾಟಗಳಲ್ಲಿ ಇವರ ಭಾಗವಹಿಸುವಿಕೆಯು ಕ್ರಮೇಣ ಏರುತ್ತ, ಹೋರಾಟಗಾರರಿಗೆ ನೈತಿಕ ಬೆಂಬಲ ಸಿಗುತ್ತಿದೆ. ಹಲವರು ನೇರವಾಗಿ ಭಾಗವಹಿಸದಿದ್ದರೂ, ಹಿಂದಿನಂತೆ ಇವರ ಹೋರಾಟವನ್ನು ಲಘುವಾಗಿ ತೆಗೆದುಕೊಳ್ಳುತ್ತಿಲ್ಲ.

ಇತ್ತೀಚೆಗೆ, ಕರ್ನಾಟಕದ ಹೆಮ್ಮೆಯ ಮೈಸೂರು ಸ್ಯಾಂಡಲ್ ಸೋಪ್‌ನ ಬ್ರ್ಯಾಂಡ್ ರಾಯಭಾರಿಯಾಗಿ, ಕನ್ನಡಿಗರನ್ನು ನಿರ್ಲಕ್ಷಿಸಿ ಪರಭಾಷಾ ನಟಿ ತಮನ್ನಾ ಭಾಟಿಯಾರನ್ನು ಗೊತ್ತುಮಾಡಿದಾಗ, ಈ ನಿಲುವನ್ನು ವಿರೋಧಿಸಿ ರಾಜ್ಯಾದ್ಯಂತ ಭಾರಿ ಸಂಖ್ಯೆಯಲ್ಲಿ ಕನ್ನಡಿಗರು ದನಿಯೆತ್ತಿದ್ದರು. "ಅಖಿಲ ಭಾರತ ಮಾರುಕಟ್ಟೆಯನ್ನು ತಲುಪಲು ಈಕೆಯನ್ನು ಬ್ರ್ಯಾಂಡ್ ರಾಯಭಾರಿಯಾಗಿ ಗೊತ್ತುಮಾಡಲಾಯಿತು. ಕನ್ನಡದವರು ಮುಂದೆ ಬರಲಿಲ್ಲ. ಏಕಮೇವ ಕನ್ನಡತಿ ದೀಪಿಕಾ ಪಡುಕೋಣೆ ಕೇಳಿದ ಸಂಭಾವನೆ ನಮ್ಮ ಬಜೆಟ್ ಅನ್ನು ಮೀರಿಸಿತ್ತು" ಎಂದೆಲ್ಲಾ ಸಂಬಂಧಪಟ್ಟವರು ಸ್ಪಷ್ಟೀಕರಣ ನೀಡಿ ಈ ವಿವಾದವನ್ನು ತಣ್ಣಗಾಗಿಸಿದ್ದರು. ತಮಾಷೆಯೆಂದರೆ, ಕರ್ನಾಟಕದಲ್ಲಿ ಉತ್ಪಾದಿಸಿದ ಸರಕುಗಳ ಪ್ಯಾಕಿಂಗ್ ಮೇಲೆ ಸರಕಿನ ಹೆಸರು ಮತ್ತು ಇತರ ಮಾಹಿತಿಗಳು ಕನ್ನಡದಲ್ಲಿ ಇರಬೇಕು ಎನ್ನುವ ರಾಜ್ಯ ಸರಕಾರದ ನಿರ್ದೇಶನವು, ಕರ್ನಾಟಕ ಸರಕಾರದ ಉದ್ದಿಮೆಯ ಉತ್ಪನ್ನವಾದ ಮೈಸೂರು ಸ್ಯಾಂಡಲ್ ಸೋಪ್ ವಿಷಯದಲ್ಲೇ ಇನ್ನೂ ಜಾರಿಯಾಗಿಲ್ಲ. ಹೀಗಾಗಿ 'ತನ್ನ ಅಧೀನದ ಉದ್ದಿಮೆಯನ್ನೇ ನಿಯಂತ್ರಿಸಲಾಗದ ಸರಕಾರವು ಖಾಸಗಿ ಕಂಪನಿಗಳಿಗೆ ಅಂಕುಶ ಹಾಕಬಹುದೇ?' ಎಂದು ಕನ್ನಡಿಗರು ಕೇಳುವಂತಾಗಿದೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕನ್ನಡ ಕಾರ್ಯಕ್ರಮವೊಂದರಲ್ಲಿ 'ಕಭೀ ಕಭೀ ಮೇರೆ ದಿಲ್ ಮೇ' ಹಿಂದಿ ಹಾಡನ್ನು ಹಾಡಲು ಹೊರಟಿದ್ದಕ್ಕೆ, 'ಇದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮವಾಗಿದ್ದು, ಇಲ್ಲಿ ಕನ್ನಡ ಬಿಟ್ಟು ಬೇರೆ ಭಾಷೆಯ ಹಾಡನ್ನು ಹಾಡುವಂತಿಲ್ಲ' ಎಂದು ತಿಳಿಸಿ, ಹಿಂದಿ ಹಾಡನ್ನು ನಿಲ್ಲಿಸಲಾಯಿತಂತೆ. ಸುದೈವದಿಂದ, "ರಾಷ್ಟ್ರಭಾಷೆಯಾಗಿರುವ ಹಿಂದಿಯನ್ನು ವಿರೋಧಿಸಬಾರದು, ಸಂಗೀತಕ್ಕೆ ಭಾಷೆಯ ನಂಟು ಹಾಕಬಾರದು" ಅಂತ ಯಾರೂ ಹೇಳಲಿಲ್ಲ ಎಂಬುದು ಗಮನಾರ್ಹ. ಹಿಂಡು ಹಿಂಡಾಗಿ ಕರ್ನಾಟಕಕ್ಕೆ ಬರುವ ವಲಸಿಗರ ಒತ್ತಡವೋ, ಅವರ ಅಟ್ಟಹಾಸವೋ/ದರ್ಪವೋ, ಹಿಂಬಾಗಿಲ ಮೂಲಕ ಹಿಂದಿಯನ್ನು ಹೇರುವ ಕೇಂದ್ರ ಸರಕಾರದ ಯತ್ನವೋ ಅಥವಾ ಪ್ರಾದೇಶಿಕ ಭಾಷೆಗಳನ್ನು ಹಿಂದೂಡುವ ತಂತ್ರಗಾರಿಕೆಯೋ- ಒಟ್ಟಿನಲ್ಲಿ ಈ ಎಲ್ಲ ಕಾರಣಕ್ಕೆ ಕನ್ನಡಿಗರು ಇಂದು ತಮ್ಮ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಜಾಗೃತರಾಗಿದ್ದಾರೆ. ಇಷ್ಟಾಗಿಯೂ, ಬೆಂಗಳೂರು ಮೆಟ್ರೋ ನಿಲ್ದಾಣಗಳಲ್ಲಿ ಗುಜರಾತ್ ಮೂಲದ 'ಅಮುಲ್' ಉತ್ಪನ್ನಗಳ ಮಳಿಗೆ ತೆರೆಯಲು ಅನುಮತಿ ನೀಡಬೇಕಿತ್ತೇ?

ಬೆಂಗಳೂರು ಮೆಟ್ರೋ ನಿಲ್ದಾಣಗಳಲ್ಲಿ ಮಳಿಗೆ ತೆರೆಯುವುದಕ್ಕೆ 'ಅಮುಲ್'ಗೆ ಅನುಮತಿಸಿದ್ದನ್ನು ತಪ್ಪು ಎನ್ನಲಾಗದು. ಕರ್ನಾಟಕವು ದೆಹಲಿಯಲ್ಲಿ 'ನಂದಿನಿ' ಉತ್ಪನ್ನಗಳ ಮಾರ್ಕೆಟಿಂಗ್ ಮಾಡುತ್ತಿದೆ. ಜತೆಗೆ ಮತ್ತಷ್ಟು ರಾಜ್ಯಗಳಲ್ಲಿ ತನ್ನ ವ್ಯವಹಾರವನ್ನು ವಿಸ್ತರಿಸಲು ಅದು ಯೋಜಿಸಿದೆಯಂತೆ. ಇದು ಸ್ವೀಕಾರಾರ್ಹ ನಡೆಯಾದರೆ, ಗುಜರಾತ್ ರಾಜ್ಯವು ತನ್ನ ಹೆಮ್ಮೆಯ 'ಅಮುಲ್' ಉತ್ಪನ್ನಗಳನ್ನು ಕರ್ನಾಟಕದಲ್ಲಿ ಮಾರಾಟ ಮಾಡುವುದರಲ್ಲಿ ತಪ್ಪೇನಿದೆ? 'ನಂದಿನಿ' ಉತ್ಪನ್ನಗಳು ದೆಹಲಿಯಲ್ಲಿ ಮಾಡಿದ ಸಾಧನೆಯನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ನಾವು, ಗುಜರಾತ್‌ನ 'ಅಮುಲ್' ಉತ್ಪನ್ನಗಳಿಗೆ ಅಂಥ ಅವಕಾಶವನ್ನು ನಿರಾಕರಿಸಬಹುದೇ? ಸಂಸ್ಥೆಯೊಂದು ಭಾರತದ ಯಾವುದೇ ರಾಜ್ಯದಲ್ಲಿ, ಅಲ್ಲಲ್ಲಿನ ಆಂತರಿಕ ಕಾನೂನುಗಳ ಅಡಿಯಲ್ಲಿ ತನ್ನ ಉತ್ಪನ್ನಗಳನ್ನು ಮುಕ್ತವಾಗಿ ಮಾರಾಟ ಮಾಡಬಹುದು. ಆದರೆ, ಬೆಂಗಳೂರು ಮೆಟ್ರೋ ನಿಲ್ದಾಣಗಳಲ್ಲಿ 'ಅಮುಲ್'ಗೆ ಮಳಿಗೆ ತೆರೆಯಲು ಅನುಮತಿಸಿರುವುದರಲ್ಲಿನ ಸಮಸ್ಯೆ ಸ್ವಲ್ಪ ಭಿನ್ನವಾಗಿದೆ. ಮಳಿಗೆ ನೀಡುವ ವಿಷಯದಲ್ಲಿ 'ನಂದಿನಿ'ಗೆ ಆದ್ಯತೆ ನೀಡಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. 'ಅಮುಲ್'ಗೆ ಮಳಿಗೆ ನೀಡುವ ಮಾಹಿತಿ ಹೊರಬೀಳುತ್ತಿದ್ದಂತೆ, ಕನ್ನಡದ ಮತ್ತು ಕನ್ನಡಿಗರ ಅಸ್ಮಿತೆಯ ಹೆಸರಲ್ಲಿ ಜನಾಕ್ರೋಶ ಮಾರ್ದನಿಸತೊಡಗಿತು, ಆಗ ಸರಕಾರವು ದಿಢೀರ್ ಎಂದು 'ನಂದಿನಿ'ಯನ್ನು ನೆನಪಿಸಿಕೊಂಡಿತು.

ಕನ್ನಡದ ಮತ್ತು ಕನ್ನಡಿಗರ ಅಸ್ಮಿತೆಯನ್ನು ಉಳಿಸಿ ಬೆಳೆಸುವ ವಿಷಯದಲ್ಲಿ, ಕರ್ನಾಟಕದಲ್ಲಿ ಈವರೆಗೆ ಆಡಳಿತ ನಡೆಸಿದ ಯಾವುದೇ ಸರಕಾರಕ್ಕೆ ಸಂಪೂರ್ಣ ಅಂಕಗಳು ದೊರೆಯುವುದಿಲ್ಲ. ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು ಎಂಬ ಆಶಯವುಳ್ಳ ಸರೋಜಿನಿ ಮಹಿಷಿ ವರದಿಯು 1986ರಿಂದ ವಿಧಾನಸೌಧದಲ್ಲಿ ಭದ್ರವಾಗಿ ಕೂತಿದೆ. ಕರ್ನಾಟಕದಲ್ಲಿ ಎಲ್ಲಾ ಚಿತ್ರಮಂದಿರಗಳು ವರ್ಷದಲ್ಲಿ ಇಂತಿಷ್ಟು ದಿನಗಳು ಕಡ್ಡಾಯವಾಗಿ ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸಬೇಕು ಎಂಬ ಕಾನೂನು ಅನುಷ್ಠಾನದ ವಿಷಯದಲ್ಲಿ ಅದೆಷ್ಟು ಪರಿಣಾಮಕಾರಿಯಾಗಿದೆ ಎಂಬುದು ತಿಳಿಯದು. ಮಾತ್ರವಲ್ಲ, ಮಲ್ಟಿಪ್ಲೆಕ್ಸ್‌ಗಳ ಪ್ರವೇಶದರ ನಿಯಂತ್ರಣ ಏನಾಯಿತು? ಉದ್ಯೋಗದಲ್ಲಿ ಸ್ಥಳೀಯರಿಗೆ ಮೀಸಲಾತಿ ಸಂಬಂಧದ ವಿಧೇಯಕದ ಗತಿ ಏನಾಗಿದೆ? ಎಂಬುದು ತಿಳಿಯದು. ಮದರಸಾಗಳಲ್ಲಿ ಕನ್ನಡವನ್ನು ಒಂದು ವಿಷಯವಾಗಿ ಕಲಿಸಬೇಕು ಎನ್ನುವ ಪ್ರಸ್ತಾವ ಮುಂದಕ್ಕೆ ಹೋಗಲೇ ಇಲ್ಲ. ಮೇಲೆ ಉಲ್ಲೇಖಿಸಿರುವಂತೆ, ಕರ್ನಾಟಕದಲ್ಲಿ ಉತ್ಪಾದಿಸುವ ಎಲ್ಲಾ ಸರಕುಗಳ ಪ್ಯಾಕಿಂಗ್ ಮೇಲೆ ಸರಕಿನ ಹೆಸರು ಮತ್ತು ಇತರ ಅವಶ್ಯ ಮಾಹಿತಿಗಳು ಕಡ್ಡಾಯವಾಗಿ ಕನ್ನಡದಲ್ಲಿರಬೇಕು ಎನ್ನುವ ಕಾನೂನು ಪರಿಣಾಮಕಾರಿಯಾಗಿ ಜಾರಿಯಾಗಲೇ ಇಲ್ಲ. ಇನ್ನು ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣದ ಆಶಯವು ನ್ಯಾಯಾಲಯದಲ್ಲಿ ಸೋಲುಂಡಿದೆ. ಅಂಗಡಿ-ಮುಂಗಟ್ಟುಗಳ ನಾಮಫಲಕದಲ್ಲಿ ಶೇ.60ರಷ್ಟಾದರೂ ಬರಹ ಕನ್ನಡದಲ್ಲಿರಬೇಕು ಎನ್ನುವ ಆಶಯ ಕೊಂಚ ಮಟ್ಟಿಗಿನ ಸಾಫಲ್ಯ ಕಂಡಿದೆ, ಕ್ರಮಿಸಬೇಕಾದ ದಾರಿ ಇನ್ನೂ ಸಾಕಷ್ಟಿದೆ. ಸರಕಾರದ ವ್ಯವಹಾರಗಳು ಇನ್ನೂ ಸಂಪೂರ್ಣವಾಗಿ ಕನ್ನಡಮಯವಾಗಿಲ್ಲ. ಕೆಲವೊಂದು ಪತ್ರವ್ಯವಹಾರಗಳು 'ಗೂಗಲ್ ಕನ್ನಡ'ದಲ್ಲಿ ಇರುತ್ತವೆಯಂತೆ.

ಸೋನು ನಿಗಮ್ ಪ್ರಕರಣ, ವಲಸಿಗ ಶೈಲಾದಿತ್ಯರು ಕನ್ನಡಿಗರೊಬ್ಬರ ಮೇಲೆ ಹಲ್ಲೆ ಮಾಡಿದ್ದು, ಕೋರಮಂಗಲದ ಹೋಟೆಲ್ ಒಂದರ ಡಿಜಿಟಲ್ ಫಲಕದಲ್ಲಿ ಆದ ಕನ್ನಡಿಗರ ಅವಹೇಳನ, ಬ್ಯಾಂಕಿನ ಶಾಖೆಯೊಂದರಲ್ಲಿ ಮಹಿಳಾ ಮ್ಯಾನೇಜರ್ ಒಬ್ಬರು ಕನ್ನಡ ಭಾಷೆಯನ್ನು ಮಾತನಾಡಲು ಸಾರಾಸಗಟಾಗಿ ನಿರಾಕರಿಸಿದ್ದು, ಬಿಹಾರದಿಂದ ಬಂದಿರುವ ಟೆಕ್ಕಿ ದಂಪತಿಗಳು ಕನ್ನಡಿಗ ಆಟೋವಾಲನ ಮೇಲೆ ಹಲ್ಲೆ ಮಾಡಿ ಆಮೇಲೆ ಕಾಲುಹಿಡಿದು ಕ್ಷಮೆ ಕೇಳಿದ್ದು, ವಲಸಿಗ ಟೆಕ್ಕಿಯೊಬ್ಬಳು ಸಾರಿಗೆ ಬಸ್ ಚಾಲಕನ ಮೇಲೆ ಹಲ್ಲೆ ಮಾಡಿದ್ದು, ಮತ್ತೊಬ್ಬಳು ಫುಡ್ ಡೆಲಿವರಿ ಹುಡುಗನ ಮೇಲೆ ಎರಗಿದ್ದು, ಹೊಟ್ಟೆಪಾಡಿಗೆಂದು ಹರಿಯಾಣದಿಂದ ಬಂದಾಕೆಯೊಬ್ಬಳು ಕನ್ನಡಿಗರನ್ನು ಸಾಮಾಜಿಕ ಜಾಲತಾಣದಲ್ಲಿ ಟೀಕಿಸಿದ್ದು, ಬೆಂಗಳೂರಿನಲ್ಲಿ ಉದ್ಯಮ ಸ್ಥಾಪಿಸಿರುವ ಪುಣೆ ಮೂಲದ ಉದ್ಯಮಿಯೊಬ್ಬರು 'ಕನ್ನಡಿಗರ ಸಂಗಡ ಬದುಕಲು ಸಾಧ್ಯವಿಲ್ಲ, ಪುಣೆಗೆ ಸ್ಥಳಾಂತರಗೊಳ್ಳುವೆ' ಎಂದು ಧಮಕಿ ಹಾಕಿದ್ದು, ಕಮಲ್ ಹಾಸನ್‌ರ ವಿವಾದಾತ್ಮಕ ಹೇಳಿಕೆ ಪ್ರಕರಣದಲ್ಲಿ ಕೆಲವು ರಾಜಕಾರಣಿಗಳು ಅವರ ಚಲನಚಿತ್ರದ ಬಿಡುಗಡೆಗೆ ಸಹಕರಿಸಬೇಕೆಂದು ಕರೆಕೊಟ್ಟಿದ್ದು ಮುಂತಾದ ಘಟನೆಗಳು ಕನ್ನಡಿಗರನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿವೆ.

ತಮ್ಮಿಂದಲೇ ಬೆಂಗಳೂರು ಬೆಳಗುತ್ತಿದೆ, ಇನ್ನಷ್ಟು ಅಭಿವೃದ್ಧಿಯಾಗಿದೆ ಎಂಬ ಧಾಟಿಯ ಕೆಲವು ವಲಸಿಗರ ಧೋರಣೆ ಮತ್ತು ಅಟ್ಟಹಾಸಗಳು ಕನ್ನಡಿಗರನ್ನು ಗಾಢನಿದ್ರೆಯಿಂದ ಎಬ್ಬಿಸಿವೆ. ಹೀಗಾಗಿಯೇ, ಕನ್ನಡಿಗರನ್ನು ಘಾಸಿಗೊಳಿಸುವ ಯಾವುದೇ ಘಟನೆಗೆ- ಅದು ದೊಡ್ಡದಿರಲಿ ಅಥವಾ ಸಣ್ಣದಿರಲಿ- ಅವರು ಸ್ಪಂದಿಸುತ್ತಿದ್ದಾರೆ. ವಾಸ್ತವದಲ್ಲಿ, ಮೆಟ್ರೋ ನಿಲ್ದಾಣಗಳಲ್ಲಿ ಅಮುಲ್ ಉತ್ಪನ್ನಗಳ ಮಳಿಗೆಗೆ ಅನುವುಮಾಡಿಕೊಡುವ ವಿಷಯವು, ಬ್ಯಾಂಕುಗಳಲ್ಲಿನ ಕನ್ನಡೇತರ ಸಿಬ್ಬಂದಿಗಳು ತೋರುವ ತೇಂಕಾರದಷ್ಟು ಗಂಭೀರವಾಗಿಲ್ಲ. ಆದರೂ ಕನ್ನಡದ ಅಸ್ಮಿತೆಯನ್ನು ಕೈಬಿಡಲಾಗದ ಅನಿವಾರ್ಯತೆ ಕನ್ನಡಿಗರಿಗೆ ಇದೆ ಎಂಬುದನ್ನು ಪರಿಣಾಮಕಾರಿಯಾಗಿ ತೋರಿಸಿಕೊಟ್ಟ ಸಂದರ್ಭ ಇದಾಗಿದೆ. ಮತ್ತೊಬ್ಬರು ತಮ್ಮೆಡೆಗೆ ಬೆರಳನ್ನು ತೋರಿಸಿದರೆ, ಮುಷ್ಟಿಯನ್ನು ಬಿಗಿಹಿಡಿಯುವಷ್ಟರ ಮಟ್ಟಿಗೆ ಕನ್ನಡಿಗರು ಜಾಗೃತರಾಗಿದ್ದಾರೆ ಎಂಬ ಸಂದೇಶವಿಲ್ಲಿ ಧ್ವನಿಸುತ್ತದೆ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಹರಿ ಓಂ ಶಾಸ್ತ್ರೀ, ಶಂಕರಪುರ**
ಭಟ್ರೇ, ಕಾಲ್ತುಳಿತದಲ್ಲಿ ಕಂಗೆಟ್ಟ ಅಭಿಮಾನಿಗಳ ಲಕ್ಷಾಂತರ ಪಾದರಕ್ಷೆಗಳ ಸಂಗ್ರಹವನ್ನು ಕ್ರಿಕೆಟ್ ಸಂಸ್ಥೆ ಏನು ಮಾಡಿತು?
– **ಅವನ್ನು ತಮಗೇ ಎಸೆಯಬಹುದೆಂದು ಇಷ್ಟರೊಳಗೆ ಬೇರೆಡೆ ಸಾಗಿಸದೇ ಇರುತ್ತದಾ?!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ರೇ, ಈ ವರುಷದ ಸ್ವಚ್ಛತಾ ದಿನದಿಂದ ನನ್ನ ಮೊಬೈಲ್ ಅನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸಾಧ್ಯವೇ?
– **ಸಾಧ್ಯವಿದೆ... ಆದರೆ ಬರುವ ಮೆಸೇಜುಗಳು ಡರ್ಟಿಯಾಗಿದ್ದರೆ ಏನು ಮಾಡುತ್ತೀಯಾ?!**

- **ರಾಘೋಬ, ಮೈಸೂರು**
ಭಟ್ರೇ, ಉತ್ಸಾಹದಲ್ಲಿ ಬರೆದ ಲೇಖನಗಳನ್ನು ಸಂಪಾದಕರೇ ಕೈಯಾರೆ ಕಸದಬುಟ್ಟಿಗೆ ಕಿತ್ತೆಸೆದರೆ, ಆ ನೋವನ್ನು ಹಂಚಿಕೊಳ್ಳುವುದಾದರೂ ಯಾರೊಂದಿಗೆ?
– **ಓದುಗರ ಓಣಿ ನಿವಾಸಿಗಳೊಂದಿಗೆ!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಹೆಂಗಸರು ರಾತ್ರಿ ಮಲಗುವಾಗ ಧರಿಸುವ ನೈಟಿಯನ್ನು ಹಗಲು ಹೊತ್ತಲ್ಲೂ ಧರಿಸಿ ಊರೆಲ್ಲಾ ಅಡ್ಡಾಡಿದರೆ ಅದಕ್ಕೆ ಏನೆಂದು ಕರೆಯುತ್ತೀರಿ?
– **ಡೇಟಿ!**

- **ಪಂಚಮುಖಿ ಪ್ರಾಣೇಶ, ವಿದ್ಯಾಪೀಠ**
ಭಟ್ರೇ, ಭೈರಪ್ಪನವರಿಗೆ ಬುಕರ್ ಪ್ರಶಸ್ತಿ ಏಕೆ ಬಂದಿಲ್ಲ?
– **ಇದಕ್ಕಿಂತ ಮುನ್ನ ಟ್ರಂಪ್‌ಗೆ ನೊಬೆಲ್ ಶಾಂತಿ, ಮೊಯಿಲಿಗೆ ಜ್ಞಾನಪೀಠ, ಸಾಧು ಕೋಕಿಲಗೆ ಆಸ್ಕರ್ ಪ್ರಶಸ್ತಿಗಳು ಯಾವಾಗ ಬರುತ್ತವೆ ಹೇಳು!**

- **ಬೆಂ.ಮು.ಮಾರುತಿ, ಆವಲಹಳ್ಳಿ**
ಭಟ್ರೇ, ರಾಜ್ಯದಲ್ಲಿ ಕಾರ್ಮಿಕರ ಕೆಲಸದ ಅವಧಿ 10 ಘಂಟೆಗೆ ಹೆಚ್ಚಿಸಲು ಸರಕಾರ ಚಿಂತನೆ ನಡೆಸುತ್ತಿದೆಯಲ್ಲ?
– **ಚಿಂತಿಸಿದ್ದನ್ನೆಲ್ಲ ಜಾರಿಗೊಳಿಸುತ್ತಾರಾ?!**

- **ವೀರೇಶ ಬಳ್ಳಾರಿ, ಬಳ್ಳಾರಿ**
ಭಟ್ರೇ, ಮೊಟ್ಟೆ ಒಡೆದರೆ ಏನು ಬರುತ್ತೆ?
– **ಸದ್ಯ ನಿನ್ನ ಬೀಜ ಒಡೆದರೆ ಏನು ಬರುತ್ತೆ ಅಂತ ಯಾರೂ ಕೇಳಿಲ್ಲ ನೋಡು!**

- **ಗಾಣಗಾಪುರ ಪಾಂಡು, (ಇಮೇಲ್ ಮೂಲಕ)**
ಭಟ್ರೇ, ಎಷ್ಟೇ ದುಡಿದರೂ ಸಂಬಳ ಸಾಕಾಗುತ್ತಿಲ್ಲವಲ್ಲ?
– **ಆ ಸಂಬಳದಲ್ಲಿ ನನಗೆ ಕಮಿಷನ್ ಕೊಟ್ರೆ ಉಳಿತಾಯ ಮಾಡೋದು ಹೇಗೆ ಅನ್ನೋದನ್ನು ಹೇಳಬಹುದಪ್ಪಾ!**

- **ಜನ್ನು, ಬೆಂಗಳೂರು**
ಭಟ್ರೇ, ಈ ದಿನಗಳಲ್ಲಿ ಸತ್ಯ ಹೇಳುವುದು ತಪ್ಪಾ?
– **ಆದರೆ ತೀರಾ ಬಿ.ಆರ್.ಪಾಟೀಲ್ ಥರ ನೇರಾನೇರ ಹೇಳಬಾರದು ಅಂದ್ರಂತೆ ಡಿಕೆಶಿ!**

ಏರುಗತಿಯಲ್ಲೇ ಸಾಗುತ್ತಿರುವ ಏಶಿಯನ್ ಪೇಂಟ್ಸ್

ಬಾಡಿಗೆಯ ಗ್ಯಾರೇಜಿನಲ್ಲಿ ಆರಂಭವಾದ ಏಶಿಯನ್ ಪೇಂಟ್ಸ್ ಸಂಸ್ಥೆ ಹತ್ತು ವರ್ಷದ ಅವಧಿಯಲ್ಲಿ ವಾರ್ಷಿಕ 23 ಕೋಟಿ ರುಪಾಯಿಯ ವಹಿವಾಟು ಮಾಡುವ ಮಟ್ಟಕ್ಕೆ ಬೆಳೆದು ನಿಂತಿತು. ಅಷ್ಟೇ ಅಲ್ಲ, ಆರಂಭಗೊಂಡ 25 ವರ್ಷದ ಅವಧಿಯಲ್ಲಿ ದೇಶದ ಪೇಂಟ್ ತಯಾರಿಸುವ ಕಂಪನಿಗಳ ಪಟ್ಟಿಯಲ್ಲಿ ಮೊದಲನೆಯ ಸ್ಥಾನಕ್ಕೇರಿತು.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಎಲ್ಲಿಂದ ಆರಂಭಿಸೋಣ? ನಿಜವಾಗಿ ಕತೆ ಆರಂಭವಾಗುವುದು, ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಐದು ವರ್ಷಕ್ಕೂ ಮೊದಲು. ಆದರೂ, ಪೀಠಿಕೆಯಾಗಿ ನಾಲ್ಕು ದಶಕ ಹಿಂದಕ್ಕೆ ಹೋಗಿ, ಅಲ್ಲಿಂದ ಆರಂಭಿಸೋಣ.

ಸ್ವಾತಂತ್ರ್ಯಕ್ಕೂ ಮೊದಲು ಭಾರತದಲ್ಲಿ ಗೋಡೆಗೆ ಬಳಿಯುವ ಬಣ್ಣ ತಯಾರಿಸುವ ಕಂಪನಿಗಳೇ ಇರಲಿಲ್ಲ. ಬಣ್ಣಗಳು ಅಮೆರಿಕ, ಬ್ರಿಟನ್ ಮತ್ತು ಈಜಿಪ್ಟ್‌ನಿಂದ ಆಮದಾಗುತ್ತಿದ್ದವು. 1902ರಲ್ಲಿ ಪಶ್ಚಿಮ ಬಂಗಾಳದ ಹೌರಾದಲ್ಲಿ ಬಣ್ಣ ತಯಾರಿಸುವ ಮೊದಲ ಸಂಸ್ಥೆ ಆರಂಭವಾಯಿತು. ಶಾಲಿಮಾರ್ ಪೇಂಟ್ಸ್ ಹೆಸರಿನ ಕಂಪನಿ ಆರಂಭಿಸಿದ್ದು ಮಾತ್ರ ಬ್ರಿಟಿಷ್ ಪ್ರಜೆಗಳಾದ ಎ.ಎನ್. ರೈಟ್ ಮತ್ತು ಎ.ಎನ್. ಟರ್ನರ್. ಕಲ್ಕತ್ತಾದ ಪ್ರತಿಷ್ಠಿತ ಹೌರಾ ಬ್ರಿಜ್‌ನ ಲೋಹದಿಂದ ಹಿಡಿದು ದೆಹಲಿಯ ಸಂಸತ್ ಭವನದ ಗೋಡೆಯವರೆಗೆ ಶಾಲಿಮಾರ್ ಪೇಂಟ್ ಬಳಸಲಾಗುತ್ತಿತ್ತು. ಕತೆ ತಿರುವು ಪಡೆದದ್ದು (ಬಣ್ಣ ಬದಲಾದದ್ದು!) 1942ರಲ್ಲಿ.

ಆಗ ಎರಡನೆಯ ವಿಶ್ವ ಮಹಾಯುದ್ಧ ನಡೆಯುತ್ತಿದುದರಿಂದ ಬಹುತೇಕ ವಸ್ತುಗಳು ವಿದೇಶದಿಂದ ಭಾರತಕ್ಕೆ ಬರುವುದು ನಿಂತಿತ್ತು. ಜತೆಗೆ, ಗಾಂಧೀಜಿ ಆರಂಭಿಸಿದ ಕ್ವಿಟ್ ಇಂಡಿಯಾ ಚಳವಳಿಯೂ ತೀವ್ರವಾದದ್ದರಿಂದ, ವಿದೇಶಿ ಕಂಪನಿಗಳಿಗೆ ಭಾರತದಲ್ಲಿ ವ್ಯಾಪಾರ ದುಸ್ತರವಾಯಿತು, ಸ್ವದೇಶಿ ವಸ್ತುಗಳನ್ನು ಬಳಸುವಂತೆ ಜನರನ್ನು ಪ್ರೇರೇಪಿಸಲಾಯಿತು ಎನ್ನುವುದೆಲ್ಲ ಎಲ್ಲರಿಗೂ ತಿಳಿದಿರುವ ಕತೆಯೇ. ಆ ಸಂದರ್ಭವನ್ನು ಹಲವರು ಸರಿಯಾಗಿ ಬಳಸಿಕೊಂಡರು. ಬಿಸ್ಕತ್ತು ತಯಾರಿಸುವ ಪಾರ್ಲೆ ಕಂಪನಿಯ ವಿಷಯವನ್ನು ಹಿಂದೆ ಇದೇ ಅಂಕಣದಲ್ಲಿ ತಿಳಿಸಿದ್ದೆ. ಆ ಸಂದರ್ಭದ ಪ್ರಯೋಜನ ಪಡೆದವರಲ್ಲಿ ಚೋಕ್ಸಿ ಕೂಡ ಒಬ್ಬರು.

ಚೋಕ್ಸಿ ಎಂದಾಕ್ಷಣ ಎಲ್ಲರಿಗೂ ನೆನಪಾಗುವುದು ತಲೆಮರೆಸಿಕೊಳ್ಳುವುದಕ್ಕಾಗಿ ದೇಶ ಬಿಟ್ಟು ಓಡಿಹೋದ ಮೇಹುಲ್ ಚೋಕ್ಸಿ. ಆದರೆ ಇವರು ಆ ಚೋಕ್ಸಿ ಅಲ್ಲ. ಇವರು ಇಂದು ವಿಶ್ವದಾದ್ಯಂತ ಹೆಸರುವಾಸಿಯಾಗಿರುವ 'ಏಶಿಯನ್ ಪೇಂಟ್ಸ್' ಸಂಸ್ಥೆಯ ಉಗಮಕ್ಕೆ ಕಾರಣರಾದ ಚಂಪಕ್‌ಲಾಲ್ ಚೋಕ್ಸಿ. ಏಶಿಯನ್ ಪೇಂಟ್ಸ್‌ನ ಹುಟ್ಟು, ಬೆಳವಣಿಗೆ ಎಲ್ಲವನ್ನೂ ನೋಡಿದರೆ ಅದು ಯಾವ ಸಾಹಸಗಾಥೆಗೂ ಕಮ್ಮಿ ಎಂದೆನಿಸದು.

ಏಶಿಯನ್ ಪೇಂಟ್ಸ್ ಎಂಬ ಬಣ್ಣದ ಕಂಪನಿ ಆರಂಭಿಸುವಾಗ ಚಂಪಕ್‌ಲಾಲ್ ಚೋಕ್ಸಿ ಅವರಿಗೆ ಇಪ್ಪತ್ತಾರು ವರ್ಷ. ಚಂಪಕ್‌ಲಾಲ್ ತಮ್ಮ ಇತರ ಮೂವರು ಸ್ನೇಹಿತರಾದ ಚಮನ್‌ಲಾಲ್ ಚೋಕ್ಸಿ, ಸೂರ್ಯಕಾಂತ್ ದಾನಿ ಮತ್ತು ಅರವಿಂದ್ ವಕೀಲ್ ಅವರೊಂದಿಗೆ ಸೇರಿ ಪೇಂಟ್ ತಯಾರಿಸುವ ಕಂಪನಿ ಪ್ರಾರಂಭಿಸಲು ನಿರ್ಧರಿಸಿದರು. ಮೂವರು ಸ್ನೇಹಿತರಲ್ಲಿ ಒಬ್ಬರು ಮನೆಗೆ, ಇನ್ನೊಬ್ಬರು ವಾಹನಗಳಿಗೆ, ಮತ್ತೊಬ್ಬರು ಸೈಕಲ್‌ಗಳಿಗೆ ಬಣ್ಣ ಹಚ್ಚುವುದರಲ್ಲಿ ನಿಷ್ಣಾತರಾಗಿದ್ದರು. ಜೈನ ಸಮುದಾಯದ ನಾಲ್ವರೂ ಸೇರಿ ಸಂಸ್ಥೆಯನ್ನು ಮೊದಲು ಪ್ರಾರಂಭಿಸಿದ್ದು ಒಂದು ಪುಟ್ಟ ಗ್ಯಾರೇಜಿನಲ್ಲಿ. ಅದೇನು ಪವಾಡವೋ? ಕಾಕತಾಳೀಯವೋ ಗೊತ್ತಿಲ್ಲ, ಗ್ಯಾರೇಜ್‌ನಲ್ಲಿ ಆರಂಭಗೊಂಡ ಬಹುತೇಕ ಸಂಸ್ಥೆಗಳು ಹೆಸರು ಮಾಡುತ್ತವೆ. ಅಮೆಝಾನ್, ಗೂಗಲ್, ಮೈಕ್ರೊಸಾಫ್ಟ್, ಡಿಸ್ನಿ ಲ್ಯಾಂಡ್‌ನ ವಾಲ್ಟ್ ಡಿಸ್ನಿ ಮೊದಲಾದ ಕಂಪನಿಗಳಿಗೆಲ್ಲ ಗ್ಯಾರೇಜ್ ಉಗಮ ಸ್ಥಾನ. ಇರಲಿ, ಏಶಿಯನ್ ಪೇಂಟ್ಸ್ ಆರಂಭವಾದದ್ದು ಮುಂಬೈನ ಗಿರ್ಗಾವ್ ಪ್ರದೇಶದ ಗಾಯವಾಡಿಯಲ್ಲಿರುವ ಒಂದು ಪುಟ್ಟ ಗ್ಯಾರೇಜಿನಲ್ಲಿ. ಆಗ ಅದಕ್ಕೆ ತಿಂಗಳಿಗೆ 75 ರುಪಾಯಿ ಬಾಡಿಗೆ. ಕಂಪನಿಗೆ ಹೆಸರಿಡುವುದು ಏನೆಂದು ಹೊಳೆಯದಿದ್ದಾಗ ನಾಲ್ವರೂ ಸೇರಿ, ಕಣ್ಣು ಮುಚ್ಚಿ ಟೆಲಿಫೋನ್ ಡಿರೆಕ್ಟರಿಯ ಒಂದು ಪುಟ ತೆರೆಯುವುದು, ಆ ಪುಟದಲ್ಲಿರುವ ಮೊದಲ ಹೆಸರನ್ನೇ ತಮ್ಮ ಕಂಪನಿಗೂ ಇಡುವುದೆಂದು ನಿರ್ಧರಿಸಿದರು. ಹಾಗೆ ತೆರೆದಾಗ ಮೊದಲು ಕಂಡದ್ದು 'ಏಶಿಯನ್' ಆದದ್ದರಿಂದ, ಸಂಸ್ಥೆಗೆ ಏಶಿಯನ್ ಪೇಂಟ್ಸ್ ಎಂದು ನಾಮಕರಣ ಮಾಡಿದರು.

ಆರಂಭದಲ್ಲಿ ವ್ಯಾಪಾರ ಸುಲಭವಾಗಿರಲಿಲ್ಲ. ಶಾಲಿಮಾರ್ ಮತ್ತು ಇತರ ಕಂಪನಿಗಳು ತಮ್ಮ ವಿತರಕರಿಗೆ ಹೆಚ್ಚಿನ ಲಾಭಾಂಶ ನೀಡುತ್ತಿದ್ದುದರ ಜತೆಗೆ, ಹೊಸ ಕಂಪನಿಯ ಮೇಲೆ ಭರವಸೆಯೂ ಮೂಡುತ್ತಿರಲಿಲ್ಲವಾದ್ದರಿಂದ ಸ್ವಾಭಾವಿಕವಾಗಿಯೇ ವಿತರಕರು ಹಳೆಯ ಸರಕನ್ನೇ ಹೆಚ್ಚು ಪ್ರೋತ್ಸಾಹಿಸುತ್ತಿದ್ದರು. ಅದನ್ನು ಅರಿತ ಚಂಪಕ್‌ಲಾಲ್ ಹಳ್ಳಿಗಳಿಗೆ ಹೋಗಿ, ದೊಡ್ಡ ಕಂಪನಿಯ ಸಣ್ಣ ವಿತರಕರನ್ನು ಸಂಪರ್ಕಿಸಿದರು. ಕೆಲವು ಕಡೆ ಹೊಸ ವಿತರಕರನ್ನು ನಿಯೋಜಿಸಿದರು. ಮಧ್ಯವರ್ತಿಗಳಿಲ್ಲದೆ, ಕಂಪನಿಯೊಂದಿಗೆ ನೇರ ಸಂಪರ್ಕ ಏರ್ಪಟ್ಟಿದ್ದು ಅವರಿಗೂ ಖುಷಿಯ ವಿಚಾರವಾಗಿತ್ತು. ಅದರೊಂದಿಗೆ ಚಂಪಕ್‌ಲಾಲ್ ಇನ್ನೂ ಒಂದು ಉಡುಗೊರೆ ಕೊಟ್ಟಿದ್ದರು.

ಹಳ್ಳಿಗಳಲ್ಲಿ ತಮ್ಮ ಬಣ್ಣ ಮಾರಲು ನಿರ್ಣಯಿಸಿ ಚಂಪಕ್‌ಲಾಲ್ ಮೊದಲು ಹೋದದ್ದು ಸತಾರಾ ಪ್ರದೇಶದ ಸಾಂಗ್ಲಿಗೆ. ಭಾರತೀಯರ ಭಾವನೆಗೆ ಬಿರುಸಾದ ಬಾಂಧವ್ಯ ಬೆಸೆಯುವ ವಿಷಯಗಳಲ್ಲಿ ಹಬ್ಬ ಹರಿದಿನಗಳೂ ಒಂದು. ಆ ದಿನಗಳಲ್ಲಿ, ಸಾಂಗ್ಲಿಯಲ್ಲಿ ಸಂಕ್ರಾಂತಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿತ್ತು. ಅದರ ಪ್ರಯುಕ್ತ ರೈತರು ಗೋವುಗಳ, ವಿಶೇಷವಾಗಿ ಎತ್ತುಗಳ ಕೋಡಿಗೆ ಬಣ್ಣ ಹಚ್ಚುತ್ತಿದ್ದರು (ಆ ಪ್ರದೇಶದಲ್ಲಿ ಅದು ಇಂದಿಗೂ ಚಾಲ್ತಿಯಲ್ಲಿದೆ). ಅದನ್ನು ನೋಡಿದ ಚಂಪಕ್‌ಲಾಲ್ ಕೋಡಿಗೆ ಹಚ್ಚಲು ಬೇಕಾಗುವಷ್ಟು ಬಣ್ಣವನ್ನು ಉಚಿತವಾಗಿ ನೀಡಿದರು. ಇದನ್ನು ದೇಶದ ಇತರ ಕಡೆಗಳಿಗೂ ವಿಸ್ತರಿಸಿದರು. ಅಂತೆಯೇ, ದಕ್ಷಿಣ ಭಾರತದಲ್ಲಿ ಜನರು ತಮ್ಮ ಮನೆಯ ಹೊಸ್ತಿಲು, ಪ್ರಧಾನ ಬಾಗಿಲಿನ ಚೌಕಟ್ಟುಗಳಿಗೂ ಬಣ್ಣಗಳಿಂದ ಶೃಂಗರಿಸುತ್ತಿದ್ದುದನ್ನು ಕಂಡು, ಅವರಿಗೂ ಉಚಿತವಾಗಿ ಬಣ್ಣ ಹಂಚಿದರು. ಇದರಿಂದ ಏಶಿಯನ್ ಪೇಂಟ್ಸ್ ಜನರಿಗೆ ಬೇಗ ಆಪ್ತವಾಯಿತು. ಜನರಿಂದಲೇ ಬೇಡಿಕೆ ಬರಲು ಆರಂಭವಾದ್ದರಿಂದ ಮೊದಲು ಏಶಿಯನ್ ಪೇಂಟ್ಸ್ ಅನ್ನು ತಿರಸ್ಕರಿಸಿದ್ದ ವಿತರಕರು ಅವರಾಗಿಯೇ ಕೇಳಿಕೊಂಡು ಬರುವಂತಾಯಿತು. ಇಂದು ದೇಶದಾದ್ಯಂತ ಏಶಿಯನ್ ಪೇಂಟ್ಸ್‌ನ ಸುಮಾರು ಎಪ್ಪತ್ತು ಸಾವಿರ ವಿತರಕರಿದ್ದಾರೆ!

ಚಂಪಕ್‌ಲಾಲ್ ಮಹಾ ಮೇಧಾವಿ. ಮಾರುಕಟ್ಟೆಯನ್ನು ಚೆನ್ನಾಗಿ ಅಭ್ಯಾಸ ಮಾಡುವ ಬುದ್ಧಿವಂತ. ಆ ಕಾಲದಲ್ಲಿ ಎರಡು ಬಗೆಯ ಬಣ್ಣ ತಯಾರಾಗುತ್ತಿತ್ತು. ಒಂದು, ಕಾರ್ಖಾನೆಗಳಿಗೆ ಬಳಸುವ ಕಮ್ಮಿ ದರದ ಬಣ್ಣ, ಇನ್ನೊಂದು ಮನೆಗಳು, ವಾಣಿಜ್ಯ ಮಳಿಗೆಗಳಿಗೆ ಬಳಸುವ ಉತ್ತಮ ಗುಣಮಟ್ಟದ ಬಣ್ಣ. ಚಂಪಕ್‌ಲಾಲ್‌ಗೆ ಮೊದಲನೆಯದರ ಕಡೆ ಆಸಕ್ತಿ ಇರಲಿಲ್ಲ, ಮೊದಲಿಂದಲೂ ಗ್ರಾಹಕರ ಬೇಡಿಕೆಯ ಉತ್ಪನ್ನದ ಕಡೆಗೇ ಲಕ್ಷ್ಯ ಹರಿಸಿದರು. ಹೆಚ್ಚು ಬಳಕೆಯಾಗುತ್ತಿದ್ದುದು, ಖರ್ಚಾಗುತ್ತಿದ್ದುದು ಅದೇ ಆದ್ದರಿಂದ, ಅದರಲ್ಲಿಯೇ ಹಣ ಹೆಚ್ಚು ಎಂದು ಅವರು ಅರಿತಿದ್ದರು. ಆದರೆ, ಆಗ ಎರಡು ಬಗೆಯ ಪೇಂಟ್ ತಯಾರಾಗುತ್ತಿತ್ತು. ಒಂದು ಡ್ರೈ ಡಿಸ್ಟೆಂಪರ್, ಇನ್ನೊಂದು ಪ್ಲಾಸ್ಟಿಕ್ ಎಮಲ್ಶನ್. ಡಿಸ್ಟೆಂಪರ್‌ನ ಬೆಲೆ ಕಡಿಮೆ. ಆದರೆ ಬಣ್ಣ ಕಿತ್ತು ಬರುವುದು, ಬಟ್ಟೆಗೆ ಅಂಟಿಕೊಳ್ಳುವುದು, ವಾಸನೆ ಬರುವುದು, ಇತ್ಯಾದಿ ಕೆಲವು ಅನನುಕೂಲತೆಗಳಿದ್ದವು. ಪ್ಲಾಸ್ಟಿಕ್ ಎಮಲ್ಶನ್‌ನಲ್ಲಿ ಇದ್ಯಾವುದೂ ಇರಲಿಲ್ಲ, ಆದರೆ ಬೆಲೆ ಐದು ಪಟ್ಟು ಹೆಚ್ಚಾಗಿತ್ತು. ಚಂಪಕ್‌ಲಾಲ್ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕೆಂದು ನಿರ್ಣಯಿಸಿದರು. ಆಗ ಹುಟ್ಟಿಕೊಂಡದ್ದೇ, ಭಾರತದ ಬಣ್ಣದ ಜಗತ್ತಿನಲ್ಲಿ ಕ್ರಾಂತಿ ಹುಟ್ಟಿಸಿದ, ಎಮಲ್ಶನ್‌ನ ಎಲ್ಲಾ ಗುಣಗಳನ್ನೂ ಹೊಂದಿರುವ, ಬೆಲೆಯೂ ಕಮ್ಮಿ ಇರುವ ವಾಶೆಬಲ್ ಡಿಸ್ಟೆಂಪರ್. ಇದನ್ನು ಜನರು ಅಪ್ಪಿಕೊಂಡರು. ಇದರಿಂದಾಗಿ ತಿಂಗಳಿಗೆ 75 ರುಪಾಯಿ ಬಾಡಿಗೆಯ ಗ್ಯಾರೇಜಿನಲ್ಲಿ ಆರಂಭವಾದ ಸಂಸ್ಥೆ ಹತ್ತು ವರ್ಷದ ಅವಧಿಯಲ್ಲಿ ವಾರ್ಷಿಕ 23 ಕೋಟಿ ರುಪಾಯಿಯ ವಹಿವಾಟು ಮಾಡುವ ಮಟ್ಟಕ್ಕೆ ಬೆಳೆದು ನಿಂತಿತು. ಅಷ್ಟೇ ಅಲ್ಲ, ಆರಂಭಗೊಂಡ 25 ವರ್ಷದ ಅವಧಿಯಲ್ಲಿ ದೇಶದ ಪೇಂಟ್ ತಯಾರಿಸುವ ಕಂಪನಿಗಳ ಪಟ್ಟಿಯಲ್ಲಿ ಮೊದಲನೆಯ ಸ್ಥಾನಕ್ಕೇರಿತು. ಅಂದಿನಿಂದ ಇಂದಿನವರೆಗೂ, ಏಶಿಯನ್ ಪೇಂಟ್ಸ್ ಈ ಸ್ಥಾನವನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ. ಸಂಸ್ಥೆ ಇಂದು ಏಷ್ಯಾದ ಪೇಂಟ್ ತಯಾರಿಸುವ ಸಂಸ್ಥೆಗಳ ಪಟ್ಟಿಯಲ್ಲಿ ಎರಡನೆಯ ಸ್ಥಾನದಲ್ಲಿದೆ, ವಿಶ್ವದ ಉತ್ಪಾದಕರ ಪಟ್ಟಿಯಲ್ಲಿ ಮೊದಲ ಐದರ ಸ್ಥಾನದಲ್ಲಿದೆ. ಭಾರತದಲ್ಲಿ ಹತ್ತು, ಶ್ರೀಲಂಕಾ ಮತ್ತು ನೇಪಾಳದಲ್ಲಿ ತಲಾ ಎರಡು, ಇಥಿಯೋಪಿಯಾದಲ್ಲಿ ಮೂರು, ಯುಎಇ, ಬಹ್ರೈನ್, ಒಮಾನ್, ಬಾಂಗ್ಲಾದೇಶ, ಫಿಜಿ ಮುಂತಾದ ದೇಶಗಳಲ್ಲಿ ತಲಾ ಒಂದರಂತೆ ಹತ್ತಕ್ಕೂ ಹೆಚ್ಚು ದೇಶಗಳಲ್ಲಿ 25ಕ್ಕೂ ಹೆಚ್ಚು ಉತ್ಪಾದನಾ ಘಟಕ ಹೊಂದಿದೆ. ಸಂಸ್ಥೆಯ ಆಮದನಿಯ ಶೇಕಡಾ 45ಕ್ಕೂ ಹೆಚ್ಚು ವಿದೇಶಗಳಿಂದ ಬರುತ್ತಿದೆ.

ಏಶಿಯನ್ ಪೇಂಟ್ಸ್‌ನ ಸಾಹಸ ಅಲ್ಲಿಗೇ ನಿಲ್ಲಲಿಲ್ಲ. 1970ರಲ್ಲಿ, ಅಂದರೆ ಮುಂಬೈನ ಐಐಟಿ ಮತ್ತು ಇಸ್ರೋ ಸಂಸ್ಥೆಗಿಂತಲೂ ಹತ್ತು ವರ್ಷ ಮೊದಲೇ ಸಂಸ್ಥೆ ಎಂಟು ಕೋಟಿ ರುಪಾಯಿ ಬೆಲೆ ಬಾಳುವ ಸೂಪರ್ ಕಂಪ್ಯೂಟರ್ ಅನ್ನು ಖರೀದಿಸಿತ್ತು. 1999ರಲ್ಲಿ ಸರಕು ಪೂರೈಕೆ ಮತ್ತು ನಿರ್ವಹಣೆಯಲ್ಲಿ ಬಳಸುವ ಅಮೆರಿಕದ ತಂತ್ರಜ್ಞಾನವನ್ನು ಭಾರತಕ್ಕೆ ಪರಿಚಯಿಸಿದ್ದೂ ಇದೇ ಸಂಸ್ಥೆ. ಸಂಸ್ಥೆ 2010ರಿಂದ 2015ರ ವೇಳೆಗೆ ತನ್ನ ಸರಕು ಸಾಗಿಸುವ ಎಲ್ಲಾ ವಾಹನಗಳಲ್ಲೂ ಜಿಪಿಎಸ್ ಅಳವಡಿಸಿತು. ಐಐಎಮ್, ಐಐಟಿಯಲ್ಲಿ ಓದಿದವರನ್ನು ಕೆಲಸಕ್ಕೆ ಸೇರಿಸಿಕೊಂಡು ತಂತ್ರಜ್ಞಾನಕ್ಕೆ ಒತ್ತುಕೊಟ್ಟಿತು. ಇದರಿಂದಾಗಿ ಮನುಷ್ಯರಿಗಿಂತ ಯಂತ್ರಗಳನ್ನು ಹೆಚ್ಚು ಬಳಸಿ ಪೇಂಟ್ ತಯಾರಿಸಲು ಅನುಕೂಲವಾಯಿತು. 1980ರಲ್ಲಿ ಮುಂಬೈನ ಭಾಂಡುಪ್‌ನಲ್ಲಿ ಆರಂಭಿಸಿದ ಕಾರ್ಖಾನೆಯಲ್ಲಿ ಒಂದೂವರೆ ಸಾವಿರ ಜನರು ಕೆಲಸಮಾಡುತ್ತಿದ್ದರು. ಇಂದು ಅದೇ ಪ್ರಮಾಣದ, ಹೊಸ ಕಾರ್ಖಾನೆಗಳನ್ನು ಸಂಸ್ಥೆ ನೂರು ಜನರಿಂದ ಆರಂಭಿಸುವ ಮಟ್ಟಕ್ಕೆ ಬಂದು ನಿಂತಿದೆ. ಆದಾಗ್ಯೂ, ಸಂಸ್ಥೆ ಏಳೂವರೆ ಸಾವಿರಕ್ಕೂ ಹೆಚ್ಚು ಜನರಿಗೆ ಕೆಲಸ ಒದಗಿಸಿಕೊಟ್ಟಿದೆ. ಸುಮಾರು ಇನ್ನೂರಕ್ಕೂ ಹೆಚ್ಚು ಜನರನ್ನು ಸಂಶೋಧನೆಯಲ್ಲಿ ತೊಡಗಿಸಿದೆ.

ಇದೆಲ್ಲದರ ಜತೆಗೆ ಸಂಸ್ಥೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿತ್ತು. ಅದುವರೆಗೆ ವಿತರಕರು ಎಲ್ಲಾ ಬಣ್ಣದ ಪೇಂಟ್‌ಗಳನ್ನು ತಮ್ಮ ಬಳಿ ದಾಸ್ತಾನು ಇಟ್ಟುಕೊಳ್ಳಬೇಕಾಗಿತ್ತು. ಅದಕ್ಕೆ ವರವಾಗಿ ಬಂದದ್ದು ಪೇಂಟ್ ಟಿಂಟಿಂಗ್ ಮಷಿನ್. ಅದು ಎರಡು ಬಗೆಯ ಬಣ್ಣವನ್ನು ಸೇರಿಸಿ ಇನ್ನೊಂದು ಬಣ್ಣವನ್ನಾಗಿ ಮಾರ್ಪಡಿಸುವ ವಿಧಾನ ಅಥವಾ ಸಾಧನ. ಉದಾಹರಣೆಗೆ, ಕೆಂಪು ಮತ್ತು ಹಳದಿ ಸೇರಿಸಿ ಕೇಸರಿ ಬಣ್ಣ ತಯಾರಿಸಿದಂತೆ. ಇದರಿಂದ ವಿತರಕರು ಕೆಲವೇ ಬಣ್ಣ ಇಟ್ಟುಕೊಂಡು, ಗ್ರಾಹಕರಿಗೆ ನೂರಾರು ಬಣ್ಣ ತಯಾರಿಸಿಕೊಡಲು ದಾರಿ ಮಾಡಿಕೊಟ್ಟಿತು. ಆ ಒಂದು ಸಾಧನವನ್ನು ಇಟ್ಟುಕೊಂಡು ಗ್ರಾಹಕರ ಕಣ್ಣೆದುರಿಗೇ ಅವರಿಗೆ ಬೇಕಾದ ಬಣ್ಣ ತಯಾರಿಸುವಂತಾಯಿತು. ಇಂದು ಏಶಿಯನ್ ಪೇಂಟ್ಸ್‌ನ ಐವತ್ತು ಸಾವಿರಕ್ಕೂ ಹೆಚ್ಚು ಇಂಥ ಸಾಧನಗಳು ವಿತರಕರ ಬಳಿ ಇವೆ. ದೇಶದ ಎರಡನೆಯ ಮತ್ತು ಮೂರನೆಯ ಸ್ಥಾನದಲ್ಲಿರುವ ಬರ್ಜರ್ ಮತ್ತು ನೆರೊಲ್ಯಾಕ್ ಪೇಂಟ್ ಎರಡನ್ನು ಸೇರಿಸಿದರೂ 45 ಸಾವಿರದ ಗಡಿ ದಾಟುವುದಿಲ್ಲ. ವ್ಯಾಪಾರದಲ್ಲಿಯೂ ಅಷ್ಟೇ, ಏಶಿಯನ್ ಪೇಂಟ್ಸ್ ಇಂದು 25 ಸಾವಿರ ಕೋಟಿ ರುಪಾಯಿಗಳ ವಹಿವಾಟು ನಡೆಸಿದರೆ, ಬರ್ಜರ್ ಮತ್ತು ನೆರೊಲ್ಯಾಕ್ ಎರಡರ ವಹಿವಾಟು ಸೇರಿಸಿದರೂ 13 ಸಾವಿರ ಕೋಟಿಯ ಒಳಗೇ ನಿಲ್ಲುತ್ತದೆ.

ನೀವು ಕುಳಿತ ಕೋಣೆಯ ಗೋಡೆಯನ್ನೊಮ್ಮೆ ನೋಡಿ. ಅದೂ ಏಶಿಯನ್ ಪೇಂಟ್ಸ್ ತಯಾರಿಸಿದ ಬಣ್ಣ ಹೊತ್ತಿರುವ ಸಾಧ್ಯತೆ ಇದೆ. ಏಕೆಂದರೆ ಇಂದು ಭಾರತದ ಶೇಕಡಾ 50ರಷ್ಟು ಕಟ್ಟಡಗಳಿಗೆ ಏಶಿಯನ್ ಪೇಂಟ್ಸ್ ಪ್ರಮುಖ ಶೃಂಗಾರ ಸಾಧನ. ಉಳಿದ ಎಲ್ಲ ಸಂಸ್ಥೆಗಳು ಸೇರಿ ತಯಾರಿಸುವುದು ಉಳಿದ ಐವತ್ತು ಭಾಗವನ್ನು. ಬದ್ಧತೆ, ಮುಂದಾಲೋಚನೆ, ಕೌಶಲ ಅಳವಡಿಸಿಕೊಂಡರೆ ಮಾರುಕಟ್ಟೆಯಲ್ಲಿ ಹೇಗೆ ಸಾರ್ವಭೌಮತ್ವ ಸಾಧಿಸಬಹುದು ಎನ್ನುವುದಕ್ಕೆ ಏಶಿಯನ್ ಪೇಂಟ್ಸ್ ಉತ್ತಮ ಉದಾಹರಣೆ.

ಸುವಿಚಾರ

ವಿದ್ಯಾಶಂಕರ ಶರ್ಮ

ದ್ವೇಷವನ್ನು ಗೆಲ್ಲುವ ಬಗೆ

ಇಂದಿನ ಜಗತ್ತು ಬಹು ವೇಗವಾಗಿ ಓಡುತ್ತಿದೆ. ಮನುಷ್ಯನು ದಿನವೂ ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಾ, ತನ್ನ ಸುಖದ ಅನುಭವವನ್ನು ಹೆಚ್ಚಿಸಿಕೊಳ್ಳಲು ನಿರಂತರವಾಗಿ ಶ್ರಮಿಸುತ್ತಿದ್ದಾನೆ. ಇವೆಲ್ಲವುಗಳ ಮಧ್ಯದಲ್ಲಿ ಮಾನವಸಹಜ 'ರಾಗ-ದ್ವೇಷ'ಗಳು ಕೂಡ ಏರುಗತಿಯಲ್ಲಿವೆ. ಅದರಲ್ಲೂ ದ್ವೇಷದ ಕಿಚ್ಚು ಇಡೀ ಪ್ರಪಂಚವನ್ನು ಕಾಡುತ್ತಿದೆ. ಇಂಥ ಮನಸ್ಥಿತಿಯ ಬದಲಾವಣೆಗೆಂದು ನಮ್ಮ ಮೂಲ ಚಿಂತನೆಗೆ ಹೊಳಪು ನೀಡಬೇಕಾದ ಅವಶ್ಯಕತೆ ಇದೆ.

ನಾವು ಯಾವುದೇ ಕ್ಷೇತ್ರದಲ್ಲಿರಲಿ, ಅಲ್ಲಿನ ನಮ್ಮ ಕಾರ್ಯಕ್ಷಮತೆ ಅಥವಾ ಸಾಧನೆಯ ಮಟ್ಟ ಕೆಳಗಿಳಿಯುತ್ತಿದೆ ಎಂದು ನಮಗೆ ಅನಿಸಿದಾಗ, ನಮ್ಮ ಕಲಿಕೆಯ ಮೂಲಕ್ಕೆ ನಾವು ಹೋಗಬೇಕಾಗುತ್ತದೆ- 'ಮೂಲಕ್ಕೆ ತೆರಳು' ಎನ್ನುವಂತೆ. ಭಾರತೀಯ ಸಂಸ್ಕೃತಿಯ ಮೂಲ ಚಿಂತನೆಯು ಇಡೀ ಜಗತ್ತಿಗೆ ಮಾದರಿಯಾಗಿದೆ. ನಾವು ಇತರರನ್ನು, ನಮಗಿಂತ ಭಿನ್ನವಾಗಿ ನೋಡುವುದರಲ್ಲಿಯೇ ದ್ವೇಷದ ಮೂಲ ಬೇರು ಇದೆ ಎನ್ನಬಹುದು. ನಾವು ಎಲ್ಲರನ್ನೂ ನಮ್ಮಂತೆಯೇ ಕಂಡಾಗ, ಈ ದ್ವೇಷ-ಅಸೂಯೆ ಎಂಬ ನಕಾರಾತ್ಮಕ ಅಂಶಗಳು ತಾನೇತಾನಾಗಿ ಕರಗಿಹೋಗುತ್ತವೆ. 'ಈಶಾವಾಸ್ಯ ಉಪನಿಷತ್'ನಲ್ಲಿ, ''ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನು ಪಶ್ಯತಿ । ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥'' ಎಂದು ಹೇಳಲಾಗಿದೆ. ಅಂದರೆ, ಯಾರು ಎಲ್ಲರಲ್ಲೂ ತನ್ನ ಆತ್ಮವನ್ನೇ ಕಾಣುತ್ತಾನೋ, ಅವನು ಯಾರ ಬಗ್ಗೆಯೂ ದ್ವೇಷ, ನಿಂದನೆ ಹೊಂದುವುದಿಲ್ಲ; ಎಲ್ಲರಲ್ಲೂ ಪ್ರೇಮಭಾವವನ್ನು ಹೊಂದಿರುತ್ತಾನೆ ಎಂದರ್ಥ. ಎಂಥ ಉದಾತ್ತ ಚಿಂತನೆ ಅಲ್ಲವೇ? ಎಲ್ಲರಲ್ಲಿ ಅಡಕವಾಗಿರುವ ಆತ್ಮಚೈತನ್ಯವು ಒಂದೇ ಆಗಿರುವಾಗ, ಪರಸ್ಪರ ದ್ವೇಷ, ಅಸೂಯೆಗಳಿಗೆ ಜಾಗವಿರದು.

ಪ್ರಸ್ತುತ ಇಂಥ ವಿಚಾರಧಾರೆಯ ತುರ್ತು ಅವಶ್ಯಕತೆಯಿದೆ. ಯಾವಾಗ ನಮಗೆ, ಇತರರು ನಮಗಿಂತ ಬೇರೆಯವರು/ಭಿನ್ನರು ಎಂಬ ಭಾವನೆ ಬರುತ್ತದೋ, ಆಗ ಅವರಲ್ಲಿ ನಮಗೆ ದೌರ್ಬಲ್ಯಗಳು, ದುರ್ಗುಣಗಳು ಕಾಣಿಸಲಾರಂಭಿಸುತ್ತವೆ. ಯಾವಾಗ ವಿಶ್ವದ ಜನರೆಲ್ಲ ಸಮದರ್ಶಿಗಳಾಗುವರೋ ಆಗ ಎಲ್ಲ ಬಗೆಯ ಭಾವವಿಕಾರಗಳೂ ನಾಶವಾಗುತ್ತವೆ.

'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ಎಂಬ ಸರ್ವಜ್ಞನ ಮಾತಿನಲ್ಲೂ ಈ ಭಾವವೇ ಇರುವುದು. 'ನಮ್ಮಂತೆಯೇ ಎಲ್ಲರೂ, ನಮ್ಮೆಲ್ಲರನ್ನು ಬೆಳಗುವ ಚೈತನ್ಯ ಒಂದೇ' ಎಂಬ ಸತ್ಯದ ಅರಿವಾದಾಗ, ಇಡೀ ಮಾನವಕುಲವು ಸುಖ ಮತ್ತು ಶಾಂತಿಯ ಬದುಕಿನೆಡೆಗೆ ಸಾಗಬಲ್ಲದು. ಉಪನಿಷತ್ತಿನ ಮತ್ತು ಸರ್ವಜ್ಞನ ಮಾತುಗಳು ದೇಶ, ಕಾಲ, ಜಾತಿ, ಮತದ ಎಲ್ಲೆಗಳಿಗೆ ಸೀಮಿತವಾಗಿಲ್ಲ. ಇಂಥ ಲೋಕಕಲ್ಯಾಣಕರ ವಿಚಾರಗಳಿಂದ ಜನರು ಇಂದು ದೂರವಾಗಿರುವುದೇ ಎಲ್ಲ ವಿಪ್ಲವಗಳಿಗೆ ಮೂಲವಾಗಿದೆ.

ಉಕ್ರೇನ್ ಮತ್ತು ರಷ್ಯಾ ನಡುವಿನ ಸಂಘರ್ಷ ನಿಲ್ಲುತ್ತಿಲ್ಲ. ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವೆ ನಡೆದ ಭೀಕರ ಹಣಾಹಣಿಯಿಂದಾಗಿ ಸಾವಿರಾರು ಜನರು ಸತ್ತರು, ಗಣನೀಯ ಸಂಖ್ಯೆಯ ಜನರು ಗಾಯಗೊಂಡರು. ಈಗ ಇರಾನ್ ಮತ್ತು ಇಸ್ರೇಲ್ ನಡುವೆ ಭೀಕರ ಹಣಾಹಣಿ ನಡೆಯುತ್ತಿದೆ, ಇದಕ್ಕೆ ಅಮೆರಿಕವೂ ಈಗ ಸೇರ್ಪಡೆಗೊಂಡಿದೆ. ಶಾಂತಿ ಮತ್ತು ನೆಮ್ಮದಿಯ ಅರ್ಥ ಗೊತ್ತಿಲ್ಲದವರು ಮಾತ್ರ ಇಂಥ ಕಿತ್ತಾಟಗಳಿಗೆ ಶುರುವಿಟ್ಟುಕೊಳ್ಳುತ್ತಾರೆ ಹಾಗೂ ಮುಂದುವರಿಸಿಕೊಂಡು ಹೋಗುತ್ತಾರೆ.

ಪ್ರಪಂಚದ ಎಲ್ಲ ಗೋಜಲು ಮತ್ತು ಗೊಂದಲಗಳನ್ನು ಸೃಷ್ಟಿ ಮಾಡುವವನೇ ಮನುಷ್ಯ. ಅವನ ವಿಚಾರಧಾರೆಯಲ್ಲಿ ಹೊಳಪು ಬರಬೇಕು, ಅಲ್ಲಿಯವರೆಗೆ ದ್ವೇಷ-ದಳ್ಳುರಿಗಳಿಗೆ ಅಂತ್ಯ ಸಿಗದು. 'ವಸುಧೈವ ಕುಟುಂಬಕಂ' ಎಂಬ ಉದಾತ್ತ ಮೌಲ್ಯವು ಜಗತ್ತಿನ ತುಂಬ ಆವರಿಸಿದರೆ, ಇಡೀ ಪ್ರಪಂಚದ ಜನರು ತಮ್ಮ ಬದುಕಿನ ಹಾದಿಯಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಣಬಹುದು.

(ಲೇಖಕರು ಹವ್ಯಾಸಿ ಬರಹಗಾರರು)

ಮನಸ್ಸು ಮಾಡಿದ್ದರೆ, ತುರ್ತುಪರಿಸ್ಥಿತಿಯಲ್ಲಿ ಗರೀಬೀ ಹಟಾವ್ ಆಗಿಬಿಡುತ್ತಿತ್ತು!

ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಹೇರಿದ ತುರ್ತು ಪರಿಸ್ಥಿತಿಯ ಅಂಧಕಾರ ಪರ್ವವನ್ನು ಅನುಭವಿಸಿದವರು ಮಾತ್ರವೇ, ಆ ನೋವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲರು. ಸೆರೆಮನೆಯಲ್ಲಿದ್ದವರಿಗೆ ಎಂದಿಗೆ ಬಿಡುಗಡೆ ಎಂಬುದೂ ಗೊತ್ತಿರಲಿಲ್ಲ. ಅಂತೆಯೇ, ಹೊರಗಡೆ ಇದ್ದವರಿಗೋ ಮನೆಯೊಳಗೆ ಮತ್ತು ಮನೆಯ ಹೊರಗೆ ನಿರಂತರವಾಗಿ ಮಾಸ್ಕ್ ಹಾಕಿಕೊಂಡ ಅನುಭವ, ನೀರೊಳಗೆ ಬಿದ್ದು ಉಸಿರು ಕಟ್ಟಿದ ಅನುಭವ, ಕಣ್ಣಿಗೆ ಹಾಕಿಕೊಂಡ ಪಟ್ಟಿ, ಕಿವಿಯಲ್ಲಿ ತುರುಕಿಕೊಂಡ ಹತ್ತಿ ಎಂದಿಗೆ ತೆಗೆದೇವು ಎಂಬಂಥ ಚಡಪಡಿಕೆ!

ಕ್ರಿಯಾಲೋಪ

ಮಂಜುನಾಥ ಅಜ್ಜಂಪುರ
vveditoped@gmail.com

ಆ ದಿನಗಳು ನನಗಿನ್ನೂ ಚೆನ್ನಾಗಿ ನೆನಪಿವೆ. ಅರ್ಧ ಶತಮಾನದ ಹಿಂದೆ, ಅಂದರೆ 1975ರ ಜೂನ್ 26ರ ಬೆಳಗ್ಗೆ ಇಂದಿರಾ ಗಾಂಧಿಯವರು ಮಾಡಿದ್ದ ರೇಡಿಯೋ ಭಾಷಣವೂ ನೆನಪಿದೆ. ತುರ್ತುಪರಿಸ್ಥಿತಿಯ ಘೋಷಣೆಯನ್ನು ಸಮರ್ಥಿಸಿಕೊಂಡರಾದರೂ ಅವರ ಧ್ವನಿ ನಡುಗುತ್ತಿತ್ತು. ನಂತರದ್ದು ಇತಿಹಾಸ. ತುರ್ತುಪರಿಸ್ಥಿತಿಯ ಬಹು-ಆಯಾಮಗಳ ಆಘಾತಗಳ ಬಗೆಗೆ ಎಷ್ಟು ಬೇಕಾದರೂ ಬರೆಯಬಹುದು. ಅದು ಮುಗಿಯದಂಥ ಸರಕು.

ನಡುಗಿತು ಪ್ರಜಾಪ್ರಭುತ್ವ

ನನಗೆ ತುಂಬಾ ವ್ಯಥೆ ಉಂಟುಮಾಡಿದುದು ಎಂದರೆ, ಅಪರಿಮಿತ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದ ಮತ್ತು ವಿರೋಧ ಪಕ್ಷಗಳನ್ನು ತುಳಿದೇಹಾಕಿದ್ದ ಇಂದಿರಾ ಅವರು ಮನಸ್ಸು ಮಾಡಿದ್ದರೆ, ತುರ್ತುಪರಿಸ್ಥಿತಿಯ ತಮ್ಮ ನಿರಂಕುಶ ಆಳ್ವಿಕೆಯಲ್ಲಿ ದೇಶದ ಪ್ರಗತಿ, ಅಭಿವೃದ್ಧಿಗಳನ್ನು ನಿಜವಾಗಿಯೂ ಸಾಧಿಸಬಹುದಿತ್ತು, ವಾಗ್ದಾನ ನೀಡಿದ್ದಂತೆ 'ಗರೀಬೀ ಹಟಾವ್' ಮಾಡಬಹುದಿತ್ತು. ಆದರೆ ಅವರು ಏನೂ ಮಾಡಲಿಲ್ಲ, ಏನೇನೂ ಮಾಡಲಿಲ್ಲ. ಆ ಕರಾಳ ಅವಧಿಯಲ್ಲಿ ಪೊಲೀಸರ, ಅಧಿಕಾರಶಾಹಿಯ, ತೆರಿಗೆ ಅಧಿಕಾರಿಗಳ ದಮನಚಕ್ರ ಮಾತ್ರವೇ ಉರುಳುತ್ತಿತ್ತು. ಅಧಿಕಾರಿಗಳು ಆಡಿದ್ದೇ ಆಟ. ಹಾಗೆ ನೋಡಿದರೆ, ಹತ್ತು ವರ್ಷಗಳಲ್ಲಿ ಮಾಡಬಹುದಾದ ದೇಶಾಭಿವೃದ್ಧಿಯ ಕೆಲಸವನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೆ, ಎರಡೇ ವರ್ಷಗಳಲ್ಲಿ ಮುಗಿಸಿಬಿಡಬಹುದಿತ್ತು. ಸತ್ಯಸಂಗತಿಯೇನೆಂದರೆ, ಇಂದಿರಾ ಗಾಂಧಿ ಮತ್ತು ಅವರ ಪಟಾಲಮ್ಮಿಗೆ ಅಭಿವೃದ್ಧಿಯ ಕಡೆ ಯಾವ ಗಮನವೂ ಇರಲಿಲ್ಲ; ಅವರ ಕಣ್ಮುಂದೆ ಒಳ್ಳೆಯ ಕೆಲಸ ಮಾಡುವ ಯಾವುದೇ ಗುರಿ-ಉದ್ದೇಶಗಳೇ ಇರಲಿಲ್ಲ. ಅದು ಬಿಡಿ, ಅಂದಿನ ಅನೇಕ ಹಿರಿಯ ಪತ್ರಕರ್ತರು, ಇತಿಹಾಸಕಾರರು ಈ ವಾಸ್ತವವನ್ನು ದಾಖಲಿಸಲು ಮರೆತದ್ದು ಸಹ ನಿಜವಾಗಿಯೂ ನೋವಿನ ಸಂಗತಿ.

ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಹೇರಿದ ತುರ್ತು ಪರಿಸ್ಥಿತಿಯ ಅಂಧಕಾರ ಪರ್ವವನ್ನು ಅನುಭವಿಸಿದವರು ಮಾತ್ರವೇ, ಆ ನೋವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲರು. ಸೆರೆಮನೆಯಲ್ಲಿದ್ದವರಿಗೆ ಎಂದಿಗೆ ಬಿಡುಗಡೆ ಎಂಬುದೂ ಗೊತ್ತಿರಲಿಲ್ಲ. ಅಂತೆಯೇ, ಹೊರಗಡೆ ಇದ್ದವರಿಗೋ ಮನೆಯೊಳಗೆ ಮತ್ತು ಮನೆಯ ಹೊರಗೆ ನಿರಂತರವಾಗಿ ಮಾಸ್ಕ್ ಹಾಕಿಕೊಂಡ ಅನುಭವ, ನೀರೊಳಗೆ ಬಿದ್ದು ಉಸಿರು ಕಟ್ಟಿದ ಅನುಭವ, ಕಣ್ಣಿಗೆ ಹಾಕಿಕೊಂಡ ಪಟ್ಟಿ, ಕಿವಿಯಲ್ಲಿ ತುರುಕಿಕೊಂಡ ಹತ್ತಿ ಎಂದಿಗೆ ತೆಗೆದೇವು ಎಂಬಂಥ ಚಡಪಡಿಕೆ!

ನೀವು ಭಾರತೀಯರೋ, ರಾಷ್ಟ್ರೀಯರೋ?

ತಮ್ಮ ಅಧಿಕಾರ ಉಳಿಸಿಕೊಳ್ಳುವ ಏಕೈಕ ದುರುದ್ದೇಶದಿಂದ ಇಂದಿರಾ ಗಾಂಧಿಯವರು ದೇಶದಾದ್ಯಂತ ಆಂತರಿಕ ತುರ್ತು ಪರಿಸ್ಥಿತಿ ಹೇರಿದ್ದರು. ಎಲ್ಲ ಮಾಧ್ಯಮದವರು, ಹೋರಾಟಗಾರರು, ಬುದ್ಧಿಜೀವಿಗಳು, ಬಹುತೇಕ ವಿರೋಧ ಪಕ್ಷಗಳವರು ಶರಣಾಗತರಾಗಿಬಿಟ್ಟಿದ್ದರು, ಅಷ್ಟೇ ಅಲ್ಲ, ಮನೆಯಲ್ಲಿ ಮಂಚದ ಅಡಿಯಲ್ಲಿ ಅಡಗಿಕೊಂಡುಬಿಟ್ಟಿದ್ದರು. ತುರ್ತುಪರಿಸ್ಥಿತಿಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಅದರ ಪರಿವಾರದ ಸಂಘಟನೆಗಳು ಮಾತ್ರವೇ ವಿರೋಧಿಸುತ್ತಿದ್ದುದರಿಂದ ಇಂದಿರಾ ಗಾಂಧಿಯವರು ಆರೆಸ್ಸೆಸ್ ಎಂದರೆ ಸಿಡಿಮಿಡಿಗೊಳ್ಳುತ್ತಿದ್ದರು.

1975ರ ಗಾಂಧಿ ಜಯಂತಿ ಒಂದು ವಿಶೇಷ ಸಂದೇಶ ಹೊತ್ತು ತಂದಿತು. ಆದರೆ ಆ ಸಂದೇಶ, ಸರಕಾರದ ಕಾರ್ಯಕ್ರಮಗಳ ಭಾಗವಾಗಿ ಮೂಡಿಬಂದಿರಲಿಲ್ಲ. ಆ ದಿನಗಳಲ್ಲಿ ಗಾಂಧಿ ಜಯಂತಿ ಆಚರಿಸಿದವರು ಸಂಘದ ಭೂಗತ ಕಾರ್ಯಕರ್ತರು. ಎದೆಯ ಮೇಲೆ ಧರಿಸಲು ಗಾಂಧಿ ಬಿಲ್ಲೆಗಳು, ಗೋಡೆಗಳನ್ನು ಅಲಂಕರಿಸಲು ಗಾಂಧಿ ಭಿತ್ತಿಚಿತ್ರಗಳು. ಎರಡರಲ್ಲೂ ಗಾಂಧಿ ಚಿತ್ರದ ಕೆಳಗೆ 'ಅಸತ್ಯ, ಅನ್ಯಾಯ, ದಬ್ಬಾಳಿಕೆಗಳಿಗೆ ತಲೆಬಾಗುವುದು ಹೇಡಿತನ' ಎನ್ನುವ ಗಾಂಧಿ ಉಕ್ತಿ. ಆದರೆ ಅಂದಿನ ಇಂದಿರಾ-ದೇವರಾಜ ಅರಸು ಅವರ ಕಾಂಗ್ರೆಸ್ ಸರಕಾರಗಳಿಗೆ ಗಾಂಧಿಯ ಚಿತ್ರ, ಗಾಂಧಿಯ ಉಕ್ತಿ, ಗಾಂಧಿಯ ನೆನಪು ಎಲ್ಲಾ ನಿಷಿದ್ಧವಾಗಿತ್ತು.

ಗಾಂಧಿ ಭಿತ್ತಿಪತ್ರ ಅಂಟಿಸುತ್ತಿದ್ದ ಹಲವಾರು ಜನರನ್ನು ಪೊಲೀಸರು ಬಂಧಿಸಿದರು. ಅಹಿಂಸೆ, ಅಹಿಂಸೆ ಎಂದವರ ಚಿತ್ರ ಹಿಡಿದಿದ್ದಕ್ಕೆ ಹೊಡೆದು ಬಡಿದು ಬಂಧಿಸಿ, ಅವರ ಮೇಲೆ ಮೊಕದ್ದಮೆ ಹೂಡಲಾಯಿತು. ಆಪಾದಿತರನ್ನು ಪೊಲೀಸರು ನ್ಯಾಯಾಧೀಶರ ಮುಂದೆ ತಂದು ನಿಲ್ಲಿಸಿದಾಗ, ನ್ಯಾಯಾಧೀಶರು ತಮ್ಮ ಕಣ್ಣು-ಕಿವಿಗಳನ್ನು ನಂಬದಾದರು. ''ಏನು, ಈ ದೇಶದಲ್ಲಿ ಗಾಂಧಿ ಚಿತ್ರ ಅಂಟಿಸುವುದು ಕ್ರಿಮಿನಲ್ ಅಪರಾಧವಾಯಿತೇ?'' ಎಂದು ಪ್ರಶ್ನಿಸಿದರು. ಇದಕ್ಕೆ ಪೊಲೀಸರು ಏನು ಹೇಳಿಯಾರು! ''ಇವರೆಲ್ಲಾ ಆರೆಸ್ಸೆಸ್ ಕಾರ್ಯಕರ್ತರು'' ಎಂಬ ನೆಪ ಹೇಳಿದರು. ''ಇರಬಹುದು, ಆದರೆ ಇವರು ಮಾಡಿದ ಅಪರಾಧವೇನು?'' ಎಂಬ ನ್ಯಾಯಾಧೀಶರ ಪ್ರಶ್ನೆಗೆ ಪೊಲೀಸರು ನಿರುತ್ತರರಾದರು. ನ್ಯಾಯಾಧೀಶರು (ಕೆಲವೆಡೆ) ಪೊಲೀಸರಿಗೆ ಛೀಮಾರಿ ಹಾಕಿ, ಬಂಧಿತರನ್ನು ಬಿಡುಗಡೆ ಮಾಡಿದರು.

ಹಿಂದೆ ಉಪ್ಪಿನ ಸತ್ಯಾಗ್ರಹದಲ್ಲಿ, 'ಭಾರತ್ ಛೋಡೋ' ಚಳವಳಿಯಲ್ಲಿ ಭಾಗವಹಿಸಿ 'ವಂದೇ ಮಾತರಂ', ಮಹಾತ್ಮ ಗಾಂಧೀ ಕೀ ಜೈ', 'ಬೋಲೋ ಭಾರತ್ ಮಾತಾ ಕೀ ಜೈ' ಎಂದು ಘೋಷಿಸುತ್ತಿದ್ದವರ ಮೇಲೆ ಬ್ರಿಟಿಷ್ ಪೊಲೀಸರ ಲಾಠಿಯೇಟು, ಬೂಟಿನೇಟು ಬೀಳುತ್ತಿತ್ತು. 'ಸ್ವಾತಂತ್ರ್ಯ' ಬಂದ ಮೇಲೂ ಹಾಗೆ ಘೋಷಣೆ ಕೂಗಿದವರ ಮೇಲೆ, ಕಾಂಗ್ರೆಸ್ ಸರಕಾರದ ಪೊಲೀಸರ ಲಾಠಿಯೇಟು ಬಿದ್ದುದು, ಬರಿಯ ವಿಸ್ಮಯದ-ವಿಷಾದಭಾವದ ಮಾತಲ್ಲ. ಸ್ವಾತಂತ್ರ್ಯದ ಪರಿಕಲ್ಪನೆಯನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳದೆಯೇ, ಕಾಂಗ್ರೆಸ್ಸಿನಂಥ ಪಕ್ಷಗಳನ್ನು ಬೆಂಬಲಿಸಿ ಮತ ಹಾಕಿದುದರ ದುಷ್ಪರಿಣಾಮಗಳ ಅಂತಿಮ ಹಂತ.

1975ರ ನವೆಂಬರ್ 14ರಿಂದ ದೇಶಾದ್ಯಂತ ಪ್ರತಿಭಟನೆಯನ್ನು ಆರೆಸ್ಸೆಸ್ ಪರಿವಾರ ಸಂಘಟನೆಗಳು ಹಮ್ಮಿಕೊಂಡಿದ್ದವು. ಬಹುಪಾಲು ರಾಜಕಾರಣಿಗಳು, ನಾಯಕರು ಸೆರೆಮನೆಯಲ್ಲಿದ್ದರು. ಪ್ರತಿಭಟನೆಯನ್ನು ವಿಫಲಗೊಳಿಸಲು ಅಂದಿನ ಕೇಂದ್ರ ಸರಕಾರ ಮುನ್ನೆಚ್ಚರಿಕೆಯ ಬಂಧನಗಳಿಗೆ (Preventive Arrests) ಆಜ್ಞೆ ಮಾಡಿತ್ತು. ಆ ಕಾರಣಕ್ಕೆ ನಾವೆಲ್ಲಾ ಬಂಧನಕ್ಕೆ ಒಳಗಾದುದು ನವೆಂಬರ್ 13ರಂದು. ಪೊಲೀಸರು, ''ನೀವು ಭಾರತೀಯರೋ ರಾಷ್ಟ್ರೀಯರೋ?'' ಎಂದು ಪ್ರಶ್ನೆ ಹಾಕಿದಾಗ ನಾನೂ ನನ್ನ ಉಳಿದ ಸ್ವಯಂಸೇವಕ ಬಂಧುಗಳೂ ಕಕ್ಕಾಬಿಕ್ಕಿಯಾದೆವು. ನಮ್ಮ ಮುಂದೆ PSR (Prisoners' Search Register) ಹರಡಿಕೊಂಡಿತ್ತು. ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ಮುಗ್ಧತೆಯಿಂದ ''ನಾವೆಲ್ಲಾ ಭಾರತೀಯರೂ ಹೌದು, ರಾಷ್ಟ್ರೀಯರೂ ಹೌದು'' ಎಂದೆವು. ''ಎರಡರಲ್ಲಿ ಒಂದು ಹೇಳ್ರೀ'' ಎಂದು ಅವರು ಅಬ್ಬರಿಸಿದಾಗ ಇನ್ನಷ್ಟು ಗೊಂದಲ. ಕೊನೆಗೆ ಆ ಪ್ರಶ್ನೆ ನಾವು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸಂಬಂಧಿಸಿದವರೋ, ಭಾರತೀಯ ಜನಸಂಘಕ್ಕೆ ಸಂಬಂಧಿಸಿದವರೋ ಎಂಬುದಾಗಿತ್ತು ಎಂದು ತಿಳಿದಾಗ, ಗೊಂದಲದಿಂದ ಪರಿಹಾರ. ನಾವೆಲ್ಲಾ ಒಕ್ಕೊರಲಿನಿಂದ ''ನಾವು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು'' ಎಂದೆವು. ಅಂದಿನ ದಿನಮಾನಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರನ್ನು ಸರಿಯಾಗಿ ಉಚ್ಚರಿಸಲು, ಉಲ್ಲೇಖಿಸಲು ಬಹಳ ಜನರಿಗೆ ಬರುತ್ತಿರಲಿಲ್ಲ (ಕೆಲವರಿಗೆ ಈಗಲೂ ಗೊಂದಲ!).

ಇದೆಲ್ಲಾ ನಡೆದು ಅರ್ಧ ಶತಮಾನವೇ ಉರುಳಿದೆ. ಕರಾಳ ತುರ್ತುಪರಿಸ್ಥಿತಿಯ ನೂರೆಂಟು ನೆನಪುಗಳು ಕಣ್ಮುಂದೆ ಸುತ್ತುತ್ತವೆ. ಇಡೀ ದೇಶದಲ್ಲಿ ಈ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಇಂದಿರಾ ಗಾಂಧಿಯವರ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಒಬ್ಬನೇ ಒಬ್ಬ MP, MLA, MLC ಸತ್ಯಾಗ್ರಹ ಮಾಡಲಿಲ್ಲ, ಪ್ರತಿಭಟಿಸಲಿಲ್ಲ, ಬಂಧನಕ್ಕೆ ಒಳಗಾಗಲಿಲ್ಲ ಎಂಬುದು ಇಂದಿಗೂ ಪ್ರಶ್ನೆಯಾಗಿ ಕಾಡುತ್ತದೆ. ಎಂಥ ಪಕ್ಷವಿದು. ''ನಾವೇ ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವು, ಬ್ರಿಟಿಷರಿಂದ ನಾವೇ ಸ್ವಾತಂತ್ರ್ಯವನ್ನು ಪಡೆದೆವು'' ಎಂದು ದಶಕಗಳಿಂದ ಸುಳ್ಳು ಹೇಳಿಕೊಂಡೇ ಬಂದ ಕಾಂಗ್ರೆಸ್ಸಿನವರಿಗೆ ಇದು ಪ್ರಜಾದ್ರೋಹ, ಇದು ಸ್ವಾತಂತ್ರ್ಯಹರಣ, ಈ ತುರ್ತುಪರಿಸ್ಥಿತಿಯು ಅನ್ಯಾಯದ ಪರಮಾವಧಿ ಎಂದು ಅನ್ನಿಸಲೇ ಇಲ್ಲ! ಕಾಂಗ್ರೆಸ್ಸಿನ ಒಬ್ಬನೇ ಒಬ್ಬ MP, MLA, MLC ತನ್ನ ಸ್ಥಾನಕ್ಕೆ ರಾಜೀನಾಮೆ ಕೊಡಲೇ ಇಲ್ಲ. ಕಾಸು ಮಾಡಿಕೊಳ್ಳುವ ದಂಧೆಯನ್ನು ಎಲ್ಲ ಕಾಂಗ್ರೆಸ್ಸಿಗರೂ ಇನ್ನಷ್ಟು ನಿರಾಳವಾಗಿ ಮುಂದುವರಿಸಿಕೊಂಡುಹೋದರು. ಕಳೆದ ಏಳೆಂಟು ದಶಕಗಳ ಭಾರತೀಯ ಇತಿಹಾಸವನ್ನು ಅವಲೋಕಿಸಿದರೆ ಈ ಕಾಂಗ್ರೆಸ್ ಎನ್ನುವುದು ಕೇವಲ ಒಂದು ರಾಜಕೀಯ ಪಕ್ಷವಾಗಿರದೆ, ದೇಶಕ್ಕೆ ಅಂಟಿದ ಒಂದು ಶಾಪ, ಒಂದು ರೋಗ ಎಂಬುದು ಖಚಿತವಾಗುತ್ತದೆ.

ಪ್ರಜಾತಂತ್ರದ ಮೂಲದ್ರವ್ಯ ಇಲ್ಲಿದೆ

1977ರ ಮಾರ್ಚ್ ತಿಂಗಳಲ್ಲಿ ಅಂದಿನ ಆಂತರಿಕ ತುರ್ತುಪರಿಸ್ಥಿತಿ ತೆಗೆಯಲ್ಪಟ್ಟು ಪ್ರಜಾತಂತ್ರ ಮತ್ತೆ ಅರಳುವಂತಾಯಿತು. ನಮ್ಮ ಮಣ್ಣಿನಲ್ಲಿರುವ ಗಣತಂತ್ರದ ಮೂಲದ್ರವ್ಯ ಸಹಜವಾಗಿಯೇ ನನ್ನಲ್ಲಿ ಪ್ರತಿಬಾರಿ ಬೆರಗು ಉಂಟುಮಾಡುತ್ತದೆ. ಅದು ನಮ್ಮ ರಕ್ತದಲ್ಲಿಯೇ ಇದೆ. ಒಂದು ಕಾನೂನು, ಒಂದು ವಿಧಿ ಜಾರಿಯಾಗಲು ಮತ್ತು ಹಾಗೆ ಜಾರಿಯಾಗಿ ಯಶಸ್ವಿಯಾಗಲು, ಇಡಿಯ ಜನಪದದ ನರನಾಡಿಗಳಲ್ಲಿ ಪೂರ್ವಸಿದ್ಧತೆ ಇರಬೇಕಲ್ಲವೇ? ಇಲ್ಲವಾದರೆ ಜನಪದದಲ್ಲಿ ಒಂದು ಬದಲಾವಣೆಯನ್ನು, ಒಂದು ಸಂಚಲನವನ್ನು ಅಷ್ಟು ಸುಲಭವಾಗಿ ಕಾಣುತ್ತೇವೆಯೇ? ಅಂಥ ಒಂದು ನವೋನ್ಮೇಷ ವ್ಯವಸ್ಥೆಯು, ಒಂದು ಪಾರಂಪರಿಕ ಮೌಲ್ಯವಾಗಿ ನಮ್ಮ ನಡುವೆ ಉಳಿದುಬಂದಿದ್ದರೆ ಮಾತ್ರ ಅರ್ಥಪೂರ್ಣವಾಗಿ ನೆಲೆಗೊಳ್ಳಲು ಸಾಧ್ಯ.

ಗಣತಂತ್ರವಾಗಲೀ, ಸ್ವಾತಂತ್ರ್ಯವಾಗಲೀ ಒಂದಕ್ಕೊಂದು ಪೂರಕವಾಗಿ ಇರುವಂಥ ಸಾಮಾಜಿಕ ಮೌಲ್ಯಗಳು. ಸ್ವಾತಂತ್ರ್ಯೋತ್ತರ ಕಾಲಾವಧಿಯ ಸಂಜಾತರಿಗೆ ನಮ್ಮ ಸ್ವಾತಂತ್ರ್ಯ ಸಂಗ್ರಾಮ, ದೇಶವಿಭಜನೆಗಳು ಕೇವಲ ಅಧ್ಯಯನ ಸಾಮಗ್ರಿಗಳು ಮತ್ತು ನೇರಾನೇರ ಅನುಭವಕ್ಕೆ ದಕ್ಕಿರದ ಬಲುದೊಡ್ಡ ಸಂಗತಿಗಳು. ಅಂಥ ನಮ್ಮೆಲ್ಲರಿಗೆ ಸ್ವಾತಂತ್ರ್ಯದ ಉನ್ನತ ಮೌಲ್ಯದ ಪರಿಚಯವಾದುದು 1975ರ ಈ ತುರ್ತುಪರಿಸ್ಥಿತಿಯಿಂದಲೇ. ಆಕ್ರಮಕರ ಮತ್ತು ಬ್ರಿಟಿಷರ ಆಡಳಿತದ ಕ್ರೌರ್ಯಗಳು ಹೇಗಿದ್ದಿರಬಹುದೆಂದು ನಾವು ಊಹಿಸಲು ಸಾಧ್ಯವಾದುದು ಆ ಅವಧಿಯಲ್ಲಿಯೇ.

ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ಬಂದುದೇ ತನ್ನಿಂದ ಎಂದು ಹೇಳುತ್ತದೆ. ಇಂದಿರಾ ಅವರು ಪ್ರಜಾಪ್ರಭುತ್ವವನ್ನು ಕೊಂದುಹಾಕಿದಾಗ, ನ್ಯಾಯಾಲಯಗಳನ್ನು ಟೀಕಿಸಿದಾಗ, ಹಿರಿಯ ನ್ಯಾಯಾಧೀಶರನ್ನು ಕಡೆಗಣಿಸಿ ತಮ್ಮ ಪ್ರೀತಿಪಾತ್ರರನ್ನೇ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಿಸಿದಾಗ, ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಿದಾಗ, ಸಂಸತ್ತನ್ನು ದುರುಪಯೋಗಪಡಿಸಿಕೊಂಡಾಗ, ಬೇಕಾಬಿಟ್ಟಿಯಾಗಿ ಸಂವಿಧಾನವನ್ನೇ ತಿದ್ದುಪಡಿ ಮಾಡಿದಾಗ ಸಹ, ಇಡೀ ದೇಶದಲ್ಲಿ ಒಬ್ಬನೇ ಒಬ್ಬ ಕಾಂಗ್ರೆಸ್ ಎಂಪಿ, ಎಂಎಲ್ಎ ಪ್ರತಿಭಟಿಸಲಿಲ್ಲ, ರಾಜೀನಾಮೆ ಕೊಡಲಿಲ್ಲ. ಬಗ್ಗಿ ಎಂದು ಇಂದಿರಾ ಹೇಳಿದ್ದೇ ತಡ, ಕಾಲಿಗೆರಗಿದ ಈ ಕಾಂಗ್ರೆಸ್ಸಿಗರು ಮೇಲೆ ಏಳಲೇ ಇಲ್ಲ. ನಾಲ್ಕು ದಶಕಗಳಿಂದ ಲೇಖಕನಾಗಿ, ಅಂಕಣಕಾರನಾಗಿ ದೇಶದ ರಾಜಕೀಯವನ್ನು, ಸಾಮಾಜಿಕ ಬದಲಾವಣೆಯನ್ನು ಗಮನಿಸುವ ಪ್ರಯತ್ನ ಮಾಡಿದ್ದೇನೆ. ಜನತಂತ್ರ-ಗಣತಂತ್ರಗಳನ್ನು ಉಳಿಸಲು ಒಬ್ಬ ಕಾಂಗ್ರೆಸ್ಸಿಗನೂ ಮುಂದೆ ಬರಲಿಲ್ಲವಲ್ಲಾ, ಅದೂ ಐತಿಹಾಸಿಕ ಮಹತ್ವದ ಅಂಥ ವಿಶೇಷ ಸಂದರ್ಭದಲ್ಲಿ ಎಂಬುದು ನನಗೆ ಇಂದಿಗೂ ವ್ಯಥೆಯ ವಿಷಯವಾಗಿದೆ.

ನಮಗೆ, ನಮ್ಮ ದೇಶಕ್ಕೆ ಆಧುನಿಕವಾದುದು, ಒಳ್ಳೆಯದು ಪಶ್ಚಿಮದಿಂದಲೇ ಬಂದಿದೆ. ಪ್ರಜಾಪ್ರಭುತ್ವ-ಗಣತಂತ್ರಗಳೂ ಅಷ್ಟೆ. ಬ್ರಿಟಿಷರು ನಮ್ಮನ್ನು ಆಳಿದುದರಿಂದಲೇ ಬಂದಿವೆ ಎನ್ನುವ ವಾದವಿದೆ. ಬ್ರಿಟಿಷ್ ಪೂರ್ವದ ಅವಧಿಯನ್ನು 'ಅಂಧಕಾರದ ಅವಧಿ' ಎಂದು ನಮ್ಮ ಬುದ್ಧಿಜೀವಿಗಳು ದಿನಕ್ಕೊಮ್ಮೆ ನೆನಪಿಸುತ್ತಾರೆ. ನಮ್ಮನ್ನು ಬ್ರಿಟಿಷರು ಆಳಿದುದರಿಂದ ನಮ್ಮ ಆಡಳಿತ ವ್ಯವಸ್ಥೆಯಲ್ಲಿ, ರಾಜಕೀಯ ವ್ಯವಸ್ಥೆಯಲ್ಲಿ ತುಂಬ ಬದಲಾವಣೆಗಳಾದವು. ಆದರೆ ಅವೆಲ್ಲಾ ಅವರ ಅನುಕೂಲಕ್ಕೆ, ಅವರ ಲೂಟಿಗೆ, ಅವರ ವಸಾಹತುಶಾಹಿ ಸಾಮ್ರಾಜ್ಯದ ವಿಸ್ತರಣೆ-ಪಾಲನೆಗಳ ಸಲುವಾಗಿ ಅನುಷ್ಠಾನವಾದವು ಎಂಬುದನ್ನೂ ಮರೆಯುವಂತಿಲ್ಲ. ಹಾಗೆಂದೇ, ನಮ್ಮ ಬುದ್ಧಿಜೀವಿಗಳು ಎಲ್ಲವನ್ನೂ ಬ್ರಿಟಿಷರ ಮಹೋಪಕಾರವೆಂದು ಬಣ್ಣಿಸುವುದನ್ನು ನೋಡಿದರೆ ಹೇಸಿಗೆಯಾಗುತ್ತದೆ.

ಅನೇಕ ದೋಷಗಳ ನಡುವೆಯೂ, ನಮ್ಮ ಭಾರತೀಯ ಪಾರಂಪರಿಕ ವ್ಯವಸ್ಥೆಯ ಜನತಂತ್ರದ ಪರಿಕಲ್ಪನೆಯು ಉಳಿದುಕೊಂಡಿರುವುದು ತುಂಬ ವಿಶೇಷ ಸಾಧನೆಯಾಗಿ ಕಾಣುತ್ತದೆ. ನಮ್ಮ ನೆರೆಹೊರೆಯ ತುಂಬ ದೇಶಗಳು ಸೇನಾ ಸರ್ವಾಧಿಕಾರಿಗಳ ಕೈಲಿ, ಕಮ್ಯುನಿಸ್ಟರ ಕೈಲಿ ಸಿಕ್ಕಿಹಾಕಿಕೊಂಡಿವೆ. ಅಲ್ಲಿ ಸಾಮಾನ್ಯ ಜನರ ಧ್ವನಿಯು ಕ್ಷೀಣವಾಗಿ ಕೇಳಿಸುವುದೂ ಕಷ್ಟಕರವಾಗಿದೆ. ನಮ್ಮ ದೇಶದ ಭಾಗಗಳೇ ಆಗಿದ್ದ ಬಾಂಗ್ಲಾದೇಶ-ಪಾಕಿಸ್ತಾನ ಮುಂತಾದವುಗಳ ಪಾಡು ನೋಡಿದಾಗ, ನಮ್ಮಲ್ಲಿ ಜನತಂತ್ರ ಉಳಿದಿರುವುದರ ಹಿನ್ನೆಲೆಯಲ್ಲಿ ನಮ್ಮ ಪರಂಪರೆಯ ಸತ್ವ ಗುಣಲಕ್ಷಣಗಳೇ ಪ್ರಧಾನವಾಗಿ ಕಾಣುತ್ತವೆ.

ಭಾರತ ಮತ್ತೆ ತನ್ನ ಪ್ರಜಾಪ್ರಭುತ್ವವನ್ನು ಪುನರ್-ಪ್ರತಿಷ್ಠಾಪಿಸಿಕೊಂಡಿತು. ಇದು ಅದ್ಭುತ. ಇದು ಈ ಮಣ್ಣಿನ ವೈಶಿಷ್ಟ್ಯ. ಭವಿಷ್ಯದಲ್ಲಿಯೂ ಭಾರತವು ತನ್ನ ಸನಾತನ ಧರ್ಮದ ಮೌಲ್ಯಗಳನ್ನು ಉಳಿಸಿಕೊಂಡಾಗ ಮಾತ್ರ ಇಲ್ಲಿನ ಜನತಂತ್ರ ಉಳಿದೀತು. ತುರ್ತುಪರಿಸ್ಥಿತಿಯ ಹೇರಿಕೆಯ (25/6/1975) ಕಹಿನೆನಪುಗಳ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯದ ಪರಿಕಲ್ಪನೆಯ ಮೂಲದ್ರವ್ಯವು ನಮ್ಮಲ್ಲಿ ಅರ್ಥಪೂರ್ಣ ವಿಚಾರಗಳನ್ನು ಹೊಮ್ಮಿಸಲಿ. ಇತಿಹಾಸ, ಸ್ವಾತಂತ್ರ್ಯ ಹೋರಾಟಗಳ ಸರಿಯಾದ ವಿಮರ್ಶಾತ್ಮಕ ವಿಶ್ಲೇಷಣೆಗಳು ಈ ಪರಿಪ್ರೇಕ್ಷ್ಯದಲ್ಲಿ, ನಮ್ಮ ಮೇಲೆ ಬೆಳಕು ಚೆಲ್ಲಲಿ, ನಮ್ಮನ್ನು ಕವಿದಿರುವ ಕತ್ತಲನ್ನು ಮತ್ತೊಮ್ಮೆ ನೀಗಲಿ.

(ಲೇಖಕರು ಹಿರಿಯ ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:160

ಸಮಾಚಾರ ಸಣ್ಣದಲ್ಲ

ಪಹಲ್ಗಾಮ್ ಉಗ್ರರಿಗೆ ಆಶ್ರಯ: ಇಬ್ಬರ ಸೆರೆ

ಶ್ರೀನಗರ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನ ಬೈಸರನ್ ಹುಲ್ಲಗಾವಲಿನಲ್ಲಿ ಭಯೋತ್ಪಾದ ದಾಳಿ ನಡೆಸಿ 25 ಪ್ರವಾಸಿಗರು, ಒಬ್ಬ ಸ್ಥಳೀಯನನ್ನು ಹತ್ಯೆ ಮಾಡಿದ ಪಾಕ್ ಮೂಲದ ಲಷ್ಕರ್ ಎ ತಯ್ಯಬಾ ಸಂಘಟನೆಯ ಮೂವರು ಉಗ್ರರಿಗೆ ಆಶ್ರಯ ನೀಡಿದ್ದ ಆರೋ ಪದಡಿ ಇಬ್ಬರು ಸ್ಥಳೀಯರನ್ನು ರಾಷ್ಟ್ರೀಯ ತನಿಖಾ ದಳದ (ಎನ್ಐಎ) ಅಧಿಕಾರಿಗಳು ಭಾನುವಾರ ಬಂಧಿಸಿದ್ದಾರೆ. ಪಹಲ್ಗಾಮ್ ನಿವಾಸಿಗಳಾದ ಪರ್ವೈಜ್ ಅಹ್ಮದ್ ಜೋಥರ್ ಮತ್ತು ಬಶೀರ್ ಅಹ್ಮದ್ ಜೋಥರ್ ಬಂಧಿತರು. ತಾವು ಆಶ್ರಯ ಕೊಡುತ್ತಿರುವುದು ನಿಷೇಧಿತ ಪಾಕಿಸ್ತಾನ ಮೂಲದ ಲಷ್ಕರ್-ಎ-ತಯ್ಯಬಾ(ಎಲ್ಇಟಿ) ಸಂಘಟನೆಗೆ ಸೇರಿದ ಉಗ್ರರಿಗೆ ಎಂಬುದು ಗೊತ್ತಿದ್ದೂ, ಇವರಿ ಬ್ಬರೂ, ಉಗ್ರರಿಗೆ ವಸತಿ ಸೌಕರ್ಯ, ಆಹಾರ ಪೂರೈಕೆ ಮತ್ತು ವಾಹನ ವ್ಯವಸ್ಥೆ ಒದಗಿಸಿ ನೆರವಾಗಿದ್ದರು.

ಇಸ್ರೇಲ್ ಪರ ಬೇಹು: ಮಜೀದ್‌ಗೆ ನೇಣು

ಟೆಹರಾನ್: ಇರಾನ್‌ನಲ್ಲಿದ್ದುಕೊಂಡು ಶತ್ರುದೇಶ ಇಸ್ರೇ ಲ್‌ಗಾಗಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಡಿ ಮಜೀದ್ ಮೊಸಾಯೆಬಿ ಎಂಬಾತನನ್ನು ಇರಾನ್ ಸರಕಾರ ಗಲ್ಲಿಗೇರಿಸಿದೆ.



ಇಸ್ರೇಲ್ ಜಗದ್ವಿಖ್ಯಾತ ಗುಪ್ತಚರ ಸಂಸ್ಥೆ 'ಮೊಸಾದ್'ಗೆ ಕೆಲವು ಪ್ರಮುಖ ಗೌಪ್ಯ ಮಾಹಿತಿಗಳನ್ನು ನೀಡಲು ಯತ್ನಿಸಿದ ಆರೋಪ ಮಜೀದ್ ಮೇಲಿದೆ. ಇರಾನ್ ನ್ಯಾಯಾಲಯ ಆರೋಪಿಗೆ ಮರಣದಂಡನೆಗೆ ಅನು ಮೋದಿಸಿದೆ. ಕಾನೂನು ಪ್ರಕ್ರಿಯೆ ಪೂರ್ಣಗೊಂಡ ನಂತರ ಮಜೀದ್‌ಗೆ ಮರಣದಂಡನೆ ವಿಧಿಸಲಾಗಿದ್ದು, ಗಲ್ಲಿಗೇರಿಸಲಾಗಿದೆ.

ಕಾಶ್ಮೀರಕ್ಕೆ ರಾಜ್ಯದ ಸ್ಥಾನಕ್ಕಾಗಿ ಸುಪ್ರೀಂಗೆ

ಶ್ರೀನಗರ: ಜಮ್ಮು-ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡದೇ ಇದ್ದರೆ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡುವುದಾಗಿ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ, ಮಾಜಿ ಸಿಎಂ ಫಾರೂಕ್ ಅಬ್ದುಲ್ಲಾ ಕೇಂದ್ರದ ಎನ್‌ಡಿಎ ಸರಕಾ ರಕ್ಕೆ ಎಚ್ಚರಿಕೆ ನೀಡಿ ದ್ದಾರೆ.



2024 ರಲ್ಲಿ ಜಮ್ಮು-ಕಾಶ್ಮೀರ ವಿಧಾನ ಸಭೆಗೆ ಚುನಾವಣೆ ಯನ್ನೇನೋ ನಡೆಸಿದೆ. ಆದರೆ, ಪೂರ್ಣ ಪ್ರಮಾಣದ ಅಧಿಕಾರವನ್ನು ನೀಡಲಿಲ್ಲ. ಪರಿಣಾಮ ಎರಡು ಅಧಿಕಾರ ಕೇಂದ್ರಗಳ ನಡುವೆ ರಾಜ್ಯ ಸಿಲುಕಿ ಕೊಂಡಿದ್ದು, ಅಭಿವೃದ್ಧಿ ಎಂಬುದು ದೂರವಾಗಿದೆ. ಹಾಗಾಗಿ ಆದಷ್ಟೂ ಬೇಗ ರಾಜ್ಯದ ಸ್ಥಾನಮಾನ ನೀಡಬೇಕು ಎಂದು ಫಾರೂಕ್ ಅಬ್ದುಲ್ಲಾ ಆಗ್ರಹಿಸಿದ್ದಾರೆ.

ಸಹಕಾರಿ ಟ್ಯಾಕ್ಸಿಗೆ ಕೇಂದ್ರ ಹಸಿರು ನಿಶಾನೆ

ದೆಹಲಿ: ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿ ವಿರುದ್ಧ ಆಟೋ ಚಾಲಕರು ಪ್ರತಿಭಟನೆ ನಡೆಸುತ್ತಿರುವ ನಡುವೆಯೇ ಕೇಂದ್ರ ಸರಕಾರ ಸಹಕಾರಿ ತತ್ವದಲ್ಲಿ ಟ್ಯಾಕ್ಸಿ ಆರಂಭಿಸಲು ನಿರ್ಧರಿಸಿದೆ. ವಿವಿಧ ರಾಜ್ಯಗಳ ಸಹಕಾರಿ ಸಂಸ್ಥೆಗಳ ನಡುವಿನ ಸಮನ್ವಯದಲ್ಲಿ ಈ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಓಲಾ, ಊಬರ್‌ನ ಪ್ರಾಬಲ್ಯಕ್ಕೆ ಸವಾಲೊಡ್ಡುವ ನಿರೀಕ್ಷೆ ಇದೆ. ಸಹಕಾರ್ ಟ್ಯಾಕ್ಸಿ ಕೋಆಪರೇಟಿವ್ ಅನ್ನು ಬಹು ರಾಜ್ಯ ಸಹಕಾರಿ ಸಂಸ್ಥೆ ಕಾಯ್ದೆ ಅಡಿ ನೊಂದಾಯಿಸಲಾಗಿದೆ. ಆರಂಭದಲ್ಲಿ ಇದು ದೆಹಲಿ, ಗುಜರಾತ್, ಮಹಾರಾಷ್ಟ್ರದಲ್ಲಿ ಜಾರಿಗೆ ಬರುವ ನಿರೀಕ್ಷೆ ಇದೆ.

8 ಸಹಕಾರಿ ಸಂಸ್ಥೆಗಳ ಬೆಂಬಲ: ಎನ್‌ಸಿಡಿಸಿ, ಅಮುಲ್, ನಬಾರ್ಡ್, ಇಫ್ಕೋ, ಎನ್‌ಡಿಡಿಬಿ ಇತ್ಯಾದಿ ದೇಶದ ಎಂಟು ಪ್ರಮುಖ ಸಹಕಾರಿ ಸಂಸ್ಥೆಗಳು ಈ ಸಹಕಾರಿ ಟ್ಯಾಕ್ಸಿ ಸೇವೆ ಯೋಜನೆಯನ್ನು ಬೆಂಬಲಿಸಿವೆ. ಆರಂಭಿಕ ಹಂತದಲ್ಲಿ ಈ ಪ್ರತಿಯೊಂದು ಸಹಕಾರಿ ಸಂಸ್ಥೆಯೂ ತಲಾ 10 ಕೋಟಿ ರೂ ಹೂಡಿಕೆಗೆ ಮುಂದಾಗಿವೆ.

ರಷ್ಯಾ-ಇರಾನ್ ಚರ್ಚೆ

ಟೆಹರಾನ್: ಇರಾನ್‌ನ 3 ಪರಮಾಣು ಘಟಕಗಳ ಮೇಲೆ ಅಮೆರಿಕ ದಾಳಿ ನಡೆಸಿದ ಬಳಿಕ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ರಷ್ಯಾಗೆ ಭೇಟಿ ನೀಡಲು ಮುಂದಾಗಿದ್ದಾರೆ. ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆ ಉನ್ನತ ಮಟ್ಟದ ಮಾತುಕತೆಗಾಗಿ ಮಾಸ್ಕೊಗೆ ಪ್ರಯಾಣಿಸುವುದಾಗಿ ಸಚಿವ ಅಬ್ಬಾಸ್ ಅರಗ್ಚಿ ಭಾನುವಾರ ಹೇಳಿದ್ದಾರೆ. ಇಸ್ತಾನ್‌ಬುಲ್‌ನಲ್ಲಿನ ಇಸ್ಲಾಮಿಕ್ ಸಹಕಾರ ಸಂಘಟನೆ (ಒಐಸಿ) ಶೃಂಗಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿದ ಅರಗ್ಚಿ, ಅಧ್ಯಕ್ಷ ಪುಟಿನ್ ಜತೆ ಸೋಮವಾರ ಬೆಳಗ್ಗೆ ಮಾತುಕತೆ ನಡೆಸುವೆ. ರಷ್ಯಾ ದೇಶ ಇರಾನ್‌ಗೆ ಮಿತ್ರನಾಗಿದೆ ಎಂದಿದ್ದಾರೆ.

{ ನಿತಿನ್ ಗಡ್ಕರಿ } ಹೆದ್ದಾರಿ ಸಚಿವ

ಅಭಿ ತಕ್ ಜೋ ಹುವಾ ಹೈ ವೋ ತೋ ನ್ಯೂಸ್ ರೀಲ್ ಥಿ. ಅಸಲಿ ಫಿಲ್ಮ್ ಶುರು ಹೋನಾ ಔರ್ ಬಾಕಿ ಹೈ(ನೀವು ಇಲ್ಲಿಯವರೆಗೆ ಏನೇನು ಆಗಿರುವುದೋ ಅದೆಲ್ಲವೂ ಕೇವಲ ನ್ಯೂಸ್ ರೀಲ್, ನಿಜವಾದ ಸಿನಿಮಾ ಶುರುವಾಗುವುದು ಇನ್ನೂ ಬಾಕಿ ಇದೆ). ಇತ್ತೀಚೆಗೆ ರಸ್ತೆ ಕಾಮಗಾರಿಗಿಂತ ಕೃಷಿ ಮತ್ತಿತರ ಸಾಮಾಜಿಕ ಉಪಕ್ರಮಗಳಲ್ಲಿ ಹೆಚ್ಚು ಕೆಲಸ ಮಾಡುತ್ತಿರುವೆ.



ಇರಾನ್-ಇಸ್ರೇಲ್ ಯುದ್ಧಕ್ಕೆ ಅಮೆರಿಕ ಎಂಟ್ರಿ | ಹರ್ಮುಜ್ ಜಲಸಂಧಿ ಬಂದ್‌ಗೆ ಇರಾನ್ ನಿರ್ಧಾರ,ಭಾರತಕ್ಕೆ ಸಂಕಷ್ಟ

ರಷ್ಯಾ, ಅಮೆರಿಕ ಕಚ್ಚಾತೈಲ ಭಾರತದ ಆಮದು ಹೆಚ್ಚಳ

ದೆಹಲಿ: ದೆಹಲಿ: ಅಮೆರಿಕ ದಾಳಿ ಬೆನ್ನಲ್ಲೇ ಕೆರಳಿರುವ ಇರಾನ್ ಜಾಗತಿಕ ತೈಲ ಮತ್ತು ಅನಿಲ ಸಾಗಣೆಗೆ ಹೆಬ್ಬಾಗಿಲಾಗಿರುವ ಹರ್ಮುಜ್ ಜಲಸಂಧಿಯನ್ನು ಮುಚ್ಚಿ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳಿಗೆ ತಿರುಗೇಟು ಕೊಡುವ ನಿರ್ಧಾರಕ್ಕೆ ಬಂದಿದೆ.

ಇರಾನ್ ಸಂಸತ್ತು ಈ ಕ್ರಮವನ್ನು ಅನುಮೋದಿಸಿದ್ದು ಹಾರ್ಮುಜ್ ಜಲಸಂಧಿಯನ್ನು ಮುಚ್ಚಬೇಕೆ ಅಥವಾ ಬೇಡವೇ ಎಂಬುದನ್ನು ಇರಾನ್‌ನ ಪರಮೋಚ್ಚ ರಾಷ್ಟ್ರೀಯ ಭದ್ರತಾ ಮಂಡಳಿಯು ನಿರ್ಧರಿಸುತ್ತದೆ ಎಂದು ಇರಾನ್‌ನ ಅಧಿಕೃತ ಟಿವಿಯನ್ನು ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ.

ಈಗಿನ ದಿಢೀರ್ ಬೆಳವಣಿಗೆಗಳಿಂದ ಎಚ್ಚೆತ್ತುಕೊಂಡಿರುವ ಭಾರತ ಸರಕಾರ, ಜೂನ್ ತಿಂಗಳಲ್ಲಿನ ತನ್ನ ಕಚ್ಚಾತೈಲ ಆಮದು ಪ್ರಮಾಣವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿದೆ. ಇನ್ನೊಂದೆಡೆ, ರಷ್ಯಾದಿಂದ ಖರೀದಿಸುವ ಕಚ್ಚಾತೈಲದ ಪ್ರಮಾಣ ವನ್ನೂ ಹೆಚ್ಚಿಸಿದೆ. ಜತೆಗೆ ಸೌದಿ ಅರೇಬಿಯ ಮತ್ತು ಇರಾಕ್‌ನಂತಹ ಮಧ್ಯಪ್ರಾಚ್ಯ ವಲಯದ ಪೂರೈಕೆದಾರ ದೇಶಗಳಿಂದಲೂ ಭಾರತ ಹೆಚ್ಚಿನ ಪ್ರಮಾಣ ದಲ್ಲಿ ಕಚ್ಚಾತೈಲ ಆಮದು ಮಾಡಿಕೊಳ್ಳ ಮುಂದಾಗಿದೆ. ಭಾರತದ ತೈಲ ಸಂಸ್ಕರಣಾಗಾರಗಳು ಜೂನ್‌ನಲ್ಲಿ ದಿನಕ್ಕೆ 20 ಲಕ್ಷದಿಂದರಿಂದ 22 ಲಕ್ಷ ಬ್ಯಾರೆಲ್‌ಗಳಲ್ಲಿ ರಷ್ಯಾದ ಕಚ್ಚಾತೈಲವನ್ನು ಆಮದು ಮಾಡಿ ಕೊಳ್ಳುವ ಸಾಧ್ಯತೆಯಿದೆ. ಕಳೆದ ಎರಡು ವರ್ಷ ಗಳಲ್ಲಿಯೇ ಇದು ಅತ್ಯಧಿಕ ಪ್ರಮಾಣದ ಕಚ್ಚಾತೈಲ ಆಮದು ಎನಿಸಿಕೊಳ್ಳಲಿದೆ. ಇದು ಇರಾಕ್, ಸೌದಿ ಅರೇಬಿಯ, ಯುಎಇ ಮತ್ತು ಕುವೈತ್‌ನಿಂದ ಖರೀ ದಿಸಿದ ಒಟ್ಟು ಪ್ರಮಾಣಕ್ಕಿಂತ ಹೆಚ್ಚು ಎನ್ನಲಾಗಿದೆ. ಅಮೆರಿಕದಿಂದ ಆಮದು ಮಾಡಿಕೊಳ್ಳುವ ಕಚ್ಚಾತೈಲ ಪ್ರಮಾಣವನ್ನೂ ಮೇ-ಜೂನ್ ತಿಂಗಳಲ್ಲಿ ಹೆಚ್ಚಿಸಲಾಗಿದೆ.

51 ಲಕ್ಷ ಬ್ಯಾರೆಲ್ ಖರೀದಿ

ಭಾರತ ವಿವಿಧ ದೇಶಗಳಿಂದ 51 ಲಕ್ಷ ಬ್ಯಾರೆಲ್ ಕಚ್ಚಾತೈಲವನ್ನು ಖರೀದಿಸುತ್ತಿದೆ. ಆದರೆ, ಈಗ ರಷ್ಯಾದಿಂದ ಪ್ರತಿದಿನ ಭಾರತ ಕಚ್ಚಾತೈಲ ಆಮದು ಮಾಡಿಕೊಳ್ಳುವ ಪ್ರಮಾಣ 19.60 ಲಕ್ಷ ಬ್ಯಾರೆಲ್‌ಗಳಾಗಿದ್ದರೆ, ಜೂನ್‌ನಲ್ಲಿ ಅಮೆರಿಕದಿಂದ ಕೂಡ ಪ್ರತಿದಿನ 4.39 ಲಕ್ಷ ಬ್ಯಾರೆಲ್‌ಗಳಿಗೆ ಏರಿಕೆಯಾಗಿದೆ. ಮೇ ತಿಂಗಳಲ್ಲಿ ಅಮೆರಿಕ ದಿಂದ 2.80 ಲಕ್ಷ ಬ್ಯಾರೆಲ್ ಖರೀದಿಸಲಾಗಿತ್ತು. ಮಧ್ಯಪ್ರಾಚ್ಯದಿಂದ ದಿನಕ್ಕೆ 20 ಲಕ್ಷ ಬ್ಯಾರೆಲ್ ಕಚ್ಚಾತೈಲ ಭಾರತಕ್ಕೆ ಆಮದಾಗುತ್ತಿದೆ. ಇದು ಹಿಂದಿನ ತಿಂಗಳ ಖರೀದಿಗೆ ಹೋಲಿಸಿದರೆ, ಮಧ್ಯಪ್ರಾಚ್ಯದಿಂದ ನಡೆಯುವ ಈಗಿನ ಖರೀದಿ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ. ಕಾರಣ ಇರಾನ್ ಮೇಲೆ ಅಮೆರಿಕ ಹಲವು ನಿರ್ಬಂಧಗಳನ್ನು ವಿಧಿಸಿರು ವುದು. 3 ವರ್ಷಗಳಿಗೂ ಮೊದಲು ಮಧ್ಯಪ್ರಾ ಚ್ಯದಿಂದ ಅತ್ಯಧಿಕ ಪ್ರಮಾಣದಲ್ಲಿ ಕಚ್ಚಾತೈಲ ಆಮದು ಮಾಡಿಕೊಳ್ಳುತ್ತಿದ್ದ ಭಾರತ, ಆ ಬಳಿಕ ಅನಿವಾರ್ಯವಾಗಿ ಮಧ್ಯಪ್ರಾಚ್ಯದಿಂದ ಖರೀದಿ ತಗ್ಗಿಸಬೇಕಾ ಯಿತು. ಬದಲಾಗಿ ರಷ್ಯಾದತ್ತ ಗಮನ ಹರಿಸಿತು. 2022ರ ಫೆಬ್ರವರಿ ಯಲ್ಲಿ(ಉಕ್ರೇನ್ ಆಕ್ರಮಣ ಶುರುವಾದ ನಂತರ) ರಷ್ಯಾದಿಂದ ಬಹಳ ಕಡಿಮೆ ಬೆಲೆಗೆ ಕಚ್ಚಾತೈಲ ಆಮದು ಮಾಡಿಕೊಳ್ಳುವುದಕ್ಕೆ ಶುರು ಮಾಡಿತು.

ಭಾರತದ ಕಚ್ಚಾತೈಲ ಆಮದು 2025 ಮೇ



3ನೇ ಅತಿ ದೊಡ್ಡ ತೈಲ ಆಮದು ದೇಶ ಭಾರತ

ಇಡೀ ವಿಶ್ವದಲ್ಲೇ ಕಚ್ಚಾತೈಲವನ್ನು ಅತಿಹೆಚ್ಚು ಪ್ರಮಾಣದಲ್ಲಿ ಬಳಸಿಕೊಳ್ಳುವ ದೇಶಗಳಲ್ಲಿ ಭಾರತ 3ನೇ ಸ್ಥಾನದಲ್ಲಿದೆ. ಮೊದಲ ರಡು ಸ್ಥಾನಗಳಲ್ಲಿ ಅಮೆರಿಕ, ಚೀನಾ ಇವೆ. ಭಾರತದಲ್ಲಿ ಕಚ್ಚಾತೈಲದ ಉತ್ಪಾದನೆ ಎಷ್ಟಿದೆಯೋ ಅದಕ್ಕೆ ಹತ್ತಾರು ಪಟ್ಟು ಕಚ್ಚಾತೈಲದ ಬಳಕೆ ಇದೆ. ಹಾಗಾಗಿಯೇ ದೇಶದ ಕಚ್ಚಾತೈಲದ ಬೇಡಿಕೆಯನ್ನು ಪೂರೈಸುವ ಸಲುವಾಗಿ ಭಾರತ ದಶಕಗಳಿಂದಲೂ ವಿವಿಧ ದೇಶಗಳಿಂದ ದೊಡ್ಡ ಪ್ರಮಾಣದಲ್ಲಿ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಭಾರತದಲ್ಲಿ ಸದ್ಯ ಒಂದು ದಿನಕ್ಕೆ 50.50 ಲಕ್ಷ ಬ್ಯಾರೆಲ್‌ಗಳಷ್ಟು ಕಚ್ಚಾತೈಲ ಬಳಕೆ ಆಗುತ್ತಿದೆ. ಈಗಿನ ಇರಾನ್-ಇಸ್ರೇಲ್ ಯುದ್ಧ ತೀವ್ರತೆಯ ಪರಿಸ್ಥಿತಿಯಲ್ಲಿ ಭಾರತದ ಕಚ್ಚಾತೈಲದ ಆಮದು ಪ್ರಮಾಣ ದಿನಕ್ಕೆ 65 ಲಕ್ಷ ಅಥವಾ 70 ಲಕ್ಷ ಬ್ಯಾರೆಲ್‌ಗಳಿಗೆ ಹೆಚ್ಚುವ ನಿರೀಕ್ಷೆ ಇದೆ. ಅಗತ್ಯಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಆಮದು ಮಾಡಿಕೊಂಡು ಸಂಗ್ರಹಿಸಿ ಇಟ್ಟುಕೊಳ್ಳುವುದು, ಯುದ್ಧ ಮತ್ತಷ್ಟು ತೀವ್ರಗೊಂಡು ಕಚ್ಚಾತೈಲ ಆಮದು ಅಸಾಧ್ಯ ಎನಿಸುವ ಪರಿಸ್ಥಿತಿ ಬಂದಾಗ ಸಂಗ್ರ ಹದಲ್ಲಿನ ಕಚ್ಚಾತೈಲ ಬಳಸಿಕೊಳ್ಳುವುದು ಭಾರತದ ಲೆಕ್ಕಾಚಾರವಾಗಿದೆ.

ಭಾರತದ ಆಮದು ಶೈಲಿ

ಸದ್ಯ(ಜೂ.19) ಭಾರತ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾತೈಲದ ಧಾರಣೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ಯಾರೆಲ್‌ಗೆ 77.72 ಅಮೆರಿಕನ್ ಡಾಲರ್‌ಗಳಷ್ಟಿದೆ. ಭಾರತ ಓಮನ್ ಮತ್ತು ದುಬೈನಿಂದ ಸೋರ್ ಶ್ರೇಣಿ ಮತ್ತು ಬ್ರೆಂಟ್(ಸ್ವೀಟ್ ಗ್ರೇಡ್) ಕಚ್ಚಾತೈಲ ಆಮದು ಮಾಡಿಕೊಳ್ಳುತ್ತದೆ. ಇದರಲ್ಲಿ ಸೋರ್ ಗ್ರೇಡ್ ಕಚ್ಚಾತೈಲ ಪ್ರಮಾಣ ಶೇ.78.50ರಷ್ಟಿದ್ದರೆ, ಬ್ರೆಂಟ್ ಕಚ್ಚಾತೈಲ ಪ್ರಮಾಣ ಶೇ.21.50ರಷ್ಟಿರುತ್ತದೆ.

ಜಲ ಮಾರ್ಗ ಬಂದ್ ಆದರೆ ವಿಶ್ವಕ್ಕೆ ಸಂಕಷ್ಟ

ಉತ್ತರಕ್ಕೆ ಇರಾನ್ ಮತ್ತು ದಕ್ಷಿಣಕ್ಕೆ ಓಮನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ನಡುವೆ ಇರುವ ಹರ್ಮುಜ್ ಜಲಸಂಧಿಯು ಸೌದಿ ಅರೇಬಿಯಾ, ಇರಾನ್, ಇರಾಕ್, ಕುವೈತ್ ಮತ್ತು ಯುಎಇಗಳಿಂದ ತೈಲ ರಫ್ತಿಗೆ ಪ್ರಮುಖ ಮಾರ್ಗವಾಗಿ ಕಾರ್ಯನಿರ್ವಹಿಸುತ್ತದೆ. ವಿಶೇಷವಾಗಿ ಕತಾರ್‌ನಿಂದ ಬರುವ ಅನೇಕ ದ್ರವೀಕೃತ ನೈಸರ್ಗಿಕ ಅನಿಲದ ಸಾಗಣೆ ಈ ಜಲಸಂಧಿ ಮೂಲಕವೇ ಸಾಗುತ್ತದೆ. ಭಾರತದ ಕಚ್ಚಾತೈಲದ ಆಮದು ವಹಿವಾಟಿನಲ್ಲಿ ಶೇ.40ರಷ್ಟು ಕಿರಿದಾದ ಈ ಜಲಸಂಧಿಯ ಮೂಲಕವೇ ನಡೆಯುತ್ತದೆ. ಈ ಜಲಸಂಧಿ ಮೂಲಕವೇ ವಿಶ್ವದ ತೈಲ ಮಾರುಕಟ್ಟೆಯ 5ನೇ ಒಂದು ಭಾಗ ಮತ್ತು ಎಲ್‌ಎನ್ ಜಿ ರಫ್ತು ಸಾಗಣೆಯಾಗಿದೆ. ವಿಶ್ವದ ತೈಲ ಮತ್ತು ಅನಿಲದ ಸುಮಾರು 20 ಪ್ರತಿಶತವು ಹಾರ್ಮುಜ್ ಜಲಸಂಧಿಯ ಮೂಲಕ ಚಲಿಸುತ್ತದೆ.



ಕಚ್ಚಾ ತೈಲ ಬೆಲೆ 130 ಡಾಲರ್‌ಗೆ ಏರಿಕೆ ಸಾಧ್ಯತೆ

ದೆಹಲಿ: ಇಸ್ರೇಲ್-ಇರಾನ್ ನಡುವಿನ ಸಂಘರ್ಷದಲ್ಲಿ ಅಮೆರಿಕ ಮಧ್ಯಪ್ರವೇಶದಿಂದಾಗಿ ಕಚ್ಚಾ ತೈಲ ಬೆಲೆಯು ಬ್ಯಾರಲ್‌ಗೆ ಸುಮಾರು 120 ಡಾಲರ್‌ಗಳಿಗೆ (10,389 ರೂ.) ಏರಿಕೆಯಾಗುವ ಸಾಧ್ಯತೆಯಿದೆ. ಜೊತೆಗೆ ಚಿನ್ನದ ಬೆಲೆಯೂ ಏರಿಕೆಯಾಗುವ ನಿರೀಕ್ಷೆ ಇದೆ. ಸೋಮವಾರ (ಜೂ.23) ಷೇರು ಮಾರುಕಟ್ಟೆಯ ಮೊದಲ ವಹಿವಾಟಿನಲ್ಲಿ ಇದರ ಪರಿಣಾಮ ಕಂಡುಬರುವ ಸಾಧ್ಯತೆ ಇದೆ. ಭಾರತ ಸೇರಿದಂತೆ ಅನೇಕ ದೇಶಗಳಲ್ಲಿ ಈ ವಿದ್ಯಮಾನ ಹಣದುಬ್ಬರ ಸೃಷ್ಟಿಸುವ ಸಾಧ್ಯತೆ ಇದೆ. ಕಳೆದ ಕೆಲ ವಾರಗಳಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆ ಶೇ. 18ರಷ್ಟು ಏರಿಕೆಯಾಗಿ 79 ಡಾಲರ್‌ಗಳಲ್ಲಿ ವಹಿವಾಟು ಆಗುತ್ತಿತ್ತು. ಸದ್ಯ ಬ್ರೆಂಟ್ ಕಚ್ಚಾ ತೈಲ 1 ಬ್ಯಾರಲ್‌ಗೆ 77.01 ಡಾಲರ್‌ನಷ್ಟಿದೆ (6,667 ರೂ.). ಇದೇ ವೇಳೆ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ (WTI) ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರಲ್‌ಗೆ 73.84 ಡಾಲರ್‌ನಂತೆ (6,393 ರೂ.) ವಹಿವಾಟು ನಡೆಯುತ್ತಿದೆ. ಇದು ಏಕಾಏಕಿ 120-130 ಡಾಲರ್‌ಗಳಿಗೆ ಏರಿಕೆಯಾಗುವ ಸಾಧ್ಯತೆಗಳಿವೆ.

ರೋಡ್ ಶೋ ವೇಳೆ ಕೆಳಗೆ ಬಿದ್ದ ವೃದ್ಧನ ತಲೆಮೇಲೆ ಹರಿದ ಚಕ್ರ

ಜಗನ್ ಕಾರು ಚಕ್ರದಡಿ ಅಭಿಮಾನಿ ಸಾವು

ಗುಂಟೂರು: ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ, ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ವೈ.ಎಸ್.ಆರ್.ಜಗನ ಮೋಹನ್ ರೆಡ್ಡಿ ಗುಂಟೂರಿನಲ್ಲಿ ಭಾನುವಾರ ರೋಡ್ ಶೋ ನಡೆಸಿದ್ದಾಗ ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು ನೆರೆದಿದ್ದು, ನೂಕಾಟದಲ್ಲಿ ಕೆಳಕ್ಕೆ ಬಿದ್ದ ವೃದ್ಧ ಅಭಿಮಾನಿಯೊಬ್ಬರ ತಲೆಯ ಮೇಲೆಯೇ ಜಗನ್ ಅವರ ಐಶಾರಾಮಿ ಕಪ್ಪು ಕಾರಿನ ಮುಂಬದಿ ಚಕ್ರ ಹರಿದಿದೆ. ಗಂಭೀರವಾಗಿ ಗಾಯಗೊಂಡ ಅಭಿಮಾನ ಸಾವನ್ನಪ್ಪಿದ್ದಾರೆ.

ಜಗನ್ ಅವರು ಪಲ್ನಾಡು ಜಿಲ್ಲೆಗೆ ಭೇಟಿ ನೀಡಿದ್ದಾಗ ಗುಂಟೂರು ಜಿಲ್ಲೆಯ ಎಟುಕುರು ಬಳಿಯ ಲಾಲ್ಪುರಂ ಹೆದ್ದಾರಿಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ರ‍್ಯಾಲಿಯಲ್ಲಿ ಅವಘಡವಾಗಿದೆ. ಜಗನ್ ಪ್ರಯಾಣಿಸುತ್ತಿದ್ದ ಕಪ್ಪು ಬಣ್ಣದ ಕಾರು ಕೆಳಕ್ಕೆ ಬಿದ್ದ ಅಭಿಮಾನಿಯ ತಲೆಯ ಮೇಲೆಯೇ ಹರಿದಿದ್ದರಿಂದ ವ್ಯಕ್ತಿ ಗಂಭೀರವಾಗಿ ಗಾಯಗೊಂಡರು. ಅವರನ್ನು ಸ್ಥಳೀಯರು ಸಮೀಪದ ಗುಂಟೂರು ಸರಕಾರಿ ಆಸ್ಪತ್ರೆಗೆ ಕರೆದೊಯ್ದರು. ಆದರೆ ಜಗನ್ ಅಭಿಮಾನ ಚಿಕಿತ್ಸೆಗೆ ಸ್ಪಂದಿಸದೇ ಅಸುನೀಗಿದರು. ಸಾವನ್ನಪ್ಪಿದ ವೃದ್ಧನನ್ನು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ಚೀಲಿ ಸಿಂಘಯ್ಯ ಎಂದು ಗುರುತಿಸಲಾಗಿದೆ.

ಸಿಂಘಯ್ಯ ಕಾರಿನ ಚಕ್ರಕ್ಕೆ ಸಿಲುಕಿದಾಗ ಜನರು ಕೂಗಿದ್ದರಿಂದ ಚಾಲಕ ಕಾರನ್ನು ನಿಲ್ಲಿಸಿದ್ದಾರೆ. ಆಗ ಎಡಬದಿ ಬಾಗಿಲು ತೆರೆದು ಹೊರಬಂದ ಜಗನ್ ರೆಡ್ಡಿ, ಅವಘಡದ ಅರಿವೇ ಇಲ್ಲದೇ, ಅಭಿಮಾನಿಗಳತ್ತ ಕೈ ಬೀಸುತ್ತಿದ್ದರು. ಅಭಿಮಾನಿಗಳು ಕೂಡ ಕಾರಿನ ಚಕ್ರದಡಿ ವೃದ್ಧರೊಬ್ಬರು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದರೂ ಲೆಕ್ಕಿಸದೇ ಜಗನ್ ಅವರನ್ನು ಮುಟ್ಟಲು, ಹತ್ತಿರದಿಂದ ನೋಡಲು ನುಗ್ಗಿ ಬರುತ್ತಿದ್ದರು. ಈ ದೃಶ್ಯಗಳು ವಿಡಿಯೋದಲ್ಲಿ ದಾಖಲಾಗಿದ್ದು, ಜಾಲತಾಣದಲ್ಲಿ ವೈರಲ್ ಆಗಿದೆ.

ಬಿಸಿಗಾಳಿ ಬಲೂನ್ ಸ್ಫೋಟ: ಬ್ರೆಜಿಲ್‌ನಲ್ಲಿ 8 ಜೀವಬಲಿ

ಬ್ರೆಸಿಲಿಯಾ: ಬ್ರೆಜಿಲ್‌ನ ಪ್ರವಾಸಿ ತಾಣವೊಂದರಲ್ಲಿ ಹಾಟ್ ಏರ್(ಬಿಸಿಗಾಳಿ) ಬಲೂನ್ ಆಗಸದಲ್ಲಿಯೇ ಸ್ಫೋಟಗೊಂಡ ಪರಿಣಾಮ 8 ಮಂದಿ ದಾರುಣವಾಗಿ ಸಾವಿಗೀಡಾಗಿದ್ದಾರೆ.

ಬ್ರೆಜಿಲ್ ದೇಶದ ದಕ್ಷಿಣ ರಾಜ್ಯ ಸಾಂತಾ ಕ್ಯಾಟರೀನಾದಲ್ಲಿನ ಪ್ರೈಯಾ ಗ್ರ್ಯಾಂಡೇ ಎಂಬಲ್ಲಿ 21 ಪ್ರವಾಸಿಗರನ್ನು ಅಗಸದಲ್ಲಿ ಸಂಚಾರಕ್ಕೆ ಶನಿವಾರ ಬೆಳಗ್ಗೆ 7ರ ವೇಳೆ ಕರೆ ದೊಯ್ದಿದ್ದ ಬಿಸಿಗಾಳಿ ಬಲೂನ್ ದಿಢೀರ್ ಎಂಬಂತೆ ಸ್ಫೋಟಗೊಂಡಿದೆ. ಪರಿಣಾಮ 8 ಜನರು ಸಾವನ್ನಪ್ಪಿದ್ದಾರೆ. 13 ಮಂದಿ ಗಾಯಗೊಂಡಿದ್ದಾರೆ. ಬಲೂನ್ ಸ್ಫೋಟದ ದೃಶ್ಯದ ವಿಡಿಯೋ ವೈರಲ್ ಆಗಿದೆ.

ಬಲೂನ್‌ಗೆ ಆಗಸದಲ್ಲಿ ಬೆಂಕಿ ಹೊತ್ತುಕೊಂಡಿದ್ದು, ಸ್ಫೋಟವಾಗಿದೆ. ಸ್ಫೋಟ ಮತ್ತು ಬೆಂಕಿಯ ತೀವ್ರತೆಗೆ 8 ಪ್ರವಾಸಿಗರು ಸಾವನ್ನಪ್ಪಿದ್ದು, 13 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹಾಟ್ ಏರ್ ಬಲೂನ್‌ನ ಬುಟ್ಟಿಗೆ ಜೋಡಿಸಲಾಗಿದ್ದ ಹೆಚ್ಚುವರಿ ಗ್ಯಾಸ್ ಸಿಲಿಂಡರ್‌ನ ಟಾರ್ಚ್‌ನಿಂದ ಕಿಡಿ ಹೊಮ್ಮಿ ಬಲೂನ್‌ನ ಬಟ್ಟೆಗೆ ಬೆಂಕಿ ತಾಗಿ ಶರವೇಗದಲ್ಲಿ ವ್ಯಾಪಿಸಿದೆ. ತಕ್ಷಣವೇ ಬಿಸಿಗಾಳಿ ಬಲೂನನ್ನು ಕೆಳಕ್ಕೆ ಇಳಿಸಲು ಚಾಲಕ ಯತ್ನಿಸಿದರೂ ಪ್ರಯೋಜನವಾಗಿಲ್ಲ. ಅಷ್ಟರಲ್ಲಾಗಲೇ ಬೆಂಕಿ ಇಡೀ ಬಲೂನಿಗೆ ವ್ಯಾಪಿಸಿ, ಸಿಲಿಂಡರ್ ಸ್ಫೋಟಗೊಂಡಿದೆ. 'ಕೆಳಕ್ಕೆ ಜಿಗಿಯಿರಿ' ಎಂದು ಯಾರೋ ಒಬ್ಬರು ಕೂಗಿದ್ದಾರೆ. ಕೆಲವರು ಬಲೂನ್‌ನ ಬುಟ್ಟಿಯಿಂದ ಕೆಳಕ್ಕೆ ಜಿಗಿದು ಗಾಯಗೊಂಡರೂ ಪ್ರಾಣ ಉಳಿಸಿಕೊಂಡಿದ್ದಾರೆ. ಜಿಗಿಯಲು ಬಯಪಟ್ಟವರು ಬಲೂನ್‌ನಲ್ಲೇ ಉಳಿದು ಜೀವಂತ ದಹನವಾಗಿದ್ದಾರೆ ಎಂದು ಗಾಯಾಳುವೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಯಾವುದೇ ಕಾರಣಕ್ಕೂ ಪಾಕ್‌ಗೆ ನೀರಿಲ್ಲ

ಸಿಂಧೂ ಜಲ ಒಪ್ಪಂದದ ಮರುಸ್ಥಾಪನೆ ಅಸಾಧ್ಯ: ಶಾ

ದೆಹಲಿ: ಪಾಕಿಸ್ತಾನ ಜತೆಗಿನ ಸಿಂಧೂ ಜಲ ಒಪ್ಪಂದದ ಮರುಸ್ಥಾಪನೆ ಅಸಾಧ್ಯ ಎಂದು ಗೃಹ ಸಚಿವ ಅಮಿತ್ ಶಾ ಸ್ಪಷ್ಟವಾಗಿ ಹೇಳಿದ್ದಾರೆ.

ಏ.22ರಂದು ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಮೂಲದ ಭಯೋತ್ಪಾದಕರು ದಾಳಿ ನಡೆಸಿ 26 ಜನರನ್ನು ಕೊಂದ ಬಳಿಕ ಪ್ರತಿಕಾರ ಕ್ರಮವಾಗಿ ಭಾರತ ಸರಕಾರ, 65 ವರ್ಷಕ್ಕೂ ಹಿಂದಿನ ಸಿಂಧೂ ನದಿ ಒಪ್ಪಂದವನ್ನು ಅಮಾನತುಗೊಳಿಸಿತ್ತು.

1960ರ ಸಿಂಧೂ ಜಲ ಒಪ್ಪಂದ ಭಾರತದ ಪಾಲಿಗೆ ನ್ಯಾಯಸಮ್ಮತವಲ್ಲ ಎಂದಿರುವ ಅಮಿತ್ ಶಾ, ಒಪ್ಪಂದದ ಪುನಃ ಸ್ಥಾಪನೆಯ ಯಾವುದೇ ಸಾಧ್ಯತೆ ಇಲ್ಲ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಸಿಂಧೂ ಜಲ ಒಪ್ಪಂದ ಮರುಸ್ಥಾಪನೆ ಎಂದಿಗೂ ಇಲ್ಲ. ಕಾಶ್ಮೀರದಿಂದ ರಾಜಸ್ಥಾನಕ್ಕೆ ಕಾಲುವೆ ನಿರ್ಮಿಸಲಾಗುವುದು. ಆ ಬಳಿಕ ಪಾಕ್‌ಗೆ ಹರಿಯುತ್ತಿದ್ದ ನೀರಿನ ಪಾಲನ್ನು ರಾಜಸ್ಥಾನಕ್ಕೆ ಹರಿಸಲಿದ್ದೇವೆ. ನ್ಯಾಯಸಮ್ಮತವಲ್ಲದ ರೀತಿಯಲ್ಲಿ ಪಾಕಿಸ್ತಾನ ಪಡೆಯುತ್ತಿದ್ದ ನೀರಿನಿಂದ ವಂಚಿತವಾಗಲಿದೆ ಎಂದು ವಿವರಿಸಿದರು. ಭಾರತಕ್ಕೆ ಸೇರಬೇಕಾದ ಅಷ್ಟೂ ನೀರನ್ನು ನಾವೇ ಬಳಸಿಕೊಳ್ಳುತ್ತೇವೆ. ಪಾಕ್‌ನತ್ತ ಹರಿಯುತ್ತಿದ್ದ ನೀರನ್ನು ರಾಜಸ್ಥಾನಕ್ಕೆ ಕಾಲುವೆ ಮೂಲಕ ಹರಿಸುತ್ತೇವೆ ಎಂದಿದ್ದಾರೆ.

1960ರಲ್ಲಿ ವಿಶ್ವಸಂಸ್ಥೆಯ ಸೂಚನೆ ಮೇರೆಗೆ ವಿಶ್ವಬ್ಯಾಂಕ್ ಮಧ್ಯಸ್ಥಿಕೆ ವಹಿಸಿ ಸಿಂಧೂ ಜಲ ಒಪ್ಪಂದ ರೂಪಿಸಿದ್ದು, ಪಶ್ಚಿಮಾಭಿಮುಖವಾಗಿ ಹರಿಯುವ ಸಿಂಧೂ, ಜೇಲಂ ಮತ್ತು ಚೆನಾಬ್ ನದಿಗಳ ನೀರನ್ನು ಪಾಕಿಸ್ತಾನಕ್ಕೆ ಹಾಗೂ ಪೂರ್ವಾಭಿಮುಖವಾಗಿ ಹರಿಯುವ ಬಿಯಾಸ್, ರಾವಿ ಮತ್ತು ಸಟ್ಲೇಜ್ ನದಿ ನೀರನ್ನು ಭಾರತಕ್ಕೆ ಹಂಚಿಕೆ ಮಾಡಲಾಗಿತ್ತು.

ಎಐ-171 ಅವಶೇಷ ವಿಮಾನ ನಿಲ್ದಾಣ ಆವರಣಕ್ಕೆ ಸ್ಥಳಾಂತರ

ಅಹಮದಾಬಾದ್: ಜೂ.12ರ ಮಧ್ಯಾಹ್ನ ಅಹಮದಾಬಾದ್‌ನ ವೈದ್ಯಕೀಯ ಕಾಲೇಜು ಹಾಸ್ಟೆಲ್ ಮೇಲೆ ಪತನಗೊಂಡ ಏರ್ ಇಂಡಿಯ ಸಂಸ್ಥೆಯ 'ಎಐ-171 ಬೋಯಿಂಗ್ 787-8 ವಿಮಾನ'ದ ಅವಶೇಷಗಳನ್ನು ಗುಜರಾತ್ ಪೊಲೀಸರು ಭಾನುವಾರ ವಿಮಾನ ನಿಲ್ದಾಣದ ಆವರಣಕ್ಕೆ ಸ್ಥಳಾಂತರಿಸಲು ಪ್ರಾರಂಭಿಸಿದರು.

ವಿಮಾನ ಅಪಘಾತ ಸ್ಥಳದಿಂದ ಅವಶೇಷಗಳನ್ನು ವಿಮಾನ ನಿಲ್ದಾಣದ ಆವರಣದಲ್ಲಿರುವ ಗುಜರಾತಿನ ರಾಜ್ಯ ವಿಮಾನಯಾನ ಮೂಲಸೌಕರ್ಯ ಕಂಪನಿ ಲಿ. ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತಿದೆ. ಅವಶೇಷಗಳೆಲ್ಲವನ್ನೂ ಸ್ಥಳಾಂತರಿಸಲು 48 ರಿಂದ 72 ಗಂಟೆಗಳು ಬೇಕಾಗುತ್ತದೆ. ತನಿಖೆ ಪೂರ್ಣಗೊಳ್ಳುವವರೆಗೂ ವಿಮಾನದ ಅವಶೇಷಗಳೆಲ್ಲವೂ 'ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯ ಸಂಸ್ಥೆಯ ಅಪಘಾತ ತನಿಖಾ ಬ್ಯೂರೊ (ಎಎಐಬಿ) ವಶದಲ್ಲಿರುತ್ತವೆ ಎಂದು ಸೆಕ್ಟರ್ 2ರ ಜಂಟಿ ಪೊಲೀಸ್ ಆಯುಕ್ತ ಜೈಪಾಲ್ಸಿಂಗ್ ರಾಥೋಡ್ ಸುದ್ದಿಸಂಸ್ಥೆಗೆ ಭಾನುವಾರ ತಿಳಿಸಿದ್ದಾರೆ. ಒಂದೆಡೆ 'ಎಎಐಬಿ' ತನಿಖೆ ನಡೆದಿದ್ದರೆ, ಇನ್ನೊಂದೆಡೆ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿ(ಎನ್‌ಟಿಎಸ್‌ಬಿ) ಕೂಡಾ ಎಐ-171 ವಿಮಾನ ಪತನದ ಬಗ್ಗೆ ಸಮಾನಾಂತರ ಅಂತರರಾಷ್ಟ್ರೀಯ ಮಟ್ಟದ ತನಿಖೆಯನ್ನು ನಡೆಸುತ್ತಿದೆ.

232 ಶವ ಹಸ್ತಾಂತರ: ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುತ್ತಿದ್ದ ಎಐ-171 ವಿಮಾನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟ ಕೆಲ ಕ್ಷಣಗಳಲ್ಲೇ ಮೇಘನಿ ನಗರದಲ್ಲಿರುವ ವೈದ್ಯ ವಿದಾರ್ಥಿಗಳ ಹಾಸ್ಟೆಲ್ ಸಂಕೀರ್ಣಕ್ಕೆ ಅಪ್ಪಳಿಸಿತು. 230 ಪ್ರಯಾಣಿಕರು, 12 ಸಿಬ್ಬಂದಿ ಸೇರಿದಂತೆ ವಿಮಾನದಲ್ಲಿದ್ದ 242 ಜನರಲ್ಲಿ 241 ಮಂದಿ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳು, ನಾಗರಿಕರು ಸೇರಿದಂತೆ 270 ಜನರು ಸಾವಿಗೀಡಾಗಿದ್ದಾರೆ. ಈವರೆಗೆ 247 ಮೃತದೇಹಗಳನ್ನು ಡಿಎನ್‌ಎ ಪರೀಕ್ಷೆ ಮೂಲಕ ಗುರುತಿಸಿದ್ದು, 232 ಶವಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮರ ಸಮಾಪ್ತಿಗೆ ವಿಶ್ವಸಂಸ್ಥೆ ಆಗ್ರಹ

ವಿಶ್ವಸಂಸ್ಥೆ: ಇಸ್ರೇಲ್-ಇರಾನ್ ನಡುವಿನ ಯುದ್ಧಕ್ಕೀಗ ಅಮೆರಿಕ ಪ್ರವೇಶವಾಗಿರುವುದರಿಂದ ಮಧ್ಯಪ್ರಾಚ್ಯದಲ್ಲಿ ಪರಿಸ್ಥಿತಿ ನಿಯಂತ್ರಣ ತಪ್ಪಬಹುದಾಗಿದೆ. ನಾಗರಿಕರ ಮತ್ತು ಜಗತ್ತಿನ ಮೇಲೆ ತೀವ್ರ ಪರಿಣಾಮಗಳನ್ನು ಬೀರುತ್ತದೆ ಎಂದು ವಿಶ್ವಸಂಸ್ಥೆ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಭಾನುವಾರ ಹೇಳಿದ್ದಾರೆ.



ಇರಾನ್ ಮೇಲೆ ಅಮೆರಿಕಾ ನಡೆಸಿರುವ ದಾಳಿ ನಿಜಕ್ಕೂ ದೊಡ್ಡ ಅಪಾಯಕಾರಿ ಬೆಳವಣಿಗೆಯಾಗಿದೆ. ಇರಾನ್ ವಿರುದ್ಧ ಅಮೆರಿಕ ಬಲಪ್ರಯೋಗ ವಿಶ್ವಸಂಸ್ಥೆಗೆ ತೀವ್ರ ಆಘಾತ ಉಂಟು ಮಾಡಿದೆ. ಈಗಾಗಲೇ ಸಂಘರ್ಷ ದಲ್ಲಿರುವ ಪ್ರದೇಶದಲ್ಲಿ ಈ ಬೆಳವಣಿಗೆ ಪರಿಸ್ಥಿತಿ ನಿಯಂತ್ರಣ ತಪ್ಪುವಂತೆ ಮಾಡಲಿದೆ. ಇದು ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ನೇರ ಬೆದರಿಕೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿ ದ್ದಾರೆ. ಅಮೆರಿಕ, ಇಸ್ರೇಲ್, ಇರಾನ್ ಮೂರೂ ರಾಷ್ಟ್ರಗಳು ಮಧ್ಯಪ್ರಾಚ್ಯದಲ್ಲಿನ ಸದ್ಯದ ಯುದ್ಧದ ಕಾರ್ಮೋಡ ಕರಗಿಸಲು ವಿಶ್ವಸಂಸ್ಥೆಯ ಚಾರ್ಟರ್ ಮತ್ತು ಅಂತಾರಾಷ್ಟ್ರೀಯ ಕಾನೂನಿನ ನಿಯಮಗಳಡಿ ತಮ್ಮ ಬಾಧ್ಯತೆಗಳನ್ನು ಎತ್ತಿ ಹಿಡಿಯಬೇಕು. ಈ ಅಪಾಯಕಾರಿ ಸಮಯದಲ್ಲಿ ಅವ್ಯವಸ್ಥೆಯ ಸುರುಳಿ ತಪ್ಪಿಸುವುದು ನಿರ್ಣಾಯಕ. ಮುಂದಿನ ಏಕೈಕ ಮಾರ್ಗ ರಾಜತಾಂತ್ರಿಕತೆ. ಯುದ್ಧ ಕೊನೆಗೊಳ್ಳಬೇಕಿದೆ ಎಂದು ಹೇಳಿದ್ದಾರೆ.

ಅಮೆರಿಕ ದಾಳಿಗೆ ಐರೋಪ್ಯರ ಬೆಂಬಲ, ರಷ್ಯಾ,ಚೀನಾ, ಅರಬ್ ರಾಷ್ಟ್ರಗಳ ಖಂಡನೆ

ಅಭಿನಂದನೆಗಳು ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಇರಾನ್‌ನ 3 ಪರಮಾಣು ಸ್ಥಾವರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವುದು ನಿಮ್ಮ ಈ ಕೆಚ್ಚೆದೆಯ ನಿರ್ಧಾರವಾಗಿದೆ. ಅಮೆರಿಕ ಸರಿಯಾದ ನಿರ್ಧಾರವನ್ನೇ ತೆಗೆದುಕೊಂಡಿದೆ. ಅಮೆರಿಕದ ಈ ದಾಳಿ ಈ ಭಾಗದ ಇತಿಹಾಸವನ್ನೇ ಬದಲಿಸಲಿದೆ. ಟ್ರಂಪ್ ಅವರ ಈ ನಡೆಯನ್ನು ವಿಶ್ವ ದೀರ್ಘಾವಧಿಗೆ ನೆನಪನಲ್ಲಿಟ್ಟುಕೊಳ್ಳಲಿದೆ. ಅದಕ್ಕಾಗಿ ನಿಮ್ಮನ್ನು ಹೃತ್ಪೂರ್ವಕ ಅಭಿನಂದಿಸುವೆ.

-ಬೆಂಜಮಿನ್ ನೆತನ್ಯಾಹು ಇಸ್ರೇಲ್ ಪ್ರಧಾನಿ

ಇರಾನ್‌ನ ಪರಮಾಣು ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮುಂದಾಗಿದ್ದುದು ನಮಗೆಲ್ಲಾ ಕಳವಳಕಾರಿ ಬೆಳವಣಿಗೆಯಾಗಿತ್ತು. ವಿಶ್ವಕ್ಕೆ ದೊಡ್ಡ ಬೆದರಿಕೆಯೇ ಆಗಿತ್ತು. ಈಗ ಇರಾನ್‌ನ ಪರಮಾಣು ಕೇಂದ್ರಗಳನ್ನೇ ಗುರಿಯಾಗಿಸಿ ಅಮೆರಿಕ ದಾಳಿ ನಡೆಸಿರುವುದು ಸರಿಯಾಗಿದೆ. ಇದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಶ್ವತ ಶಾಂತಿ ನೆಲೆಸಲು ಅವಕಾಶವಾಗಲಿದೆ.

- ಕೇರ್ ಸ್ಟಾರ್ಮರ್ ಬ್ರಿಟನ್ ಪ್ರಧಾನಿ

ಆದಷ್ಟು ಬೇಗ ಇಸ್ರೇಲ್-ಇರಾನ್ ಯುದ್ಧ ಕೊನೆಗೊಳ್ಳಲಿ ಎಂಬುದೇ ಜಪಾನ್‌ನ ಆಗ್ರಹವಾಗಿದೆ. ಸದ್ಯದ ಬೆಳವಣಿಗೆಗಳನ್ನು ಟೋಕಿಯೊ ಬಹಳ ಗಂಭೀರವಾಗಿ ಗಮನಿಸುತ್ತಿದೆ. ಅಮೆರಿಕದ ತೀವ್ರ ಸ್ವರೂಪದ ದಾಳಿಯಿಂದ ಇರಾನ್‌ನ ಪರಮಾಣು ಘಟಕಗಳಿಗೆ ತೀವ್ರ ಸ್ವರೂಪದ ಹಾನಿಯಾಗಿದೆ. ಇನ್ನಾದರೂ ಯುದ್ಧ ಕೊನೆಗೊಳ್ಳಲಿದೆ ಎಂಬುದೇ ನಮ್ಮ ನಿರೀಕ್ಷೆ ಯಾಗಿದೆ. ಇರಾನ್ ಕೂಡಾ ಮಾತುಕತೆಯ ಮೇಜಿಗೆ ಬರಬೇಕು.

- ಶಿಗೆರು ಇಶಿಬಾ ಜಪಾನ್ ಪ್ರಧಾನಿ

ಜಗತ್ತಿನ ಎಲ್ಲೆಡೆ ಶಾಂತಿ ನೆಲೆಸುವಂತೆ ಮಾಡುವೆ ಎಂದು ಹೇಳಿಕೊಂಡು 2024ರ ಚುನಾವಣೆಯಲ್ಲಿ ಗೆಲುವು ಕಂಡ ಡೊನಾಲ್ಡ್ ಟ್ರಂಪ್, ಹೇಳಿದ್ದಕ್ಕೆ ವಿರುದ್ಧವಾಗಿ ಅಮೆರಿಕವನ್ನು ಇನ್ನೊಂದು ಯುದ್ಧದ ಸರಣಿಗೆ ದೂಡಿದ್ದಾರೆ. ಅವರ ಈ ನಡೆ ಆಘಾತಕಾರಿಯಾಗಿದೆ.

-ಡಿಮಿಟ್ರಿ ಮೆಡ್ವೆಡೇವ್
ಉಪಾಧ್ಯಕ್ಷ, ರಷ್ಯಾ ಭದ್ರತಾ ಸಮಿತಿ

ಇರಾನ್ ಮೇಲೆ, ಅದೂ ಪರಮಾಣು ಘಟಕಗಳ ಮೇಲೆಯೇ ಭಾನುವಾರ ಬೆಳಗ್ಗೆ ಅಮೆರಿಕ ತೀವ್ರ ಸ್ವರೂಪದ ದಾಳಿ ಮಾಡಿರುವುದು ನಮ್ಮ ವಲಯದಲ್ಲಿ ತೀವ್ರ ಕಳವಳಕ್ಕೆ ಕಾರಣವಾಗಿದೆ. ವಾಸ್ತವವಾಗಿ 'ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್' ನಮಗೆ ಸೋದರಿಯಂತಹ ದೇಶವಾಗಿದೆ. ಸೌದಿ ಅರೇಬಿಯ ಸದ್ಯದ ಬೆಳವಣಿಗೆಗಳನ್ನೆಲ್ಲಾ ಬಹಳ ಗಂಭೀರವಾಗಿ ಗಮನಿಸುತ್ತಿದೆ.

-ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್
ಸೌದಿ ಅರೇಬಿಯ ವಿದೇಶಾಂಗ ಸಚಿವ

ಇರಾನ್ ದೇಶದ ಪರಮಾಣು ಘಟಕಗಳ ಮೇಲೆ ದಾಳಿ ನಡೆಸಿರುವ ಅಮೆರಿಕದ ಕ್ರಮ ಖಂಡನಾರ್ಹ. ಅಮೆರಿಕದ ಸೇನಾ ಕಾರ್ಯಾಚರಣೆಯು ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆ. ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆಯನ್ನು ಅಮೆರಿಕದ ಈ ನಡೆ ಇನ್ನಷ್ಟು ಹೆಚ್ಚಿಸಲಿದೆ. ಪಾಕಿಸ್ತಾನಕ್ಕೆ ಆಘಾತವಾಗಿದೆ. ಬಹಳ ಕಳವಳ ಉಂಟಾಗಿದೆ. ವಿಶ್ವಸಂಸ್ಥೆಯ ನಿಯಮಗಳ ಪ್ರಕಾರ ಇರಾನ್ ಕೂಡಾ ತನ್ನನ್ನು ರಕ್ಷಿಸಿಕೊಳ್ಳಲು ನ್ಯಾಯಬದ್ಧ ಹಕ್ಕು ಹೊಂದಿದೆ.

-ಮೊಹಮ್ಮದ್ ಇಷಾಕ್ ಧರ್ ಪಾಕ್ ವಿದೇಶಾಂಗ ಸಚಿವ

ಸಮಾಚಾರ ಸಣ್ಣದಲ್ಲ

ಇರಾನ್ ಪರ ಯೆಮನ್ ಸಂದೇಶ

ದೆಹಲಿ: ಇರಾನ್ ಮೇಲೆ ದಾಳಿ ಮಾಡುವ ಮೂಲಕ ಇಸ್ರೇಲ್ ಯುದ್ಧ ಆರಂಭಿಸಿದರೆ, ಇರಾನ್ ಮಿತ್ರ ರಾಷ್ಟ್ರ ಯೆಮನ್ ದೊಡ್ಡ ಸಂದೇಶವೊಂದನ್ನು ರವಾನೆ ಮಾಡಿದ್ದು ತಾನು ಇರಾನ್ ಪರ ಅಮೆರಿಕ ವಿರುದ್ಧ ಯುದ್ಧ ಮಾಡುವುದಾಗಿ ಘೋಷಣೆ ಮಾಡಿದೆ. ಭಾನುವಾರ ಇರಾನ್‌ನಲ್ಲಿನ ಪರಮಾಣು ನೆಲೆಗಳ ಮೇಲೆ ಅಮೆರಿಕ ವಾಯುದಾಳಿ ನಡೆಸಿದ ನಂತರ, ಯೆಮನ್‌ನ ಹೌತಿ ಬಂಡುಕೋರರು ಅಮೆರಿಕ ವಿರುದ್ಧ ಯುದ್ಧ ಘೋಷಣೆ ಮಾಡಿದ್ದು, ಕೆಂಪು ಸಮುದ್ರದಲ್ಲಿ ಅಮೆರಿಕದ ಹಡಗುಗಳ ಮೇಲೆ ದಾಳಿ ಮಾಡುವ ತಮ್ಮ ಹಿಂದಿನ ಬದ್ಧತೆಯಂತೆ ಕಾರ್ಯನಿರ್ವಹಿಸುವುದಾಗಿ ಹೇಳಿದೆ. ಪಶ್ಚಿಮ ಏಷ್ಯಾದಲ್ಲಿ ಇದು ಉದ್ವಿಗ್ನತೆಯ ಪ್ರಮುಖ ಘಟನೆಯಾಗಿದ್ದು, ಕೆಂಪು ಸಮುದ್ರದಲ್ಲಿ ಸಂಘರ್ಷ ತಾರಕಕ್ಕೇರುವ ಭೀತಿ ಆರಂಭವಾಗಿದೆ. ಸಮುದ್ರದಲ್ಲಿ ಅಮೆರಿಕದ ಹಡಗುಗಳು ಮತ್ತು ಯುದ್ಧನೌಕೆಗಳನ್ನು ಗುರಿಯಾಗಿಸಿ ದಾಳಿ ಮಾಡಲು ನಾವು ಸಿದ್ಧರಿದ್ದೇವೆ. ಸಶಸ್ತ್ರ ಪಡೆಗಳ ಘೋಷಣೆಗೆ ಯೆಮನ್ ಗಣರಾಜ್ಯದ ಬದ್ಧತೆಯನ್ನು ನಾವು ದೃಢಪಡಿಸುತ್ತೇವೆ ಎಂದು ಭಾನುವಾರ ಅಮೆರಿಕ ಇರಾನ್ ಮೇಲೆ ದಾಳಿ ನಡೆಸಿದ ನಂತರ ಹೌತಿ ಬಂಡುಕೋರರು ಬಿಡುಗಡೆ ಮಾಡಿದ್ದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗೋವಾ ಬೀಚ್‌ನಲ್ಲಿ ವಿಷಕಾರಿ ಹಾವು ಪತ್ತೆ

ಪಣಜಿ: ಗೋವಾದ ಸಮುದ್ರ ಕಿನಾರೆಯಲ್ಲಿ ಅತ್ಯಂತ ವಿಷಕಾರಿಯಾದ ಸಮುದ್ರ ಹಾವೊಂದು ಪತ್ತೆಯಾಗಿದ್ದು, ಅದರ ವಿಡಿಯೊವೊಂದು ಅನೇಕರನ್ನು ಭಯಭೀತಗೊಳಿಸಿದೆ. ಜೀಬ್ರಾದಂತೆ ಕಪ್ಪು ಹಾಗೂ ಬಿಳಿ ಪಟ್ಟಿ ಇರುವ ಹಾವೊಂದು ಸಮುದ್ರ ತೀರದಲ್ಲಿ ಮರಳಿನಲ್ಲಿ ಹೊರಳಾಡುತ್ತಿದ್ದು, ಅದರ ದೇಹದ ಮಧ್ಯಭಾಗದಲ್ಲಿ ಏನು ಸಿಲುಕಿದಂತೆ ಕಾಣುತ್ತಿದ್ದು, ಅದು ಅಲ್ಲಿಂದ ಹೋಗಲು ಕಷ್ಟಪಡುವಂತೆ ಕಾಣುತ್ತಿದೆ. ಅದನ್ನು ಪ್ರವಾಸಿಗರು ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ವಿಡಿಯೋ ನೋಡಿದ ಅನೇಕರು ಹೊಸದೊಂದು ಭಯ ಶುರುವಾಯಿತು ಎಂದು ಕಾಮೆಂಟ್ ಮಾಡಿದ್ದಾರೆ. ವಿಡಿಯೊದಲ್ಲಿ ಸಣ್ಣಗಾತ್ರದ ದೇಹದ ಮೇಲೆ ಬಿಳಿ ಕಪ್ಪು ಪಟ್ಟಿ ಇರುವ ಹಾವೊಂದು ಏನನ್ನೋ ನುಂಗಿದ್ದು, ಚಲಿಸಲು ಕಷ್ಟಪಡುತ್ತಿದೆ. ಬಹುಶಃ ಅದು ಮೀನನ್ನು ನುಂಗಿದ್ದಿರಬಹುದು. ಅದನ್ನು ನೋಡಿದ ಅನೇಕರು ಇದು ಅತ್ಯಂತ ವಿಷಕಾರಿಯಾದ ಸಮುದ್ರ ಮೀನು ಎಂದು ಕಾಮೆಂಟ್ ಮಾಡಿದ್ದಾರೆ. ಅನೇಕರು ಇದನ್ನು ಮೊದಲ ಬಾರಿ ನೋಡಿದ್ದಾಗಿ ಹೇಳಿದ್ದು, ಇನ್ನು ಬೀಚ್‌ಗೆ ಹೋಗುವುದಕ್ಕೂ ಭಯಪಡಬೇಕು ಎಂದು ಕಾಮೆಂಟ್ ಮಾಡಿದ್ದಾರೆ. ಆದರೆ ಇದು ನಿಜವಾಗಿಯೂ ಗೋವಾ ಬೀಚ್‌ನಲ್ಲಿ ಪತ್ತೆಯಾಗಿದೆ ಎಂಬುದಕ್ಕೆ ಯಾವುದೇ ಸ್ಪಷ್ಟತೆ ಇಲ್ಲ, ಆದರೆ ಗೋವಾ ಬೀಚ್‌ನಲ್ಲಿ ಪತ್ತೆಯಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಅನೇಕರು ಪ್ರತಿಕ್ರಿಯಿಸಿದ್ದಾರೆ.

ಅಭಿಮಾನಿ ತಲೆ ಮೇಲೆ ಹರಿದ ಜಗನ್ ಕಾರು

ಗುಂಟೂರು: ಆಂಧ್ರ ಪ್ರದೇಶದ ಗುಂಟೂರಿನಲ್ಲಿ ಬೆಚ್ಚಿ ಬೀಳಿಸುವ ಘಟನೆಯೊಂದು ನಡೆದಿದ್ದು ಮಾಜಿ ಸಿಎಂ ಹಾಗೂ ವೈಎಸ್ ಆರ್ ಕಾಂಗ್ರೆಸ್ ಮುಖ್ಯಸ್ಥ ಜಗನ ಮೋಹನ್ ರೆಡ್ಡಿ ರೋಡ್ ಶೋ ವೇಳೆ ವ್ಯಕ್ತಿಯೋರ್ವ ಅವರ ಕಾರಿನ ಚಕ್ರಕ್ಕೆ ಸಿಲುಕಿ ಸಾವನ್ನಪ್ಪಿದ್ದಾನೆ. ಪಲ್ನಾಡು ಜಿಲ್ಲೆಗೆ ಭೇಟಿ ನೀಡುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಗುಂಟೂರು ಜಿಲ್ಲೆಯ ಎಟುಕುರು ಬಳಿಯ ಲಾಲ್ ಪುರಂ ಹೆದ್ದಾರಿಯಲ್ಲಿ ವೈಎಸ್‌ಆರ್‌ಸಿಪಿ ಆಯೋಜಿಸಿದ್ದ ರ್‍ಯಾಲಿ ವೇಳೆ ಜಗನ್ ಪ್ರಯಾಣಿಸುತ್ತಿದ್ದ ಕಾರು ವ್ಯಕ್ತಿ ಮೇಲೆ ಹರಿದಿದ್ದು, ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ವೈಎಸ್‌ಆರ್‌ಸಿಪಿ ಪಕ್ಷದ ಕಟ್ಟಾ ಬೆಂಬಲಿಗ ಚೀಲಿ ಸಿಂಗಯ್ಯ (54) ಮೃತ ದುರ್ದೈವಿ. ಸಟ್ಟೇನಪಲ್ಲಿ ತಾಲೂಕಿನ ರೆಂಟಪಲ್ಲಿ ಗ್ರಾಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಜಗನ್ ಮೋಹನ್ ರೆಡ್ಡಿ ಅವರನ್ನು ನೋಡಲು ರಸ್ತೆ ಬದಿ ನೂರಾರು ಸಂಖ್ಯೆಯಲ್ಲಿ ವೈಎಸ್‌ಆರ್‌ಸಿಪಿ ಕಾರ್ಯಕರ್ತರು ನೆರೆದಿದ್ದರು. ಅಲ್ಲದೇ ಜಗನ್‌ಗೆ ಹಾರ ಹಾಕಿ ಕೈ ಕುಲುಕಲು ಮುಗಿಬಿದ್ದಿದ್ದು, ಜಗನ್ ಕಾರಿನ ಡೋರ್ ತೆಗೆದು ಅಭಿಮಾನಿಗಳತ್ತ ಕೈಬಿಸುತ್ತಿದ್ದರೆ, ಇತ್ತ ಚಾಲಕನ ಕಡೆಗೆ ಅಭಿಮಾನಿ ಸಿಂಗಯ್ಯ ಕಾರಿ ಮುಂಭಾಗದಲ್ಲಿ ಬಿದ್ದಿದ್ದಾನೆ. ಇದನ್ನು ಗಮನಿಸದ ಚಾಲಕ ಹಾಗೇ ಕಾರು ಚಲಾಯಿಸಿದ್ದು, ಕಾರಿನ ಮುಂದಿನ ಗಾಲಿ ಸಿಂಗಯ್ಯನ ತಲೆ ಮೇಲೆ ಹರಿದಿದೆ. ಪರಿಣಾಮ ಆತ ಸ್ಥಳದಲ್ಲೇ ಅಸುನೀಗಿದ್ದಾನೆ.

ಕಾಮುಕನ ಹುಚ್ಚಾಟಕ್ಕೆ ಬಾಲಕ ಬಲಿ

ಚೆನ್ನೈ: 22 ವರ್ಷದ ಕಾಮುಕ ಯುವಕನ ಹುಚ್ಚಾಟಕ್ಕೆ 5 ವರ್ಷದ ಬಾಲಕನೊಬ್ಬ ಬಲಿಯಾಗಿರುವ ಘಟನೆ ತಮಿಳುನಾಡಿನಲ್ಲಿ ಕಾಂಚಿಪುರಂನಲ್ಲಿ ನಡೆದಿದೆ. ಯುವಕನೊಬ್ಬ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾನೆ. ಇದನ್ನು ತಡೆದು ತಪ್ಪಿಸಿಕೊಳ್ಳಲು ಯತ್ನಿಸಿದ್ದಕ್ಕೆ ಕೋಪಗೊಂಡು ಬಾಲಕನ್ನು ಕೊಲೆ ಮಾಡಿದ್ದಾನೆ ಎಂದು ಮೂಲಗಳು ತಿಳಿಸಿವೆ. ಕೊಲೆಗೈದ ವ್ಯಕ್ತಿಯನ್ನು ಅಸ್ಸಾಂ ಮೂಲದ ಬೋಲ್‌ದೇವ ಮಸುವಾ ಎಂದು ಗುರುತಿಸಲಾಗಿದ್ದು, ಸದ್ಯ ಆತನನ್ನು ಪೊಲೀಸರು ಬಂಧಿಸಿದ್ದಾರೆ. ಮೃತ ಬಾಲಕ ಹೆತ್ತವರು ಕಾಂಚಿಪುರಂನಲ್ಲಿ ವಾಸವಾಗಿದ್ದರು. ಬಾಲಕ ಜೂ. 9ರಂದು ನಾಪತ್ತೆಯಾಗಿದ್ದ. ಆತನ ಪೋಷಕರು ನೀಡಿದ ದೂರಿನ ಮೇರೆಗೆ ಪೊಲೀಸರು ಶೋಧ ಕಾರ್ಯಾಚರಣೆ ಆರಂಭಿಸಿದ್ದರು. ಈ ಮಧ್ಯೆ ಗ್ರಾಮದ ಸಮೀಪದ ನಿರ್ಜನ ಪ್ರದೇಶದಿಂದ ಮಗುವಿನ ಕೊಳೆತ ಶವ ಪತ್ತೆಯಾಗಿತ್ತು, ಬಾಲಕನ ಶರೀರದಲ್ಲಿ ಗಾಯ ಕಂಡುಬಂದಿತ್ತು.

ಬಿ.ಆರ್. ಪಾಟೀಲ್ ತಂದ ಪೀಕಲಾಟ, ಕುಸಿದ ಬಿಜೆಪಿ ಹೋರಾಟ, ರಾಜಪಾಲರ ಹನ್ನೊಂದು ಚಾಟಿ ಏಟು

ಸರಕಾರಕ್ಕೆ ಈಗ ಸಚಿವರು, ಶಾಸಕರೇ ಪರೋಕ್ಷ ಪ್ರತಿಪಕ್ಷ!

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಕಟ್ಟಿ ಹಾಕಬೇಕಾಗಿದ್ದ ಬಿಜೆಪಿಯು ಸಮರ್ಥ ಪ್ರತಿಪಕ್ಷವಾಗಿ ರೂಪುಗೊಳ್ಳಲಾಗದೆ ಅದರ ಪಾತ್ರವನ್ನು ಪರೋಕ್ಷವಾಗಿ ಕಾಂಗ್ರೆಸ್ ನಾಯಕರೇ ನಿರ್ವಹಿಸು ವಂತಾಗಿದೆ. ಅಧಿಕೃತ ಪ್ರತಿಪಕ್ಷ ಬಿಜೆಪಿ ತನ್ನ ಹೋರಾಟಗಳನ್ನು ಸರಕಾರದ ವಿರುದ್ಧದ ಹೇಳಿಕೆಗಳಿಗೆ ಸೀಮಿತಗೊಳಿಸುತ್ತಿದ್ದು, ತಾರ್ಕಿಕಗೊಳ್ಳದ ಪ್ರತಿಭಟನೆಗಳನ್ನು ನಡೆಸಿ ಕೈ ಚೆಲ್ಲುತ್ತಿದೆ. ಹಾಗೆ ನೋಡಿದರೆ, ರಾಜ್ಯಪಾಲ ಥಾವರಚಂದ್ ಗೆಲ್ಹೋಟ್ ಅವರೇ ಪ್ರತಿಪಕ್ಷವನ್ನೂ ಮೀರಿಸುವಷ್ಟರ ಮಟ್ಟಿಗೆ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಕೆಲವು ಸಚಿವರು

ಮತ್ತು ಅನೇಕ ಶಾಸಕರೇ ಸರಕಾರದ ವಿರುದ್ಧ ತಿರುಗಿಬೀಳುತ್ತಿದ್ದು, ಆಗಾಗ ಮುಜುಗರ ತರುತ್ತಿದ್ದಾರೆ.

ಇದರಿಂದ ಸರಕಾರ ಬಿಜೆಪಿಗಿಂತ ತನ್ನ ಪಕ್ಷದೊಳಗೇ ಪ್ರತಿಪಕ್ಷವನ್ನು ಕಾಣುವಂತಾಗಿದೆ. ಅಂದರೆ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರು ಆಗಿರುವ ಹಿರಿಯ ಶಾಸಕ ಬಿ.ಆರ್.ಪಾಟೀಲ್, ಆರ್ಥಿಕ ಸಲಹೆಗಾರರೂ ಆದ ಮತ್ತೊಬ್ಬ ಹಿರಿಯ ಶಾಸಕ ಬಸವರಾಜ ರಾಯರಡ್ಡಿ ಹಾಗೂ ಕಾನೂನು ಸಚಿವ ಎಚ್.ಕೆ.ಪಾಟೀಲ್, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸೇರಿದಂತೆ ನಾಯಕರು ಆಗಾಗ ಸರಕಾರದ ವಿರುದ್ಧ ಅಕ್ರಮಗಳು ಹಾಗೂ ಭ್ರಷ್ಟಾಚಾರದ ಆರೋಪಗಳ ಬಾಂಬ್ ಸಿಡಿಸಿ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ.

ಹಾಗೆಯೇ ಮುಡಾ ಹಗರಣದ ಆರೋಪಗಳಿಗೆ ಕಾರಣರಾದ ಸಚಿವ ಭೈರತಿ ಸುರೇಶ್ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬಣ್ಣದ ಹೆಸರಿನಲ್ಲಿ ಟೀಕಿಸುವುದು ಸೇರಿದಂತೆ ಕೆಲವು ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ ಸಚಿವ ಜಮೀರ್ ಅಹಮ್ಮದ್ ಖಾನ್ ವಿರುದ್ಧ ಕೂಡ ಸಿಎಂ ಗರಂ ಆಗಿದ್ದಾರೆ.

ಹೀಗಾಗಿ ಕಾಂಗ್ರೆಸ್‌ನ ಅನೇಕ ಸಚಿವರು, ನಾಯಕರೇ ಸರಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡಿ, ಅನೇಕ ಅಸ್ತ್ರಗಳನ್ನು ಪರೋಕ್ಷವಾಗಿ ಬಿಜೆಪಿಗೆ ನೀಡಿದರೂ ಪ್ರತಿಪಕ್ಷ ಅದನ್ನು ಬಳಸಿಕೊಳ್ಳುವಲ್ಲಿ ವಿಫಲವಾಗುತ್ತಿದೆ ಎನ್ನಲಾಗಿದೆ. ಈ ವಿಚಾರದಲ್ಲಿ ಬಿಜೆಪಿಯ ಅನೇಕ ಶಾಸಕರು, ಮುಖಂಡರು, ಪ್ರತಿಪಕ್ಷ ನಾಯಕರ ವಿರುದ್ಧ ಬಹಿರಂಗವಾಗಿಯೇ ಸಿಡಿದೇಳಲು ಸಜ್ಜಾಗಿದ್ದಾರೆ ಎನ್ನಲಾಗಿದೆ.

ಬಿಜೆಪಿಯ ಇಂಥ ವೈಫಲ್ಯಗಳ ಮಧ್ಯೆ, ರಾಜ್ಯಪಾಲ ಗೆಲ್ಹೋಟ್ ರಾಜ್ಯದ ಇತಿಹಾಸದಲ್ಲೇ ಪ್ರಥಮ ಎನ್ನುವಷ್ಟರ ಮಟ್ಟಿಗೆ ಕಾಂಗ್ರೆಸ್ ಸರಕಾರದ 11 ಮಸೂದೆಗಳನ್ನು ತಡೆಹಿಡಿದು ಸರಕಾರವನ್ನು ಇಕ್ಕಟಿಗೆ ಸಿಲುಕಿಸಿದ್ದಾರೆ. ಈ 11 ಮಸೂದೆಗಳ ಪೈಕಿ ಸುದೀರ್ಘ ವಿವರಗಳನ್ನು ಕೇಳಿ ಸದ್ಯ 5 ಮಸೂದೆಗಳನ್ನು ಮಾತ್ರ ಮುಕ್ತಗೊಳಿಸಿದ್ದಾರೆ. ಉಳಿದ 5 ಮಸೂದೆಗಳನ್ನು ರಾಷ್ಟ್ರಪತಿ ಅವರಿಗೆ ಕಳುಹಿಸಿದ್ದಾರೆ. ಇದ್ದಲ್ಲದೆ ಇನ್ನೂ ಎರಡು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಮತ್ತು ಕೆಪಿಎಸ್‌ಸಿ ತಿದ್ದುಪಡಿ ಮಸೂದೆಗಳು ತಿರಸ್ಕಾರದ ನಂತರ ಸರಕಾರದಲ್ಲೇ ಉಳಿದಿವೆ. ಹೀಗಾಗಿ ಇತ್ತೀಚೆಗೆ ರಾಜ್ಯದಲ್ಲಿ ಪ್ರತಿಪಕ್ಷ ಬಿಜೆಪಿಗಿಂತ ಸರಕಾರದೊಳಗಿನ ಸಚಿವರು, ಶಾಸಕರು ಪ್ರತಿಪಕ್ಷದಂತಾಗಿದ್ದಾರೆ ಕಾಂಗ್ರೆಸ್ ಹಿರಿಯ ಮುಖಂಡರು ಹೇಳಿದ್ದಾರೆ.

ಸಚಿವರು ಮಾಡಿದ್ದೇನು?

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ನಿರ್ಲಕ್ಷದಿಂದ ರಾಜ್ಯದಲ್ಲಿ ಮುಡಾ ಹಗರಣದ ಸದ್ದು ಮಾಡಿ, ಇದರಿಂದ ಬಹುತೇಕ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರ್ಚಿಗೇ ಕುತ್ತು ಬಂದಂತಾಗಿತ್ತು. ಇದೇ ರೀತಿ ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್, ಸ್ಪೀಕರ್ ಯು.ಟಿ.ಖಾದರ್



ಅವರ ಆಯ್ಕೆ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದರು. ಅದು ಪಕ್ಷದ ಹೈಕಮಾಂಡ್‌ವರೆಗೂ ಹೋಗಿತ್ತು. ಇದೀಗ ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್‌ನಲ್ಲಿ ಹಗರಣ ಕುರಿತ ಶಾಸಕ ಬಿ.ಆರ್. ಪಾಟೀಲ್ ಹೇಳಿಕೆ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ. ಸಚಿವ ಜಮೀರ್ ಅಹ್ಮದ್ ಖಾನ್ ಅವರ ಆಪ್ತ ಕಾರ್ಯದರ್ಶಿ ಜತೆಗೆ ನಡೆಸಿದ ಫೋನ್ ಸಂಭಾಷಣೆಯ ಆಡಿಯೋ ಲೀಕ್ ಆಗಿದ್ದು, ರಾಜ್ಯ ಸರಕಾರಕ್ಕೆ ತೀವ್ರ ಮುಜುಗರ ಉಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ವರದಿ ಕೇಳಿದೆ ಎನ್ನಲಾಗಿದೆ. ಇದೇ ರೀತಿ ಕಾನೂನು ಸಚಿವ ಎಚ್.ಕೆ.ಪಾಟೀಲ್ ಗಣಿ ಹಗರಣ ಬಗ್ಗೆ ಮುಖ್ಯಮಂತ್ರಿ ಅವರಿಗೆ ಬಹಿರಂಗ ಪತ್ರ ಬರೆದು ಸರಕಾರಕ್ಕೆ ಮುಜುಗರ ತಂದಿದ್ದರು. ಅಕ್ರಮ ಗಣಿಗಾರಿಕೆ ವಿಚಾರ ಮುಂದಿಟ್ಟು ಹೋರಾಟ ಮಾಡಿ ಅಧಿಕಾರ ಹಿಡಿದಿದ್ದ ಕಾಂಗ್ರೆಸ್ ಈಗ ಅದರ ತನಿಖೆಯನ್ನು ಸರಿಯಾಗಿ ನಡೆಸಿಲ್ಲ. ಇದರಿಂದ ರಾಜ್ಯಕ್ಕೆ 1.50 ಲಕ್ಷ ಕೋಟಿ ನಷ್ಟವಾಗಿದೆ ಎಂದು ಹೇಳಿದ್ದರು.

ಸರಕಾರದ ವಿರುದ್ಧ ಶಾಸಕರ ಗುಡುಗು

ಸರಕಾರ ಅಧಿಕಾರಕ್ಕೆ ಬಂದ ಆರಂಭದಲ್ಲೇ ಸುಮಾರು 20ಕ್ಕೂ ಹೆಚ್ಚು ಸಚಿವರು ತಮಗೆ ಸ್ಪಂದಿಸುತ್ತಿಲ್ಲವೆಂದು ಬೇಸರಗೊಂಡು ಶಾಸಕ ಬಿ.ಆರ್.ಪಾಟೀಲ್ ಸೇರಿದಂತೆ 10 ಶಾಸಕರೊಂದಿಗೆ ಸಹಿ ಮಾಡಿರುವ ಜಂಟಿ ಪತ್ರವೊಂದು ಬಿಡುಗಡೆಯಾಗಿತ್ತು. ಇದಾದ ಕೆಲವು ತಿಂಗಳ ನಂತರ ಪಾಟೀಲ್ ಅವರು, ವಿಧಾನಸಭೆಯಲ್ಲಿ ತಮಗೆ ಸರಿಯಾಗಿ ಮಾಹಿತಿ ನೀಡುತ್ತಿಲ್ಲ. ತಮ್ಮನ್ನು ಯಾವುದೇ ರೀತಿಯಲ್ಲೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ವಿರುದ್ಧ ಬಹಿರಂಗವಾಗಿಯೇ ಸಿಡಿದೆದ್ದಿದ್ದರು. ಈಗ ವಸತಿ ಇಲಾಖೆ ಹಗರಣವನ್ನು ಸಂಭಾಷಣೆ ಮೂಲಕ ಬಯಲಿಗೆಳೆದಿದ್ದಾರೆ. ಇದೇ ರೀತಿ, ವಿದ್ಯುತ್ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇಂಧನ ಇಲಾಖೆ ಅಧಿಕಾರಿಗಳು, ಸಚಿವರು ತಮಗೆ ಸ್ಪಂದಿಸುತ್ತಿಲ್ಲ ಎಂದು ಶಾಸಕ ಬಸವರಾಜ ರಾಯರಡ್ಡಿ ಮುಖ್ಯಮಂತ್ರಿಗೆ ಪತ್ರ ಬರೆದು, ಇಂಧನ ಸಚಿವ ಕೆ.ಜೆ.ಜಾರ್ಜ್ ವಿರುದ್ಧ ಗುಡುಗಿದ್ದರು. ಇದಾದ ಕೆಲವು ತಿಂಗಳ ನಂತರ ರಾಯರಡ್ಡಿ ಅವರು, ಮಾಧ್ಯಮಗಳೊಂದಿಗೆ ಮಾತನಾಡಿ, ಯಾವುದೇ ಪಕ್ಷದ ಸರಕಾರ ಇದ್ದರೂ ಭ್ರಷ್ಟಾಚಾರ ನಡೆಯುತ್ತದೆ. ಭ್ರಷ್ಟಾಚಾರದಲ್ಲಿ ಕರ್ನಾಟಕವೇ ನಂಬರ್ ಒನ್ ಆಗಿದೆ ಎಂದಿದ್ದರು.

ಬಿಜೆಪಿ ಬಚ್ಚಿಟ್ಟ ಅಸ್ತ್ರಗಳು

ಬಿಜೆಪಿ ವಿರೋಧಿಸುವ ಕಾಂಗ್ರೆಸ್‌ನ ಅನೇಕ ನೀತಿ, ನಿರ್ಧಾರಗಳು ಅಸ್ತ್ರಗಳಾಗಿ ಕಾಣಿಸಿಕೊಳ್ಳಬೇಕಿತ್ತು. ಆದರೆ ಅವುಗಳು ರಾಜಕೀಯ ಟೀಕೆಗಷ್ಟೇ ಸೀಮಿತವಾಗಿ ಅಂತ್ಯಕಂಡಿವೆ. ಅವುಗಳೆಂದರೆ,

1. ಕಾಮಗಾರಿಯಲ್ಲಿ ಮುಸ್ಲಿಂ ಗುತ್ತಿಗೆದಾರರಿಗೆ ಶೇ.4ರಷ್ಟು ಮೀಸಲು ನೀಡುವುದು. ಈಗ ವಸತಿ ಯೋಜನೆಗಳಲ್ಲಿ ಸಹ ಮುಸ್ಲಿಂ ಸಮುದಾಯಕ್ಕೆ ಶೇ.15ರಷ್ಟು ಮೀಸಲು ನೀಡಲು ತೀರ್ಮಾನ.
2. ಮಂಗಳೂರಿನಲ್ಲಿ ಪ್ರವೀಣ ನೆಟ್ಟಾರು ಕೊಲೆ, ಫಾಸಿಲ್ ಹತ್ಯೆ, ಸುಹಾಸ್ ಶೆಟ್ಟಿ ಹತ್ಯೆ, ಅಬ್ದುಲ್ ರಹ್ಮಾನ್ ಸೇರಿದಂತೆ ಇಡೀ ಜಿಲ್ಲೆ ರಕ್ತಸಿಕ್ತವಾಗಿರುವುದು.
3. ಇತ್ತೀಚೆಗಷ್ಟೇ ಇಸ್ರೇಲ್ ಕಾನ್ಸುಲೇಟ್ ಜನರಲ್‌ನ ಡೆಪ್ಯುಟಿ ಕಾನ್ಸುಲ್ ಜನರಲ್ ಇನ್ಬಾಲ್ ಸ್ಟೋನ್ ಅವರನ್ನು ಗೌರವಿಸಿ ಇಸ್ರೇಲ್ ಸಂಬಂಧಗಳನ್ನು ಬಲಪಡಿಸುವ ಮಾತನಾಡಿದ ಬೆನ್ನಲ್ಲೇ ಈಗ ಇಸ್ರೇಲ್-ಇರಾನ್ ಯುದ್ಧದಲ್ಲಿ ಭಾರತ ಇರಾನ್ ಪರ ನಿಲ್ಲುವಂತೆ ಕೇಂದ್ರ ಸರಕಾರವನ್ನು ರಾಜ್ಯ ಸರಕಾರ ಒತ್ತಾಯಿಸುತ್ತಿರುವುದು.
4. ಸಹಕಾರಿ ಸಚಿವ ಕೆ.ಎನ್.ರಾಜಣ್ಣನವರ 75ನೇ ವರ್ಷದ ಹುಟ್ಟುಹಬ್ಬ ಆಚರಣೆಗೆ ಸಹಕಾರ ಇಲಾಖೆಯ ಸೇವೆ ಮತ್ತು ಜಾಹಿರಾತುಗಳೂ ಸೇರಿದಂತೆ ಇತರ ವೆಚ್ಚಕ್ಕೆ ಅನುದಾನ ಬಳಸಿಕೊಂಡಿರುವ ಆರೋಪಗಳು.

ಪ್ರಧಾನಿ ನರೇಂದ್ರ ಮೋದಿಗೆ ಧನ್ಯವಾದ ತಿಳಿಸಿದ ಇರಾನ್

ದೆಹಲಿ: ಇರಾನ್‌ನ ಪರಮಾಣು ಸ್ಥಾವರ ಮೇಲೆ ಅಮೆರಿಕ ನಡೆಸಿದ ದಾಳಿ ಇರಾನ್ ಹಾಗೂ ಇಸ್ರೇಲ್ ನಡುವಿನ ಸಂಘರ್ಷ ಹೆಚ್ಚಿದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ, ಇರಾನ್ ಅಧ್ಯಕ್ಷರ ಜೊತೆ ದೂರವಾಣಿ ಮಾತುಕತೆ ನಡೆಸಿದ್ದರು. ಯುದ್ಧ ನಿಲ್ಲಿಸಿ, ತಕ್ಷಣ ಶಾಂತಿ ಮರುಸ್ಥಾಪಿಸುವ ಕಾರ್ಯವಾಗಬೇಕು ಎಂದು ಆಗ್ರಹಿಸಿದ್ದರು. ಇದೀಗ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಪ್ರಧಾನಿ ಮೋದಿ ಹಾಗೂ ಭಾರತಕ್ಕೆ ಧನ್ಯವಾದ ಹೇಳಿ ದ್ದಾರೆ.

ಶಾಂತಿ ಮರುಸ್ಥಾಪಿಸುವಲ್ಲಿ ಭಾರತ ಧ್ವನಿ ಮುಖ್ಯ

ಇರಾನ್ ಅಧ್ಯಕ್ಷರಿಂದ ದೂರವಾಣಿ ಕರೆ

ಪ್ರಾದೇಶಿಕ ಶಾಂತಿ ಮರುಸ್ಥಾಪಿಸುವಲ್ಲಿ ಭಾರತ ಪಾತ್ರ ಪ್ರಮುಖವಾಗಿದೆ ಎಂದಿದ್ದಾರೆ.

ಇರಾನ್ ಅಧ್ಯಕ್ಷ ಪೆಜೆಶ್ಕಿಯನ್ ಭಾರತವನ್ನು ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಉತ್ತೇಜಿಸುವಲ್ಲಿ ಸಂವಾದ ಮತ್ತು ರಾಜತಾಂತ್ರಿಕತೆಗೆ ಒತ್ತು ನೀಡಿದ್ದಕ್ಕಾಗಿ ಪ್ರಧಾನಿ ಮೋದಿಗೆ ಇರಾನ್ ಅಧ್ಯಕ್ಷರು ಧನ್ಯವಾದ ತಿಳಿಸಿದ್ದಾರೆ.

ದೂರವಾಣಿ ಸಂಭಾಷಣೆಯ ಸಮಯ ದಲ್ಲಿ, ಪ್ರಧಾನಿ ಇತ್ತೀಚಿನ ಉದ್ವಿಗ್ನತೆಗಳ ಬಗ್ಗೆ ಆಳವಾದ ಕಳವಳ ವ್ಯಕ್ತಪಡಿಸಿದರು.

ಸಂವಾದ ಮತ್ತು ರಾಜತಾಂತ್ರಿಕತೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಾ, ದೀರ್ಘಕಾಲೀನ ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಉದ್ವಿಗ್ನತೆ ಕಡಿಮೆ ಮಾಡುವುದು ಅತ್ಯಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದರು ಎಂದು ಇರಾನ್ ಅಧ್ಯಕ್ಷರು ಹೇಳಿದ್ದಾರೆ.

ಶಾಂತಿಯುತ ಪರಿಹಾರದ ಅಗತ್ಯವನ್ನು ಪ್ರಧಾನಿ ನರೇಂದ್ರ ಮೋದಿ ಒತ್ತಿ ಹೇಳಿದರು. ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಮರುಸ್ಥಾಪಿಸಲು ತಕ್ಷಣದ ಉದ್ವಿಗ್ನತೆ ಕಡಿಮೆ ಮಾಡುವುದು, ಸಂವಾದ ಮತ್ತು ರಾಜತಾಂತ್ರಿ ಕತೆಯನ್ನು ಮುಂದುವರಿಸಲು ನಮ್ಮ ಕರೆ ಯನ್ನು ಪುನರುಚ್ಚರಿಸಿದ್ದೇವೆ ಎಂದು ಹೇಳಿದ್ದಾರೆ.

ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳಿಗೆ ಭಾರತ ತನ್ನ ಸ್ಥಳಾಂತರಿಸುವ ಪ್ರಯತ್ನಗಳನ್ನು ಮುಂದುವರೆಸಿದೆ, ಸಂಘರ್ಷ ಪೀಡಿತ ಪ್ರದೇಶದಿಂದ ನಾಗರಿಕರನ್ನು ಕರೆತರಲು ವಿಮಾನ ವ್ಯವಸ್ಥೆಗಳನ್ನು ಯೋಜಿಸಲಾಗಿದೆ.

100 ಕೋಟಿ ವೆಚ್ಚದಲ್ಲಿ 75 ಜಂಕ್ಷನ್‌ಗಳ ಮರುವಿನ್ಯಾಸ

ಬೆಂಗಳೂರು: ನಗರದಲ್ಲಿ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ಸುರಕ್ಷತೆಯ ಅಭಯ ನೀಡುವ ಸಲುವಾಗಿ ಬಿಬಿಎಂಪಿಯು, 75 ಜಂಕ್ಷನ್‌ಗಳನ್ನು ಮರುವಿನ್ಯಾಸಗೊಳಿಸಲು ಯೋಜನೆ ರೂಪಿಸಿದ್ದು, ಶೀಘ್ರದಲ್ಲೆ ಪ್ರಮುಖ ಜಂಕ್ಷನ್‌ಗಳು ಹೊಸ ರೂಪ ಪಡೆದುಕೊಳ್ಳಲಿವೆ.

ರಾಜ್ಯ ಸರಕಾರ ಹಾಗೂ ಬಿಬಿಎಂಪಿಯ 2023-24ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿದ್ದ ಸುರಕ್ಷಾ ಮಿಷನ್-75 ಜಂಕ್ಷನ್‌ಗಳ ಅಭಿವೃದ್ಧಿ ಯೋಜನೆಗೆ ಈಗ ಮುಹೂರ್ತ ಕೂಡಿಬಂದಿದ್ದು, ಪಾದಚಾರಿಗಳು ಹಾಗೂ ವಾಹನ ಸವಾರರಿಗೆ ಜಂಕ್ಷನ್‌ಗಳನ್ನು ಸುರಕ್ಷಿತವಾಗಿರಿಸಲು 2023ರ ಮಾ.27ರಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದ್ದು, ಆ ಬಳಿಕ ಈ ಯೋಜನೆಯು ನೆನೆಗುದಿಗೆ ಬಿದ್ದಿತ್ತು. ಎರಡೂವರೆ ವರ್ಷಗಳ ಬಳಿಕ ಯೋಜನೆಗೆ ಚಾಲನೆ ನೀಡಲಾಗುತ್ತಿದೆ.

ಪಾದಚಾರಿಗಳು, ವಾಹನ ಸವಾರರು ಹಾಗೂ ಸೈಕ್ಲಿಸ್ಟ್‌ಗಳನ್ನು ಅಪಘಾತಗಳಿಂದ ಸುರಕ್ಷಿತಗೊಳಿಸುವುದು ಸುರಕ್ಷಾ ಮಿಷನ್-75ನ ಉದ್ದೇಶವಾಗಿದ್ದು, ಜತೆಗೆ ವಾಯುಮಾಲಿನ್ಯ ನಿಯಂತ್ರಣಕ್ಕಾಗಿಯೂ 75 ಜಂಕ್ಷನ್‌ಗಳನ್ನು 100 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಪಾಲಿಕೆಯ 8 ವಲಯಗಳಲ್ಲಿನ 75 ಜಂಕ್ಷನ್‌ಗಳನ್ನು ಮರುವಿನ್ಯಾಸಗೊಳಿಸುವ ಯೋಜನೆ ಇದಾಗಿದ್ದು, ಬಿಬಿಎಂಪಿ ಮತ್ತು ಸಂಚಾರ ಪೊಲೀಸರು ಅಪಘಾತ ಪ್ರಕರಣಗಳನ್ನು ವಿಶ್ಲೇಷಿಸಿರುವಂತೆ ಪಾದಚಾರಿಗಳ ಸಾವು ಮತ್ತು ಸಂಚಾರ ದಟ್ಟಣೆ ಆಧರಿಸಿ ಈ 75 ಜಂಕ್ಷನ್‌ಗಳನ್ನು ಗುರುತಿಸಲಾಗಿದೆ. ಜಂಕ್ಷನ್‌ಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಒಟ್ಟು 15 ಪ್ಯಾಕೇಜ್‌ಗಳನ್ನು ವಿಂಗಡಿಸಿ, ಟೆಂಡರ್ ಅಂತಿಮಗೊಳಿಸಲಾಗಿದೆ. ಟೆಂಡರ್ ಪಡೆದ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುತ್ತಿದ್ದು, ಶೀಘ್ರದಲ್ಲೆ ಕಾಮಗಾರಿಗಳು ಆರಂಭವಾಗಲಿವೆ.

ಬಾಟಲ್ ನೆಕ್‌ಗಳ ತೆರವು

ನಗರದ ಕೆಲವೊಂದು ಜಂಕ್ಷನ್‌ಗಳಲ್ಲಿ ಸಾರ್ವಜನಿಕರು ರಸ್ತೆ ದಾಟಲು ಸಾರ್ವಜನಿಕರು ಹರಸಾಹಸ ಪಡಬೇಕಾಗಿದ್ದು, ಬಾಟಲ್ ನೆಕ್‌ಗಳಂತಹ ಕಡೆಗಳಲ್ಲಿ ಕಷ್ಟದಲ್ಲಿ ಸಂಚಾರ ನಡೆಸಬೇಕಾಗಿದೆ. ಇದರಿಂದ ಸಂಚಾರ ದಟ್ಟಣೆಯ ಜತೆಗೆ ವಾಯುಮಾಲಿನ್ಯದ ಪ್ರಮಾಣವೂ ಹೆಚ್ಚಾಗುತ್ತಿದೆ. ಚರಂಡಿಗಳ ಮೇಲೆ ಹೊದಿಸಿರುವ ಸ್ಲ್ಯಾಬ್‌ಗಳು ಮುರಿದು ಬಿದ್ದು, ಜನರಿಗೆ ಸಮಸ್ಯೆಯಾಗುತ್ತಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ, ಸಾರ್ವಜನಿಕರ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಜಂಕ್ಷನ್‌ಗಳ ಅಭಿವೃದ್ಧಿ ಯೋಜನೆ ರೂಪಿಸಲಾಗಿದೆ. ಪಾದಚಾರಿ ಮಾರ್ಗಗಳಲ್ಲಿ ಬೊಲ್ಲಾರ್ಡ್‌ಗಳ ಅಳವಡಿಕೆ, ಹೆಚ್ಚಿನ ಸ್ಥಳಾವಕಾಶವಿರುವೆಡೆ ಕಾರಂಜಿಗಳ ನಿರ್ಮಾಣ, ಬಗೆ ಬಗೆಯ ಹೂ, ಇನ್ನಿತರೆ ಅಲಂಕಾರಿಕ ಗಿಡಗಳನ್ನು ನೆಟ್ಟು ಹಸಿರೀಕರಣಗೊಳಿಸಿ ವೃತ್ತಗಳನ್ನು ಅಂದಗಾಣಿಸಲಾಗುತ್ತದೆ. ಸಾರ್ವಜನಿಕರ ಸುರಕ್ಷತೆಗಾಗಿ ಕ್ರಾಸಿಂಗ್, ಲೇನ್ ಮಾರ್ಕಿಂಗ್, ಸ್ಟಾಪ್ ಲೇನ್, ಕ್ಯಾಟ್ ಐ ಮಾರ್ಕರ್ಸ್‌ಗಳನ್ನು ಹಾಕಲಾಗುತ್ತದೆ.

ವೀರಶೈವ ಧರ್ಮಕ್ಕೆ ಸಿಂಧೂ ಸಂಸ್ಕೃತಿ ಹಿನ್ನೆಲೆ: ನಾಗರಾಜ್

ಬೆಂಗಳೂರು: ವೀರಶೈವ ಪರಂಪರೆ ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಜನಪರ ಪರಂಪರೆಯಾಗಿ ಪ್ರಸಿದ್ಧವಾಗಿದ್ದು, ಸಿಂಧೂ ಸಂಸ್ಕೃತಿಯನ್ನು ಹಿಂದೂ ಸಂಸ್ಕೃತಿಯಾಗಿ ಮತ್ತು ಸಿಂಧೂ ಸಂಸ್ಕೃತಿಯನ್ನು ವೀರಶೈವ ಸಂಸ್ಕೃತಿಯಾಗಿ ಭಾರತೀಯ ಸಾಮಾಜಿಕ ಇತಿಹಾಸದಲ್ಲಿ ಪರಿಗಣಿಸಬೇಕು ಎಂದು ಖ್ಯಾತ ಶಾಸನ ತಜ್ಞ ಡಾ. ಎಂ.ಜಿ.ನಾಗರಾಜ್ ಹೇಳಿದರು.

ದಿ ಮಿಥಿಕ್ ಸೊಸೈಟಿ ಆಯೋಜಿಸಿದ್ದ ಬಿ.ಎಸ್. ರಾಮನಾಥ ದತ್ತಿ ಪ್ರಪ್ರಥಮ ಉಪನ್ಯಾಸ ವೀರಶೈವ ಸಿದ್ಧಾಂತದಲ್ಲಿ ಗೋತ್ರ ಪುರುಷರ ಕಲ್ಪನೆ ಎಂಬ ವಿಷಯ ಕುರಿತು ಮಾತನಾಡಿ, ಭಾರತೀಯ ವರ್ಣವ್ಯವಸ್ಥೆ ಇಂತಹ ಪರಂಪರೆಯ ಮೇಲೆ ಅವಲಂಬಿಗೊಂಡು ಹೆಚ್ಚು ವೈಜ್ಞಾನಿಕವಾಗಿದೆ. ಶಿವನ ಸ್ವರೂಪವನ್ನು ನೀಡಿದ್ದು ನಮ್ಮ ಅತಿ ಪ್ರಾಚೀನವಾದ ಸಿಂಧೂ ಸಂಸ್ಕೃತಿಯಾಗಿದೆ. ಹರಪ್ಪದಲ್ಲಿ ದೊರೆತಿರುವ ಮಣ್ಣಿನ ಮುದ್ರಿಕೆಗಳ ಮೇಲೆ ಕಂಡುಬರುವ ಪಶುಪತಿಯ ಚಿತ್ರ ಇದಕ್ಕೆ ಆಧಾರವಾಗಿದೆ. ರುದ್ರ-ವೀರಭದ್ರ ಆರಾಧನೆ ವೀರಶೈವ ಧಾರ್ಮಿಕ ಪರಂಪರೆಯ ವಿಶೇಷತೆಯಾಗಿದ್ದು, ಇನ್ನು ಪ್ರಾಚೀನ ಭಾರತದ ಸಂಸ್ಕೃತಿಗೆ ಸಂಬಂಧಿಸಿದಂತೆ ಬ್ರಹ್ಮಸೃಷ್ಟಿ, ಋಷಿಸೃಷ್ಟಿ ಮತ್ತು ಶಿವನಸೃಷ್ಟಿಯನ್ನು ಗಮನಿಸಿದರೆ ಶಿವನಸೃಷ್ಟಿಯಲ್ಲಿ ವೀರಶೈವರು ಕಂಡುಬರುತ್ತಾರೆ ಎಂದರು.

ಹರಿಹರಸಾಮರಸ್ಯ ಭಾರತೀಯತೆಯ ವಿಶೇಷತೆಯಾಗಿದ್ದು, ಭಾರತೀಯ ಋಷಿ ಪರಂಪರೆ, ಆಚರಣೆಗಳು, ಪದ್ಧತಿಗಳು ವಿಶೇಷವಾಗಿ ಪೂಜಾ ಪದ್ಧತಿಯನ್ನು ಗಮನಿಸಿದರೆ ವೀರಶೈವ ಪರಂಪರೆಯಲ್ಲಿ ವೀರಭದ್ರನ ಆರಾಧನೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂದರು.

ದಿ ಮಿಥಿಕ್ ಸೊಸೈಟಿ ಆಯೋಜಿಸಿದ್ದ ಬಿ.ಎಸ್. ರಾಮನಾಥ ದತ್ತಿ ಪ್ರಪ್ರಥಮ ಉಪನ್ಯಾಸ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕರು ಮತ್ತು ನಿಕಟಪೂರ್ವ ಕುಲಸಚಿವೆ ಪ್ರೊ. ವಿ. ಅನುರಾಧ ಮಾತನಾಡಿ, ಶೈವಾಗಮಗಳ ಪರಂಪರೆ ಭಾರತದ ಆಚೆಗೂ ನೆರೆ ರಾಷ್ಟ್ರಗಳಾದ ಶ್ರೀಲಂಕ, ಆಗ್ನೇಯ ಏಷ್ಯಾಗಳಲ್ಲಿಯೂ ಕಂಡುಬರುತ್ತದೆ. ಅಲ್ಲಿ ಇಂದು ಪ್ರಸ್ತುತವಿರುವ ಆಚರಣೆಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ ಹೆಚ್ಚಿನ ಐತಿಹಾಸಿಕ ವಿಷಯಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ದಿ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ. ನಾಗರಾಜ್, ಆಡಳಿತ ಮಂಡಳಿಯ ಸದಸ್ಯರಾದ ಪ್ರೊ. ಎಂ.ಜಿ. ಚಂದ್ರಕಾಂತ್, ಎಂ.ಆರ್. ಪ್ರಸನ್ನ ಕುಮಾರ್, ದತ್ತಿ ನೀಡಿದ ಬಿ.ಎಸ್. ರಾಮನಾಥ, ಪ್ರೊ. ಶ್ಯಾಮಲ ರತ್ನ ಕುಮಾರಿ, ದಿ ಮಿಥಿಕ್ ಸೊಸೈಟಿ ಗೌರವ ಕಾರ್ಯದರ್ಶಿ ಡಾ. ಎಸ್. ರವಿ ಮತ್ತು ಅನೇಕ ಪ್ರಾಧ್ಯಾಪಕರು, ವಿದ್ವಾಂಸರು ಇದ್ದರು.

ಕುಡುಕರನ್ನೆಲ್ಲಾ ಆಟದತ್ತ ತಿರುಗಿಸಿದ ಚೆಸ್ ಮಾಸ್ಟರ್ | ಇದು ಕೇರಳದ ರೋಚಕ ಕತೆ

ಗ್ರಾಮದ ಚಿತ್ರಣವನ್ನೇ ಬದಲಿಸಿದ ಚೆಸ್

ತಿರುವನಂತಪುರ: ಒಮ್ಮೆ ಕುಡಿತಕ್ಕೆ ದಾಸರಾದರೆ ಅದರಿಂದ ಹೊರಬರುವುದು ಬಹಳ ಕಷ್ಟದ ಕೆಲಸ. ಅನೇಕರು ಕುಡಿದು ಜೀವನವನ್ನು ಕೊನೆಗೊಳಿಸಿ ಬಿಡುತ್ತಾರೆ. ದೇವರ ನಾಡು ಎಂದೇ ಖ್ಯಾತಿ ಪಡೆದಿರುವ ಕೇರಳದಲ್ಲಿ ಕುಡುಕರಿಗೇನೂ ಕಡಿಮೆ ಇಲ್ಲ. ಆದರೆ ಅಲ್ಲಿನ ಗ್ರಾಮವೊಂದು ಈಗ ಕುಡಿತವನ್ನು ಬಿಟ್ಟು ಒಳ್ಳೆಯ ಹವ್ಯಾಸವನ್ನು ರೂಢಿಸಿಕೊಂಡ ಕಾರಣಕ್ಕೆ ಪ್ರಖ್ಯಾತವಾಗಿದೆ.

ಕೇರಳದ ಗ್ರಾಮವೊಂದರ ಬಹುತೇಕ ಕುಡಿತಕ್ಕೆ ದಾಸರಾಗಿದ್ದ ಗ್ರಾಮದ ಜನ ಕುಡಿತದ ಚಟವನ್ನು ಬಿಟ್ಟು ಬೇರೊಂದು ಹವ್ಯಾಸಕ್ಕೆ ದಾಸರಾಗಿದ್ದಾರೆ. ಹಾಗಂತ ಇದು ಕೆಟ್ಟ ಹವ್ಯಾಸವಲ್ಲ, ಈ ದೊಡ್ಡ ಸಾಹಸದ ಹಿಂದಿರುವುದು ಓರ್ವ ಚೆಸ್ ಮಾಸ್ಟರ್, ಆದರೆ ಅಚ್ಚರಿ ಎನಿಸಿದರೂ ಸತ್ಯ. ಚೆಸ್‌ಮ್ಯಾನ್ ಎಂದೇ ಅಲ್ಲಿ ಸ್ಥಳೀಯವಾಗಿ ಖ್ಯಾತಿ ಪಡೆದಿರುವ ವ್ಯಕ್ತಿಯೊಬ್ಬರ ಮಹತ್ಕಾರ್ಯದಿಂದ ಇದು ಸಾಧ್ಯವಾಗಿದ್ದು ಅಲ್ಲಿನ ಜನ ಈ ಕಾರಣಕ್ಕೆ ಆ ವ್ಯಕ್ತಿಗೆ ಧನ್ಯವಾದ ಹೇಳುತ್ತಾರೆ.

ಮನಪರಿವರ್ತನೆ ಮಾಡಿದ ಚೆಸ್ ಮ್ಯಾನ್: ಟ್ರಾವೆಲ್ ವ್ಲಾಗರ್ ಶೆನಾಜ್ ಎಂಬವರು ಈ ಪ್ರೇರಣೆ ನೀಡುವ ವಿಚಾರವನ್ನು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು ವೈರಲ್ ಆಗಿದೆ. ಅಂದಹಾಗೆ ಚೆಸ್ ಮೂಲಕ ಮದ್ಯದ ಚಟವನ್ನು ಜಯಿಸಿದ ಕೇರಳದ ತ್ರಿಶೂರ್ ಜಿಲ್ಲೆಯ ಮರೋಟಿಚಲ್ ಗ್ರಾಮದ ಕತೆ ಇದು. ಕುಡಿತಕ್ಕೆ ದಾಸರಾಗಿ ಇಹವನ್ನೇ ಮರೆತಿದ್ದ ಇಲ್ಲಿನ ಜನ ಚೆಸ್ ಮ್ಯಾನ್ ಎಂದು ಕರೆಯಲ್ಪಡುವ ವ್ಯಕ್ತಿಯ ನೇತೃತ್ವದಲ್ಲಿ ತಮ್ಮ ಮಾನಸಿಕ ಗಮನವನ್ನು ಕುಡಿತದಿಂದ ಆಟದತ್ತ ಬದಲಾಯಿಸಿಕೊಂಡರು. ಹಾಗೂ ಇಂದು ಗ್ರಾಮದ ಶೇಕಡಾ 90 ರಷ್ಟು ಗ್ರಾಮಸ್ಥರು ನಿಯಮಿತವಾಗಿ ಚೆಸ್ ಆಡುತ್ತಾರೆ ಮತ್ತು ವರ್ಷಗಳಿಂದ ಇಲ್ಲಿ ಯಾರೂ ಮದ್ಯವನ್ನು ಮುಟ್ಟಿಯೇ ಇಲ್ಲವೆಂದು ಸ್ವತಃ ಗ್ರಾಮದ ಜನರೇ ಹೇಳಿಕೊಳ್ಳುತ್ತಾರೆ.

ಗ್ರಾಮ ಚಿತ್ರಣವನ್ನೇ ಬದಲಿಸಿತು ಚೆಸ್: ಶೆನಾಜ್ ತಮ್ಮ ಹಲವು ಸೋಶಿಯಲ್ ಮೀಡಿಯಾ ಪೋಸ್ಟ್‌ನಲ್ಲಿ ಈ ವಿಚಾರವನ್ನು ಹಂಚಿಕೊಂಡಿದ್ದು, ಈ ಪೋಸ್ಟ್ ಈಗ ಭಾರಿ ವೈರಲ್ ಆಗುತ್ತಿದೆ. ಇಂದು ಆ ಹಳ್ಳಿಯ ಶೇಕಡಾ ತೊಂಭತ್ತು ಜನರು ಚೆಸ್ ಆಡುತ್ತಾರೆ. ಕೆಲಸದ ಸ್ಥಳದಲ್ಲಿ, ಶಾಲೆಯಲ್ಲಿ, ಮಲಗುವ ಮುನ್ನವೂ ಸಹ ಅವರು ಚೆಸ್ ಆಡುತ್ತಿದ್ದು, ಅಲ್ಲಿನ ಮಕ್ಕಳು ಗಣಿತದಲ್ಲಿ ಉತ್ತಮ ಅಂಕಗಳನ್ನು ಗಳಿಸುತ್ತಿದ್ದಾರೆ. ವಯಸ್ಕರು ಹೆಚ್ಚು ಆತ್ಮವಿಶ್ವಾಸ ಹೊಂದಿದ್ದಾರೆ. ಅದರಲ್ಲೂ ಮುಖ್ಯವಾಗಿ ವರ್ಷಗಳಿಮದ ಅಲ್ಲಿ ಯಾರೂ ಮದ್ಯವನ್ನು ಮುಟ್ಟಿಲ್ಲ. ಇದು ಕೇವಲ ವ್ಯಸನದ ವಿರುದ್ಧದ ಗೆಲುವು ಅಲ್ಲ ಇದು ಸಂಕಲ್ಪ ಶಕ್ತಿಗೆ ಸಿಕ್ಕ ಗೆಲುವಿನ ಸಾಕ್ಷಿಯಾಗಿದೆ. ಸಮುದಾಯವೊಂದು ಆರೋಗ್ಯಕರ ಹವ್ಯಾಸವನ್ನು ಕಂಡುಕೊಂಡಾಗ ಪರಿವರ್ತನೆ ಶುರುವಾಗುತ್ತದೆ. ಇದು ನನ್ನ ಭಾರತ ಎಂದು ಅವರು ಬರೆದುಕೊಂಡಿದ್ದಾರೆ.

ಬದುಕು ಬದಲಿಸಿದ ಚೆಸ್

ವೀಡಿಯೋದಲ್ಲಿ ಶೆಹನಾಜ್ ಅವರು ಹಲವು ಗ್ರಾಮಸ್ಥರನ್ನು ಮಾತನಾಡಿಸಿದ್ದು, ಅವರು ಕುಡಿತದಿಂದ ಹೊರಗೆ ಬರುವುದಕ್ಕೆ ಚೆಸ್ ನಮಗೆ ಹೇಗೆ ಸಹಾಯ ಮಾಡಿತ್ತು ಎಂಬುದನ್ನು ಹಂಚಿಕೊಂಡಿದ್ದಾರೆ. ಈ ಚೆಸ್ ಆಟವೂ ಆ ಗ್ರಾಮದ ಪುರುಷರು, ಮಹಿಳೆಯರು, ವೃದ್ಧರು ಮತ್ತು ಮಕ್ಕಳು ಸೇರಿದಂತೆ ಎಲ್ಲರಿಗೂ ಪ್ರಯೋಜನವನ್ನು ನೀಡಿದೆ, ಅವರ ಮನಸ್ಸನ್ನು ಚುರುಕುಗೊಳಿಸಿದೆ, ಆತ್ಮವಿಶ್ವಾಸವನ್ನು ಹೆಚ್ಚಿಸಿದೆ ಮತ್ತು ಗಮನವನ್ನು ಸುಧಾರಿಸಿದೆ. ಸರಳವಾದ ಚೆಸ್ ಆಟವು ಇಡೀ ಹಳ್ಳಿಯನ್ನು ಹೇಗೆ ಆರೋಗ್ಯಕರವಾಗಿ ಪರಿವರ್ತಿಸಿತು ಮತ್ತು ಕೆಟ್ಟ ಚಟವನ್ನು ಜಯಿಸಲು ಸಹಾಯ ಮಾಡಿತು ಎಂಬುದು ಈಗ ನೆಟ್ಟಿಗರ ಅಚ್ಚರಿಗೆ ಕಾರಣವಾಗಿದೆ.

ಇರಾನ್‌ಗೆ ಅಮೆರಿಕ ಸೇನೆಯಿಂದ ಭಾರೀ ಹಾನಿ

ಟೆಹರಾನ್: ಇಸ್ರೇಲ್ ಮತ್ತು ಇರಾನ್ ನಡುವಿನ ನಡೆಯುತ್ತಿರುವ ಸಂಘರ್ಷದಲ್ಲಿ ಅಮೆರಿಕವೂ ಪ್ರವೇಶಿಸಿದೆ. ಭಾನುವಾರ ಮುಂಜಾನೆ ಅಮೆರಿಕ, ಇರಾನ್‌ನ ಮೂರು ಪರಮಾಣು ಸ್ಥಾಪನೆಗಳಾದ ಫೋರ್ಡೊ, ನಟಾಂಜ್ ಮತ್ತು ಇಸ್ಫಹಾನ್ ಮೇಲೆ ವೈಮಾನಿಕ ದಾಳಿ ನಡೆಸಿತು. ಈ ದಾಳಿಯಲ್ಲಿ ಇರಾನ್‌ನ ಈ ಪರಮಾಣು ನೆಲೆಗಳು ಭಾರೀ ಹಾನಿಯನ್ನು ಅನುಭವಿಸಿವೆ ಎಂದು ಅಮೆರಿಕ ಹೇಳಿಕೊಂಡಿದೆ. ಆದರೆ ಅಮೆರಿಕದ ಈ ಹೇಳಿಕೆಯನ್ನು ಇರಾನ್ ಸಂಪೂರ್ಣವಾಗಿ ತಿರಸ್ಕರಿಸಿದ್ದು, ಈ ದಾಳಿಯಲ್ಲಿ ಯಾವುದೇ ಗಮನಾರ್ಹ ಹಾನಿಯಾಗಿಲ್ಲ ಎಂದು ಹೇಳಿದೆ.

- ಅಮೆರಿಕ ಸೇನಾ ಮುಖ್ಯಸ್ಥರಿಂದ ಪತ್ರಿಕಾಗೋಷ್ಠಿ
- ಮಿಡ್‌ನೈಟ್ ಹ್ಯಾಮರ್ ಹೆಸರಿನಲ್ಲಿ ಕಾರ್ಯಾಚರಣೆ

ಈ ದಾಳಿಯನ್ನು ನಡೆಸಲು ದೀರ್ಘಕಾಲದ ವರೆಗೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು ಎಂದು ಅಮೆರಿಕ ಹೇಳಿದೆ. ಈ ಕಾರ್ಯಾಚರಣೆಗೆ ಮಿಡ್‌ನೈಟ್ ಹ್ಯಾಮರ್ ಎಂದು ಹೆಸರಿಸಲಾಯಿತು. ಈ ಕಾರ್ಯಾಚರಣೆಯನ್ನು ವಿಶ್ವದ ಯಾವುದೇ ದೇಶವು ನಡೆಸಲು ಸಾಧ್ಯವಿಲ್ಲ ಎಂದು ಅಮೆರಿಕ ಹೇಳಿಕೊಂಡಿದ್ದು, ಅದನ್ನು ಅಮೆರಿಕ ಸೈನ್ಯ ಮಾಡಿದೆ ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಮತ್ತು ಜಂಟಿ ಮುಖ್ಯಸ್ಥರ ಅಧ್ಯಕ್ಷ ಜನರಲ್ ಡಾನ್ ಕೇನ್ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದರು.

ಜಂಟಿ ಮುಖ್ಯಸ್ಥರ ಅಧ್ಯಕ್ಷ ಜನರಲ್ ಡ್ಯಾನ್ ಕೇನ್, ಅಧ್ಯಕ್ಷರ ಆದೇಶದ ಮೇರೆಗೆ, ಜನರಲ್ ಎರಿಕ್ ಕುರಿಲ್ಲಾ ನೇತೃತ್ವದಲ್ಲಿ ಯುಎಸ್ ಸೆಂಟ್ರಲ್ ಕಮಾಂಡ್ ಇರಾನ್‌ನ ಮೂರು ಪರಮಾಣು ಸೌಲಭ್ಯಗಳ ಮೇಲೆ ಉದ್ದೇಶ ಪೂರ್ವಕ ಮತ್ತು ನಿಖರವಾದ ದಾಳಿಯಾದ ಆಪರೇಷನ್ ಮಿಡ್‌ನೈಟ್ ಹ್ಯಾಮರ್ ಅನ್ನು ನಡೆಸಿತು ಎಂದು ಹೇಳಿದ್ದಾರೆ. ಇದು ಅತ್ಯಂತ ಗೌಪ್ಯ ಕಾರ್ಯಾಚರಣೆಯಾಗಿತ್ತು. ವಾಷಿಂಗ್ಟನ್‌ನಲ್ಲಿ ಕೆಲವರಿಗೆ ಮಾತ್ರ ಈ ಯೋಜನೆಯ ಸಮಯ ಹಾಗೂ ಸ್ವರೂಪದ ಬಗ್ಗೆ ತಿಳಿದಿತ್ತು ಎಂದರು.

ಈ ದಾಳಿಗೆ ನಾವು ಸಿದ್ಧರಾಗಲು ಸಾಕಷ್ಟು ತಯಾರಿ ಅಗತ್ಯವಿತ್ತು. ಇದಕ್ಕೆ ಸಾಕಷ್ಟು ನಿಖರತೆಯ ಅಗತ್ಯವಿತ್ತು. ಇದರಲ್ಲಿ ತಿರುವು ಮತ್ತು ಅತ್ಯುನ್ನತ ಕಾರ್ಯಾಚರಣೆಯ ಭದ್ರತೆಯೂ ಸೇರಿತ್ತು ಎಂದರು.

'ವಿಶ್ವವಾಣಿ ಪುಸ್ತಕ' – ಇದು ಪತ್ರಕರ್ತ ವಿಶ್ವೇಶ್ವರ ಭಟ್ ಸಾರಥ್ಯದ 'ವಿಶ್ವವಾಣಿ' ಸಮೂಹದ ಮತ್ತೊಂದು ಅನನ್ಯ ಕೊಡುಗೆ. ವಿಭಿನ್ನ ವಿಷಯಗಳ ಕುರಿತಾದ ಹಲವು ಮೌಲ್ಯಯುತ ಪುಸ್ತಕಗಳನ್ನು ಪ್ರಕಟಿಸಿರುವ ಹೆಗ್ಗಳಿಕೆ 'ವಿಶ್ವವಾಣಿ ಪುಸ್ತಕ' ಪ್ರಕಾಶನದ್ದು. ಓದುಗರ ಈ ಆತ್ಮೀಯ ಸಂಗಾತಿ ಹೊರತಂದಿರುವ ವೈವಿಧ್ಯಮಯ ಮತ್ತು ಚಿತ್ತಾಕರ್ಷಕ 'ಕೃತಿಸುಮ'ಗಳು ಈಗಾಗಲೇ ನಾಡಿನ ಅನೇಕ ಪುಸ್ತಕ ಮಳಿಗೆಗಳಲ್ಲಿ ಘಮಘಮಿಸುತ್ತಿವೆ. ಈ ಕುರಿತಾದ ಪಕ್ಷಿನೋಟದ ಮೊದಲ ಭಾಗವಿದು. ಇದು ನಿಮಗಾಗಿ, ನಿಮ್ಮ ಅವಗಾಹನೆಗಾಗಿ...

ಸಾರಸ್ವತ ಸಾಗರದಲ್ಲಿ ವಿಶ್ವಾಕ್ಷರ ದೋಣಿಯ ಭಾವಯಾನ...

ಆಸ್ಕ್ ದಿ ಎಡಿಟರ್

- ಲೇಖಕರು: ವಿಶ್ವೇಶ್ವರ ಭಟ್

(ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ)

- (ಬೆಲೆ: 250 ರು.)



ಪತ್ರಿಕೆಯ ಸಂಪಾದಕ ಮತ್ತು ಓದುಗನದು ಒಂದು ಅನೂಹ್ಯ ಹಾಗೂ ಪವಿತ್ರ ಸಂಬಂಧ. ಅವರಿಬ್ಬರ ಮಧ್ಯೆ ಒಂದು ಮೌನ–ಮೌಖಿಕ ಸಂವಾದ ಸದಾ ಚಾಲ್ತಿಯಲ್ಲಿರುತ್ತದೆ. ಓದುಗರ ಮನಸ್ಸನ್ನು ಅರ್ಥಮಾಡಿಕೊಳ್ಳದವ ಉತ್ತಮ ಸಂಪಾದಕನಾಗಲಾರ. ಪತ್ರಿಕೆಯನ್ನು ಓದುತ್ತಾ ಓದುತ್ತಾ ಓದುಗನು ಸಂಪಾದಕನ ಮನಸ್ಸನ್ನು ಅರ್ಥಮಾಡಿಕೊಳ್ಳಬಲ್ಲ. ಓದುಗರ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳಿರುತ್ತವೆ. ಅವು ಪತ್ರಿಕೆ, ಬರಹ, ಧೋರಣೆಗಳ ಹೊರತಾಗಿ, ವೈಯಕ್ತಿಕ ನೆಲೆಗೂ ವಿಸ್ತರಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅಂಥ ವಿಷಯಗಳನ್ನು ಓದುಗನೊಬ್ಬ ಹೇಳಿಕೊಂಡಾಗ, ಅದನ್ನು ಕೇಳಲು ಮತ್ತು ಸಮಾಧಾನಕರ ಉತ್ತರ ಹೇಳಲು ಸಮಯ, ಸಂಯಮ ಹಾಗೂ ಕಾಳಜಿಯನ್ನು ತೋರಬೇಕಾದುದು ಸಂಪಾದಕನಾದವನ ವೃತ್ತಿಧರ್ಮ, ಕರ್ತವ್ಯ. ಇದರಿಂದ ಇಬ್ಬರ ನಡುವಿನ ತಿಳಿವಳಿಕೆ, ಸಂಬಂಧ ಮತ್ತಷ್ಟು ಅನ್ಯೋನ್ಯವಾಗಲು ಸಾಧ್ಯ. ಇಲ್ಲಿನ ಪ್ರಶ್ನೆ ಮತ್ತು ಉತ್ತರಗಳು ಆ ನೆಲೆಗಟ್ಟಿನಲ್ಲಿ ಮೂಡಿದಂಥವು. ಎಲ್ಲಾ ಪ್ರಶ್ನೆಗಳಲ್ಲಿರುವ ಗಹನತೆ ಅರಿತು, ಸರಳ ಮತ್ತು ಸಮಾಧಾನದ ಉತ್ತರವನ್ನು 'ತಿಳಿ'ಯಾಗಿ, ತಿಳಿಹಾಸ್ಯದ ಮೂಲಕ ಹೇಳುವ ಪ್ರಯತ್ನ ಇಲ್ಲಿದೆ. ಗಂಭೀರ ಸಮಸ್ಯೆಗಳಿಗೆ ಉತ್ತರವೂ ಹಾಗೇ ಇರಬೇಕೆಂದಿಲ್ಲ. ಅವನ್ನೂ ತಿಳಿಹಾಸ್ಯದ ಮೂಲಕವೇ ಹೇಳಬಹುದು. ಆ ಮೂಲಕ ಸಮಸ್ಯೆಯ ತೀವ್ರತೆಯನ್ನು ಕುಗ್ಗಿಸಬಹುದು ಮತ್ತು ಕೊನೆಯಲ್ಲಿ ಒಂದು ತಿಳಿನಗೆಯನ್ನು ಅರಳಿಸಬಹುದು. ಹೀಗಾಗಿ ಇದು ಸಮಸ್ಯೆ–ಪರಿಹಾರದ ಸಂಗ್ರಹವಲ್ಲ. ಒಂದು ಸಮಸ್ಯೆಗೆ ಹೇಗೆ ಸಮಾಧಾನದ ಉತ್ತರವನ್ನು ಪಡೆಯಬಹುದು ಎಂಬುದನ್ನು ಅರಿಯುವ ಮಾರ್ಗವೂ ಹೌದು. ಇಲ್ಲಿನ ಪ್ರಶ್ನೆಗಳು ಕೇವಲ ಒಬ್ಬರದ್ದು ಮಾತ್ರ ಅಲ್ಲ, ಅವು ಅನೇಕರದ್ದೂ ಆಗಿರಬಹುದು. ಹೀಗಾಗಿ ಇವನ್ನು ಕೇವಲ ಯಾರದ್ದೋ ಸಮಸ್ಯೆ–ಪರಿಹಾರ, ಇದರಿಂದ ನನಗೇನು? ಎಂದು ಭಾವಿಸಬೇಕಿಲ್ಲ. ಬೇರೆಯವರ ಸಮಸ್ಯೆಯಿಂದಲೂ ನಾವು ಕಲಿಯುವಂಥದ್ದು ಬಹಳ ಇರುತ್ತದೆ.

ಇಂದಿನ ದಿನವೇ ಶುಭದಿನವು!

ಮೂಲ: ಅನುಪಮ್ ಖೇರ್

ಕನ್ನಡಕ್ಕೆ: ವಿಶ್ವೇಶ್ವರ ಭಟ್

(ಬೆಲೆ: 250 ರು.)



ಇಡೀ ಜಗತ್ತನ್ನು ಏಕಕಾಲದಲ್ಲಿ ಕಲ್ಲವಿಲಗೊಳಿಸಿ ನಂತರ ಒಂದುಗೂಡಿಸುವುದು, ವಿಶ್ವವಾಸಿಗಳೆಲ್ಲಾ ಒಂದೇ ರೀತಿ ಯೋಚಿಸುವಂತೆ ಪ್ರೇರೇಪಿಸುವುದು ಸಾಧ್ಯವಿಲ್ಲ. ಯಾರಿಂದಲೂ ಸಾಧ್ಯವಿಲ್ಲದ್ದು ಕರೋನಾದಿಂದ ಸಾಧ್ಯವಾಯಿತು. ವಿಶ್ವದ ಆರ್ಥಿಕ ವ್ಯವಸ್ಥೆಯೇ ಗಾಳುಮೇಳಾಗಿ ಹೋಯಿತು. ಎಲ್ಲರ ಬದುಕಿನಲ್ಲೂ ಆತಂಕ, ದುಗುಡ, ಅನಿಶ್ಚಿತತೆ, ಕತ್ತಲು ಆವರಿಸಿತು. ನಮ್ಮ ಮುಂದೆ ಇದ್ದವರೆಲ್ಲ ಮಿಂಚುಹುಳುಗಳ ಹಾಗೆ ಸತ್ತುಹೋದರು. ಇಡೀ ವಿಶ್ವದ ಚಲನೆ ಸ್ತಬ್ಧವಾಯಿತು. ಆತ್ಮೀಯರ ಅಂತ್ಯಸಂಸ್ಕಾರಕ್ಕೂ ಹೋಗಲು ಆಗಲಿಲ್ಲ. ತಂದೆ ಸತ್ತರೂ ಮಗನಿಗೆ ಹೋಗಲಾಗಲಿಲ್ಲ. ಚಿತೆಗೇರಿದ ಗಂಡನನ್ನು ಹೆಂಡತಿ ನೋಡಲಿಲ್ಲ. ಮಾನವ ಸಂಬಂಧದ ಎಲ್ಲಾ ಕೋಶ–ತಂತುಗಳನ್ನು ಕರೋನಾ ಚಿವುಟಿಹಾಕಿಬಿಟ್ಟಿತು. ಎಲ್ಲರೂ ತಮ್ಮ ತಮ್ಮ ಜೀವವನ್ನು ಕಂಕುಳಲ್ಲಿ ಬಚ್ಚಿಟ್ಟುಕೊಂಡವರಂತೆ ಭಯದಲ್ಲಿ ಜೀವಿಸಿದರು. ಬದುಕಿನ ಬಗೆಗಿದ್ದ ಕಲ್ಪನೆಯನ್ನೇ ಕರೋನಾ ಗುಡಿಸಿಹಾಕಿತು. ನಮ್ಮ ಆಚರಣೆ, ಸಂಪ್ರದಾಯ, ಜನಜೀವನ, ಯೋಚನೆ, ಜೀವನಕ್ರಮ, ಪದ್ಧತಿಗಳನ್ನೆಲ್ಲಾ ಕರೋನಾ ಮುದ್ದೆಕಟ್ಟಿ ಬಿಸಾಕಿತು. ಕೆಲದಿನ ಜಗತ್ತಿನ ಯಾವ ರಾಷ್ಟ್ರದ ಮೇಲೂ ವಿಮಾನ ಹಾರಲಿಲ್ಲ. ವಾಹನ ಸಂಚರಿಸಲಿಲ್ಲ. ಹಡಗು ದಡಬಿಟ್ಟು ಕದಲಲಿಲ್ಲ. ಕರೋನಾ ಟ್ರಾಫಿಕ್ ಸಿಗ್ನಲ್ ಮುಂದೆ, ಜಗತ್ತೇ ಸ್ಟಾಪ್! ಆ ಸಮಯದಲ್ಲಿ ಮಾಡಿದ ಆಲೋಚನೆಗಳೇನು? ಕರೋನಾ ಕಲಿಸಿದ ಪಾಠಗಳೇನು? ಕದಲಿದ ನಂಬಿಕೆಗಳೇನು? ಅವನ್ನೆಲ್ಲಾ ನಿಭಾಯಿಸಿ ಬದುಕನ್ನು ಮರಳಿ ಹಳಿಗೆ ಎತ್ತಾಕಿಕೊಂಡು ಬಂದಿದ್ದು ಹೇಗೆ? ಸಾವಿನ ಕದತಟ್ಟಿ ಬಂದ ಆ ಅನುಭವ ಹೇಗಿತ್ತು? ಕರೋನಾ ನಮ್ಮೊಳಗೇ ತಂದ ಪರಿವರ್ತನೆ ಏನು? ಬದುಕು ಮೂರಾಬಟ್ಟೆಯಾದಾಗ, ಆತ್ಮವಿಶ್ವಾಸ, ಪ್ರೀತಿ, ಆನಂದ, ಸಮಾಧಾನ, ನಂಬಿಕೆಗಳಿಂದ ಪುನಃ ನೆಲಸಮವಾದ ಜೀವನವನ್ನು ಕಟ್ಟಿಕೊಳ್ಳುವುದು ಹೇಗೆ? ಖ್ಯಾತ ಸಿನಿಮಾ ನಟ ಅನುಪಮ್ ಖೇರ್ ಈ ಕೃತಿಯಲ್ಲಿ ವೈಯಕ್ತಿಕ ಅನುಭವದ ನೆಲೆಯಲ್ಲಿ ಅವೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಬದುಕಿಗೆ ಪ್ರೀತಿಯುಣಿಸುವ, ವಿಶ್ವಾಸದ ಕೈತುತ್ತು ತಿನ್ನಿಸುವ ಭರವಸೆಯ ಸಾಲುಗಳು ಇಲ್ಲಿವೆ.

ಅರ್ಧನಾರೀಶ್ವರ

- ಲೇಖಕರು: ವಿಶ್ವೇಶ್ವರ ಭಟ್
- (ಬೆಲೆ: 160 ರು.)



ಪ್ರತಿ ನಿತ್ಯದಂತೆ, ಸುಮಾರು 2 ತಿಂಗಳಿಗೆ ಆಗುವಷ್ಟು ಸಂಗ್ರಹ ಮಾಡಿಕೊಂಡು, ಹೆಚ್ಚೆಂದರೆ 6 ತಿಂಗಳು ಬರೆಯಬಹುದು ಎಂದು ವಿಶ್ವೇಶ್ವರ ಭಟ್ಟರು ಆರಂಭಿಸಿದ 'ವಕ್ರತುಂಡೋಕ್ತಿ' ಅಂಕಣ, 25 ವರ್ಷಗಳನ್ನೂ ದಾಟಿ ಮುಂದುವರಿದಿದೆ. ಈ ಮಧ್ಯೆ ಭಟ್ಟರು ಕೆಲಕಾಲ ಪತ್ರಿಕೆಗಳನ್ನು ಬದಲಿಸಿದರೂ 'ವಕ್ರತುಂಡೋಕ್ತಿ' ಮಾತ್ರ ನಿಲ್ಲಲಿಲ್ಲ. ಆರಂಭದಲ್ಲಿ ಒಳಪುಟಗಳಿಗೆ ಸೀಮಿತವಾಗಿದ್ದ 'ವಕ್ರತುಂಡೋಕ್ತಿ' ಕ್ರಮೇಣ ಮುಖಪುಟಕ್ಕೆ ಬಡ್ತಿ ಪಡೆದಿದೆ. ಒಮ್ಮೊಮ್ಮೆ 'ವಕ್ರತುಂಡೋಕ್ತಿ'ಯನ್ನು ಕೈಬಿಟ್ಟಾಗ, "ನೀವು 'ಸಂಪಾದಕೀಯ'ವನ್ನು ಬರೆಯದಿದ್ದರೂ ನಾವು ಕೇಳುವುದಿಲ್ಲ, ಆದರೆ ಯಾವ ಕಾರಣಕ್ಕೂ 'ವಕ್ರತುಂಡೋಕ್ತಿ'ಯನ್ನು ಕೈಬಿಡಬೇಡಿ" ಎಂದು ಓದುಗರು ಭಟ್ಟರಿಗೆ ಫರ್ಮಾನು ಹೊರಡಿಸಿದ್ದುಂಟು. ಇಂಥ 'ವಕ್ರತುಂಡೋಕ್ತಿ'ಗಳ ಸಂಗ್ರಹರೂಪವೇ 'ಅರ್ಧನಾರೀಶ್ವರ'.

ನಿಮ್ಮ ಮನೆ ಬಾಗಿಲಿಗೆ ನಮ್ಮ ಖರ್ಚಿನಲ್ಲಿ ಪುಸ್ತಕ ಕಳಿಸುತ್ತೇವೆ

ಪುಸ್ತಕವನ್ನು ಖರೀದಿಸ ಬಯಸುವವರು ಫೋನ್ ಪೇ ಮಾಡಿದ ಸ್ಕ್ರೀನ್ ಶಾಟ್ ಅನ್ನು ಕೆಳಗಿನ ನಂಬರ್ ಗೆ ಶೇರ್ ಮಾಡಿ

63623 93966

ಕುಡಿಯೋಣು ಬಾರಾ

ಲೇಖಕರು: ವಿಶ್ವೇಶ್ವರ ಭಟ್

(ಬೆಲೆ: 300 ರು.)



ಕುಡಿಯುವವರ ಬಗ್ಗೆ, ಕುಡಿಯದವರಿಗೆ ಏನೋ ಒಂಥರಾ ಅನಾದರ. ಕುಡಿಯದವರ ಬಗ್ಗೆ ಕುಡಿಯುವವರಿಗೆ ಏನೋ ಒಂಥರಾ ತಿರಸ್ಕಾರ. ಕುಡಿದು ಜೀವನ ಹಾಳುಮಾಡಿಕೊಳ್ತಾರೆ ಎಂದು ಕುಡಿಯದವರು ಅಂದುಕೊಳ್ತಾರೆ. ಕುಡಿಯದೇ ಜೀವನವನ್ನು ನಿರರ್ಥಕಗೊಳಿಸಿಕೊಳ್ಳುತ್ತಾರೆ ಎಂದು ಕುಡಿಯುವವರು ಭಾವಿಸುತ್ತಾರೆ. ಕುಡಿಯುವವರು ಕುಡಿಯುತ್ತಲೇ ಇರುತ್ತಾರೆ, ಕುಡಿಯದವರು ಕುಡಿಯದೇ ಇರುತ್ತಾರೆ. ಇವರಿಬ್ಬರೂ ತಮ್ಮ ತಮ್ಮ ಮೂಗಿನ ನೇರಕ್ಕೆ ಸರಿ ಎಂದು ವಾದಿಸುತ್ತಲೇ ಇರುತ್ತಾರೆ. ಅಸಲಿಗೆ ಕುಡಿತದ ಬಗ್ಗೆ ಕುಡಿಯುವವರಿಗೆ ಮತ್ತು ಕುಡಿಯದವರಿಗೆ ಗೊತ್ತಿರುವುದಿಲ್ಲ. ಕುಡಿತ ಅಂದ್ರೆ 'ಕಿಕ್' ಎಂದು ಭಾವಿಸಿದವರಿಗೂ, ಸೆಕ್ಸ್ ಅಂದ್ರೆ ಮಕ್ಕಳನ್ನು ಮಾಡುವುದು ಎಂದು ಅಂದುಕೊಂಡವರಿಗೂ ಹೆಚ್ಚು ವ್ಯತ್ಯಾಸವಿಲ್ಲ. ಕುಡಿತದ ದುಷ್ಪರಿಣಾಮದ ಬಗ್ಗೆ ಮಾತಾಡುವವರು, ಕುಡಿತಕ್ಕೂ ಒಂದು ಸಾಂಸ್ಕೃತಿಕ ಆಯಾಮವಿದೆ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಬದುಕನ್ನು ಅತಿಯಾಗಿ ಪ್ರೀತಿಸಿದವ ಮಾತ್ರ ಗುಂಡನ್ನು ಕಂಡುಹಿಡಿದಿರಬಹುದು ಎನ್ನುವವರ ಹಾಗೆ, ದೇವತೆಗಳೂ ಸುರಾಪಾನ ಇಷ್ಟಪಡುತ್ತಿದ್ದರು ಮತ್ತು ಕುಡಿದವರು ಸೈತಾನನಿಗೆ ಸಮ ಎಂದು ವಾದ ಮಾಡುವವರು ಇದ್ದಾರೆ. ಅದೇನೇ ಇರಲಿ, ಇದು ಕುಡಿತದ ಪರ–ವಿರೋಧದ ಕೃತಿಯಲ್ಲ. ಶೀರ್ಷಿಕೆ 'ಕುಡಿಯೋಣು ಬಾರಾ' ಎಂದಿದ್ದರೂ, ಕುಡಿತವನ್ನು ಉತ್ತೇಜಿಸುವ ಕೃತಿಯೂ ಅಲ್ಲ. ಕುಡಿತದ ಸುತ್ತ ಇರುವ ಬೇರೆಯದೇ ಲೋಕದ ಗುಂಗಿನ ಗಮ್ಮತ್ತು ಹಾಗೂ ಮತ್ತು ಬರಿಸುವ ಒಂದಷ್ಟು ಹರಟೆ, ವಿಷಯ, ವಿಚಾರಗಳ ಕಾಕ್‌ಟೇಲ್!

ಪರದೇಶವಾಸಿ

ಲೇಖಕರು: ಕಿರಣ್ ಉಪಾಧ್ಯಾಯ

(ಬೆಲೆ: 250 ರು.)



ನಮ್ಮ ದೇಶ ನಮಗೆ ಮತ್ತಷ್ಟು ಆಪ್ತವಾಗುವುದು 'ಪರದೇಶವಾಸಿ'ಯಾಗಿದ್ದಾಗ. ನಮ್ಮ ದೇಶ ನಮಗೆ ಗಾಢವಾಗಿ ತಟ್ಟುವುದು, ದೇಶದ ಬಗ್ಗೆ ನಾವು ಗಾಢವಾಗಿ ಯೋಚಿಸುವುದು ವಿದೇಶಿ ನೆಲದಲ್ಲಿದ್ದಾಗಲೇ. ನಿರಂತರ ಕಾಡುವ ಪರಕೀಯ ಭಾವ, ನಮ್ಮನ್ನು ನಮ್ಮ ದೇಶದ ಬಗ್ಗೆ ಆಲೋಚಿಸಲು ಹಚ್ಚುತ್ತದೆ. ಅದಕ್ಕೆ ವಿದೇಶ ವಾಸದ ಅನುಭವವೂ ಸೇರಿಕೊಂಡು, ಆ ಆಲೋಚನೆ ಮತ್ತಷ್ಟು ಗಂಭೀರ ಆಯಾಮವನ್ನು ಪಡೆಯುತ್ತದೆ. ಎಲ್ಲ ಅನಿವಾಸಿ ಗಳನ್ನು ಕಾಡುವ, 'ಭಾರತ ವನ್ನು ಸುಧಾರಿಸುವುದು ಹೇಗೆ?' ಎಂಬ ಪ್ರಶ್ನೆಗೆ ಎಲ್ಲಾ ವಿದೇಶವಾಸಿಗಳಲ್ಲೂ ಉತ್ತರವಿದೆ. ಆದರೆ ಆ ಉತ್ತರ ಮತ್ತಷ್ಟು ಪ್ರಶ್ನೆ ಮತ್ತು ಸಮಸ್ಯೆಗಳನ್ನು ಹುಟ್ಟುಹಾಕಬಹುದು. ಹೀಗಾಗಿ ವಿದೇಶಿ ನೆಲದಲ್ಲಿ ಕುಳಿತು ಬರೆಯುವುದು ಯಾವತ್ತೂ ಸವಾಲು. ಎಲ್ಲೋ, ಅದೆಷ್ಟೋ ದೂರದಲ್ಲಿ ನಿಂತು, ತಾಯ್ನೆಲದ ತಾಕಲಾಟ, ತಟವಟಗಳನ್ನು ನೋಡುವುದು ಕಷ್ಟವೇ. ಕಲ್ಪನೆಯನ್ನು ಸದಾ ವಿಸ್ತರಿಸುವ, ಲಂಬಿಸುವ ಕಸರತ್ತನ್ನು ಮಾಡುತ್ತಿರ ಬೇಕು. ಈ ಕೆಲಸವನ್ನು ಕಿರಣ್ ಉಪಾಧ್ಯಾಯ ಅತ್ಯಂತ ಪ್ರೀತಿ ಮತ್ತು ಜರೂರತಿನಿಂದ ಮಾಡುತ್ತಿದ್ದಾರೆ. ಎರಡು ಖಂಡಗಳನ್ನು ಹತ್ತಿರಗೊಳಿಸುವ, ಆಪ್ತವಾಗಿಸುವ ನಿಟ್ಟಿನಲ್ಲಿ, ಅಂಥದೊಂದು ಕಸುಬುದಾರಿಕೆಯಲ್ಲಿ 'ವಿಶ್ವವಾಣಿ' ಪತ್ರಿಕೆಯಲ್ಲಿನ ಅವರ 'ವಿದೇಶವಾಸಿ' ಅಂಕಣ ಮಹತ್ವದ ಸೇತುವೆಯಾಗಿದೆ. ವಿದೇಶದ ಅನುಭವವನ್ನು ಸ್ಥಳೀಯ ಸಂದರ್ಭಕ್ಕೆ ಎಳೆದು ತಂದು, ಇಲ್ಲಿನ ಸನ್ನಿವೇಶಕ್ಕೆ ಸಮೀಕರಿಸಿ, ಅದನ್ನು ದೇಶ–ವಿದೇಶದ ಮಿಶ್ರಪಾಕವಾಗಿಸಿ, ಹೊಸ ಅನುಭವವಾಗಿಸುತ್ತಿದ್ದಾರೆ ಕಿರಣ್ ಉಪಾ ಧ್ಯಾಯ. ಈ ಕಾರಣದಿಂದ ಅವರ ಬರಹ ವಿಶೇಷ ಮೆರುಗನ್ನು ಪಡೆದಿದೆ. ಕಡಿಮೆ ಅವಧಿಯಲ್ಲಿ ಒಬ್ಬ ಪ್ರಬುದ್ಧ ಅಂಕಣಕಾರರಾಗಿ ಗುರುತಿಸಿಕೊಂಡಿರುವ ಅವರು ಪರದೇಶದ ಅನುಭವಗಳನ್ನು ಕಟ್ಟಿಕೊಡುತ್ತಾ ನಮಗೆ ಅಲ್ಲಿನ ಜೀವನ ಮತ್ತು ಜನಜೀವನವನ್ನು ಹೃದ್ಯವಾಗಿಸುತ್ತಿದ್ದಾರೆ. ಹೀಗಾಗಿ ಕಿರಣ್ ಬರಹದಲ್ಲಿ ತಾಯ್ನಾಡಿನ ಸೆಳೆತ ಹಾಗೂ ವಿದೇಶಿ ನೆಲದ ಘಮಲನ್ನು ಏಕಕಾಲದಲ್ಲಿ ಆಘ್ರಾಣಿಸ ಬಹುದು. ಈ ಕೃತಿ ನಿಮಗೆ ಆ ಅನುಭವವನ್ನು ಸಂಪನ್ನಗೊಳಿಸುತ್ತದೆ.

ಒಂದೊಳ್ಳೆ ಮಾತು

ಲೇಖಕಿ: ರೂಪಾ ಗುರುರಾಜ್

(ಬೆಲೆ: 250 ರು.)



'ವಿಶ್ವವಾಣಿ' ಪತ್ರಿಕೆಯಲ್ಲಿ ರೂಪಾ ಗುರುರಾಜ್ ಅವರು ಬರೆಯುತ್ತಿರುವ 'ಒಂದೊಳ್ಳೆ ಮಾತು' ಅಂಕಣಬರಹದ ಸಂಕಲನದ ಮೊದಲ ಭಾಗವಿದು. ಈ ರೀತಿಯ ಅಂಕಣವನ್ನು ಬರೆಯುವುದು, ಪೊರೆಯುವುದು ಸುಲಭವಲ್ಲ. ಪ್ರತಿದಿನವೂ ಹೊಸ ಹೊಸ ವಿಚಾರ, ಕತೆ, ಪ್ರಸಂಗ, ದೃಷ್ಟಾಂತ, ಸಂಗತಿಗಳನ್ನು ಹೇಳುವುದು ಸವಾಲೇ ಸರಿ. ಅಲ್ಲದೇ ಆ ದಿನದ ವಿಷಯಕ್ಕೆ ಹೊಂದಾಣಿಕೆಯಾಗುವ ಪ್ರಸಂಗವನ್ನು ಜೋಡಿಸುವುದು ಸಹ. ಇದಕ್ಕೆ ಸಾಕಷ್ಟು ಅಧ್ಯಯನ, ಚರ್ಚೆ, ಸಂವಾದ, ಓದು ಅಗತ್ಯ. ಇದನ್ನು ವ್ರತದಂತೆ ಮಾಡುತ್ತಾ ಬಂದಿದ್ದಾರೆ ರೂಪಾ ಅವರು. ಬೆಳಗ್ಗೆ ಪತ್ರಿಕೆಯನ್ನು ಕೈಗೆತ್ತಿಕೊಳ್ಳುತ್ತಿದ್ದಂತೆ, ಅಯಾಚಿತವಾಗಿ 'ಒಂದೊಳ್ಳೆ ಮಾತು' ಅಂಕಣದತ್ತ ದೃಷ್ಟಿ ಹೊರಳುವ ಹಾಗೆ ಮಾಡಿದ್ದಾರೆ. ಇದು ಆ ಅಂಕಣವನ್ನು ಗೆಲ್ಲಿಸಿದ ರೂಪಾ ಅವರ ಸಾಧನೆಯೇ. ಈ ಅಂಕಣದಿಂದ ಅನೇಕರಿಗೆ ಪ್ರೇರಣೆ, ನೆಮ್ಮದಿ, ಸಮಾಧಾನ, ಸಂತಸ, ಸಾಂತ್ವನ ಸಿಕ್ಕಿದೆ. ಬೇಸರದಲ್ಲಿದ್ದವರಿಗೆ, ಮೂಡು ಕೆಡಿಸಿಕೊಂಡವರಿಗೆ ಅದು ಒಂದು ಹಿಡಿ ಸಮಾಧಾನವನ್ನು ನೀಡಿದೆ. ಖಿನ್ನ ಮನಸ್ಕರಾ ದವರ ಮುಖದಲ್ಲಿ ಮಂದಹಾಸ ವನ್ನು ಮೂಡಿಸಿದೆ. 'ಈ ಬದುಕೇ ಇಷ್ಟು' ಎಂದು ಹತಾಶರಾದವರಿಗೆ ಭರವಸೆಯ ಬದುಕಿನ ಬದುವನ್ನು ತೋರಿಸಿದೆ. ಇವ್ಯಾವವೂ ಇಲ್ಲದ ಓದುಗರಿಗೆ ಓದಿನ ಸಹಜ ಸುಖವನ್ನು ನೀಡಿದೆ. ಒಂದು ಅಂಕಣದ ಸಾರ್ಥಕ್ಯ ಇದೇ ಅಲ್ಲವೇ?

▶▶ ಪ್ರಾಣಿಗಳಿಗೆ ತೋಟಗಳೇ ಆಶ್ರಯ ತಾಣ ▶▶ ಹುಲಿ, ಕರಡಿ, ಆನೆಗಳ ದಾಳಿ ಭಯ

ಕಾಫಿ ಬೆಳೆಗಾರನಿಗೆ ಹೆಜ್ಜೆ ಹೆಜ್ಜೆಗೂ ಆತಂಕ

ಜಿಲ್ಲಾ ನೋಟ

ಅನಿಲ್ ಎಚ್.ಟಿ. ಮಡಿಕೇರಿ

ಕೊಡಗಿನ ಕಾಫಿ ತೋಟಗಳಿಗೆ ತೆರಳಬೇಕಾದರೆ ಪ್ರತಿಯೊಬ್ಬ ಬೆಳೆಗಾರನೂ ಯುದ್ಧಕ್ಕೆ ಹೊರಟಂತೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡೇ ತೆರಳಬೇಕಾಗಿದೆ. ಯಾವಾಗ ಯಾವ ಮೂಲೆಯಿಂದ ಶತ್ರುಗಳಂತೆ ಆನೆ, ಹುಲಿ, ಕರಡಿ ದಾಳಿ ಮಾಡುತ್ತದೆಯೋ ಎಂದು ಗೊತ್ತಾಗದಂಥ ಆತಂಕದ ಪರಿಸ್ಥಿತಿಯಲ್ಲಿ ಬೆಳೆಗಾರನಿರುತ್ತಾನೆ. ನಿಜವಾದ ಅರ್ಥದಲ್ಲಿಯೂ ಸೈನಿಕನಂತೆ ಆಗಿಬಿಟ್ಟಿದ್ದಾನೆ...!

ಗಮನಿಸಿ ನೋಡಿದರೆ, ಕೊಡಗಿನ ಬಹುತೇಕ ತೋಟಗಳು ಮೃಗಾಲಯವೇ ಆಗಿಬಿಟ್ಟಿವೆ. ಕಾಡಿನಲ್ಲಿರಬೇಕಾದ ವನ್ಯಜೀವಿಗಳು ಕಾಡು ಬಿಟ್ಟು ತೋಟ ಸೇರಿಕೊಂಡು ಬಿಟ್ಟಿವೆ. ಆನೆ, ಹುಲಿ, ಚಿರತೆ, ಕರಡಿ, ನವಿಲು, ಕಾಡೆಮ್ಮೆ, ಕಾಡುಕೋಣ, ಜತೆಗೇ ಸಾವಿರಾರು ಮಂಗಗಳಿಗೂ ಕಾಫಿ ತೋಟಗಳೇ ಆಶ್ರಯ ತಾಣವಾಗಿದೆ.

ಮೂರು ಬಗೆ ಆನೆ ಹಿಂಡು

ಕೊಡಗಿಗೆ ಬರುವ ಪ್ರವಾಸಿಗರು ವನ್ಯಜೀವಿ ನೋಡಬೇಕೆಂದು ಬಯಸಿದರೆ ಇಲ್ಲಿನ ಕಾಫಿ ತೋಟಗಳಿಗೆ ಕರೆದೊಯ್ಯಬಹುದು ಎಂಬುದು ತಮಾಷೆಯ ಮಾತಂತೂ ಅಲ್ಲವೇ ಅಲ್ಲ. ಕೊಡಗಿನ ಕೃಷಿಕರನ್ನು ಆನೆಗಳಲ್ಲಿ ಎಷ್ಟು ವಿಧ ಎಂದು ಕೇಳಿ ನೋಡಿದರೆ ದೊರಕುವ ಉತ್ತರ – ಸಾಕಾನೆ, ಕಾಡಾನೆ ಮತ್ತು ತೋಟದಾನೆ...! ಕಾಡಾನೆ, ಸಾಕಾನೆ ಗೊತ್ತು. ಇದು ಯಾವುದಿದು ತೋಟದಾನೆ ಎಂದರೆ, ನೊಂದ ಬೆಳೆಗಾರ ಹೇಳುತ್ತಾನೆ:

'ನನ್ನದೇ ತೋಟದಲ್ಲಿ 20 ವರ್ಷಗಳಿಂದ ಬೀಡು ಬಿಟ್ಟಿರುವ ಆನೆಗಳಿವು. ನಾನು ಸಾಕದೇ ಇದ್ದರೂ ನನ್ನ ತೋಟದಲ್ಲಿ ಸಿಕ್ಕುವ ಹಲಸು, ಬಿದಿರು, ಸೊಪ್ಪು ತಿಂದು, ಕೆರೆ ನೀರು ಕುಡಿದು ನೆಮ್ಮದಿ ಯಿಂದ ಜೀವಿಸುತ್ತಾ ನಮ್ಮ ನೆಮ್ಮದಿ ಹಾಳು ಮಾಡುತ್ತಿವೆ. ತೋಟದಲ್ಲಿಯೇ ಹುಟ್ಟಿ ಬೆಳೆದ ಅನೇಕ ಆನೆಗಳು 15–20 ವರ್ಷಗಳಿಂದ ಕಾಡನ್ನೇ ನೋಡದೇ ತೋಟಗಳಲ್ಲಿಯೇ ಸುತ್ತಾಡಿಕೊಂಡು ತೋಟವನ್ನೇ ಕಾಡಾಗಿಸಿಕೊಂಡಿವೆ. ಅವು ಅಲ್ಲಿಯೇ ಆನೆಗಳಾಗಿ ಬೆಳೆದಿವೆ. ಇವು ಒಂದರ್ಥ ದಲ್ಲಿ ತೋಟದ ಗಜಪಡೆಗಳಾಗಿ ಬೆಳೆಯುತ್ತವೆ..!

ದಶಕಗಳ ಸಮಸ್ಯೆ

ರಾಜ್ಯದಲ್ಲಿ ಕಾಡಾನೆಗಳ ದಾಂಧಲೆಯ ಸಮಸ್ಯೆಗಳನ್ನು ಮೊದಲು ಎದುರಿಸಿದ್ದೇ ಕೊಡಗು ಜಿಲ್ಲೆ. ಈ ಸಮಸ್ಯೆಗೆ ಈಗ 25–26 ವರ್ಷಗಳಾಗಿದೆ. ನಂತರದ ವರ್ಷಗಳಲ್ಲಿ ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ ಜಿಲ್ಲೆಗಳಲ್ಲಿಯೂ ಕಾಡಾನೆ ದಾಳಿ ಸಮಸ್ಯೆ ವ್ಯಾಪಕ ವಾಯಿತು. ಕೊಡಗಿನಲ್ಲಿ ಮೊದಲು ಸಮಸ್ಯೆ ಕಾಣಿಸಿಕೊಂಡಾಗಲೇ ಈ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಂಡಿದ್ದರೆ ರಾಜ್ಯವ್ಯಾಪಿ 8 ಜಿಲ್ಲೆಗಳಲ್ಲಿ ಕಾಡಾನೆ ಸಮಸ್ಯೆ ಇಷ್ಟೊಂದು ವ್ಯಾಪಕವಾಗಿ ವಿಸ್ತರಿಸುತ್ತಲೇ ಇರಲಿಲ್ಲ.

> ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳು ತಮ್ಮದೇ ಸಿದ್ಧಸೂತ್ರದಿಂದ ಹೊರಬದು ವಾಸ್ತವ ನೆಲೆಗಟ್ಟಿನಲ್ಲಿ ಯೋಚಿಸಲೇಬೇಕಾಗಿದೆ. ಕೊಡಗಿನ ಸಮಸ್ಯೆ ಬಗ್ಗೆ ಸಮಗ್ರವಾಗಿ ನಾನೂ ಸಭೆಗಳಲ್ಲಿ ವಾದ ಮಂಡಿಸಿದ್ದೇನೆ. ಎಲ್ಲಿಯ ವರೆಗೂ ಶಾಶ್ವತ ಪರಿಹಾರ ಕಂಡುಕೊಳ್ಳಲು ನಾವೆಲ್ಲಾ ವಿಫಲರಾಗುತ್ತೇವೆಯೋ ಅಲ್ಲಿವರೆಗೆ ಬೆಂಗಳೂರಿನಲ್ಲಿ ಕುಳಿತ ಅಧಿಕಾರಿಗಳದ್ದೇ ಅಂತಿಮ ತೀರ್ಮಾನ ಎಂಬಂತಾಗಿದೆ.
> –ಸಂಕೇತ್ ಪೂವಯ್ಯ ವನ್ಯಜೀವಿ ಮಂಡಳಿ ಸದಸ್ಯ

ವರ್ಷಕ್ಕೆ 50 ಮಂದಿ ಬಲಿ

ವಿಪರ್ಯಾಸ ನೋಡಿ. ಕರ್ನಾಟಕದಲ್ಲಿಯೇ ವರ್ಷಕ್ಕೆ 45–50 ಜನ ಕಾಡಾನೆ ದಾಳಿಯಿಂದ ಸಾವನ್ನಪ್ಪುತ್ತಿದ್ದಾರೆ. 200 ಕ್ಕೂ ಅಧಿಕ ಜನ ಕಾಡಾನೆ ದಾಳಿಯಿಂದ ಗಾಯಾಳುಗಳಾಗುತ್ತಿದ್ದಾರೆ. ಕಾಡಾನೆ ದಾಳಿಯಿಂದಾಗಿ ಹಾಸಿಗೆ ಹಿಡಿದಿರುವ ಕೊಡಗಿನ 6 ಮಂದಿ ಸೇರಿದಂತೆ ರಾಜ್ಯದ 22 ಮಂದಿಯ ಸ್ಥಿತಿ ದಾರುಣವಾಗಿದೆ.

ಸಮಸ್ಯೆಗೆ ಸದಾ ಸಿದ್ಧ ಉತ್ತರ

ಹೀಗಿದ್ದರೂ ರಾಜ್ಯ ಸರಕಾರಕ್ಕೆ ಕಾಡಾನೆ ಸಮಸ್ಯೆ ಎಂಬುದು ಗಂಭೀರ ಸಮಸ್ಯೆಯೇ ಅನ್ನಿಸಿಲ್ಲ. ಮಾನವ–ಕಾಡಾನೆ ಸಂಘರ್ಷ ಎಂಬ ಪ್ರಶ್ನೆ ಎದುರಾದಾಗಲೆಲ್ಲಾ, ಕಾಡಿನಲ್ಲಿ ವನ್ಯಜೀವಿಗಳಿಗೆ ಸೂಕ್ತ ಆಹಾರ ಕಲ್ಪಿಸುತ್ತೇವೆ. ಕಾಡಿನಲ್ಲಿ ಆಹಾರ, ನೀರು ದೊರಕದೇ ವನ್ಯ ಪ್ರಾಣಿಗಳು ನಾಡಿಗೆ ಲಗ್ಗೆ ಇಡುತ್ತಿವೆ ಎಂಬ ಸಿದ್ಧ ಸಹಜ ಉತ್ತರ ದೊರಕು ತ್ತಲೇ ಇದೆ. ಕಾರ್ಯಪಡೆ ರಚಿಸಿದ್ದೇವೆ, ಸೂಕ್ತ ವಾಹನ ನೀಡಿದ್ದೇವೆ. ನಿಯಂತ್ರಣ ಕೊಠಡಿಗಳು ತೆರೆದಿವೆ ಎಂಬೆಲ್ಲಾ ಉತ್ತರಗಳನ್ನು ಕೇಳಿ ಕೇಳಿ, ಕಿವಿ ಸುಸ್ತಾಗಿದೆ.

ಕಳೆದ ಎರಡೂವರೆ ದಶಕಗಳಿಂದ ಕಾಡಾನೆ ಮತ್ತು ವನ್ಯಜೀವಿ ಸಮಸ್ಯೆಯ ಬಗ್ಗೆ ಆಡಳಿತ ದಲ್ಲಿರುವವರನ್ನು ಪ್ರಶ್ನಿಸಿ ಪತ್ರಕರ್ತರಿಗೂ ಸಾಕಾಗಿ ಹೋಗಿದೆ. ಕಾರ್ಯಪಡೆಯ ವಾಹನಗಳು ಹಳತಾಗಿದೆ. ಸಿಬ್ಬಂದಿ ನಿವೃತ್ತರಾಗುತ್ತಿದ್ದಾರೆ. ಕಾಡೇ ನೋಡದ ಆನೆಗಳನ್ನೇ ಕಾಣದ ಅಧಿಕಾರಿಗಳು ಬೆಂಗಳೂರಿನ ಎಸಿ ರೂಮಿನಲ್ಲಿ ಕುಳಿತು ವನ್ಯಜೀವಿ ಸಮಸ್ಯೆ ಬಗೆಹರಿಸಲು ಹೊಸ ಹೊಸ ಆದೇಶಗಳ ನೀಡುತ್ತಾ ಬಂದಿದ್ದಾರೆ.

ಆನೆ, ಹುಲಿ ಸಂಖ್ಯೆ ಹೆಚ್ಚಳ

ಇತ್ತೀಚೆಗೆ ಸಮಸ್ಯೆ ಬಿಗಡಾಯಿಸಿದೆ. ಕಾಡಾನೆ, ಹುಲಿಗಳ ಸಂಖ್ಯೆ ಗಮನಾರ್ಹ ಹೆಚ್ಚಳವಾಗಿದೆ. ಕಾಫಿ ತೋಟಗಳು ವನ್ಯಜೀವಿಗಳ ತಾಣವಾಗಿದೆ. ತನ್ನದೇ ತೋಟಕ್ಕೇ ತೋಟ ಮಾಲೀಕ ಜೀವ ಭಯದಿಂದ ಕಾಲಿಡಬೇಕಾದ ದುಸ್ಥಿತಿ ಮುಂದುವರೆದೇ ಇದೆ.ರಾಜ್ಯದಲ್ಲಿ ಅರಣ್ಯ ಸಚಿವರಿದ್ದಾರೆ. ರಾಜ್ಯದಲ್ಲಿ ಕಾಡು ಇರುವುದೇ ಅಬ್ಬಬ್ಬಾ ಎಂದರೆ 8 ಜಿಲ್ಲೆಗಳಲ್ಲಿ ಮಾತ್ರ.ಅರಣ್ಯ ಸಚಿವರಿಗೆ 8 ಜಿಲ್ಲೆಗಳ ಆಗು ಹೋಗು ಗಮನಿಸಿ ಪರಿಹರಿಸಲು ಏನಿದೆ ಕಷ್ಟ ಎಂದು ಆ ಭಾಗದ ಜನ ಕೇಳುತ್ತಲೇ ಇದ್ದಾರೆ? ಕಳೆದ ಹತ್ತು ವರ್ಷದಲ್ಲಿ ಎಷ್ಟು ಅರಣ್ಯ ಸಚಿವರು ಕೊಡಗಿಗೆ ಭೇಟಿ ನೀಡಿದ್ದಾರೆ. ವನ್ಯ ಜೀವಿಗಳ ದಾಂಧಲೆ ಸಂಬಂಧಿತ ಕೊಡಗೂ ಸೇರಿದಂತೆ ಮಲೆನಾಡು ಜಿಲ್ಲೆಗಳ ಬೆಳೆಗಾರರ ಜತೆ ಎಷ್ಟು ಬಾರಿ ಚರ್ಚಿಸಿ ದ್ದಾರೆ?ಸಚಿವರ ಸಭೆಗಳು ಏನಿದ್ದರೂ ಅಧಿಕಾರಿಗಳಿಗೆ ಸೀಮಿತ. ಅದೂ ಬೆಂಗಳೂರಿನಲ್ಲಿಯೇ ಮಲೆನಾಡಿನ ಕಾಡಿನ ಬಗ್ಗೆ ಚರ್ಚಿಸಲಾಗುತ್ತಿದೆ.

ಕಾಫಿ ಹಣ್ಣು ಕಾಡಾನೆಗಳ ಪಾಲು

ಕೊಡಗಿನ ಕಾಡಾನೆಗಳ ಬಗ್ಗೆ ಹೇಳುವುದಾದರೆ, ಮೊದಲೆಲ್ಲಾ ತನ್ನ ಎದುರಿಗೆ ಸಿಕ್ಕಿದವರ ಮೇಲೆ ದಾಳಿ ಮಾಡುತ್ತಿದ್ದ ಆನೆಗಳು ಇತ್ತೀಚಿನ ವರ್ಷಗಳಲ್ಲಿ ಎಲ್ಲೆ ಮೀರಿ ದಾಂಧಲೆ ನಡೆಸಿವೆ. ಕಾಫಿ ಹಣ್ಣಿನ ರುಚಿ ಯನ್ನೂ ಸವಿಯಲಾರಂಭಿಸಿವೆ. ಕಾಫಿ ಫಸಲು ಇರುವ ತೋಟಗಳಲ್ಲಿ ಹೆಜ್ಜೆಯಿರಿಸುತ್ತಾ ಮನ ಬಂದಂತೆ ಸಾಗಿದಾಗ ನೂರಾರು ಕಾಫಿ ಗಿಡಗಳು ನೆಲಕಚ್ಚುತ್ತವೆ. ಇದಿಷ್ಟೇ ಸಾಲದು ಎಂಬಂತೆ ಇತ್ತೀ ಚಿನ ದಿನಗಳಲ್ಲಿ ಕಾಫಿ ಹಣ್ಣನ್ನೂ ತಿನ್ನುವ ಹೊಟ್ಟೆಬಾಕ ಆನೆಗಳು ಬೆಳೆಗಾರನ ನೆಮ್ಮದಿ ಕಸಿದುಕೊಂಡಿವೆ. ದಕ್ಷಿಣ ಕೊಡಗಿನ ಅನೇಕ ತೋಟಗಳಲ್ಲಿ ಕಾಫಿ ಹಣ್ಣು ಕಾಡಾನೆಗಳ ಪೌಷ್ಟಿಕ ಆಹಾರ ಆಗಿ ಖಾಲಿಯಾಗುತ್ತಿವೆ..!

ಕಾಡಾನೆಗಳ ಸ್ಥಳಾಂತರದ ಪ್ರಸ್ತಾಪವೂ ಸರಕಾರದ ಬಳಿಯಿದೆ. ಆದರೆ ಕೊಡಗಿನ ಮಟ್ಟಿಗೆ ಹೇಳುವಾದದಲ್ಲಿ ಜಿಲ್ಲೆಯಲ್ಲಿ 180 ಕಾಡಾನೆಗಳು ತೋಟಗಳಲ್ಲಿ ದಾಳಿ ನಡೆಸುತ್ತವೆ. ಈ ಬಗ್ಗೆ ಕೇಂದ್ರದ ಗಮನ ಸೆಳೆಯುವಲ್ಲಿ ಕಾಫಿ ಜಿಲ್ಲೆಗಳಿಗೆ ಸೇರಿದ ಸಂಸದರು ಪ್ರಮುಖ ಪಾತ್ರ ವಹಿಸಲೇ ಬೇಕಾಗಿದೆ ಯಾಕೆಂದರೆ ವನ್ಯಜೀವಿಗಳ ವಿಚಾರದಲ್ಲಿ ರಾಜ್ಯ ಸರಕಾರ ಒಂದೇ ನಿರ್ಧಾರ ಕೈಗೊಳ್ಳಲಾಗದು.

ಪರಿಹಾರಗಳೇನು

ಆನೆ ದಾಳಿ ತಡೆಗೆ ರೈಲ್ವೇ ಬ್ಯಾರಿಕೇಡ್ ನಿರ್ಮಾಣ, ಕಂದಕ ತೋಡುವಿಕೆ, ಇದೇ ಪರಿಹಾರೋಪಾಯ ಕೇಳಿಬರುತ್ತಿದೆಯೇ ಹೊರತಾಗಿ ಬೇರೆ ಯಾವುದೇ ಉಪಾಯ ವ್ಯಕ್ತವಾಗುತ್ತಿಲ್ಲ. ಹೊರರಾಜ್ಯಗಳಲ್ಲಿ ಇಂಥ ಸಮಸ್ಯೆ ನಿವಾರಣೆಗೆ ಯಾವೆಲ್ಲಾ ಪರಿಹಾರೋಪಾಯ ಕಂಡು ಹಿಡಿದಿದ್ದಾರೆ ಎಂಬ ಅಧ್ಯಯನ ಕೂಡ ಗಂಭೀರವಾಗಿ ಆಗಿಲ್ಲ. ಅರಣ್ಯ ಸಿಬ್ಬಂದಿಗಳಿಗೆ ಸೂಕ್ತ ಸೌಲತ್ತುನೀಡಿ. ಹೆಚ್ಚುವರಿ ಸಿಬ್ಬಂದಿ ಒದಗಿಸಿ, ಸೂಕ್ತ ರೀತಿ ಮಾರ್ಗದರ್ಶನ ನೀಡಬೇಕು. ಇಲ್ಲದೇ ಹೋದರೆ ಬೆಳೆಗಾರನಿಗೆ ಯಾವುದೇ ಪ್ರಯೋಜನ ಆಗದು.

▶▶ ಇನ್ನು ಮುಂದೆ 'ಪರಿಸರ ಸೂಕ್ಷ್ಮ ವಲಯ' ▶▶ ಅಪಾರ ಖನಿಜ ಸಂಪನ್ಮೂಲ ಪ್ರದೇಶ

ಕಪ್ಪತ್ತಗುಡ್ಡಕ್ಕೆ ಕೊನೆಗೂ ಕಾನೂನಿನ ರಕ್ಷಣೆ

ಜಿಲ್ಲಾ ನೋಟ

ಮಾಲಿಂಗರಾಯ ಪೂಜಾರ,ಗದಗ

ಉತ್ತರ ಕರ್ನಾಟಕದ ಸಹ್ಯಾದ್ರಿ, ಆಯುರ್ವೇದದ ಸಸ್ಯಕಾಶಿ, ವನ್ಯಧಾಮ ಎಂದು ಕರೆಯುವ ಕಪ್ಪತ್ತಗುಡ್ಡ ಈಗ 'ಪರಿಸರ ಸೂಕ್ಷ್ಮ ವಲಯ' ಎಂದು ಕೇಂದ್ರ ಸರಕಾರದಿಂದ ಅಧಿಕೃತವಾಗಿ ಘೋಷಣೆಯಾಗಿದೆ. ಇದು ಪರಿಸರವಾದಿಗಳಿಗೆ ಅಪಾರ ಸಂತಸ ತಂದಿದೆ.

ಗಾಳಿ ಬೀಸುವ ಪರ್ವತ

ಏಷ್ಯಾ ಖಂಡದಲ್ಲಿಯೇ ಅತಿ ಹೆಚ್ಚು ಗಾಳಿ ಬೀಸುವ ಪರ್ವತಗಳಿರುವ ಈ ಕಪ್ಪತ್ತಗುಡ್ಡ ದೇಶದಲ್ಲಿಯೇ ಶುದ್ಧ ಗಾಳಿಗೆ ಹೆಸರುವಾಸಿ. ಈ ವನ್ಯಧಾಮದಲ್ಲಿ ಅಪರೂಪದ ವನ್ಯಜೀವಿಗಳು ಹಾಗೂ ಔಷಧೀಯ ಸಸ್ಯಗಳ ನೂರಾರು ಹೆಕ್ಟೇರ್ ಪ್ರದೇಶವಿದೆ. ಇಲ್ಲಿ 500 ಕ್ಕೂ ಹೆಚ್ಚು ವಿವಿಧ ಅಪರೂಪದ ಔಷಧಿ ಸಸ್ಯಗಳ ಸಂಗ್ರಹಣೆಗೆ ಮೀಸಲಿಡಲಾಗಿದೆ. ಇದರಿಂದ ಔಷಧೀಯ ಸಸ್ಯಗಳ ವಾಸಸ್ಥಾನ ಎಂದು ಕರೆಯಲಾಗಿದೆ.

ವಲಯ ವ್ಯಾಪ್ತಿಗೆ 62 ಗ್ರಾಮ

ಕಪ್ಪತ್ತಗುಡ್ಡ ವ್ಯಾಪ್ತಿಯು ಜಿಲ್ಲೆಯ ಮುಂಡರಗಿ, ಗದಗ, ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕಿನ ವ್ಯಾಪ್ತಿಯಲ್ಲಿ ಹರಡಿದ್ದು, ಮುಂಡರಗಿ ತಾಲೂಕಿನ ಸಿಂಗಟಾಲೂರುನಿಂದ ಗದಗ ತಾಲೂಕಿನ ಬಿಂಕದಕಟ್ಟಿ ಗ್ರಾಮದವರೆಗೆ ಹರಡಿದ್ದು, ಒಟ್ಟು 244.15 ಚದರ ಕಿ.ಮೀ. ವ್ಯಾಪ್ತಿಯಲ್ಲಿದೆ. ಈಗ ಇದು ಪರಿಸರ ಸೂಕ್ಷ್ಮಪ್ರದೇಶದ ವ್ಯಾಪ್ತಿಗೆ 62 ಗ್ರಾಮಗಳು ಬರಲಿದ್ದು,ಕಪ್ಪತಗುಡ್ಡವನ್ನು 322 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಲಾಗಿದೆ.

ಗುಡ್ಡಕ್ಕೆ ಕಾನೂನಿನ ಬೇಲಿ

ಈ ಹಿಂದೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗಣಿಗಾರಿಕೆಗೆ ಪರವಾನಿಗೆ ನೀಡಲಾಗಿದ್ದ, ಒಟ್ಟು 10 ಕ್ರಷರ್, 18 ಕ್ವಾರಿ, 2 ಮರಳು (ಸ್ಯಾಂಡ್) ಗುತ್ತಿಗೆ ಪರವಾನಗಿಯನ್ನು ಕಪ್ಪತ್ತಗುಡ್ಡ ಸಂರಕ್ಷಿತ ವನ್ಯಜೀವಧಾಮ ಎಂದು ಘೋಷಣೆ ಆದ ನಂತರ 2022 ಡಿಸೆಂಬರ್ 5ರಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ ನೇತೃತ್ವದ ಮತ್ತು ಸಕ್ಷಮ ಪ್ರಾಧಿಕಾರ ಆದೇಶಿಸಿತ್ತು. ನಂತರ ಪರವಾನಿಗೆ ಪಡೆದ ಗಣಿ ಕಂಪನಿಗಳು ನ್ಯಾಯಾಲಯದ ಮೊರೆ ಹೋಗಿ ಇಲಾಖೆಯ ಆದೇಶಕ್ಕೆ ತಡೆ ತರುತ್ತಾರೆ. ಮತ್ತೆ ಒಂದು ವರ್ಷಗಳ ಕಾಲ ಗಣಿಗಾರಿಕೆ ನಡೆಸುತ್ತಾರೆ. ಮತ್ತೆ ಕಪ್ಪತ್ತಗುಡ್ಡ ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ ಮಾಡುವಂತಿಲ್ಲ ಎಂಬ ನ್ಯಾಯಾಲಯ ಆದೇಶ ಹೊರಡಿಸಿದ ನಂತರವೂ ಲೈಸೆನ್ಸ್ ಪಡೆದು ನ್ಯಾಯಾಂಗ ಹೋರಾಟ ಮಾಡುತ್ತಾ ಬಂದಿದ್ದರು. ಈಗ ಅಂತಿಮವಾಗಿ ಕಪ್ಪತ್ತಗುಡ್ಡ ರಕ್ಷಣೆಗೆ ಕಾನೂನಿನ ಬೇಲಿ ಹಾಕಲಾಗಿದೆ.

> ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿನ ಜನರು ಯಾವುದೇ ವದಂತಿಗಳಿಗೆ ಕಿವಿಗೊಡದೆ ಆತಂಕಗೊಳ್ಳಬಾರದು. ಇದರಿಂದಾಗಿ ಯಾವುದೇ ನಿಬಂಧಿತ ಚಟುವಟಿಕೆ ನಡೆಯದಂತಾಗಿದೆ. ಇದರಿಂದ ಮಾನವ ಮತ್ತು ವನ್ಯಜೀವಿ ಹಸ್ತ ಕ್ಷೇಪಕ್ಕೆ ತಡೆ ಒಡ್ಡಿದಂತಾಗಿದೆ.
> –ಮಂಜುನಾಥ ನಾಯಕ ಜೀವವೈವಿಧ್ಯ ಸಂಶೋಧಕರು

> ಕಪ್ಪತಗುಡ್ಡ ಪರಿಸರ ಸೂಕ್ಷ್ಮ ಪ್ರದೇಶ ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗಿದೆ. ಆದರೆ ಕೃಷಿ ಚಟುವಟಿಕೆ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಇದು ಒಳ್ಳೆಯ ಬೆಳವಣಿಗೆ.
> –ಸಂತೋಷಕುಮಾರ ಡಿಸಿಎಫ್, ಗದಗ

ವನ್ಯಜೀವಿಧಾಮ

ಕಪ್ಪತಗುಡ್ಡ ಒಡಲಿನಲ್ಲಿ ಹಾಗೂ ಸುತ್ತಮುತ್ತ ಸಾಕಷ್ಟು ಪ್ರಮಾಣ ಖನಿಜ ಸಂಪನ್ಮೂಲ ಇದೆ ಹೆಮಟೈಟ್, ಲಿಮೋನೈಟ್, ತಾಮ್ರ, ಮ್ಯಾಂಗನೀಸ್ ಮತ್ತು ಚಿನ್ನ ಸೇರಿದಂತೆ ಹಲವು ಖನಿಜಗಳಿವೆ. ಅಲ್ಲದೆ ಸುತ್ತಮುತ್ತ ಕಲ್ಲಿನ ಗುಡ್ಡಗಳು ಹೆಚ್ಚಾಗಿ ಕಂಡು ಬರುತ್ತವೆ. ತುಂಗಭದ್ರಾ ನದಿ ಕಪ್ಪತಗುಡ್ಡದ ಬಳಿ ಹರೊಯುತ್ತಿದ್ದು ಸಾಕಷ್ಟು ಪ್ರಮಾಣದಲ್ಲಿ ಮರಳು ಇಲ್ಲಿ ಸಿಗುತ್ತದೆ. ಈ ಸಂಪತ್ತಿನ ಮೇಲೆ ಹಿಂದಿನಿಂದಲೂ ಗಣಿ ಧಣಿಗಳ ಕಣ್ಣುಬಿದ್ದಿತ್ತು. ಕಪ್ಪತಗುಡ್ಡವನ್ನು ಸಂರಕ್ಷಿಸಲು ಜಿಲ್ಲೆಯ ಹಾಗೂ ರಾಜ್ಯದ ವಿವಿಧ ಸ್ವಾಮೀಜಿಗಳು, ಹೋರಾಟಗಾರರು, ಚಿಂತಕರು, ಪರಿಸರ ಪ್ರೇಮಿಗಳು, ಕನ್ನಡ ಪರ ಸಂಘಟನೆಗಳ ಹೋರಾಟಗಾರರು ಒಗ್ಗೂಡಿ ಹೋರಾಟ ಮಾಡುತ್ತಾ ಬಂದಿದ್ದಾರೆ. ಈ ಹೋರಾಟಕ್ಕೆ ಕಪ್ಪತಗುಡ್ಡವನ್ಯಜೀವಿಧಾಮ ಎಂದು ಕರ್ನಾಟಕ ಸರಕಾರದಿಂದ 2019ರಲ್ಲಿ ಅಧಿಸೂಚನೆ ಹೊರಡಿಸಿತು. ಇದರಿಂದ ಹೋರಾಟಕ್ಕೆ ಜಯ ಸಿಕ್ಕಿತು.

ಕೇಂದ್ರದ ಅಂತಿಮ ಮುದ್ರೆ

ಜಿಲ್ಲೆಯ ಕಪ್ಪತ್ತಗುಡ್ಡ ವನ್ಯಜೀವಿಧಾಮದ 322 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ನಿಗದಿಪಡಿಸಿ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಕರಡು ಅಧಿಸೂಚನೆ ಹೊರಡಿಸಿದೆ. ಆಕ್ಷೇಪಣೆ ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಲಾಗಿತ್ತು ನಂತರ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಿದೆ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕಂದಾಯ ಗ್ರಾಮಗಳ 298.89 ಚದರ ಕಿ.ಮೀ. ಹಾಗೂ ಅಧಿಸೂಚಿತ ಅರಣ್ಯ ಪ್ರದೇಶಗಳ 23.80 ಕಿ.ಮೀ ಸೇರಿವೆ. ಈ ಪ್ರದೇಶದಲ್ಲಿ 62 ಗ್ರಾಮಗಳು ಬರಲಿವೆ. ಪರಿಸರ ಸೂಕ್ತ ಪ್ರದೇಶವನ್ನು ಕನಿಷ್ಠ ಒಂದು ಕಿ.ಮೀ ಯಿಂದ ಗರಿಷ್ಠ 4.30 ಕಿ.ಮೀ ವರೆಗೆ ಗುರುತಿಸಲಾಗಿದೆ. ಉತ್ತರ ದಿಕ್ಕಿನಲ್ಲಿ 1 ಕಿ.ಮೀ. ಯಿಂದ 3.25 ಕಿ.ಮೀ ವರೆಗೆ, ಪಶ್ಚಿಮ ದಿಕ್ಕಿನಲ್ಲಿ 1 ಕಿ.ಮೀ.ಯಿಂದ 4.30 ಕಿ.ಮೀ ವರೆಗೆ, ವಾಯವ್ಯ ದಿಕ್ಕಿನಲ್ಲಿ 1.96 ಕಿ.ಮೀ ವರೆಗೆ ಪರಿಸರ ಸೂಕ್ಷ್ಮ ಪ್ರದೇಶವೆಂದು ನಿಗದಿಪಡಿಸಲಾಗಿದ್ದು, ಉಳಿದ ದಿಕ್ಕುಗಳಲ್ಲಿ 1 ಕಿ.ಮೀ. ಮಾತ್ರ ಇದೆ.

ಗಣಿಗಾರಿಕೆ ಪೂರ್ಣ ನಿಷೇಧ

ಇಲ್ಲಿ ಗಣಿಗಾರಿಕೆ, ಕಲ್ಲುಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆಯನ್ನು ಪೂರ್ಣ ನಿಷೇಧಿಸಲಾಗುತ್ತದೆ. ಅಲ್ಲದೆ ಹೋಟೆಲ್, ರೆಸಾರ್ಟ್ ಮತ್ತು ವನ್ಯಜೀವಿಗಳಿಗೆ ತೊಂದರೆ ಯಾಗುವ ಎಲ್ಲಾ ಚಟುವಟಿಕೆಗಳಿಗೆ ಕಡಿವಾಣ ಬಿದ್ದಂತಾಗಿದೆ. ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಚಟುವಟಿಕೆ ನಿಯಂತ್ರಿಸ ಲಾಗುತ್ತದೆ. ಪರಿಸರಕ್ಕೆ ಹಾನಿಯಾಗದಂತೆ ನೋಡಿಕೊಳ್ಳಲಾಗುತ್ತದೆ.

ಕೃಷಿಗೆ ಯಾವುದೇ ಭಂಗವಿಲ್ಲ

ಪರಿಸರ ಸೂಕ್ಷ್ಮ ವಲಯಗಳ ಘೋಷಣೆಯ ಉದ್ದೇಶವೆಂದರೆ, ಆ ವಲಯಗಳಲ್ಲಿ ಕೃಷಿ ಹೊರತು ಪಡಿಸಿ, ಮಾನವ ಚಟುವಟಿಕೆಗಳನ್ನು ನಿಷೇಧಿಸು ವುದು. ಸಮುದಾಯಗಳ ಜೀವನೋಪಾಯದ ಮೇಲೆ ಪರಿಣಾಮ ಬೀರಬಹುದು. ಆದರೆ ಸಂರಕ್ಷಣೆ ಮತ್ತು ಅಭಿವೃದ್ಧಿಯ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಮುಖ್ಯ ವಾಗಿದ್ದು, ಪರಿಸರ ವ್ಯವಸ್ಥೆ ಮತ್ತು ಜೀವವೈವಿಧ್ಯತೆ ಯನ್ನು ರಕ್ಷಿಸುವುದು, ಸೂಕ್ಷ್ಮ ವಲಯಗಳಾಗಿ ಕಾರ್ಯನಿರ್ವಹಿಸುವುದು ಇದರಿಂದ ಮಾನವ ಮತ್ತು ವನ್ಯಜೀವಿ ಹಸ್ತಕ್ಷೇಪಕ್ಕೂ ತಡೆ ಒಡ್ಡಿದಂತಾಗಿದೆ.

ಸ್ಪಷ್ಟನೆ

19-06-2025ರ ವಿಶ್ವವಾಣಿಯ 'ಉದ್ಯೋಗ ಮಾಹಿತಿ' ಅಂಕಣದಲ್ಲಿ (ಪುಟ-10) 'ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 586 ಹುದ್ದೆಗಳಿಗೆ ಅರ್ಜಿ ಆಹ್ವಾನ' ಶೀರ್ಷಿಕೆಯ ಸುದ್ದಿ ಪ್ರಕಟವಾಗಿದೆ. ಇದು 2024ನೇ ವರ್ಷದ ಅಧಿಸೂಚನೆಯಾಗಿದ್ದು, ಯಾವುದೇ ಹೊಸ ನೇಮಕಾತಿ ಆದೇಶ ಇರುವುದಿಲ್ಲ ಎಂದು ಬ್ಯಾಂಕ್ ಸ್ಪಷ್ಟಪಡಿಸಿದೆ. ಉದ್ಯೋಗಾಕಾಂಕ್ಷಿಗಳು ಗಮನಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ, ಪ್ರಮಾದಕ್ಕೆ ವಿಷಾದಿಸುತ್ತೇವೆ.

–ಸಂಪಾದಕ

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ಗ್ರಾಮೀಣಾಭಿವೃದ್ಧಿಗೆ ಪಣ ತೊಟ್ಟ ಮನುವಿಕಾಸ ಸಂಸ್ಥೆ!

ಗ್ರಾಮಗಳು ಅಭಿವೃದ್ಧಿಯಾದರೆ ದೇಶವೇ ಪ್ರಗತಿ ಪಥದಲ್ಲಿ ದಾಪುಗಾಲಿಡುತ್ತದೆ. ಗ್ರಾಮೀಣ ವಿಕಾಸವನ್ನೇ ಧ್ಯೇಯವಾಗಿಟ್ಟುಕೊಂಡು ಕಾರ್ಯಪ್ರವೃತ್ತವಾಗಿರುವ ಸ್ವಯಂ ಸೇವಾ ಸಂಸ್ಥೆಯೇ ಮನುವಿಕಾಸ. ಈ ಸಂಸ್ಥೆಯ ರೂವಾರಿ ಕರ್ಜಗಿಯ ಗಣಪತಿ ಭಟ್ ಅವರ ಅವಿರತ ಸೇವೆಯು ಅನುಪಮ. ಈ ಸಂಸ್ಥೆಗೆ ಇತ್ತೀಚೆಗೆ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿ ನೀಡಿ, ರಷ್ಯಾದಲ್ಲಿ ನಡೆದ ಸಮಾರಂಭದಲ್ಲಿ ಗೌರವಿಸಲಾಯಿತು.

• ಕೇಶವ್ ಪ್ರಸಾದ್

ಶಿಕ್ಷಣ, ಪರಿಸರ ಮತ್ತು ಗ್ರಾಮೀಣ ಅಭಿವೃದ್ಧಿ ಪರ ವ್ಯಾಪಕವಾಗಿ ಸೇವೆ ಸಲ್ಲಿಸುತ್ತಿರುವ 'ಮನು ವಿಕಾಸ ಸಂಸ್ಥೆ'ಯು ಉತ್ತರ ಕನ್ನಡ, ಶಿವಮೊಗ್ಗ, ಹಾವೇರಿ ಮತ್ತು ಉಡುಪಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬಡತನ ನಿವಾರಣೆ, ಪರಿಸರ ಸಂರಕ್ಷಣೆ, ಜಲ ಮೂಲಗಳ ಪುನಶ್ಚೇತನ, ಮಹಿಳಾ ಸಬಲೀಕರಣ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಜನ ಜಾಗೃತಿ, ಮಕ್ಕಳ ಹಕ್ಕು ಮತ್ತು ಮಾನವ ಹಕ್ಕುಗಳ ಅನುಷ್ಠಾನ, ಉದ್ಯೋಗ ಸೃಷ್ಟಿ, ಆರೋಗ್ಯ ಸೇವೆ ಮೊದಲಾದ ಹಲವಾರು ಆಯಾಮಗಳಲ್ಲಿ ಗ್ರಾಮೀಣ ಭಾಗದ ಸೇವೆ ಸಂಸ್ಥೆ ಮಾಡುತ್ತದೆ.

ಮನುವಿಕಾಸ ಸಂಸ್ಥೆಯ ಸಾಧನೆಗಳು

- ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಲ್ಲಿ 4000 ಗುಂಡಿ, ಹೊಂಡಗಳನ್ನು ಅಭಿವೃದ್ಧಿಪಡಿಸಿದೆ. ಪ್ರತಿ ವರ್ಷ ಸರಾಸರಿ 2400 ಮಿಲಿಯನ್ ಲೀಟರ್ ನೀರಿನ ಶೇಖರಣಾ ಸಾಮರ್ಥ್ಯ ಹೆಚ್ಚಿಸಲಾಗಿದೆ.
- ಸುಮಾರು 3 ರಿಂದ 30 ಎಕರೆ ವಿಸ್ತೀರ್ಣದ 315 ಮಧ್ಯಮ ಮತ್ತು ದೊಡ್ಡ ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದ್ದು, 90,790 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದೆ.
- ಒಟ್ಟು 3000 ಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳು ಮತ್ತು 1000ಕ್ಕೂ ಅಧಿಕ ಜಂಟಿ ಹೊಣೆಗಾರಿಕೆ ಗುಂಪುಗಳ (ಜೆ.ಎಲ್.ಜೆ) ಮೂಲಕ ಆದಾಯ ಉತ್ಪಾದನೆ ಚಟುವಟಿಕೆಗಳಿಗಾಗಿ 10000 ಕುಟುಂಬಗಳಿಗೆ 50 ಕೋಟಿ ರುಪಾಯಿ ಕಿರು ಬಂಡವಾಳವನ್ನು ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ.
- 3000 ಬಡ ಮತ್ತು ಅನಾಥ ಮಕ್ಕಳಿಗೆ ಕಲಿಕಾ ಸಾಮಾಗ್ರಿಗಳು, ಮೂಲಭೂತ ಅಗತ್ಯ ಸಾಮಾಗ್ರಿಗಳು ಮತ್ತು ವಿದ್ಯಾರ್ಥಿ ವೇತನವನ್ನು ಒದಗಿಸಲಾಗಿದೆ.
- ಡ್ರೈವಿಂಗ್, ಕಂಪ್ಯೂಟರ್, ಬ್ಯುಟೀಷಿಯನ್, ಕೇಟರಿಂಗ್, ಡೇರಿ, ಹೊಲಿಗೆ ಕುರಿತು 8400 ಮಹಿಳೆಯರಿಗೆ ಕೌಶಲ ತರಬೇತಿಯನ್ನು ನೀಡಲಾಗಿದೆ.
- 'ಇಂಟರ್‌ನೆಟ್ ಸಾಥಿ' ಕಾರ್ಯಕ್ರಮದ ಮೂಲಕ 1.79 ಲಕ್ಷ ಗ್ರಾಮೀಣ ಮಹಿಳೆಯರಿಗೆ ಇಂಟರ್ ನೆಟ್ ಸಾಕ್ಷರತೆಯನ್ನು ಒದಗಿಸಲಾಗಿದೆ.
- ಚೌಬೀನೇತರ ಅರಣ್ಯ ಉತ್ಪನ್ನಗಳ ಸಸಿಗಳು ಮತ್ತು ಹಣ್ಣಿನ ಸಸಿಗಳನ್ನು ಸಂಗ್ರಹಿಸಿ 44000 ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ.
- ಸಂಸ್ಥೆಯು ಕೋವಿಡ್- ಸಂದರ್ಭದಲ್ಲಿ ಉತ್ತರಕನ್ನಡ ಜಿಲ್ಲೆಯ 10,000 ಕ್ಕೂ ಹೆಚ್ಚು ಬಡ ಮತ್ತು ಬುಡಕಟ್ಟು ಸಮುದಾಯಗಳಿಗೆ ದಿನಸಿ ಕಿಟ್ ಗಳನ್ನು ವಿತರಿಸಿದೆ.
- ಕೋವಿಡ್ ಕೇರ್ ಆಸ್ಪತ್ರೆಗಳಿಗೆ ಮತ್ತು ಆಶಾ ಕಾರ್ಯಕರ್ತೆಯರು, ಕೋವಿಡ್-19 ಮುಂಚೂಣಿಯ ಯೋಧರು, ಗ್ರಾಮ ಪಂಚಾಯಿತಿಯ ಸದಸ್ಯರು, ಶುಶ್ರೂಷಕಿಯರು ಮತ್ತು ಪಂಚಾಯತ್ ಮಟ್ಟದಲ್ಲಿ ಸ್ವಚ್ಛತಾಕರ್ಮಿಗಳಿಗೆ ಆಕ್ಸಿಜನ್ ಕಾನ್ಸೆಂಟ್ರೇಟರ್‌ಗಳು, ಪಲ್ಸ್ ಆಕ್ಸಿ ಮೀಟರ್‌ಗಳು, ಇನ್ ಫ್ರಾರೆಡ್ ಥರ್ಮೋ ಮೀಟರ್‌ಗಳು, ಎನ್-95 ಮಾಸ್ಕ್‌ಗಳು, ಕೈಗವಸುಗಳು, ಹ್ಯಾಂಡ್ ಸ್ಯಾನಿಟರ್‌ಗಳು, ಒಂದು ಬಾರಿ ಬಳಸುವಂತಹ ಬೆಡ್ ಶೀಟ್‌ಗಳು, ದಿಂಬಿನ ಕವರ್ ಇತ್ಯಾದಿ ವಸ್ತುಗಳ ನೆರವನ್ನು ನೀಡಿದೆ.
- 35 ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಅಭಿಯಾನವನ್ನು ಆಯೋಜಿಸಲಾಗಿದೆ.
- ಸಿದ್ದಾಪುರ ತಾಲ್ಲೂಕಿನ ಕರ್ಜಗಿ ಗ್ರಾಮದಲ್ಲಿ ಜಲ ಮತ್ತು ಪರಿಸರ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗಿದೆ.
- ಸಿದ್ದಿ ಬುಡಕಟ್ಟು ಸಮುದಾಯದ ಆಸ್ತಿಗಳನ್ನು ಸಂರಕ್ಷಿಸಲು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.
- 6,000 ಕುಟುಂಬಗಳಿಗೆ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಉದ್ಯೋಗ ಪಡೆಯಲು ಸಹಕರಿಸಲಾಗಿದೆ.

ಮನುವಿಕಾಸದ ಯಶಸ್ಸು

80000	4000	315	38455	3000	37900	65000	1000	8400	30000	3
ಕುಟುಂಬಗಳಿಗೆ ಸೇವೆ.	ಕೃಷಿ ಹೊಂಡಗಳ ಅಭಿವೃದ್ಧಿ	ಕೆರೆಗಳ ಅಭಿವೃದ್ಧಿ	ಕೃಷಿಕರಿಗೆ ಸೌಲಭ್ಯ	ವಿದ್ಯಾರ್ಥಿಗಳಿಗೆ ನೆರವು	ಎಕರೆ ಜಮೀನಿಗೆ ನೀರಾವರಿ	ಮಹಿಳಾ ಫಲಾನುಭವಿಗಳು	ಬುಡಕಟ್ಟು ಕುಟುಂಬಗಳಿಗೆ ನೆರವು	ಮಹಿಳೆಯರಿಗೆ ಕೌಶಲ ತರಬೇತಿ	ಎಕರೆ ಸಾಮಾನ್ಯ ಭೂಮಿ ಗುರುತಿಸುವಿಕೆ	ನದಿಗಳ ಪುನಶ್ಚೇತನ

ಜಲ-ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ

ಮನು ವಿಕಾಸ ಸಂಸ್ಥೆಯು ಸಣ್ಣ ಕೆರೆ ಮತ್ತು ನೈಸರ್ಗಿಕ ಜಲ ಸಂರಕ್ಷಣೆಗೆ ಕೆರೆಗಳ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡಿದೆ. ಕೆರೆಗಳನ್ನು ಅಭಿವೃದ್ಧಿಪಡಿಸಿದ ಬಳಿಕ ರೈತರಿಗೆ ಕೃಷಿ ಇಳುವರಿಯನ್ನು ಹೆಚ್ಚಿಸಲು ಮತ್ತು ಕೃಷಿ ಆಧಾರಿತ ಆದಾಯ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಮನು ವಿಕಾಸ ಸಂಸ್ಥೆಯು ಬಡ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಗಮನ ನೀಡುತ್ತದೆ. ನಿರ್ಗತಿಕ ಮತ್ತು ಬಡ ಮಕ್ಕಳನ್ನು ಗುರುತಿಸಿ ಅವರಿಗೆ ಪಠ್ಯಪುಸ್ತಕ, ಬಟ್ಟೆಗಳು ಮತ್ತು ದಿನ ನಿತ್ಯ ಬಳಕೆಯ ವಸ್ತುಗಳನ್ನು ವಿತರಿಸಲಾಗುತ್ತದೆ.

ಮನುವಿಕಾಸದ ರೂವಾರಿ ಕರ್ಜಗಿಯ ಗಣಪತಿ ಭಟ್

ಮನುವಿಕಾಸ ಸಂಸ್ಥೆಯು ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವಲ್ಲಿ, ಅದರ ರೂವಾರಿಯ ರೂಪದಲ್ಲಿ ಕರ್ಜಗಿಯ ಗಣಪತಿ ಭಟ್ ಅವರು ಮಾಡಿದ ಕೆಲಸ ಅಪಾರ. ಹಳ್ಳಿಗಳ ಅಭಿವೃದ್ಧಿಗೆ ಈ ಭಟ್ಟರದ್ದು ಮುಡಿಪಾಗಿರುವ ಬದುಕು. ತಮ್ಮ ಈ ಕೆಲಸಗಳನ್ನು ನಿರ್ವಹಿಸಲು 50 ಮಂದಿ ಉದ್ಯೋಗಿಗಳಿರುವ ಮನು ವಿಕಾಸ ಟೀಮ್ ಕಟ್ಟಿದ್ದಾರೆ. ಅಷ್ಟೇ ಅಲ್ಲ 100 ಮಂದಿ ಸ್ವಯಂಸೇವಕರ ತಂಡ ಕಟ್ಟಿಕೊಂಡು, ತಾವು ಸೇನಾಪತಿಯಂತೆ ಜೀವ ಜಲ ನೆಲ ಎನ್ನುತ್ತಾ ಸದಾ ಸಂಚಾರಿಯಾಗಿ ಜಂಗಮರಾಗಿದ್ದಾರೆ. ಮನುವಿಕಾಸದಿಂದ ಇವರು ಮಹಿಳಾ ಸಬಲೀಕರಣಕ್ಕೆ ಮೊದಲ ಆದ್ಯತೆ ನೀಡಿದ್ದರು. ಮಂಚಿಕೇರಿಯಲ್ಲಿ ಇವರು ಸಿದ್ದಿ ಮಹಿಳೆಯರಿಗೇ ತರಬೇತಿ ನೀಡಿ, ಅಲ್ಲಿ ಸೂಪರ್ ಮಾರ್ಕೆಟ್‌ನ್ನು ಅವರೇ ನಡೆಸುವಂತಾಗಿರುವುದು, ಮನೆಯಲ್ಲಿ ಬೆಳೆದ ತರಕಾರಿಯನ್ನು ಅಲ್ಲಿ ಅವರಿಗೆ ಮಾರಾಟ ಮಾಡುವುದಕ್ಕೆ ಅವಕಾಶ ನೀಡಿರುವುದು, ಹಪ್ಪಳ, ಸಂಡಿಗೆ, ಚಿಪ್ಸ್‌ನಂತಹ ಅವರ ಗೃಹ ಉದ್ಯಮಕ್ಕೆ ಪ್ರೋತ್ಸಾಹ ನೀಡಿರುವುದು ಮನು ವಿಕಾಸದ ಮಾದರಿ ಪ್ರಯತ್ನ.

21 ವರ್ಷಗಳ ಸೇವೆ

ಕಳೆದ 21 ವರ್ಷಗಳಿಂದ ಮನು ವಿಕಾಸ ಹಳ್ಳಿ ಮಂದಿಯ ಮನೋ ವಿಕಾಸಕ್ಕೂ ಅರ್ಥಪೂರ್ಣ ಕೊಡುಗೆ ಸಲ್ಲಿಸುತ್ತಿರುವುದು ವಿಶೇಷ. ಈ ಪ್ರಯತ್ನದಿಂದಾಗಿ ಹೊಲಿಗೆ ತರಬೇತಿ, ಕೌಶಲ್ಯ ಮತ್ತು ಉದ್ಯೋಗ ತರಬೇತಿ ಪಡೆದು ಎಂಟು ಸಾವಿರಕ್ಕೂ ಅಧಿಕ ನಾರಿಯರು, ಸೀರೆ ಮಣಿಯರು ತಮ್ಮ ಬದುಕನ್ನು ಗಟ್ಟಿಗೊಳಿಸಿಕೊಂಡಿದ್ದಾರೆ. ಸ್ವಸಹಾಯ ಸಂಘಗಳ ಮೂಲಕ 30000ಕ್ಕೂ ಹೆಚ್ಚಿನ ಮಹಿಳೆಯರಿಗೆ ಒಟ್ಟು ಸುಮಾರು 175 ಕೋಟಿ ರೂಪಾಯಿ ಸಾಲ ಸೌಲಭ್ಯ ನೀಡಿರುವುದು ದೊಡ್ಡ ಸಾಧನೆಯೇ ಸರಿ. 281 ಕೆರೆಗಳನ್ನು ಈಗಾಗಲೇ ಸ್ಥಳೀಯ ರೈತರ ಸಹಭಾಗಿತ್ವದೊಂದಿಗೆ ಹೂಳೆತ್ತಿ, ಅಲ್ಲಿ ಜೀವ ಜಲದ ಒರತೆ ಹೆಚ್ಚಿಸಲಾಗಿದ್ದು, ಈ ಕೆರೆಗಳ ಅಕ್ಕಪಕ್ಕದಲ್ಲಿರುವ ರೈತರು ಕುಡಿಯುವ ನೀರು ಮತ್ತು ಜಮೀನುಗಳಿಗೆ ನೀರಾವರಿ ಸೌಲಭ್ಯ ಪಡೆದುಕೊಂಡಿದ್ದಾರೆ.

ಬೆಟ್ಟ ಸಂರಕ್ಷಣಾ ಸಮಿತಿ

ಗಣಪತಿ ಭಟ್ಟರ ನೇತೃತ್ವದಲ್ಲಿ 30 ಸಾವಿರ ಎಕರೆಯಷ್ಟು ಬೆಟ್ಟ ಗುರುತಿಸಿ, ಅವುಗಳ ನಕ್ಷೀಕರಣಗೊಳಿಸಿ, ಅನೇಕ ಬೆಟ್ಟ ಸಂರಕ್ಷಣಾ ಸಮಿತಿಗಳನ್ನು ರಚಿಸಿ,ಬೆಟ್ಟದ ಹಿತ ರಕ್ಷಣೆಗಾಗಿ ದೊಡ್ಡ ಬೆಟ್ಟಕ್ಕಿಂತಲೂ ಹೆಚ್ಚಿನ ಕೆಲಸ ಮಾಡಿರುವುದು ಗಣಪತಿ ಭಟ್ಟರ ಯಶೋಗಾಥೆ. ಬಯಲು ಸೀಮೆ ಮತ್ತು ಮಲೆನಾಡಿನ ಹಳ್ಳಿಗಳಲ್ಲಿ ಒಟ್ಟು 10000ಕ್ಕೂ ಹೆಚ್ಚಿನ ಇಂಗು ಗುಂಡಿಗಳನ್ನು, ಇನ್ನೂರಕ್ಕೂ ಅಧಿಕ ದೊಡ್ಡ ನೀರು ಇಂಗಿಸುವ ಘಟಕಗಳನ್ನು, ನಾಲ್ಕು ಸಾವಿರಕ್ಕೂ ಹೆಚ್ಚು ಕೃಷಿ ಹೊಂಡಗಳನ್ನು ನಿರ್ಮಿಸಿರುವಲ್ಲಿ ಭಟ್ಟರ ಸಾಧನಯಿದೆ. ಇಂಥ ರೈತ ಮಿತ್ರ ಯೋಜನೆಗಳನ್ನು ಜಾರಿಗೊಳಿಸುವುದಕ್ಕೆ ಅಜೀಮ್ ಪ್ರೇಮಜಿ ಫೌಂಡೇಶನ್, ನಬಾರ್ಡ್, ಎಚ್ ಡಿ ಬಿ ಫೈನಾನ್ಸಿಯಲ್ ಸರ್ವಿಸ್, ಹುಬ್ಬಳ್ಳಿಯ ದೇಶ ಪಾಂಡೆ ಪ್ರತಿಷ್ಠಾನ, ಕೋಕೋ ಕೋಲಾ ಪ್ರತಿಷ್ಠಾನ ಮುಂತಾದ ಸಂಸ್ಥೆಗಳು ಮನು ವಿಕಾಸಕ್ಕೆ ಧನ ಸಹಾಯ ನೀಡಿವೆ.

ಪ್ರಗತಿ ಮಿತ್ರ ಸೌಹಾರ್ದ ಬ್ಯಾಂಕ್

ಗಣಪತಿ ಭಟ್ಟರು ಮತ್ತು ವಿವೇಕ ಹೆಗಡೆಯವರು ಸೇರಿ ಶಿರಸಿಯಲ್ಲಿ ಸ್ಥಾಪಿಸಿರುವ ಪ್ರಗತಿ ಮಿತ್ರ ಸೌಹಾರ್ದ ಬ್ಯಾಂಕಿನಲ್ಲಿ ನಾಲ್ಕು ಸಾವಿರ ಮಂದಿ ಶೇರುದಾರರಾಗಿ ಪ್ರಯೋಜನ ಪಡೆಯುತ್ತಿದ್ದಾರೆ. ಈಗಾಗಲೇ ಇಲ್ಲಿ ವರ್ಷಕ್ಕೆ ಏಳು ಕೋಟಿ ರೂಪಾಯಿ ವಹಿವಾಟು ನಡೆದು, ಇದರ ಲಾಭವನ್ನು ಸ್ಥಳೀಯ ಭೂ ರಹಿತ ಮಹಿಳೆಯರಿಗೆ ನೀಡುತ್ತಿರುವುದು ವಿಶೇಷ.

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ಗ್ರಾಮೀಣ ಪ್ರದೇಶದಲ್ಲಿ ಮನು ವಿಕಾಸ ಸಂಸ್ಥೆ ನಡೆಸುತ್ತಿರುವ ಸೇವೆಯನ್ನು ಗುರುತಿಸಿ, ಇತ್ತೀಚೆಗೆ ರಷ್ಯಾದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ, ಗಣ್ಯರ ಸಮ್ಮುಖದಲ್ಲಿ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸಂಸ್ಥೆಯ ಪರವಾಗಿ ಗಣಪತಿ ಭಟ್ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಕರ್ನಾಟಕ ಸಂಘ ಕತಾರ್ (ಕೆಎಸ್ ಕ್ಯು) ವತಿಯಿಂದ, ಕತಾರ್‌ನ ಭಾರತೀಯ ಸಾಂಸ್ಕೃತಿಕ ಕೇಂದ್ರದ ಸಭಾಂಗಣದಲ್ಲಿ ಕನ್ನಡದ ಖ್ಯಾತ ಕವಿ ಡಾ. ಎಚ್.ಎಸ್. ವೆಂಕಟೇಶ ಮೂರ್ತಿ ಅವರಿಗೆ ನುಡಿನಮನ ಸಲ್ಲಿಸಿತು. ಜತೆಯಲ್ಲಿ, ಅಹಮದಾಬಾದ್‌ನ ಏರ್ ಇಂಡಿಯಾ ಅಪಘಾತ, ಬೆಂಗಳೂರಿನ ಆರ್‌ಸಿಬಿ ವಿಜಯಾಚರಣೆಯ ಕಾಲ್ತುಳಿತ ಮತ್ತು ಕೀನ್ಯಾದ ಬಸ್ ದುರಂತಗಳಂತಹ ಇತ್ತೀಚಿನ ದುರ್ಘಟನೆಗಳಲ್ಲಿ ಜೀವ ಕಳೆದುಕೊಂಡ ಎಲ್ಲರಿಗೂ ಸಂತಾಪವನ್ನೂ ಸೂಚಿಸಲಾಯಿತು.

ಅಜ್ಞಾನದಿಂದ ಅಮೃತವನ್ನು ನಿರಾಕರಿಸಿದ ಉತ್ತುಂಕ

ಕುರುಕ್ಷೇತ್ರ ಯುದ್ಧ ಮುಗಿದು ಪಾಂಡವರಿಗೆ ವಿಜಯ ಲಭಿಸಿದ ಮೇಲೆ ಹಸ್ತಿನಾಪುರಕ್ಕೆ ಧರ್ಮರಾಯ ರಾಜನಾದನು. ಆ ಸಮಯದಲ್ಲಿ ಉತ್ತಂಕನೆನ್ನುವ ಋಷಿ ಶ್ರೀಕೃಷ್ಣನನ್ನು ಭೇಟಿಯಾದನು. ಅವನು ಕೃಷ್ಣನೊಂದಿಗೆ, ದೇವಾ! ನಾನು ಯಾವಾಗಲೂ ಕಾಲು ನಡಿಗೆಯಲ್ಲಿ ಪಯಣಿಸುತ್ತಿರುತ್ತೇನೆ. ಮಾರ್ಗಮಧ್ಯದಲ್ಲಿ ದಾಹವುಂಟಾದಾಗ ಅದು ದಟ್ಟ ಕಾಡಾಗಿರಲಿ ಅಥವಾ ಮರುಭೂಮಿಯಾಗಿರಲಿ ನನಗೆ ನೀರು ಸಿಗುವಂತೆ ಮಾಡು ಎಂದು ಬೇಡಿಕೊಂಡನು. ಶ್ರೀಕೃಷ್ಣನು ಅದಕ್ಕೆ ತಥಾಸ್ತು ಅಂದನು. ಉತ್ತಂಕನು ಒಂದು ದಿನ ದೊಡ್ಡ ಮರುಭೂಮಿಯೊಂದರ ಮೂಲಕ ನಡೆದುಕೊಂಡು ಹೋಗುತ್ತಿದ್ದ. ಸ್ವಲ್ಪ ಸಮಯಕ್ಕೆ ಅವನಿಗೆ ದಾಹವುಂಟಾಯಿತು. ಅವನು ನೀರಿಗಾಗಿ ಹುಡುಕಾಡಿ ಕಂಗಾಲಾದ. ಕಡೆಗೆ ಕೃಷ್ಣನು ತನಗಿತ್ತ ವರವನ್ನು ಅವನು ಜ್ಞಾಪಿಸಿಕೊಂಡ.

ಆಗ ಅವನ ಎದುರಿಗೆ ಒಬ್ಬ ಬೇಟೆಗಾರ ಬಂದನು. ಅವನ ಬಟ್ಟೆಬರೆಗಳು ಅಲ್ಲಲ್ಲಿ ಹರಿದು ಹೋಗಿ, ಮಾಸಿ ದೂಳುದೂಳಾಗಿದ್ದವು. ನಿಮಗೆ ನೀರಡಿಕೆಯಾದಂತೆ ತೋರುತ್ತದೆ. ಈ ಬೊಂಬಿನ ಕೊಳವೆಯಲ್ಲಿ ನೀರಿದೆ ಅದನ್ನು ಕುಡಿಯಿರಿ ಎಂದು ಹೇಳಿದನು. ಉತ್ತಂಕನು ಆ ಬೇಟೆಗಾರನೆಡೆಗೆ ಸಂದೇಹದಿಂದ ನೋಡಿದನು. ಮಲಿನ ಬಟ್ಟೆ ಧರಿಸಿದ ಆ ಬೇಟೆಗಾರ ತಂದ ನೀರನ್ನು ಅದು ಹೇಗೆ ತಾನೇ ನೀರು ಕುಡಿಯಬಲ್ಲೆ? ಎಂದು ಅವನು ಭಾವಿಸಿ, ನನಗೆ ದಾಹವೇನೂ ಆಗಿಲ್ಲ ಎಂದು ಹೇಳಿದ. ಆ ಬೇಟೆಗಾರನು ನಾನಾ ವಿಧವಾಗಿ ಬೇಡಿಕೊಂಡರೂ ಉತ್ತಂಕನು ಅವನ ಕೈಯಿಂದ ನೀರನ್ನು ಸ್ವೀಕರಿಸಲು ಒಪ್ಪಿಕೊಳ್ಳಲಿಲ್ಲ. ಆಗ ಆ ಬೇಟೆಗಾರ ಅಲ್ಲಿಂದ ಅದೃಶ್ಯವಾದನು.

ಆಗ ಉತ್ತಂಕನಿಗೆ ತಾನು ಮಾಡಿದ ಅಚಾತುರ್ಯದ ಅರಿವಾಯಿತು. ಕೃಷ್ಣಾ! ನೀನು ಕೊಟ್ಟ ನೀರನ್ನು ಕುಡಿಯಲು ನಿರಾಕರಿಸಿ ಎಂತಹ ಅಪರಾಧ ಮಾಡಿದೆ ಎಂದು ಉತ್ತಂಕನು ಪರಿಪರಿಯಾಗಿ ದುಃಖಿಸಿದ. ಆಗ ಕೃಷ್ಣನು ಅವನ ಮುಂದೆ ಪ್ರತ್ಯಕ್ಷನಾದನು. ಉತ್ತಂಕನು ಅವನ ಪಾದಗಳಿಗೆ ಸಾಷ್ಟಾಂಗವೆರಗಿ, ದೇವಾ! ನೀನು ಈ ವಿಧವಾಗಿ ನನ್ನನ್ನು ಪರೀಕ್ಷಿಸುವುದು ನಿನಗೆ ತರವೇ? ಎಂದು ಪ್ರಶ್ನಿಸಿದನು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅದಕ್ಕೆ ಕೃಷ್ಣನು ನಗುತ್ತಾ ನಿನಗೆ ಅಮೃತವನ್ನು ಕೊಡು ಎಂದು ಇಂದ್ರನಿಗೆ ಹೇಳಿದ್ದೆ. ಅವನು ಒಬ್ಬ ಮಾನವನಿಗೆ ಅಮೃತವನ್ನು ಕೊಡಲಾರೆನೆಂದ. ಆದರೆ ನಿನಗೆ ಅಮೃತವನ್ನು ಕೊಡಲು ಅವನನ್ನು ಒಪ್ಪಿಸಿದ್ದೆ. ಅದಕ್ಕೆ ಇಂದ್ರನು 'ಮಲಿನ ಬಟ್ಟೆ ಧರಿಸಿದ ಒಬ್ಬ ಬೇಟೆಗಾರನೊಡನೆ ಅಮೃತವನ್ನು ಕಳುಹಿಸುತ್ತೇನೆಂದೂ, ಮಾನವರೆಲ್ಲರೂ ಒಂದೇ ಎಂದು ಭಾವಿಸಿ ಅವನು ಕೊಟ್ಟ ಅಮೃತವನ್ನು ಉತ್ತಂಕನು ಕುಡಿದರೆ ಸರಿ, ಇಲ್ಲದೇ ಹೋದರೆ ಆ ಅಮೃತವನ್ನು ಹಿಂದಕ್ಕೆ ತರಿಸಿಕೊಳ್ಳುತ್ತೇನೆ' ಎನ್ನುವ ನಿಬಂಧನೆಯನ್ನು ವಿಧಿಸಿದ. ನೀನು ಅಜ್ಞಾನದಿಂದ ಅಮೃತವನ್ನು ಕುಡಿಯುವ ಅವಕಾಶವನ್ನು ಕಳೆದುಕೊಂಡೆ ಎಂದು ಹೇಳಿದನು. ಇದನ್ನು ಕೇಳಿ ಋಷಿ ಉತ್ತುಂಕನಿಗೆ ತನ್ನ ತಪ್ಪಿನ ಅರಿವಾಗಿ ಕೈಮುಗಿದು ಕ್ಷಮೆಯಾಚಿಸಿದನು.

ಮುನಿಗೆ ನೀರು ಒದಗಿಸುವ ತನ್ನ ವರವನ್ನು ಉಳಿಸಿಕೊಳ್ಳುವುದಾಗಿ ಕೃಷ್ಣನು ಭರವಸೆ ನೀಡಿದನು. ನಂತರ ಉತ್ತಂಕನ ಆಜ್ಞೆಯ ಮೇರೆಗೆ ಮಳೆ ಮೋಡಗಳು, ಮರುಭೂಮಿಯಲ್ಲೂ ಮಳೆ ಸುರಿಯುತ್ತವೆ ಎಂದು ಆಶೀರ್ವದಿಸಿದನು. ಈ ಮೋಡಗಳು ಇಂದಿಗೂ ವಿರಳವಾಗಿ ಕಾಣಿಸಿಕೊಳ್ಳುತ್ತವೆ ಮತ್ತು ಮರುಭೂಮಿಯಲ್ಲಿ ಮಳೆ ಮೋಡಗಳನ್ನು ಸುರಿಸುತ್ತವೆ. ಮರಳುಗಾಡಿನಲ್ಲಿ ಅಪರೂಪಕ್ಕೆ ಮಳೆ ಸುರಿಸುವ ಈ ಮೋಡಗಳನ್ನು ಉತ್ತಂಕನ ಮೋಡಗಳು (ಉತ್ತಂಕ ಮೇಘ) ಎಂದು ಕರೆಯಲಾಗುತ್ತದೆ.

ಜೀವನದಲ್ಲಿ ಕೆಲವೊಮ್ಮೆ ಅಜ್ಞಾನದಿಂದ ಬಂದ ಅವಕಾಶಗಳನ್ನು ನಾವು ಕೂಡ ಇದೇ ರೀತಿ ಕಳೆದುಕೊಳ್ಳುತ್ತೇವೆ. ಯಾವುದಕ್ಕಾಗೋ ಕಾಯುತ್ತಾ ಕುಳಿತು ಕಣ್ಣ ಮುಂದೆ ಇರುವ ಚಿನ್ನದಂತಹ ಅವಕಾಶಗಳನ್ನ ಕೈ ಬಿಟ್ಟುಬಿಡುತ್ತೇವೆ. ಆದ್ದರಿಂದಲೇ ಬದುಕಿಗೆ ಸವಾಲುಗಳನ್ನು ಹಾಕಬೇಡಿ. ಕೆಲವೊಮ್ಮೆ ನಮಗೆ ಸಿಕ್ಕ ಚಿಕ್ಕ ಅವಕಾಶವೇ, ಮುಂಬರುವ ದಿನಗಳಲ್ಲಿ ನಮಗೆ ಅಭಿವೃದ್ಧಿಯ ದೊಡ್ಡ ಬಾಗಿಲಾಗಬಹುದು. ಯಾವ ಕೆಲಸವೂ ಚಿಕ್ಕದಲ್ಲ ಯಾವುದೂ ದೊಡ್ಡದಲ್ಲ, ಆ ಕೆಲಸ ಮಾಡಿದ ಅನುಭವ ಎಲ್ಲಕ್ಕಿಂತ ದೊಡ್ಡದು. ಆದ್ದರಿಂದಲೇ ವ್ಯಕ್ತಿಗಳ ಬಗ್ಗೆ ಮಾಡುವ ಕೆಲಸದ ಬಗ್ಗೆ ಮೇಲು-ಕೀಳು ಎನ್ನುವ ಭಾವ ಇಲ್ಲದೆ ಎಲ್ಲವನ್ನು, ಎಲ್ಲರನ್ನೂ ಸಮಾನವಾಗಿ ಗೌರವಿಸುವ ಗುಣ ಬೆಳೆಸಿಕೊಳ್ಳೋಣ.

ದೇವರ ಆಟದಲ್ಲಿ ನಾವೆಲ್ಲಾ ಕಾಲಾಳುಗಳು!

**ಆಶೆ ಬಲೆಯನು ಬೀಸಿ, ನಿನ್ನ ತನ್ನೆಡೆಗೆಳೆದು
ಘಾಸಿ ನೀಂ ಬಡುತ ಬಾಯ್ಬಿಡಲೋರೆ ನೋಡಿ
ಮೈಸವರಿ ಕಾಲನೆಡವಿಸಿ, ಗುಟ್ಟನಲಿ ನಗುವ
ಮೋಸದಾಟವೂ ದೈವ - ಮಂಕುತಿಮ್ಮ||**

ಮನುಷ್ಯನ ಮನಸ್ಸಿನಲ್ಲಿ ಆಸೆಯೆಂಬ ಬಲೆಯನ್ನು ಬೀಸಿ, ಮನದಲ್ಲಿ ಆಸೆಗಳು ಚಿಗುರುವಂತೆ ಮಾಡಿ, ಅವುಗಳ ಪೂರೈಕೆಗಾಗಿ ಹಿಂದೋಡುವಂತೆ ಮಾಡಿ, ಆಸೆಗಳ ಸಫಲತೆಗಾಗಿ ಪಡಬಾರದ ಕಷ್ಟಗಳನ್ನುಂಟು ಮಾಡಿ, ನಾವು ಪಡುವ ಕಷ್ಟಗಳನ್ನು ಓರೆಗಣ್ಣಿನಿಂದ ನೋಡುತ್ತಾ, ಮೈದಡವಿದಂತೆ ಮಾಡಿ, ಮತ್ತೆ ನಾವು ಆಸೆಗಳ ಮೋಹಪಾಶದಲ್ಲಿ ಎಡವಿ ಬೀಳುವಂತೆ ಮಾಡುತ್ತಾ, ಗುಟ್ಟಿನಲ್ಲಿ ನಗುವಂಥಹ ದೇವರ ಆಟವೊಂದು ಮೋಸದಾಟ ಎಂದು ಈಪದ್ಯದಲ್ಲಿ ಹೇಳಿದ್ದಾರೆ.

ಮನುಷ್ಯನ ದೇಹ ಭೌತಿಕವಾದದ್ದು, ಇದರೊಳಗೊಂದು ಚೈತನ್ಯಭರಿತವಾದ ಮನಸ್ಸು ಎಂಬ ಚೇತನ. ಮನಸ್ಸಿಗೆ ಆಸೆಗಳನ್ನು ಹುಟ್ಟಿಸುವಂತಹುದು ನಮ್ಮ ಇಂದ್ರಿಯಗಳು. ಇಂದ್ರಿಯಗಳ ಇಚ್ಚೆಯಂತೆ ಮನಸ್ಸು ಆಸೆಗಳ ಹಿಂದೆ ಓಡುತ್ತಲೇ ಇರುತ್ತದೆ. ಇಂಥಹ ಆಸೆಗಳನ್ನಾದರೂ ಆ ಭಗವಂತನ ಮನುಷ್ಯನ ಮನದಲ್ಲಿಟ್ಟಿದ್ದು, ಆ ಆಸೆಗಳ ಬಲೆಯಲ್ಲಿ ಬಂಧಿಯಾಗಿದ್ದಾನೆ.

ಮನದಲ್ಲಿ ಉದ್ಭವಿಸುವ ಆಸೆಗಳ ಪೂರೈಕೆಗಾಗಿ ಆತನು ಅವಿರತ ಆ ಆಸೆಗಳ ಹಿಂದೆಯೇ ಓಡುತ್ತಾ, ಅವುಗಳ ಸಫಲತೆಗಾಗಿ ಪ್ರಯತ್ನ ಪಡುತ್ತಲೇ ಇರುತ್ತಾನೆ. ಇಂದ್ರಿಯಗಳ ಮೂಲಕ ಮನಸ್ಸಿಗೆ ತಲುಪುವ ಆ ಆಸೆಗಳ ಪೂರೈಕೆಯೇ ಜೀವನದ ಧ್ಯೇಯೋದ್ದೇಶ ಎಂದು ಮನುಷ್ಯನು ಆಸೆಗಳ ಬೆನ್ನು ಹತ್ತಿ ಹೋಗುತ್ತಾನೆ. ಇಂಥಹ ಆಸೆಗಳನ್ನು ಸಫಲತೆ ಮಾಡಿಕೊಳ್ಳಲು ಮನುಷ್ಯನು ಅದೆಷ್ಟು ಕಷ್ಟ ಬೀಳಬೇಕು ? ಆತನ ಆಸೆಗಳು ಪೂರೈಸಿಕೊಂಡಲ್ಲಿ ಮತ್ತೊಂದು ಆಸೆಯು ಆತನ ಮನದಲ್ಲಿ ಚಿಗಿತು ಕೊಂಡಿರುತ್ತದೆ.

ಆಸೆಗಳು ಸಫಲವಾದರೆ ಸಂತೋಷ, ಅದೇ ವಿಫಲವಾದರೆ ನಿರಾಸೆ, ಸಂಕಷ್ಟ, ದುಃಖಗಳು ಉಮ್ಮಳಿಸುತ್ತವೆ. ಆಸೆಗಳು ನಿರಾಸೆಯಾಗಿ ದುಃಖ ಉಮ್ಮಳಿಸಿದಾಗ ಆ ಕಾಣದ ದೈವವು ನಮ್ಮ ಬೆನ್ನ ನೇವರಿಸಿದಂತೆ ನಮಗೆ ನಾವೇ ಸಮಾಧಾನಪಟ್ಟುಕೊಳ್ಳುತ್ತೇವೆ. ಅಷ್ಟರಲ್ಲಾಗಲೇ ಮನದಲ್ಲಿ ಮತ್ತೊಂದು ಆಸೆಯು ಚಿಗಿತು ಅದರ ಸಫಲತೆಗೆ ಹಾತೊರೆಯುತ್ತೇವೆ. ಆಗ ಆ ಕಾಣದ ದೈವವು ನಮ್ಮ ಕಾಲನ್ನು ಎಡವಿಸಿ ಮತ್ತೆ ಸಂಕಷ್ಟಕ್ಕೆ ದೂಡುತ್ತದೆ.

ಇಂತಹ ಇಬ್ಬಗೆಯ ನೀತಿಯನ್ನು ಆ ಭಗವಂತನು ಮನುಷ್ಯನ ಬಾಳಿನಲ್ಲಿಟ್ಟು ಆತನು ಮನುಷ್ಯನ ಜೀವನದಲ್ಲಿ ಮೋಸದಾಟವನ್ನಾಡುತ್ತಲಿದ್ದಾನೆ ಎಂಬುದನ್ನು ಈ ಪದ್ಯದಲ್ಲಿ ಹೇಳಿದ್ದಾರೆ.

ಮಳೆಯು ಹನಿ ಭೂಮಿಯ ಮೇಲೆ ಬಿದ್ದರೂ ಸಹ ಅದು ಹಳ್ಳವಾಗಿ, ಕೊಳ್ಳವಾಗಿ, ನದಿಗಳಾಗಿ ಕೊನೆಗೆ ಸಮುದ್ರವನ್ನು ಸೇರುತ್ತವೆ. ಅದೇ ರೀತಿ ಹುಟ್ಟಿರುವ ಮನುಷ್ಯರೆಲ್ಲರೂ ಸಹ ಜಾತಿ, ಧರ್ಮವೇನೇ ಇರಲಿ, ಅವರೆಲ್ಲರೂ ಕೊನೆಗೆ ಸೇರುವುದು ಆ ಭಗವಂತನ ಪಾದಕ್ಕೆ ಹೌದು.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ನಾವು ಕೊನೆಗೆ ಬರಿಗೈದಾಸರಾಗಿ ಆ ಭಗವಂತನ ಪಾದಕ್ಕೇ ಸೇರುತ್ತೇವೆ ಎಂಬ ಅರಿವು ನಮಗೂ ಇದ್ದರೂ ಸಹ, ಕೊನೆಗೆ ಇವರೆಲ್ಲರೂ ನನ್ನ ಪಾದದಲ್ಲಿಯೇ ಲೀನವಾಗುತ್ತಾರೆ ಎಂಬ ಸತ್ಯ ಆ ಭಗವಂತನಿಗೂ ಗೊತ್ತಿದ್ದರೂ ಸಹ, ಈ ಮನುಷ್ಯನ ಹೃದಯದಲ್ಲಿ ಆ ಭಗವಂತನು ಏಕಾಗಿ ಆಸೆ, ಮೋಹಗಳೆಂಬ ಪಾಶದಲ್ಲಿ ಬಂಧಿಯಾಗಿಸಿದ್ದು? ಆ ದೈವವು ತನ್ನ ನಗುವಿಗಾಗಿ, ತನ್ನ ಸಂತೋಷಕ್ಕಾಗಿ ಮನುಷ್ಯನ ಹೃದಯದಲ್ಲಿ ಆಸೆಗಳನ್ನು ಇಟ್ಟು, ಆ ಆಸೆಗಳು ಫಲಿಸದಂತೆ ಮಾಡಿ, ಫಲಿಸದಿದ್ದಾಗ ಮೈದಡವಿ, ಎಡವಿ ಬೀಳುವಂತೆ ಮಾಡಿ, ವಿಕಟ ನಗೆ ಬೀರುತ್ತಾ ನಮ್ಮೊಂದಿಗೆ ಮೋಸದಾಟ ಮಾಡುತ್ತಲಿದ್ದಾನೆ ಎಂಬುದು ವೇದ್ಯವಾಗುತ್ತದೆ. ಇರುವತನಕ ಹೋರಾಟ ಮಾಡುವುದು ಮಾನವನ ಗುಣವಾಗಿದೆ. ಇದು ದೇವರ ಮೋಸದಾಟ ಎಂದು ಈ ಪದ್ಯದಲ್ಲಿ ವಿವರಿಸಿದ್ದಾರೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮತ್ತೊಬ್ಬರಿಗೆ ಮಾಡಬೇಕಾದ ಸಹಾಯ (4)
3. ವಿಷಯವೊಂದರಲ್ಲಿ ಮೈಮರೆತ ಎಂದರ್ಥ (3)
4. ಗಾಡಿಯಲ್ಲಿ ಇಂದ್ರಜಾಲ ವಿದ್ಯೆ (3)
5. ಮಾಡಲೇಬೇಕಾದದ್ದು (3)
6. ಕೋಪಗೊಳ್ಳು (3)
9. ಸಣ್ಣ ಸೇತುವೆ ತಿರುಗಿ ಬಂದಿದೆ (2)
11. ಕಡಲಿನ ದಂಡೆ (4)
13. ಹಳೆಯ ಕಾಲದ್ದು (4)
14. ಕುದುರೆ (2)
16. ಉಕ್ಕಿನ ಅಂಗಿಯಿದು (3)
18. ಋತುಗಳ ರಾಜ (3)
21. ಈ ಗಾಳಿ ಬೀಸುವುದು ವನದಲ್ಲಿ (3)
22. ಪಾಲಕನಿಗೆ ಸಿಕ್ಕಿದ್ದು ತಲೆಬುರುಡೆ (3)
23. ಸಾಕಷ್ಟು ಧನವಿರುವಾತ (4)

ಮೇಲಿಂದ ಕೆಳಕ್ಕೆ

1. ಒಡಿಸ್ಸಾ ರಾಜ್ಯದ ಪ್ರಾಚೀನ ಹೆಸರು (3)
2. ಮಾಡಬೇಕಾದ ಕಾರ್ಯ (3)
3. ಬಿದಿರಿನ ತಟ್ಟಿ (3)
4. ಹಾಡುವವನು (3)
7. ಭೂಮಿಯ ಕೆಳಗಿರುವ ಲೋಕ (4)
8. ಮತ್ತೊಂದು ಸೋಲು (4)
10. ಮುಷ್ಕರ (2)
12. ರೈಲಿನ ಕಂಬಿ ತಿರುಗಿ ಬಂದಿದೆ (2)
15. ಗ್ರೀಸ್ ದೇಶದಿಂದ ಬಂದವನು (3)
17. ತೀವ್ರವಾದ ಆಸೆ (3)
19. ಈ ಯುವಕನ ಮೇಲೆ ಋಣವಿದೆ (3)
20. ವರವಲ್ಲದ ಒತ್ತಾಯ (3)

ಸರಿಯುತ್ತರಗಳು

ಸಮಾಚಾರ ಸಣ್ಣದಲ್ಲ

ಆ್ಯಂಡಿ ಫ್ಲವರ್ ಚಿದಾನಂದ ಸರಸ್ವತಿ ಸ್ವಾಮಿ ಭೇಟಿ

ದೆಹಲಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಪರಮಾರ್ಥ ನಿಕೇತನ ಆಶ್ರಮದ ಅಧ್ಯಕ್ಷ ಮತ್ತು ಆಧ್ಯಾತ್ಮಿಕ ಮುಖ್ಯಸ್ಥ ಸ್ವಾಮಿ ಚಿದಾನಂದ ಸರಸ್ವತಿ ಅವರನ್ನು ಭೇಟಿ ಮಾಡಿ ಆರ್‌ಸಿಬಿ ಚೊಚ್ಚಲ ಟ್ರೋಫಿ ಗೆದ್ದ ಬಗ್ಗೆ ಮಾತನಾಡಿದರು. ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ಫ್ಲವರ್, ಆರ್‌ಸಿಬಿ ತಮ್ಮ ಮೊದಲ ಇಂಡಿಯನ್ ಪ್ರೀಮಿಯರ್ ಲೀಗ್ ಪ್ರಶಸ್ತಿಯನ್ನು ತರಬೇತುದಾರರಾಗಿ ಗೆದ್ದ ಕೆಲವು ದಿನಗಳ ನಂತರ ಋಷಿಕೇಶದಲ್ಲಿ ಸ್ವಾಮಿಯನ್ನು ಭೇಟಿಯಾಗಿದ್ದಾರೆ. ಮಾಧ್ಯಮದೊಂದಿಗೆ ಮಾತನಾಡಿದ ಫ್ಲವರ್, 'ವಾಸ್ತವವಾಗಿ ನಾನು ಸ್ವಾಮಿಯೊಂದಿಗೆ ಆರ್‌ಸಿಬಿ ತಂಡದ ಬಗ್ಗೆ ಮಾತನಾಡಿದೆ. ಆಟ ಮತ್ತು ತರಬೇತಿಯಲ್ಲಿ ನನ್ನ ಅನುಭವದ ಪ್ರಕಾರ, ಗೆಲ್ಲುವುದು ಸಾಕಾಗುವುದಿಲ್ಲ. ಗೆಲ್ಲುವುದಕ್ಕಿಂತ ಹೆಚ್ಚಿನ, ಆಳವಾದ, ಹೆಚ್ಚು ಅರ್ಥಪೂರ್ಣವಾದ ಏನಾದರೂ ಇರಬೇಕು ಎಂದು ಹೇಳಿದರು. ಇದೇ ವೇಳೆ ಯೋಗದ ಬಗ್ಗೆಯೂ ಮಾತನಾಡಿದ ಫ್ಲವರ್, ಕಳೆದ ಎರಡು ವಾರಗಳಿಂದ ನಾನು ರಿಷಿಕೇಶದಲ್ಲಿದ್ದೇನೆ. ನಾನು ಯೋಗದ ಬಗ್ಗೆ ಬಹಳಷ್ಟು ಕಲಿಯುತ್ತಿದ್ದೇನೆ ಮತ್ತು ನಾನು ಕಲಿತ ಮುಖ್ಯ ವಿಷಯವೇನೆಂದರೆ ಯೋಗವು ಒಂದು ಗಂಟೆಯ ತರಗತಿಯಲ್ಲ, ಅದು ಲಕ್ಷಾಂತರ ಜನರಿಗೆ ಜೀವನ ವಿಧಾನವಾಗಿದೆ. ನಾನು ಮಾಡಿದ ದೈಹಿಕ ಅಭ್ಯಾಸ ನಾನು ಆನಂದಿಸಿದ್ದೇನೆ' ಎಂದಿದ್ದಾರೆ.

ಚೆಸ್ ಲೈವ್ ರೇಟಿಂಗ್: 5ನೇ ಸ್ಥಾನಕ್ಕೆ ಪ್ರಜ್ಞಾನಂದ

ದೆಹಲಿ: ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ವಿಶ್ವ ಚೆಸ್ ಚಾಂಪಿಯನ್ ಆಗಿರುವ ಸ್ವದೇಶದ ಗುಕೇಶ್ ಅವರನ್ನು ಲೈವ್ ರೇಟಿಂಗ್‌ನಲ್ಲಿ ಹಿಂದೆ ಹಾಕಿದ್ದಾರೆ.

ಹಾಲಿ ರೇಟಿಂಗ್ ಪ್ರಕಾರ ವಿಶ್ವಕಪ್ ರನ್ನರ್ ಅಪ್ ಪ್ರಜ್ಞಾನಂದ ಅವರು 2777.2 ರೇಟಿಂಗ್ ಪಾಯಿಂಟ್ಸ್ ಗಳಿಸಿ 5ನೇ ಸ್ಥಾನಕ್ಕೆ ಏರಿದ್ದಾರೆ. ಗುಕೇಶ್ ಅವರು 2776.6 ರೇಟಿಂಗ್ ಪಾಯಿಂಟ್ಸ್ ಗಳಿಸಿ 6ನೇ ಸ್ಥಾನಕ್ಕೆ ಸರಿದಿದ್ದಾರೆ. 2700 ಚೆಸ್ ಡಾಟ್ ಕಾಮ್ ಪ್ರಕಾರ, ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ (2780.7) ಅವರು 4ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ವಿಶ್ವ ಚೆಸ್‌ನಲ್ಲಿ ಭಾರತವು ಸಾಧಿಸುತ್ತಿರುವ ಪ್ರಗತಿಗೆ ಈ ಪೈಪೋಟಿಯು ನಿದರ್ಶನವಾಗಿದೆ.

5 ವಿಕೆಟ್ ಪಡೆದು ಮಿಂಚಿದ ಬುಮ್ರಾ | ಭಾರತ ದ್ವಿತೀಯ ಇನ್ನಿಂಗ್ಸ್ 90/2

ಸಮಸ್ಥಿತಿಯಲ್ಲಿ ಟೆಸ್ಟ್ ಹಣಾಹಣಿ

ಲೀಡ್ಸ್: ಭಾರತೀಯ ಆಟಗಾರರ ಕಳಪೆ ಫೀಲ್ಡಿಂಗ್‌ನ ಪ್ರಯೋಜನ ಪಡೆದ ಇಂಗ್ಲೆಂಡ್ ಬ್ಯಾಟರ್‌ಗಳು ಪ್ರಥಮ ಇನ್ನಿಂಗ್ಸ್‌ನಲ್ಲಿ ಉತ್ತಮ ಮೊತ್ತವನ್ನು ಪೇರಿಸುವುದರ ಮೂಲಕ ಭಾನುವಾರದ ದಿನದಾಂತ್ಯಕ್ಕೆ ಸಮಸ್ಥಿತಿಗೆ ಟೆಸ್ಟ್ ಪಂದ್ಯವನ್ನು ತಂದು ನಿಲ್ಲಿಸಿದ್ದಾರೆ.

ಮೊದಲ ಇನ್ನಿಂಗ್ಸ್‌ನಲ್ಲಿ 6 ರನ್‌ಗಳ ಮುನ್ನಡೆಯೊಂದಿಗೆ ದ್ವಿತೀಯ ಇನ್ನಿಂಗ್ಸ್ ಆರಂಭಿಸಿದ ಭಾರತ ತಂಡವು 3ನೇ ದಿನದಾಟದ ಅಂತ್ಯಕ್ಕೆ 2 ವಿಕೆಟ್ ನಷ್ಟಕ್ಕೆ 90 ರನ್ ಗಳಿಸಿದ್ದು, ಒಟ್ಟಾರೆ 96 ರನ್‌ಗಳ ಮುನ್ನಡೆಯನ್ನು ಪಡೆದಿದೆ.

ಹ್ಯಾರಿ ಬ್ರೂಕ್ಸ್

ಮೊದಲ ಇನ್ನಿಂಗ್ಸ್‌ನಲ್ಲಿ ತಂಡದ ಪರ ಶತಕ ಗಳಿಸಿದ್ದ ಯಶಸ್ವಿ ಜೈಸ್ವಾಲ್, ಭಾರತದ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಕೇವಲ 4 ರನ್ ಗಳಿಸಿ ತಮ್ಮ ವಿಕೆಟ್ ಒಪ್ಪಿಸಿದರು.

ಆ ಬಳಿಕ ಕೆ.ಎಲ್. ರಾಹುಲ್-ಸಾಯಿ ಸುದರ್ಶನ್ ಮಧ್ಯೆ ದ್ವಿತೀಯ ಇನ್ನಿಂಗ್ಸ್ ಜತೆಯಾಟ ಮುಂದುವರಿಯಿತು. ಆದರೆ ತಂಡದ ಮೊತ್ತ 82 ರನ್ ಆಗಿದ್ದಾಗ 30 ರನ್ ಗಳಿಸಿದ್ದ ಸಾಯಿ ಸುದರ್ಶನ್ ತಮ್ಮ ವಿಕೆಟ್ ಕಳೆದುಕೊಂಡರು. ದಿನದಾಟದ ಅಂತ್ಯಕ್ಕೆ ಕೆ.ಎಲ್. ರಾಹುಲ್ 47 ರನ್ ಹಾಗೂ ನಾಯಕ ಗಿಲ್ 6 ರನ್ ಗಳಿಸಿ ಅಜೇಯರಾಗಿ ಕ್ರೀಸ್‌ನಲ್ಲಿ ಉಳಿದರು.

ಜಸ್‌ಪ್ರೀತ್ ಬುಮ್ರಾ 5 ವಿಕೆಟ್ ಸಾಧನೆಯಿಂದ ಇಂಗ್ಲೆಂಡ್ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ ಭಾರತ 6 ರನ್ ಅಂತರದ ಮುನ್ನಡೆ ಸಾಧಿಸಿತ್ತು. ಭಾರತ ತಂಡದ ಮೊದಲ ಇನ್ನಿಂಗ್ಸ್‌ನ 471 ರನ್ ಬೆನ್ನಟ್ಟಿದ ಇಂಗ್ಲೆಂಡ್ ತಂಡವು ಮೊದಲ ಇನ್ನಿಂಗ್ಸ್‌ನಲ್ಲಿ 465 ರನ್‌ಗೆ ಸರ್ವಪತನ ಕಂಡಿತು.

ಭಾನುವಾರ 3 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿದ್ದಲ್ಲಿಂದ ಮೂರನೇ ದಿನದಾಟ ಆರಂಭಿಸಿದ ಇಂಗ್ಲೆಂಡ್‌ಗೆ ಹ್ಯಾರಿ ಬ್ರೂಕ್ಸ್ ಆಸರೆಯಾದರು, ಅವರು

99 ರನ್ ಗಳಿಸಿ ಕೇವಲ ಒಂದು ರನ್ ಅಂತರದಿಂದ ಶತಕ ವಂಚಿತರಾದರು. ಶತಕ ಬಾರಿಸಿದ್ದ ಓಲಿ ಪೋಪ್ (106) ಅವರನ್ನು ಪ್ರಸಿದ್ಧ್ ಕೃಷ್ಣ, ಔಟ್ ಮಾಡಿ ಪೆವಿಲಿಯನ್‌ಗೆ ಸೇರಿಸಿದರು. ಅವರ ವಿಕೆಟ್ ಪತನದೊಂದಿಗೆ ಇಂಗ್ಲೆಂಡ್ ದಿಢೀರ್ ಕುಸಿತ ಕಂಡಿತು. ನಾಯಕ ಬೆನ್ ಸ್ಟೋಕ್ಸ್ 20 ರನ್ ಗಳಿಸಿ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಭಾರತೀಯ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಬ್ರೂಕ್ ಇನ್ನೇನು ಶತಕ ಬಾರಿಸುತ್ತಾರೆ ಎನ್ನುವಷ್ಟರಲ್ಲಿ ಪ್ರಸಿದ್ಧ್ ಅವರ ಎಸೆತವೊಂದನ್ನು ಸಿಕ್ಸರ್ ಬಾರಿಸುವ ಯತ್ನದಲ್ಲಿದ್ದಾಗ ಶಾರ್ದೂಲ್ ಠಾಕೂರ್‌ಗೆ ಕ್ಯಾಚ್ ನೀಡಿ, ವೈಯಕ್ತಿಕ ಮೊತ್ತ 99ರಲ್ಲಿದ್ದಾಗ ತಮ್ಮ ವಿಕೆಟ್ ಕಳೆದುಕೊಂಡರು.

55 ಬಾಲ್‌ಗಳನ್ನು ಎದುರಿಸಿದ ವೋಕ್ಸ್ 38 ರನ್ ಗಳಿಸಿ ಬುಮ್ರಾ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ಪೆವಿಲಿಯನ್ ಸೇರಿದರು. ಉಳಿದಂತೆ ಬ್ರೈಡನ್ ಕಾರ್ಸ್ 22 ರನ್, ಜಾಶ್ ಟಂಗ್ 11 ರನ್ ಮತ್ತು ಶೋಯೆಬ್ ಬಷೀರ್ 1 ರನ್ ಗಳಿಸಲಷ್ಟೇ ಶಕ್ತರಾದರು. ಭಾರತದ ಪರ 5 ವಿಕೆಟ್ ಗಳಿಸಿದ ಬುಮ್ರಾ ಹೊರತುಪಡಿಸಿ, ಕನ್ನಡಿಗ ಪ್ರಸಿದ್ಧ್ ಕೃಷ್ಣ ಮೂರು ವಿಕೆಟ್, ಮೊಹಮ್ಮದ್ ಸಿರಾಜ್ 2 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು.

4 ಕ್ಯಾಚ್ ಕೈಚೆಲ್ಲಿದ ಭಾರತೀಯರು: ಮೊದಲ ಇನಿಂಗ್ಸ್‌ನಲ್ಲಿ ಭಾರತೀಯ ಕಳಪೆ ಫೀಲ್ಡಿಂಗ್ ಕಾರಣಕ್ಕಾಗಿ ಒಟ್ಟು ನಾಲ್ಕು ಕ್ಯಾಚ್‌ಗಳನ್ನು ಕೈಚೆಲ್ಲಿದರು. ಆ ಎಲ್ಲಾ ಕ್ಯಾಚ್‌ಗಳು ಬುಮ್ರಾ ಓವರ್‌ನಲ್ಲಿ ಎಂಬುದು ವಿಶೇಷ. 24.4 ಓವರ್ ಬೌಲಿಂಗ್ ದಾಳಿ ನಡೆಸಿದ ಬುಮ್ರಾ, 83ರನ್ ನೀಡಿ 5 ವಿಕೆಟ್ ಉರುಳಿಸಿದರು. ಬುಮ್ರಾ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು 5 ವಿಕೆಟ್ ಗೊಂಚಲು ಪಡೆದ ಕಪಿಲ್‌ದೇವ್ ಸಾಧನೆಯನ್ನು ಸರಿಗಟ್ಟಿದರು. ಉಭಯ ಆಟಗಾರರು ಒಟ್ಟು 12 ಬಾರಿ ಈ ಸಾಧನೆ ಮಾಡಿದ್ದಾರೆ. ಕಪಿಲ್ 66 ಪಂದ್ಯಗಳಿಂದ ಈ ಸಾಧನೆ ಮಾಡಿದ್ದರೆ, ಬುಮ್ರಾ ಕೇವಲ 34 ಟೆಸ್ಟ್‌ಗಳಲ್ಲಿ ಈ ಮೈಲುಗಲ್ಲು ತಲುಪಿದ್ದಾರೆ

ಅಕ್ರಂ ದಾಖಲೆ ಮುರಿದ ಜಸ್‌ಪ್ರಿತ್ ಬುಮ್ರಾ

ಇಂಗ್ಲೆಡ್ ವಿರುದ್ದದ ಮೊದಲ ಟೆಸ್ಟ್ ಪಂದ್ಯದಲ್ಲಿ ಐದು ವಿಕೆಟ್ ಪಡೆದ ಸ್ಟಾರ್ ಬೌಲರ್ ಜಸ್‌ಪ್ರಿತ್ ಬುಮ್ರಾ ಪಾಕಿಸ್ತಾನದ ಮಾಜಿ ಬೌಲರ್ ವಸೀಂ ಅಕ್ರಮ್ ಅವರ ದಾಖಲೆಯನ್ನು ಮುರಿದು ವಿಶ್ವ ಬೌಲರ್‌ಗಳ ಸಾಲಿಗೆ ಸೇರಿದ್ದಾರೆ. ಬುಮ್ರಾ ಸೆನಾ ದೇಶ ಗಳಲ್ಲಿ ಅಂದರೆ ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿ ಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಏಷ್ಯನ್ ಬೌಲರ್ ಆಗಿದ್ದಾರೆ. ಬುಮ್ರಾ ಈಗ ಸೆನಾ ದೇಶಗಳಲ್ಲಿ 149 ವಿಕೆಟ್‌ಗಳನ್ನು ಪಡೆದಿದ್ದರೆ ಅಕ್ರಮ್ ಈ ದೇಶಗಳಲ್ಲಿ 146 ವಿಕೆಟ್‌ಗಳನ್ನು ಪಡೆದಿದ್ದಾರೆ. ಭಾರತದ ಮಾಜಿ ಸ್ಪಿನ್ನರ್ ಅನಿಲ್ ಕುಂಬ್ಳೆ 141 ವಿಕೆಟ್‌ಗಳೊಂದಿಗೆ ಈ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದ್ದಾರೆ. ಇನ್ನು ವೇಗದ ಬೌಲರ್ ಇಶಾಂತ್ ಶರ್ಮಾ 130 ವಿಕೆಟ್‌ಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದಾರೆ. ಬುಮ್ರಾ ಇಂಗ್ಲೆಂಡ್‌ನಲ್ಲಿ 10 ಟೆಸ್ಟ್‌ಗಳಲ್ಲಿ 41 ವಿಕೆಟ್, ಆಸ್ಟ್ರೇಲಿಯಾದಲ್ಲಿ 12 ಟೆಸ್ಟ್‌ಗಳಲ್ಲಿ 64 ವಿಕೆಟ್, ದಕ್ಷಿಣ ಆಫ್ರಿಕಾದಲ್ಲಿ 8 ಟೆಸ್ಟ್‌ಗಳಲ್ಲಿ 38 ವಿಕೆಟ್ ಮತ್ತು ನ್ಯೂಜಿಲೆಂಡ್‌ನಲ್ಲಿ 2 ಟೆಸ್ಟ್‌ಗಳಲ್ಲಿ 6 ವಿಕೆಟ್ ಪಡೆದಿದ್ದಾರೆ.

ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿಯ ಸಾವಿನ ಹಿನ್ನೆಲೆ ವಿಜಯೋತ್ಸವಕ್ಕಾಗಿ ಹೊಸ ಮಾರ್ಗಸೂಚಿ ಪ್ರಕಟ

ಐಪಿಎಲ್ ಸಂಭ್ರಮಾಚರಣೆ ಬಿಸಿಸಿಐ ಕಠಿಣ ನಿಯಮ

ದೆಹಲಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತಂಡವು ಐಪಿಎಲ್ ಪ್ರಶಸ್ತಿ ಗೆದ್ದ ಸಂಭ್ರಮಾಚರಣೆಯ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಮಂದಿ ಸಾವನ್ನಪ್ಪಿದ ದುರ್ಘಟನೆ ಬಳಿಕ ಎಚ್ಚೆತ್ತುಕೊಂಡಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಇದೀಗ ಐಪಿಎಲ್ ತಂಡಗಳ ವಿಜಯೋತ್ಸವಕ್ಕೆ ಹೊಸ ನಿಯಮಗಳನ್ನು ಜಾರಿಗೆ ತಂದಿದೆ. ಯಾವುದೇ ಐಪಿಎಲ್



ತಂಡಗಳು ಆತುರದಲ್ಲಿ ವಿಜಯೋತ್ಸವ ಆಚರಿಸಬಾರದು ಎಂದು ಹೇಳುವ ಮೂಲಕ ಹಲವು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಎರಡು ವಾರಗಳ ಹಿಂದೆ ನಡೆದಿದ್ದ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಐಪಿಎಲ್ ಸಂಭ್ರಮಾಚರಣೆಗೆ ಸೂಕ್ತ ಮಾರ್ಗಸೂಚಿಯೊಂದನ್ನು ರಚಿಸಲು ಮೂವರು ಸದಸ್ಯರ ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯಲ್ಲಿ ದೇವಜಿತ್ ಸೈಕಿಯಾ, ಉಪಾಧ್ಯಕ್ಷ ರಾಜೀವ್ ಶುಕ್ಲಾ ಮತ್ತು ಖಜಾಂಚಿ ಪ್ರಭತೇಜ್ ಸಿಂಗ್ ಭಾಟಿಯಾ ಇದ್ದರು. ಇದೀಗ ಸಮಿತಿಯು ಹೊಸ ಮಾರ್ಗಸೂಚಿಗಳನ್ನು ತಿಳಿಸಿದೆ.

ಈ ಕುರಿತು ಮಾತನಾಡಿದ ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ, ಭವಿಷ್ಯದಲ್ಲಿ ಯಾವುದೇ ಅಪಘಾತಗಳನ್ನು ತಪ್ಪಿಸಲು ಅಪಾಯದ ಪ್ರತಿಯೊಂದು ಅಂಶವನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಿದೆ ಎಂದು ಹೇಳಿದರು.

ಬಿಸಿಸಿಐ ಮಾರ್ಗಸೂಚಿಗಳು

- ಆತುರದಲ್ಲಿ ವಿಜಯೋತ್ಸವಕ್ಕೆ ಅವಕಾಶವಿಲ್ಲ.
- ವಿಜಯೋತ್ಸವ ಕಾರ್ಯಕ್ರಮಕ್ಕೆ ಭದ್ರತೆ, ಸುರಕ್ಷತೆಯ 3 ಹಂತಗಳ ಪಾಲನೆ ಕಡ್ಡಾಯ.
- ರಾಜ್ಯ ಸರಕಾರ, ಪೊಲೀಸ್ ಇಲಾಖೆ, ಬಿಸಿಸಿಐನಿಂದ ಲಿಖಿತ ಅನುಮತಿ ಪತ್ರ ಅತ್ಯಗತ್ಯ.
- ವಿಮಾನ ನಿಲ್ದಾಣದಿಂದ ಕಾರ್ಯಕ್ರಮದ ಸ್ಥಳದವರೆಗೆ ಸುರಕ್ಷತೆ ಖಚಿತಪಡಿಸುವುದು ಅವಶ್ಯಕ.

'ಯಾವುದೇ ಐಪಿಎಲ್ ತಂಡಗಳು ಟ್ರೋಫಿ ಜಯಿಸಿದ ನಂತರ ಸಂಬಂಧಪಟ್ಟವರು ರಾಜ್ಯದಲ್ಲಿ ವಿಜಯೋತ್ಸವ ಆಚರಣೆ ಮಾಡುವುದಕ್ಕೆ ಬಿಸಿಸಿಐನಿಂದ ಮೊದಲೇ ಅನುಮತಿ ಪಡೆಯಬೇಕು. ಸುರಕ್ಷತೆಗಾಗಿ ಹಲವು ಹಂತದ ಕ್ರಮಗಳನ್ನು ಕಡ್ಡಾಯಗೊಳಿಸಲಾಗಿದೆ. ರಾಜ್ಯ ಸರಕಾರ, ಪೊಲೀಸ್ ಇಲಾಖೆ ಮತ್ತು ಬಿಸಿಸಿಐನಿಂದ ಲಿಖಿತ ಅನುಮತಿ ಪಡೆದ ನಂತರವೇ ಆಚರಣೆಗೆ ಅವಕಾಶ ನೀಡಲಾಗುತ್ತದೆ' ಎಂದು ಸೈಕಿಯಾ ತಿಳಿಸಿದ್ದಾರೆ.

ಕೋಚ್ ಆಗಲು ಸಿದ್ಧ ಎಂದ ಗಂಗೂಲಿ

ದೆಹಲಿ: ಭಾರತ ತಂಡದ ಮಾಜಿ ನಾಯಕ, ಹಾಗೂ ಆಟಗಾರ ಸೌರವ್ ಗಂಗೂಲಿ ಅವರು ಭಾರತ ಕ್ರಿಕೆಟ್ ತಂಡದ ಕೋಚ್ ಆಗಲು ಆಸಕ್ತಿ ಹೊಂದಿರುವುದಾಗಿ ತಿಳಿಸಿದ್ದಾರೆ. ಈ ಹಿಂದೆ ಕೋಚಿಂಗ್ ಪಾತ್ರಕ್ಕೆ ಸಮಯ ಹೊಂದಿರಲಿಲ್ಲ, ಆದರೆ ಇದೀಗ ಅವಕಾಶ ಸಿಕ್ಕರೆ ರಾಷ್ಟ್ರೀಯ ತಂಡಕ್ಕೆ ಕೋಚಿಂಗ್ ಮಾಡಲು ಆಸಕ್ತಿ ಹೊಂದಿದ್ದೇನೆ ಎಂದು ಹೇಳಿದ್ದಾರೆ.

ಭಾರತೀಯ ಕ್ರಿಕೆಟ್ ಮಂಡಳಿಯ (ಬಿಸಿಸಿಐ) ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ಬಳಿಕ ಗಂಗೂಲಿ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ, ಡೆಲ್ಲಿ ಕ್ಯಾಪಿಟಲ್ಸ್‌ನ ಪುರುಷ ಮತ್ತು ಮಹಿಳಾ ತಂಡಗಳೆರಡರಲ್ಲೂ ಮಾರ್ಗದರ್ಶಕ ಪಾತ್ರಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಗಂಗೂಲಿ ನಾಯಕತ್ವದಲ್ಲಿ ಮಹಿಳಾ ಡೆಲ್ಲಿ ಕ್ಯಾಪಿಟಲ್ಸ್ ತಂಡ ಕಳೆದ ಆವೃತ್ತಿಯ ಡಬ್ಲ್ಯುಪಿಎಲ್‌ನಲ್ಲಿ ಫೈನಲ್ ಪ್ರವೇಶಿಸಿತ್ತು, ಆದರೆ ಫೈನಲ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಸೋಲು ಕಂಡಿತ್ತು.

'ನಾನು ವಿಭಿನ್ನ ಪಾತ್ರಗಳಲ್ಲಿ ತೊಡಗಿಸಿಕೊಂಡೆ. ನನಗೆ ಎಂದಿಗೂ ಸಮಯ ಸಿಗಲಿಲ್ಲ, ಆದರೆ ಭವಿಷ್ಯ ಏನಾಗುತ್ತದೆ ಎಂದು ಕಾದು ನೋಡೋಣ. ನನಗೆ ಕೇವಲ 50 ವರ್ಷ ವಯಸ್ಸು ಮತ್ತು ಸದ್ಯ ಕೋಚಿಂಗ್ ಪಾತ್ರವಿಲ್ಲ' ಎಂದು ಗಂಗೂಲಿ ಸಂದರ್ಶನದಲ್ಲಿ ಹೇಳಿದರು. ಗೌತಮ್ ಗಂಭೀರ್ ಬಗ್ಗೆಯೂ ಮಾತನಾಡಿದ ಗಂಗೂಲಿ, 'ಆಸ್ಟ್ರೇಲಿಯಾ, ನ್ಯೂಜಿಲೆಂಡ್ ವಿರುದ್ಧ ಸೋತರೂ, ಚಾಂಪಿಯನ್ಸ್ ಟ್ರೋಫಿಯೊಂದಿಗೆ ಭಾರತ ಚೇತರಿಸಿಕೊಂಡಿದ್ದು ಈ ಇಂಗ್ಲೆಂಡ್ ಸರಣಿಯು ಆಟಗಾರರ ಮತ್ತು ಗೌತಮ್ ಗಂಭೀರ್ ಪಾಲಿಗೆ ಮಹತ್ತರವಾಗಿದೆ' ಎಂದರು.

ಟಿ-20 ವಿಶ್ವಕಪ್‌ಗೆ ಅರ್ಹತೆ ಪಡೆದ ಕೆನಡಾ

ಬಹಾಮಾಸ್ ತಂಡ 57 ರನ್‌ಗೆ ಆಲೌಟ್ | ಕೆನಡಾಕ್ಕೆ 7 ವಿಕೆಟ್‌ಗಳ ಭರ್ಜರಿ ಜಯ

ದುಬೈ: ಬಹಾಮಾಸ್ ವಿರುದ್ಧ ಏಳು ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದ ಕೆನಡಾ, 2026ರ ಐಸಿಸಿ ಪುರುಷರ ಟಿ20 ವಿಶ್ವಕಪ್‌ನಲ್ಲಿ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಮುಂದಿನ ವರ್ಷ ಈ ವಿಶ್ವಕಪ್ ಆಯೋಜಿಸುತ್ತಿದೆ.

ಮೇಪಲ್ ಲೀಫ್ ನಾರ್ತ್-ವೆಸ್ಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಕೆನಡಾ, ತನ್ನ ಬೌಲಿಂಗ್ ದಾಳಿಯ ಮೂಲಕ ಬಹಾಮಾಸ್ ಅನ್ನು 19.5 ಓವರ್‌ಗಳಲ್ಲಿ ಕೇವಲ 57 ರನ್‌ಗಳಿಗೆ ಆಲೌಟ್ ಮಾಡಿತು. ಕಲೀಮ್ ಸನಾ (3/6) ಮತ್ತು ಶಿವಂ ಶರ್ಮಾ (3/16) ಉತ್ತಮ ಬೌಲಿಂಗ್ ನಡೆಸಿದೆ.

ಗುರಿಯನ್ನು ಬೆಂಬತ್ತಿದ ಕೆನಡಾ ತಂಡವು, ದಿಲ್‌ಪ್ರೀತ್ ಬಾಜ್ವಾ (14 ಎಸೆತಗಳಲ್ಲಿ ಅಜೇಯ 36 ರನ್) ಅವರ ಬಿರುಸಿನ ಬ್ಯಾಟಿಂಗ್ ಮೂಲಕ ಕೇವಲ 5.3 ಓವರ್‌ಗಳಲ್ಲಿ ಗುರಿ ತಲುಪಿ 10 ವಿಕೆಟ್ ಅಂತರದ ಗೆಲುವು ಸಾಧಿಸಿತು.

ನಿಕೋಲಸ್ ಕಿರ್ಟನ್ ನೇತೃತ್ವದ ಕೆನಡಾ ತಂಡವು ಅರ್ಹತಾ ಟೂರ್ನಿಯಲ್ಲಿ ಬರ್ಮುಡಾ ವಿರುದ್ಧ 110 ರನ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ತನ್ನ ಅಭಿಯಾನವನ್ನು ಆರಂಭಿಸಿತ್ತು. ಅದಾದ ಬಳಿಕ ಕೇಮನ್ ದ್ವೀಪಗಳ ವಿರುದ್ಧ 59 ರನ್‌ಗಳ ಭರ್ಜರಿ ಜಯ ಸಾಧಿಸಿತ್ತು.

ಆತಿಥೇಯ ಭಾರತ ಮತ್ತು ಶ್ರೀಲಂಕಾ ಹೊರತಾಗಿ, ಹಾಲಿ ಚಾಂಪಿಯನ್ ಇಂಗ್ಲೆಂಡ್, ಅಫ್ಘಾನಿಸ್ತಾನ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಐರ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಅಮೆರಿಕ, ವೆಸ್ಟ್ ಇಂಡೀಸ್ ಮತ್ತು ಕೆನಡಾ ಅರ್ಹತೆ ಪಡೆದ ತಂಡಗಳಾಗಿವೆ.

ಫಸ್ಟ್ ಡೇ ಫಸ್ಟ್ ಶೋ ಟ್ರೇಲರ್ ರಿಲೀಸ್

ಕನ್ನಡ ಚಿತ್ರರಂಗ ನಿಧಾನವಾಗಿ ಬದಲಾಗುತ್ತಿದೆ. ಜನ ಥಿಯೇಟರ್‌ಗೆ ಬರುತ್ತಿಲ್ಲ. ಮನೆಮಂದಿ ಕುಳಿತು ಒಟಿಟಿಯಲ್ಲಿಯೇ ಸಿನಿಮಾ ನೋಡುವ ಕಾಲಘಟ್ಟಕ್ಕೆ ತಲುಪಿದ್ದೇವೆ. ಹೀಗಾಗಿ ಚಿತ್ರಮಂದಿರದ ಸಂಪ್ರದಾಯ ಕೊಂಚವಾಗಿ ಮರೆಯುತ್ತಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಅದರಲ್ಲಿಯೂ ಫಸ್ಟ್ ಡೇ ಫಸ್ಟ್ ಶೋ ಎಂಬ ಸಂಸ್ಕೃತಿ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಈ ಬೆಳವಣಿಗೆ ನಡುವೆ ಕನ್ನಡ ಚಿತ್ರರಂಗದ ಸುತ್ತ ಸಾಗುವ ಫಸ್ಟ್ ಡೇ ಫಸ್ಟ್ ಶೋ ಎಂಬ ಚಿತ್ರವೀಗ ಬೆಳ್ಳಿಪರದೆಗೆ ಎಂಟ್ರಿಕೊಡಲು ಸಜ್ಜಾಗಿದೆ. ಮಾಸ್ಟರ್ ಮಂಜುನಾಥ್ ಫಸ್ಟ್ ಡೇ ಫಸ್ಟ್ ಶೋ ಚಿತ್ರಕ್ಕೆ ಬಹಳ ಬೆಂಬಲವಾಗಿ ನಿಂತಿದ್ದು, ಜಪಾನ್ ಟೋಕಿಯೋದಿಂದ ಟ್ರೇಲರ್ ನೋಡಿ ವಿಡಿಯೊ ಮಾಡಿದ್ದಾರೆ.

ಗಿರೀಶ್ ಜಿ, ಜೀವಿತಾ ವಸಿಷ್ಠ, ರೋಹಿತ್ ಶ್ರೀನಾಥ್, ಅನಿರುದ್ಧ ಶಾಸ್ತ್ರಿ, ಬಿಎಂ ವೆಂಕಟೇಶ್, ರೇಷ್ಮಾ ಲಿಂಗರಾಜಪ್ಪ, ಗಿಲ್ಲಿ ನಟ, ದಶವರ ಚಂದ್ರು, ಹರೀಶ್ ಅರಸು, ಶೋಭಿತಾ ಶಿವಣ್ಣ, ಶ್ಯಾಮ್, ಗಣೇಶ್, ಪ್ರಶಾಂತ್ ವೈಎನ್ ನಟಿಸಿದ್ದಾರೆ. ಉಜ್ವಲ್ ಚಂದ್ರ ಸಂಕಲನ, ರಾಕೇಶ್ ಸಿ ತಿಲಕ್ ಹಾಗೂ ಅರುಣ್ ಕುಮಾರ್ ಛಾಯಾಗ್ರಹಣ , ಸ್ವಾಮಿನಾಥನ್ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ.

ನಾನು ಒಂದು ಕಥೆ ಹೇಳ್ಲಾ ಸಿನಿಮಾ ಮೂಲಕ ಇಂಡಸ್ಟ್ರಿಗೆ ನಿರ್ದೇಶಕನಾಗಿ ಹೆಜ್ಜೆ ಇಟ್ಟೆ. ಆ ಬಳಿಕ ವಾವ್ ಎಂಬ ಸಿನಿಮಾ ಮಾಡಿದೆ. ಕಳೆದ ವರ್ಷ ಶಾಲಿವಾಹನ ಶಕೆ ಎಂಬ ಚಿತ್ರ ಮಾಡಿದೆ. ಈಗ ಫಸ್ಟ್ ಡೇ ಫಸ್ಟ್ ಶೋ ಎಂಬ ಚಿತ್ರ ಮಾಡಿದ್ದೇನೆ. ನನ್ನ ನಾಲ್ಕು ಸಿನಿಮಾಗಳು ಬೇರೆ ರೀತಿ ಅಭಿರುಚಿ ಚಿತ್ರಗಳು. ಫಸ್ಟ್ ಡೇ ಫಸ್ಟ್ ಶೋ ವಿಭಿನ್ನ ಕಥೆ ಹೇಳಿದ್ದೇನೆ.

-ಗಿರೀಶ್ ನಿರ್ದೇಶಕ

ವಿಟಾಕೀಸ್

ಡಾ. ವಿಷ್ಣು ಸಂಭ್ರಮದ ಅಮೃತ ಮಹೋತ್ಸವ

ಡಾ. ವಿಷ್ಣುವರ್ಧನ್ ಅವರ ಎಪ್ಪತ್ತೈದನೇ ಜನ್ಮದಿನೋತ್ಸವವನ್ನು ಯಜಮಾನರ ಅಮೃತ ಮಹೋತ್ಸವವೆಂದು ಆಚರಿಸಲು ಡಾ. ವಿಷ್ಣು ಸೇನಾ ಸಮಿತಿಯು ನಿರ್ಧರಿಸಿದೆ. ಈ ಅಮೃತ ಮಹೋತ್ಸವದ ನೇತೃತ್ವವನ್ನು ನಿರ್ದೇಶಕ ಮತ್ತು ಡಾ. ವಿಷ್ಣುವರ್ಧನ್ ಅವರ ಆಪ್ತರೂ ಆದಂತಹ ಎಸ್.ನಾರಾಯಣ್ ಅವರು ವಹಿಸಿಕೊಂಡಿದ್ದು, ಮಾರ್ಗದರ್ಶಕರಾಗಿ ಎಸ್. ವಿ. ರಾಜೇಂದ್ರಸಿಂಗ್ ಬಾಬು ಜತೆಯಾಗಿದ್ದಾರೆ.

ಡಾ.ವಿಷ್ಣುವರ್ಧನ್ ಅವರ ಅಮೃತ ಮಹೋತ್ಸವವು ಈ ಹೊತ್ತಿನ ಅಗತ್ಯವಾಗಿದ್ದು, ಎಲ್ಲ ನಟರಿಗೂ ಅಂಥದ್ದೊಂದು ಗೌರವ ಸಂದಿದ್ದರೂ, ವಿಷ್ಣುವರ್ಧನ್ ಅವರಿಗೆ ಅಂಥಹ ಗೌರವ ಸಿಕ್ಕಿಲ್ಲವಾದ್ದರಿಂದ, ಕನ್ನಡ ಚಲನಚಿತ್ರರಂಗದಲ್ಲಿ ಇಂಥದ್ದೊಂದು ದೊಡ್ಡ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಎಂದು ನಿರ್ಮಾಪಕರ ಸಂಘದ ಉಮೇಶ್ ಬಣಕಾರ್ ತಿಳಿಸಿದರು.

ರಾಜೇಂದ್ರಸಿಂಗ್ ಬಾಬು ಅವರು ಮಾತನಾಡಿ, ಈ ಅಮೃತ ಮಹೋತ್ಸವಕ್ಕೆ ಭಾರತೀಯ ಚಿತ್ರರಂಗದ ವಿಷ್ಣುವರ್ಧನ್ ಅವರ ಆಪ್ತರನ್ನೆಲ್ಲ ಆಹ್ವಾನಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇವೆ. ಜತೆಗೆ ಹಿಂದಿ, ತಮಿಳು, ಮಲೆಯಾಳಂ, ತೆಲುಗು ಚಿತ್ರರಂಗದ ಖ್ಯಾತ ನಟರನ್ನು ಈ ಅಮೃತ ಮಹೋತ್ಸವಕ್ಕೆ ಹಾಜರಾಗುವಂತೆ ನೋಡಿಕೊಳ್ಳುವುದಾಗಿ ತಿಳಿಸಿದರು ರಾಜೇಂದ್ರ ಸಿಂಗ್‌ಬಾಬು ಹೇಳಿದರು. ಕನ್ನಡ ಮಾತ್ರವಲ್ಲದೆ ಪರಭಾಷೆಯ ಖ್ಯಾತ ನಟರೂ ಕೂಡ ಈ ಸಂಭ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಹಾಸ್ಯನಟ ಚಿಕ್ಕಣ್ಣ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಚಿಕ್ಕಣ್ಣ ಜನ್ಮದಿನದ ವಿಶೇಷವಾಗಿ ಲಕ್ಷ್ಮೀಪುತ್ರ ಚಿತ್ರತಂಡ ಸ್ಪೆಷಲ್ ಪೋಸ್ಟರ್ ರಿಲೀಸ್ ಮಾಡಿದೆ. ಗ್ಲಾಸ್ ತೊಟ್ಟು ಸಂಪ್ರಾದಾಯಿಕ ಉಡುಪಿನಲ್ಲಿ ಚಿಕ್ಕಣ್ಣ ಕಂಗೊಳಿಸಿದ್ದಾರೆ. ಲಕ್ಷ್ಮೀಪುತ್ರ ತಾಯಿ ಮಗನ ಬಾಂಧವ್ಯದ ಕಥೆಯಾಗಿದ್ದು ಸೆಂಟಿಮೆಂಟ್ ಜತೆಗೆ ಕಾಮಿಡಿಯೂ ಬೆರೆತಿದೆ. ಚಿಕ್ಕಣ್ಣ ಇಲ್ಲಿಯೂ ಕಾಮಿಡಿಯಲ್ಲಿ ಕಂಗೊಳಿಸಲಿದ್ದಾರೆ. ಚಿತ್ರಕ್ಕೆ ಅರ್ಜುನ್ ಕಥೆ ಹಾಗೂ ಸಾಹಿತ್ಯ ಬರೆದಿದ್ದಾರೆ. ನಿರ್ದೇಶಕ ಎ.ಪಿ.ಅರ್ಜುನ್ ತಮ್ಮದೇ ಎಪಿ ಅರ್ಜುನ್ ಫಿಲಂಸ್‌ನಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಸ್ದಯ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಚಿತ್ರದಲ್ಲಿ ಭರ್ಜರಿ ಸಾಹ ದೃಶ್ಯಗಳಿದ್ದು, ರವಿ ವರ್ಮಾ ಸಾಹಸ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರದಲ್ಲಿ ತಾರಾ, ಧರ್ಮಣ್ಣ ಕಡೂರ್ ಹಾಗೂ ಕುರಿ ಪ್ರತಾಪ್ ಮುಂತಾದವರು ತಾರಾ ಬಳಗದಲ್ಲಿದ್ದಾರೆ. ಎಪಿ ಅರ್ಜುನ್, ಪ್ರಶಾಂತ್ ರಾಜಪ್ಪ ಹಾಗೂ ವಿಜಯ್ ಈಶ್ವರ್ ಸಂಭಾಷಣೆ ಬರೆದಿದ್ದಾರೆ. ರಾಜೇಶ್ ರಾವ್ ಸಹ ನಿರ್ದೇಶನ ಮಾಡುತ್ತಿದ್ದಾರೆ. ಈ ವರ್ಷದ ಅಂತ್ಯದಲ್ಲಿ ಚಿತ್ರ ತೆರೆಗೆ ಬರಲಿದೆ. ಚಿಕ್ಕಣ್ಣ ಈ ಹಿಮದಿನ ಎಲ್ಲಾ ಸಿನಿಮಾಗಳಿಂತ ವಿಭಿನ್ನವಾಗಿ ಕಂಗೊಳಿಸಲಿದ್ದಾರೆ. ಈ ಹಿಂದೆ ತೆರೆಗೆ ಬಂದ ಚಿಕ್ಕಣ್ಣ ಅಭಿನಯದ ಕೆಲವು ಚಿತ್ರಗಳು ಸೂಪರ್ ಹಿಟ್ ಆಗಿವೆ. ಲಕ್ಷ್ಮಿ ಪುತ್ರ ಕೂಡ ಚಿಕ್ಕಣ್ಣನಿಗೆ ಬಿಗ್ ಬ್ರೇಕ್ ನೀಡಲಿದೆ ಎಂಬ ನಿರೀಕ್ಷೆ ಇದೆ.

ಥ್ರಿಲ್ಲರ್ ಜಾನರ್ ಹಿಡಿದ ಕೃಷ್ಣ

ನನ್ ಮಗಳೇ ಹೀರೋಯಿನ್ ಸೇರಿದಂತೆ ಹಲವು ಸದಭಿರುಚಿಯ ಚಿತ್ರಗಳ ನಿರ್ದೇಶಕ ಎಸ್.ಕೆ. ಬಾಹುಬಲಿ ಇದೀಗ ಕೃಷ್ಣ ಅಜೇಯ್ ರಾವ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಪಿ.ಕೆ. ಪ್ರೊಡಕ್ಷನ್ಸ್ ಮೂಲಕ ನಿರ್ಮಾಪಕ ಕಿರಣ್ ಮೊದಲ ಬಾರಿಗೆ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈ ಚಿತ್ರದ ಮುಹೂರ್ತ ಸಮಾರಂಭ ಬಂಡೆ ಮಹಾಕಾಳಮ್ಮ ದೇವಸ್ಥಾನದಲ್ಲಿ ನೆರವೇರಿತು. ಚಿತ್ರದ ಮೊದಲ ದೃಶ್ಯಕ್ಕೆ ಯೋಗರಾಜ ಭಟ್ ಕ್ಲಾಪ್ ಮಾಡಿದರೆ, ದಿನಕರ್ ತೂಗುದೀಪ ಕ್ಯಾಮೆರಾ ಚಾಲನೆ ಮಾಡಿಶುಭಕೋರಿದರು.

ಆ್ಯಕ್ಷನ್ ಹೀರೋ, ಭಗ್ನ ಪ್ರೇಮಿಯಾಗಿ ಕಾಣಿಸಿಕೊಂಡಿದ್ದ ಅಜಯ್ ರಾವ್ ಈ ಚಿತ್ರದ ಮೂಲಕ ರಗಡ್ ಹೀರೊ ಆಗುತ್ತಿದ್ದಾರೆ. ಫಿಟ್ ನೆಸ್ ಬಗ್ಗೆ ಏನೋ ಒಂದು ಸಾಧನೆ ಮಾಡಬೇಕೆಂದು ಹೊರಟಾಗ ಆತ ಏನೆಲ್ಲಾ ಎದುರಿಸಬೇಕಾಗುತ್ತದೆ ಎಂಬುದನ್ನು ಈ ಸಿನಿಮಾ ಮೂಲಕ ಬಾಹುಬಲಿ ಅವರು ಹೇಳ ಹೊರಟಿದ್ದಾರೆ.

ನಿರ್ದೇಶಕರು ತುಂಬಾ ಚೆನ್ನಾಗಿ ಸ್ಕ್ರಿಪ್ಟ್ ಮಾಡಿಕೊಂಡಿದ್ದಾರೆ. ಅಜಯ ರಾವ್ ಅವರಿಗೆ ಬೇರೆ ಬೇರೆ ಗೆಟಪ್ ಇರೋದ್ರಿಂದ ನಾವು ತುಂಬಾ ಕೆಲಸ ಮಾಡಬೇಕಿದೆ. ತುಂಬಾ ಚಾಲೆಂಜ್ ಇರುತ್ತದೆ ಎಂದು ನಿರ್ದೇಶಕರು ತಿಳಿಸಿದರು. ಉಳಿದಂತೆ ನಟ ಉಗ್ರಂ ಮಂಜು, ಸಂಭಾಷಣೆಗಾರ ಯೋಗಾನಂದ್ ಮದ್ದಾನ್ ಮುಂತಾವದರು ತಾರಾಗಣದಲಿದ್ದಾರೆ.

ಇದೊಂದು ಫ್ಯಾಮಿಲಿ ಥ್ರಿಲ್ಲರ್ ಚಿತ್ರ. ನ್ಯಾಷನಲ್ ಲೆವೆಲ್‌ನಲ್ಲಿ ನಡೆಯುವ ಕಥೆ. ಒಂದು ಘಟನೆಯನ್ನು ತೆಗೆದುಕೊಂಡು ಕತೆ ಬರೆದಿದ್ದೇನೆ. ಅಜಯ್ ಪಾತ್ರ ಹಲವು ಶೇಡ್‌ಗಳಲ್ಲಿ ಸಾಗಲಿದೆ. ಅದರಲ್ಲಿ ಈ ಬೋಳು ತಲೆಯ ಗೆಟಪ್ ಕೂಡ ಒಂದು. ಇದಕ್ಕೆ ಬಾಂಬೆಯಿಂದ ವಿಗ್ ಮೇಕರ್ ಕರೆಸಿದ್ದೆವು. ಬೆಂಗಳೂರು, ಮೈಸೂರು, ಪಾಂಡಿಚೇರಿ ಸುತ್ತಮುತ್ತ ಶೂಟಿಂಗ್ ನಡೆಸುವ ಯೋಜನೆ ಇದೆ.

-ಬಾಹುಬಲಿ ನಿರ್ದೇಶಕ

ಚಿತ್ರದ ಹಾಡುಗಳಿಗೆ ಮ್ಯೂಸಿಕ್ ಮಾಂತ್ರಿಕ ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆಯಿದ್ದು ಯೋಗರಾಜ ಭಟ್, ಕವಿರಾಜ್, ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ ರಚಿಸಿದ್ದಾರೆ. ಕೆ.ಎಂ.ಪ್ರಕಾಶ್ ಅವರ ಸಂಕಲನ, ಡಿಫರೆಂಟ್ ಡ್ಯಾನಿ, ರವಿವರ್ಮ ಅವರ ಸಾಹಸ ಈ ಚಿತ್ರಕ್ಕಿದೆ.

ಜುಲೈನಲ್ಲಿ ಹರಿ ಹರ ವೀರಮಲ್ಲು

ತೆಲುಗು ಚಿತ್ರರಂಗದ ಪವರ್ ಸ್ಟಾರ್ ಪವನ್ ಕಲ್ಯಾಣ್ ಉಪಮುಖ್ಯಮಂತ್ರಿ ಗದ್ದುಗೇರಿದ ಮೇಲೆ ರಾಜಕೀಯದಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆ ಅವರು ಬಹಳ ದಿನಗಳಿಂದ ಬಳಿಕ ಸಿನಿಮಾ ಕಡೆ ಮುಖ ಮಾಡಿದ್ದಾರೆ. ಇದೀಗ ಪವನ್ ಕಲ್ಯಾಣ್ ಗುಡ್ ನ್ಯೂಸ್ ಕೊಟ್ಟಿದ್ದಾರೆ. ಪವನ್ ಕಲ್ಯಾನ್ ನಟಿಸಿರುವ ಬಹುನಿರೀಕ್ಷಿತ ಸಿನಿಮಾ ಹರಿ ಹರ ವೀರ ಮಲ್ಲು ಬಿಡುಗಡೆಗೆ ಸಜ್ಜಾಗಿದೆ. ಈ ಚಿತ್ರದ ರಿಲೀಸ್ ಡೇಟ್ ಘೋಷಣೆಯಾಗಿದೆ.

ಹರಿ ಹರ ವೀರ ಮಲ್ಲು ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸ ಭರದಿಂದ ಸಾಗುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಸಿನಿಪ್ರಿಯರಿಗೆ ಇಷ್ಟವಾಗಿವೆ. ಬಿಗ್ ಬಜೆಟ್ ತಯಾರಾಗಿರುವ ಹರಿ ಹರ ವೀರ ಮಲ್ಲು ಸಿನಿಮಾ ಜುಲೈ 24ರಂದು ಪ್ಯಾನ್ ಇಂಡಿಯಾ ಲೆವೆಲ್ ನಲ್ಲಿ ಬಿಡುಗಡೆಯಾಗಲಿದೆ. ಹರಿ ಹರ ವೀರ ಮಲ್ಲುವಾಗಿ ಪವನ್ ಕಲ್ಯಾಣ್ ಸಿನಿಮಾದಲ್ಲಿ ಅಬ್ಬರಿಸಿದ್ದಾರೆ. ಹದಿನೇಳನೇ ಶತಮಾನದಲ್ಲಿ ಮೊಘಲ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ನಾಯಕನಾಗಿ ಪವರ್ ಸ್ಟಾರ್ ಮಿಂಚಿದ್ದಾರೆ. ಮುನ್ನೂರು ವರ್ಷಗಳ ಹಿಂದಿನ ಕಾಲಘಟ್ಟ ಕಟ್ಟಿಕೊಡಲು ಚಿತ್ರತಂಡ ಬಹಳ ಶ್ರಮಿಸಿದೆ. ವೀರಮಲ್ಲು ಆಗಿ ಪವನ್ ಕಲ್ಯಾಣ್ ಲುಕ್, ಗೆಟಪ್ ಭರವಸೆ ಮೂಡಿಸಿದೆ. ಜ್ಯೋತಿ ಕೃಷ್ಣ ಮತ್ತು ಕ್ರಿಶ್ ಜಗರ್ಲಮುಡಿ ನಿರ್ದೇಶನದಲ್ಲಿ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಚಿತ್ರ ಮೂಡಿಬಂದಿದೆ.

ಚಿತ್ರದಲ್ಲಿ ನಿಧಿ ಅಗರ್‌ವಾಲ್ ನಾಯಕಿಯಾಗಿ ಮಿಂಚಿದ್ದಾರೆ. ಇನ್ನುಳಿದಂತೆ ಬಾಬಿ ಡಿಯೋಲ್, ನರ್ಗೀಸ್ ಫಕ್ರಿ, ಆದಿತ್ಯಾ ಮೆನನ್, ಶುಭಲೇಖ ಸುಧಾಕರ್ ತಾರಾಗಣದಲ್ಲಿದ್ದಾರೆ. ರೋಚಕ ಯುದ್ಧದ ಸನ್ನಿವೇಶಗಳು ಚಿತ್ರದಲ್ಲಿದೆ. ಮೆಗಾ ಸೂರ್ಯ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಎ. ದಯಾಕರ್ ರಾವ್ ಈ ಚಿತ್ರವನ್ನು ನಿರ್ಮಿಸಿದ್ದು, ಎ.ಎಂ. ರತ್ನಂ ಪ್ರಸ್ತುತಪಡಿಸುತ್ತಿದ್ದಾರೆ. ಆಸ್ಕರ್ ಪ್ರಶಸ್ತಿ ವಿಜೇತ ಎಂ.ಎಂ. ಕೀರವಾಣಿ ಸಂಗೀತ ನಿರ್ದೇಶನ, ಮನೋಜ್ ಪರಮಹಂಸ ಛಾಯಾಗ್ರಹಣ ಚಿತ್ರಕ್ಕಿದೆ.